₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | **ಕಲಬುರಗಿ** | ಬೆಳಗಾವಿ **ಮಂಗಳವಾರ 24.02.2026** **ಸಂಪುಟ:** 68 **ಸಂಚಿಕೆ:** 292 **ಪುಟಗಳು:** 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ಭಾರತ
ಸೌತ್ ಆಫ್ರಿಕಾ

ಭಾರತ
ಸೌತ್ ಆಫ್ರಿಕಾ

# ವಿಶ್ವವಾಣಿ

ವಿಶ್ವಾಸವೇ ವಿಶ್ವ

ಪ್ರಸ್ತುತ ಪಡಿಸುತ್ತಿದೆ

MSIL
ಎಂಎಸ್ಐಎಲ್

SIRI

PARVA GROUP

AMRITH NONI

## 12ನೇ

# ಕನ್ನಡಿಗರ ಜಾಗತಿಕ ಸಮಾವೇಶ

MRG group
Redefining Lifestyle & Hospitality

DIAGO FINANCE
BUILD YOUR FUTURE

ಕನ್ನಡ ಪತ್ರಿಕೋದ್ಯಮದ ಇತಿಹಾಸದಲ್ಲಿಯೇ ಮೊದಲು.
ವಿದೇಶದಲ್ಲಿ ನಾಡಿನ ಸಾಧಕರನ್ನು ಸನ್ಮಾನಿಸುವ ವಿಶ್ವವಾಣಿಯ
**ಗ್ಲೋಬಲ್ ಅಚೀವರ್ಸ್ ಅವಾರ್ಡ್**ಗೆ ಮತ್ತೊಂದು ಮೈಲುಗಲ್ಲು.
ಕರ್ನಾಟಕದ ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಿದ ಅಪರೂಪದ ಸಾಧಕರನ್ನು ಗುರುತಿಸಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಗೌರವಿಸುವುದು, ಎರಡೂ ದೇಶಗಳ ಮೈತ್ರಿ, ಪರಸ್ಪರ ಸಾಂಸ್ಕೃತಿಕ ವಿನಿಮಯ ಹಾಗೂ ಸಂಸ್ಕೃತಿಯ ಪರಿಚಯ ಈ ಕಾರ್ಯಕ್ರಮದ ಆಶಯ. ಈ ವಿನೂತನ ಕಾರ್ಯಕ್ರಮ ಈಗಾಗಲೇ ಕಾಂಬೋಡಿಯಾ, ವಿಯೆಟ್ನಾಂ, ಇಂಡೋನೇಷ್ಯಾ ಮಾರಿಷಸ್, ಮಾಲ್ಡೀವ್ಸ್, ಜಪಾನ್, ಕತಾರ್, ಜಾರ್ಜಿಯಾ, ಭೂತಾನ್ ಹಾಗೂ ಫ್ರಾನ್ಸ್ ದೇಶಗಳಲ್ಲಿ ಯಶಸ್ವಿಯಾಗಿ ನಡೆದಿದೆ. ಇದೀಗ ದಕ್ಷಿಣ ಆಫ್ರಿಕಾದ ಸನ್ ಸಿಟಿಯಲ್ಲಿ 12ನೇ ಗ್ಲೋಬಲ್ ಅಚೀವರ್ಸ್ ಅವಾರ್ಡ್ ಕಾರ್ಯಕ್ರಮ ನಡೆಯುತ್ತಿದೆ.

**ಬುಧವಾರ, 25 ಫೆಬ್ರವರಿ 2026**

**ಸನ್ ಸಿಟಿ, ದಕ್ಷಿಣ ಆಫ್ರಿಕಾ**

## ಸಮಾಚಾರ ಸಣ್ಣದಲ್ಲ

### ಇಂದು ಜಿಲ್ಲಾ ಜೆಡಿಎಸ್ ಪೂರ್ವಭಾವಿ ಸಭೆ

**ಬೀದರ್:** ವಿಜಯಪುರದಲ್ಲಿ ಫೆಬ್ರವರಿ 27 ರಂದು ನಡೆಯಲಿರುವ ಜನತಾ ಸಮಾವೇಶ (ಕಿತ್ತೂರ ಸಮಾವೇಶ) ಹಿನ್ನೆಲೆಯಲ್ಲಿ ಜಿಲ್ಲಾ ಜನತಾ ದಳ (ಎಸ್) ವತಿಯಿಂದ ಪೂರ್ವಭಾವಿ ಸಭೆ ಫೆ.24ರಂದು ಮಧ್ಯಾಹ್ನ 3 ಗಂಟೆಗೆ ಬೀದರ್ ನಗರದ ಮೋಹನ್ ಮಾರ್ಕೆಟ್‌ನಲ್ಲಿರುವ ಜಿಲ್ಲಾ ಜೆಡಿಎಸ್ ಕಚೇರಿಯಲ್ಲಿ ನಡೆಯಲಿದೆ. ಮಾನ್ಯ ಮಾಜಿ ಸಚಿವ ಬಂಡೆಪ್ಪಾ ಖಾಸೆಂಪೂರ ಹಾಗೂ ಜಿಲ್ಲಾಧ್ಯಕ್ಷ ರಮೇಶ ಪಾಟೀಲ್ ಅವರ ನೇತೃತ್ವದಲ್ಲಿ ಸಭೆ ನಡೆಯಲಿದೆ ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮನೋಹರ ದಂಡೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಪಕ್ಷದ ರಾಜ್ಯ ಹಾಗೂ ಜಿಲ್ಲಾ ಪದಾಧಿಕಾರಿಗಳು, ವಿವಿಧ ಘಟಕಗಳ ಅಧ್ಯಕ್ಷರು, ನಗರಸಭೆಯ ಚುನಾಯಿತ ಸದಸ್ಯರು, ಪಕ್ಷದ ಮಾಜಿ ಸದಸ್ಯರು, ಮಾಜಿ ತಾಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿ ಸದಸ್ಯರು, ಮಾಜಿ ಶಾಸಕರು ಮತ್ತು ಜಿಲ್ಲೆಯ ಮುಖಂಡರು ಸಭೆಗೆ ಕಡ್ಡಾಯವಾಗಿ ಹಾಜರಾಗಲು ಮನವಿ ಮಾಡಿದ್ದಾರೆ.

### 1 ಎಕರೆ ನಿವೇಶನ ಮಂಜೂರಿಗೆ ಮನವಿ

**ಬೀದರ್:** ಜಿಲ್ಲಾ ಕೇಂದ್ರ ಸ್ಥಾನದಲ್ಲಿ ನಿಜಶರಣ ಅಂಬಿಗರ ಚೌಡಯ್ಯ ಸಮುದಾಯ ಭವನ ಕಟ್ಟಡ ನಿರ್ಮಾಣಕ್ಕಾಗಿ ಕನಿಷ್ಠ 1 ಎಕರೆ ನಿವೇಶನ ಮಂಜೂರು ಮಾಡುವಂತೆ ಅಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸುವಂತೆ ಅಂಬಿಗರ ಚೌಡಯ್ಯ ಯುವಸೇನೆಯ ಉಪಾಧ್ಯಕ್ಷ ಮಾರುತಿ ಮಾಸ್ಟರ್‌ಮನವಿ ಮಾಡಿದ್ದಾರೆ.ಜಿಲ್ಲೆಯಲ್ಲಿ ಟೋಕರೆ ಕೋಳಿ ಸೇರಿದಂತೆ ಕೋಳಿ, ಕಬ್ಬಲಿಗ, ತಳವಾರ, ಪರಿವಾರ, ಅಂಬಿಗ, ಬೆಸ್ತ್ ಹೀಗೆ ಒಟ್ಟು 39 ಪರ್ಯಾಯ ಹೆಸರುಗಳಿಂದ ಕರೆಯಲ್ಪಡುವ ಈ ಸಮುದಾಯದ ಜನಸಂಖ್ಯೆ ಸುಮಾರು 2 ಲಕ್ಷಕ್ಕೂ ಮೇಲ್ಪಟ್ಟಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

### ಜಿಲ್ಲಾ ಕಾನೂನು ಸಲಹೆಗಾರ ನೇಮಕ

**ಬೀದರ್:** ಕನ್ನಡ ಸೇನೆ ಕರ್ನಾಟಕ ಸಂಘಟನೆಯು ಮತ್ತಷ್ಟು ಬಲಿಷ್ಠಗೊಳಿಸುವ ಉದ್ದೇಶದಿಂದ ಗುಂಡು ರೆಡ್ಡಿ ಗುಡಾಡಿ ಅವರನ್ನು ಜಿಲ್ಲಾ ಕಾನೂನು ಸಲಹೆಗಾರರಾಗಿ ನೇಮಕ ಮಾಡಲಾಗಿದೆ ಎಂದು ಜಿಲ್ಲಾ ಅಧ್ಯಕ್ಷ ಸುಭಾಷ್ ಕೆನಡೆ ತಿಳಿಸಿದ್ದಾರೆ. ನಾಡು, ನುಡಿ, ನೆಲ ಮತ್ತು ಜಲದ ರಕ್ಷಣೆಗೆ ಸಂಘಟನೆ ಶಕ್ತಿಶಾಲಿಯಾಗಬೇಕು ಎಂಬ ಉದ್ದೇಶದಿಂದ ರಾಜ್ಯ ಉಪಾಧ್ಯಕ್ಷ ಡಾ. ರವಿಸ್ವಾಮಿ ನಿರ್ಣಾ ಅವರ ಆದೇಶದ ಮೇರೆಗೆ ಈ ನೇಮಕಾತಿ ಮಾಡಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ವಿಚಾರ ಸಂಕೀರ್ಣ: ಅರ್ಜಿ ಆಹ್ವಾನ

**ಯಾದಗಿರಿ:** ಅಸ್ಪೃಶ್ಯತಾ ನಿವಾರಣೆ ಯೋಜನೆ ಅಡಿಯಲ್ಲಿ ಶಹಾಪೂರ ತಾಲೂಕಿನಲ್ಲಿ ವಿಚಾರಗೋಷ್ಠಿ ಮತ್ತು ವಿಚಾರ ಸಂಕೀರ್ಣ ಕಾರ್ಯಕ್ರಮ ನಡೆಸಲಿದೆ, ಆಸಕ್ತಿವುಳ್ಳ ಸಂಘ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಶಹಾಪೂರ ಅಸ್ಪೃಶ್ಯತಾ ನಿವಾರಣೆ ಸಮಿತಿ ಅಧ್ಯಕ್ಷರು ಹಾಗೂ ತಹಸೀಲ್ದಾರರು ಬಾಲರಾಜ ಅವರು ತಿಳಿಸಿದ್ದಾರೆ. ಶಹಾಪೂರ ತಾಲೂಕಿನಲ್ಲಿ ಅಸ್ಪೃಶ್ಯತಾ ನಿವಾರಣೆ ಯೋಜನೆ ಅಡಿಯಲ್ಲಿ ಬೀದಿ ನಾಟಕ, ವಿಚಾರಗೋಷ್ಠಿ ಮತ್ತು ವಿಚಾರ ಸಂಕೀರ್ಣ ಹಾಗೂ ಕಾರ್ಯಾಗಾರ ನಡೆಸುವ ಬಗ್ಗೆ ಶಹಾಪೂರ ತಾಲೂಕಿಗೆ ಸೀಮಿತಗೊಂಡಂತೆ ಅರ್ಹ ಆಸಕ್ತಿವುಳ್ಳ ಸಂಘ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿವುಳ್ಳ ಸಂಘ ಸಂಸ್ಥೆಗಳ 2026ರ ಫೆಬ್ರವರಿ 27ರ ಒಳಗೆ ಕಚೇರಿ ಸಮಯದಲ್ಲಿ ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಶಹಾಪೂರ ಕಾರ್ಯಾಲಯಕ್ಕೆ ಈ ಕೆಳಕಂಡಂತೆ ದಾಖಲೆಗಳೊಂದಿಗೆ ಸಲ್ಲಿಸಬೇಕು. ಅರ್ಜಿಯ ಜತೆಗೆ ಲಗತ್ತಿಸುವ ಎಲ್ಲ ಜೆರಾಕ್ಸ್ ಪ್ರತಿಗಳನ್ನು ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸಬೇಕು, ತಹಸೀಲ್ದಾರರು ಹಾಗೂ ಅಧ್ಯಕ್ಷರು ಅಸ್ಪೃಶ್ಯತಾ ನಿವಾರಣೆ ಸಮಿತಿ ಶಹಾಪೂರ ಅವರ ನಿರ್ಣಯವೇ ಅಂತಿಮವಾಗಿರುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಯೋಜನೆಗಳ ಜಿಲ್ಲಾ ಮಟ್ಟದ ಸಮಿತಿ ಸಭೆ

**ಯಾದಗಿರಿ:** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಅನುಷ್ಠಾನಗೊಳ್ಳುತ್ತಿರುವ ವಿವಿಧ ಯೋಜನೆಗಳ ಜಿಲ್ಲಾ ಮಟ್ಟದ ಸಮಿತಿ ಸಭೆ ಫೆಬ್ರವರಿ 25ರ ಬೆಳಗ್ಗೆ 10 ಗಂಟೆಗೆ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಹಾಜರಾಗುವಂತೆ ಯಾದಗಿರಿ ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ಅವರು ತಿಳಿಸಿದ್ದಾರೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ವಿವಿಧ ಯೋಜನೆಗಳ ಜಿಲ್ಲಾ ಮಟ್ಟದ ಸಮಿತಿಗಳ ಸಭೆಗೆ ಸಂಬಂಧಪಟ್ಟ ಸಮಿತಿಯ ಪದಾಧಿಕಾರಿಗಳು ಖುದ್ದಾಗಿ ಹಾಗೂ ಕಡ್ಡಾಯವಾಗಿ ಉಪಸ್ಥಿತರಿರುವಂತೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

# ಮಕ್ಕಳಿಗೆ ಸಾಮಾಜಿಕ ಜಾಲತಾಣ ನಿರ್ಬಂಧಿಸಲಿ

## ಶಾಹೀನ್ ಪದವಿ ಕಾಲೇಜು ವಿದ್ಯಾರ್ಥಿಗಳಿಂದ ಸಮೀಕ್ಷೆ | ಮಕ್ಕಳ ಪಾಲಕರಿಂದ ಅಭಿಪ್ರಾಯ ಸಂಗ್ರಹ: ಪ್ರಾಚಾರ್ಯೆ ಅಫ್ರಾನಾಜ್

**ಬೀದರ್:** ಶಾಹೀನ್ ಪದವಿ ಕಾಲೇಜು ವಿದ್ಯಾರ್ಥಿಗಳು ನಗರದಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಶೇ 80 ರಷ್ಟು ಪಾಲಕರು 16 ವರ್ಷದ ಒಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ಬಳಕೆಗೆ ನಿರ್ಬಂಧ ಹೇರಬೇಕು ಎಂದು ಬೇಡಿಕೆ ಮಂಡಿಸಿದ್ದಾರೆ ಎಂದು ಕಾಲೇಜಿನ ಪ್ರಾಚಾರ್ಯೆ ಅಫ್ರಾನಾಜ್ ಹೇಳಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಈಗಾಗಲೇ ಆಸ್ಟ್ರೇಲಿಯಾದಲ್ಲಿ 16 ವರ್ಷದ ಒಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ಬಳಕೆಗೆ ನಿರ್ಬಂಧ ಹೇರಲಾಗಿದೆ. ಅಂತಹುದೇ ಕಾನೂನನ್ನು ದೇಶದಲ್ಲೂ ಜಾರಿಗೆ ತರಬೇಕು ಎಂದು ಪಾಲಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎಂದು ತಿಳಿಸಿದರು.

ಅತಿಯಾದ ಮೊಬೈಲ್ ವೀಕ್ಷಣೆಯಿಂದ ಮಕ್ಕಳ ಮನಸ್ಸಿನ ಮೇಲೆ ಆಗುತ್ತಿರುವ ಪರಿಣಾಮ, ಮಹಿಳೆಯರ ಸುರಕ್ಷತೆಗಾಗಿ ಇರುವ ಕಾನೂನು ಹಾಗೂ ಸ್ವಚ್ಛ ಭಾರತ ಅಭಿಯಾನ ಕುರಿತು ವಿದ್ಯಾರ್ಥಿಗಳು ಸಮೀಕ್ಷೆ ನಡೆಸಿದರು ಎಂದು ಹೇಳಿದರು.

ಮೂರು ವಿಷಯಗಳ ಕುರಿತು ಜನವರಿ 10 ರಿಂದ ಫೆಬ್ರುವರಿ 5 ರ ವರೆಗೆ ನಡೆದ ಸಮೀಕ್ಷೆಯಲ್ಲಿ ಬಿ.ಎ, ಬಿ.ಎಸ್ಸಿ, ಬಿ.ಕಾಂ ಹಾಗೂ ಬಿ.ಸಿ.ಎ. ಓದುತ್ತಿರುವ 200 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ನಗರದ ಓಲ್ಡ್ ಸಿಟಿ, ಫೈಜಪುರ, ಶಹಾಪುರ ಗೇಟ್, ರಾಜಗೊಂಡೆ ಕಾಲೊನಿ ಹಾಗೂ ಗುಂಪಾ ಪ್ರದೇಶದ ಒಟ್ಟು 825 ಮನೆಗಳಿಗೆ ಭೇಟಿ ಕೊಟ್ಟು ಪಾಲಕರ ಅಭಿಪ್ರಾಯ ಸಂಗ್ರಹಿಸಿದ್ದರು ಎಂದು ತಿಳಿಸಿದರು.

ಸಮೀಕ್ಷೆ ವೇಳೆ ಮೂರು ವಿಷಯಗಳ ತಲಾ 20 ಪ್ರಶ್ನೆಗಳನ್ನು ಕೇಳಿ, ಅವರ ಅಭಿಪ್ರಾಯ ದಾಖಲಿಸಿಕೊಂಡಿದ್ದರು. ಯಾರೊಬ್ಬರ ವ್ಯಯಕ್ತಿಕ ಮಾಹಿತಿ ಅಥವಾ ಮೊಬೈಲ್ ಸಂಖ್ಯೆ ಪಡೆದಿಲ್ಲ ಎಂದು ತಿಳಿಸಿದರು.

ಸಮೀಕ್ಷೆಯಲ್ಲಿ ಶೇ.65 ರಷ್ಟು ಪಾಲಕರು 16 ವರ್ಷದ ಯೊಳಗಿನ ಮಕ್ಕಳು ಮೊಬೈಲ್ ಅನ್ನು ಶಿಕ್ಷಣೇತರ ಉದ್ದೇಶಕ್ಕೆ ಬಳಸುತ್ತಿದ್ದಾರೆ ಗೇಮ್, ಯುಟ್ಯೂಬ್ ರೀಲ್ಸ್ ಹಾಗೂ ಫೇಸ್ಬುಕ್ ವೀಕ್ಷಣೆ ಉಪಯೋಗಿಸುತ್ತಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಶೇ 48 ರಷ್ಟು ಪಾಲಕರು ಮೊಬೈಲ್ ಬಳಕೆಯ ಕಾರಣಕ್ಕಾಗಿ ಮಕ್ಕಳು ದೈಹಿಕ ಕ್ರೀಡೆಗಳಲ್ಲಿ ಪಾಲ್ಗೊಳ್ಳುತ್ತಿಲ್ಲ ಎಂದು, ಶೇ 42 ರಷ್ಟು ಮಂದಿ ಕಣ್ಣು ನೋವು, ತಲೆ ನೋವು, ನಿದ್ರಾ ಹೀನತೆ ಸೇರಿದಂತೆ ಮಕ್ಕಳ ದೈಹಿಕ ಆರೋಗ್ಯದ ಮೇಲೆ ಪರಿಣಾಮ ಉಂಟಾಗುತ್ತಿದೆ ಎಂದ ಅವರು, ಶೇ 33 ರಷ್ಟು ಪಾಲಕರು ಮಕ್ಕಳು ಪಾಲಕರೊಂದಿಗೆ ಮುಕ್ತವಾಗಿ ಬೆರೆಯುತ್ತಿಲ್ಲ ಮಾತನಾಡುತ್ತಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಜನರ ಅಭಿಪ್ರಾಯ ಸಂಗ್ರಹಿಸುವುದು ಹಾಗೂ ಅದನ್ನು ಆಡಳಿತದ ಮುಂದೆ ಇಡುವುದು ವಿದ್ಯಾರ್ಥಿಗಳ ಸಮೀಕ್ಷೆಯ ಉದ್ದೇಶವಾಗಿತ್ತು. ಸಮೀಕ್ಷೆಯ ಆಧಾರದ ಮೇಲೆ ಆಡಳಿತ ಕ್ರಮ ಕೈಗೊಳ್ಳಬೇಕು ಎನ್ನುವುದೇ ವಿದ್ಯಾರ್ಥಿಗಳ ಆಶಯವಾಗಿದೆ ಎಂದು ಅಫ್ರಾನಾಜ್ ಹೇಳಿದರು. ಕಾಲೇಜಿನ ಪ್ರಾಧ್ಯಾಪಕರಾದ ಪ್ರೊ. ಅಭಿಲಾಸ ಪೋಲದಾಸ್, ಡಾ.ಸಿರಾಜುಲ್ ಹಸನ್, ಪ್ರೊ.ಮಹಮ್ಮದ್ ಇಕ್ಲಾಕ್, ಪ್ರೊ.ಬಿಲಾಲ್ ಅಹಮ್ಮದ್, ಪ್ರೊ. ಅಶ್ವಿನಿ ಹಾಗೂ ಇತರರು ಪತ್ರಿಕಾಗೋಷ್ಟಿಯಲ್ಲಿದ್ದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಶಾಹೀನ್ ಕಾಲೇಜ್ ಪ್ರಾಚಾರ್ಯೆ ಅಫ್ರಾನಾಜ್ ಮಾಹಿತಿ ನೀಡಿದರು.

**ಶೇ .68 ರಷ್ಟು ಮಂದಿ ಕಾನೂನು ತಿಳಿವಳಿಕೆ**

ಮಹಿಳೆಯರ ಸುರಕ್ಷತೆಗಾಗಿ ಇರುವ ಕಾನೂನು ಕುರಿತ ಸಮೀಕ್ಷೆಯಲ್ಲಿ ಶೇ 30.90 ರಷ್ಟು ಮಹಿಳೆಯರು ಸೋಷಿಯಲ್ ಮೀಡಿಯಾದಲ್ಲಿ ಟ್ರೋಲ್ಗೆ ಒಳಗಾಗಿದ್ದಾಗಿ ತಿಳಿಸಿದ್ದಾರೆ. ಶೇ 68 ರಷ್ಟು ಮಂದಿ ಕಾನೂನು ತಿಳಿವಳಿಕೆ ಇದೆ. ಇನ್ನಷ್ಟು ತಿಳಿದುಕೊಳ್ಳುವ ಆಸಕ್ತಿಯೂ ಇದೆ. ಆದರೆ, ಕಾನೂನು ಅರಿವು ಸಿಗುತ್ತಿಲ್ಲ ಎಂದು ಪ್ರಾಚಾರ್ಯೆ ಅಫ್ರಾನಾಜ್ ತಿಳಿಸಿದ್ದಾರೆ.

> ಸ್ವಚ್ಛ ಭಾರತ ಅಭಿಯಾನದ ಬಗ್ಗೆ ಗೊತ್ತಿದೆ ಎಂದು ಶೇ 95 ರಷ್ಟು ಮಂದಿ, ಸ್ವಚ್ಛತೆ ತಮ್ಮ ವೈಯಕ್ತಿಕ ಜವಾಬ್ದಾರಿ ಎನ್ನುವುದು ತಿಳಿದಿದೆ ಎಂದು ಶೇ 90 ರಷ್ಟು ಜನ ಹೇಳಿದ್ದಾರೆ. ಸ್ವಚ್ಛ ಭಾರತ ಮೊಬೈಲ್ ಆ್ಯಪ್ ಬಗ್ಗೆ, ಶೇ 60 ರಷ್ಟು ಮಂದಿಗೆ ಗೊತ್ತಿದ್ದರೂ, ಶೇ 10 ರಷ್ಟು ಮಂದಿಯಷ್ಟೇ ಈ ಆ್ಯಪ್ ಅನ್ನು ಡೌನ್ಲೋಡ್ ಮಾಡಿಕೊಂಡಿದ್ದಾರೆ. ಡೌನ್ಲೋಡ್ ಮಾಡಿಕೊಂಡವರಲ್ಲಿ ಶೇ 20 ರಷ್ಟು ಮಂದಿ ಮಾತ್ರ ಸಂತೃಪ್ತರಾಗಿದ್ದಾರೆ.
>
> **ಅಫ್ರಾನಾಜ್, ಪ್ರಾಚಾರ್ಯೆ**

---

## ಬಡ ರೋಗಿಗಳಿಗೆ ಸರಿಯಾದ ಚಿಕಿತ್ಸೆ, ಔಷಧ ಒದಗಿಸಲು ರೈತ ಸಂಘ ಆಗ್ರಹ

# ಸರಕಾರಿ ಆಸ್ಪತ್ರೆಯಲ್ಲಿ ಔಷಧ ಸಾಮಗ್ರಿ ಕೊರತೆ

**ಶಹಾಪುರ:** ಸರಕಾರಿ ಆಸ್ಪತ್ರೆಗೆ ಹೆಚ್ಚು ಬಡ ರೋಗಿಗಳೇ ಬರಲಿದ್ದು, ಕನಿಷ್ಠ ಸಣ್ಣಪುಟ್ಟ ರೋಗಕ್ಕೂ ಔಷಧಗಳ ಕೊರತೆ ಮತ್ತು ಶಸ್ತ್ರ ಚಿಕಿತ್ಸೆಗಳಿಗೆ ಕನಿಷ್ಠ ಸಾಮಗ್ರಿಗಳು ಔಷಧಗಳು, ಇಲ್ಲದೆ ವೈದ್ಯರು ಖಾಸಗಿ ಆಸ್ಪತೆಗಳಿಗೆ ಔಷದ ತರಲು ಬರೆಯುತ್ತಿರುವುದು ವಿಷಾಧನೀಯ ಎಂದು ರೈತ ಮುಖಂಡ ಚೆನ್ನಪ್ಪ ಆನೇಗುಂದಿ ಕಳವಳ ವ್ಯಕ್ತಪಡಿಸಿದರು.

ನಗರ ಸರಕಾರಿ ಸಾರ್ವಜನಿಕ ಆಸ್ಪತ್ರೆಯ ಎದುರು ಕರ್ನಾಟಕ ಪ್ರಾಂತ ರೈತ ಸಂಘದ ವತಿಯಿಂದ ಪ್ರತಿಭಟನೆ ನಡೆಸಿ ಮಾತನಾಡಿ

ಬಡವರು ಖಾಸಗಿ ಆಸ್ಪತ್ರೆಗಳಲ್ಲಿ ದುಬಾರಿ ಹಣ ತೆತ್ತು ಲ್ಯಾಬ್ಗಳಲ್ಲಿ ಸಾಲಸೂಲಾ ಮಾಡಿಕೊಂಡು ಪರೀಕ್ಷೆ ಮಾಡಿಸಿಕೊಂಡು ಬರುತ್ತಿದ್ದಾರೆ. ಸರಿಯಾದ ಚಿಕಿತ್ಸೆ ಸಾಮಗ್ರಿಗಳು ಇಲ್ಲದೇ ಅಪೆಂಡೆಕ್ಸ್ ಸೀಜಿರಿಂಗ್ ಬಂದಿದೆ. ಗ್ರೂಪ್ ನೌಕರರಿಗೆ ಕಳೆದ 6 ತಿಂಗಳಿನಿಂದ ಸಂಬಳವಿಲ್ಲಾ. ವೈದ್ಯರು ಔಷಧಗಳ ಚೀಟಿ ಹೊರಗಡೆ ಬರೆದು ಕಳಿಸುತ್ತಿದ್ದಾರೆ. ದುಬಾರಿ ಬೆಲೆ ರೋಗನಿರೋಧಕ ಔಷಧಗಳ ಮತ್ತು ಜ್ವರ , ಗ್ಲುಕೋಸ್ ಬಾಟಲ್‌ಗಳನ್ನು ಹೊರಗಡೆಯಿಂದ ಖರೀದಿಸಿ ರೋಗಿಗಳು ತರುತ್ತಿದ್ದಾರೆ. ಆರೋಗ್ಯ ಸಚಿವರಾದ ದಿನೇಶ್ ಗುಂಡೂರಾವ್ ರವರು ಅಲಕ್ಷತನ ಬೇಜವಾಬ್ದಾರಿ ಮತ್ತು ಭ್ರಷ್ಟಚಾರದಿಂದ ತಮ್ಮ ಜವಾಬ್ದಾರಿ ನಿರ್ವಹಿಸುವಲ್ಲಿ ವಿಫಲವಾಗಿದ್ದಾರೆ ಎಂದು ಕಿಡಿಕಾರಿದರು. ಔಷಧ ಖರೀದಿಯಲ್ಲಿ ಭಾರಿ ಭ್ರಷ್ಟಾಚಾರದಿಂದ ಔಷಧಗಳ ಬೆಲೆ 10ರು. ಕಿಮ್ಮತ್ತಿನ ಬೆಲೆ 100 ರುಕ್ಕೆ 50 ರು ಬೆಲೆಯ ಇಂಜೆಕ್ಷನ್ 280 ರು ಖರಿದಿಸಿರುವುದು ಮತ್ತು ಸರಕಾರದ ಹಣ ಲೂಟಿ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಶಹಾಪುರ ತಾಲೂಕ ಸರಕಾರಿ ಆಸ್ಪತ್ರೆಗೆ ಅವಶ್ಯವಿರುವಷ್ಟು ಅವಶ್ಯಕವಾದ ಔಷಧಗಳನ್ನು ಒದಗಿಸಬೇಕು. ಸಿಟಿಸಿ ರಕ್ತ ಪರೀಕ್ಷೆ ಮತ್ತು ಶಸ್ತ್ರ ಚಿಕಿತ್ಸೆ ಮೊದಲಿನಂತೆ ಪ್ರಾರಂಭಿಸಬೇಕು. ವನದುರ್ಗ,ಸಗರ, ಬಿರನೂರ, ದೋರನಹಳ್ಳಿ, ಹತ್ತಿಗುಡೂರ, ಶೆಟ್ಟಿಗೇರ ಆಸ್ಪತ್ರೆಗಳಿಗೆ ಅವಶ್ಯಕತೆಯಿರುವ ಔಷಧಗಳನ್ನು ಒದಗಿಸಬೇಕು. 1000ಕ್ಕಿಂತ ಹೆಚ್ಚು ರೋಗಿಗಳು ಬರುತ್ತಿರುವುದರಿಂದ ಅದಕ್ಕೆ ತಕ್ಕಂತೆ ಡಾಕ್ಟರ್,ನರ್ಸ್, ಡಿ ಗ್ರೂಪ್ ನೌಕರರು ನೇಮಿಸಬೇಕು ಹಾಗೂ ಹೊರಗುತ್ತಿಗೆ ನೌಕರರನ್ನು ಖಾಯಂ ಮಾಡಬೇಕು. ಸರಕಾರಿ ಆಸ್ಪತ್ರೆಗಳಲ್ಲಿ ಮುಖ್ಯ ವೈದ್ಯಾಧಿಕಾರಿಗಳನ್ನು ತಕ್ಷಣವೇ ಔಷಧ ಖರೀದಿಸಲು ಅನುಮತಿ ನೀಡಿ ಹಾಗೂ ಹಣ ಬಿಡುಗಡೆ ಮಾಡಬೇಕು. ಅಪಘಾತ ಮತ್ತು ಗರ್ಭಿಣಿ ಸ್ತ್ರಿಯರಿಂದ ಹೆರಿಗೆಯ ಸಮಯದಲ್ಲಿ ಹಣ ಪಡೆಯುವುದನ್ನು ಕಟ್ಟುನಿಟ್ಟಾಗಿ ತಡೆಗಟ್ಟಬೇಕು.

ಈ ಸಂದರ್ಭದಲ್ಲಿ ಕೆಪಿಆರ್‌ಎಸ್ ತಮ್ಮಣ್ಣ ಜಾಗೀರದಾರ, ಭೀಮಣ್ಣ ಟಪ್ಪೇದಾರ, ಹೊನ್ನಪ್ಪ ಮಾನ್ವಡೆ ಸೇರಿದಂತೆ ರೈತರು, ಕಾರ್ಮಿಕ ಮಹಿಳೆಯರು ಇದ್ದರು.

ನಗರ ಸರಕಾರಿ ಸಾರ್ವಜನಿಕ ಆಸ್ಪತ್ರೆಯ ಎದುರು ಕರ್ನಾಟಕ ಪ್ರಾಂತ ರೈತ ಸಂಘದ ವತಿಯಿಂದ ಪ್ರತಿಭಟನೆ ನಡೆಸಿ ಆಸ್ಪತ್ರೆ ವೈದ್ಯಾಧಿಕಾರಿ ಡಾ.ಯಲ್ಲಪ್ಪ ಪಾಟೀಲ್ ಅವರು ಮನವಿ ಪತ್ರ ಸಲ್ಲಿಸಿದರು.

> ಮತಕ್ಷೇತ್ರದ ಅಭಿವೃದ್ಧಿಯ ಕುರಿತು ಹೆಚ್ಚು ಕಾಳಜಿ ಹೊಂದಿರುವ ಉಸ್ತುವಾರಿ ಸಚಿವರಾದ ಶರಣಬಸಪ್ಪ ಗೌಡ ದರ್ಶನಾಪುರ ಅವರು ಸಾರ್ವಜನಿಕರ ಹಿತದೃಷ್ಟಿಯಿಂದ ಕಾಳಜಿ ವಹಿಸಿ ಸರಕಾರಿ ಸಾರ್ವಜನಿಕ ಆಸ್ಪತ್ರೆಗೆ ಸರಕಾರದಿಂದ ಔಷಧಗಳು, ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಬೇಕು.
>
> **ಎಸ್.ಎಮ್ ಸಾಗರ ,ಕೆ.ಪಿ.ಆರ್.ಎಸ್ ಜಿಲ್ಲಾ ಉಪಾಧ್ಯಕ್ಷ.**

## ಅಭಿವೃದ್ಧಿಗೆ ಸದಾ ಸಿದ್ಧ: ಸಚಿವ

**ಬಸವಕಲ್ಯಾಣ:** ಸಮಗ್ರ ಅಭಿವೃದ್ಧಿಗೆ ನಾನು ಸಿದ್ದ. ನನಗೆ ಕಲ್ಯಾಣದ ಮೇಲೆ ವಿಶೇಷ ಅಭಿಮಾನ ಇದೆ ಎಂದು ಬೀದರ್ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿದರು.

ತಾಲೂಕಿನ ನಾರಾಯಣಪುರ್ ಕ್ರಾಸ್ ನಿಂದ ಶಿವಪುರ ಕ್ರಾಸ್ ವರೆಗೆ ರು. 3.50 ಕೋಟಿ ವೆಚ್ಚದಲ್ಲಿ (ನಾಗಣ್ಣ ಕಟ್ಟಿ) ವರೆಗೆ ರಸ್ತೆ ಸುಧಾರಣೆ ಕಾಮಗಾರಿಗೆ ಭೂಮಿ ಪೂಜೆ ಸಲ್ಲಿಸಿ ಮಾತನಾಡಿದ ಅವರು ಈ ರಸ್ತೆ ಅಭಿವೃದ್ಧಿಯಿಂದ ಸ್ಥಳೀಯ ಜನರಿಗೆ ಸುಗಮ ಸಂಚಾರ ವ್ಯವಸ್ಥೆ ದೊರೆಯುವುದರ ಜತೆಗೆ ವ್ಯಾಪಾರ-ವಾಣಿಜ್ಯ ಹಾಗೂ ಕೃಷಿ ಚಟುವಟಿಕೆಗಳಿಗೆ ಸಹಕಾರಿಯಾಗಲಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ, ಕರ್ನಾಟಕ ವಸತಿ ಶಿಕ್ಷಣ ಇಲಾಖೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೀದರ್ ಇವರ ಸಂಯುಕ್ತ ಆಶ್ರಯದಲ್ಲಿ, ಬಸವಕಲ್ಯಾಣ ತಾಲೂಕಿನ ಕೋಹಿನೂರ ಗ್ರಾಮದಲ್ಲಿ ಸುಮಾರು ರು. 16 ಕೋಟಿ ಅಂದಾಜು ವೆಚ್ಚದಲ್ಲಿ ನಿರ್ಮಾಣವಾಗಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ನೂತನ ಭವ್ಯ ಕಟ್ಟಡ ಕಾಮಗಾರಿಗೂ ಭೂಮಿ ಪೂಜೆ ನೆರವೇರಿತು. ಈ ವಸತಿ ಶಾಲೆ ಗ್ರಾಮೀಣ ಹಾಗೂ ಹಿಂದುಳಿದ ವರ್ಗಗಳ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ, ಉತ್ತಮ ವಸತಿ ಸೌಲಭ್ಯಗಳು ಮತ್ತು ಸಮಗ್ರ ವ್ಯಕ್ತಿತ್ವ ವಿಕಾಸಕ್ಕೆ ನೆರವಾಗಲಿದೆ ಎಂದರು. ಶಾಸಕ ಶರಣು ಸಲಗರ್‌ಸೇರಿದಂತೆ ಕಾಡ್ ಅಧ್ಯಕ್ಷ ಬಾಬು ಹೊನ್ನಾನಾಯಕ್. ಮೀನುಗಾರಿಕೆ ಅಧ್ಯಕ್ಷ ಮಾಲಾ ಬಿ ನಾರಾಯಣರಾವ್. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನೀಲಕಂಠ ರಾಠೋಡ. ಬಸವರಾಜ ಸ್ವಾಮಿ ಶೇಶಿಕಾಂತ್ ದುರ್ಗೆ ವೈಜುನಾಥ ಕಾಮಶಟ್ಟೆ ಡಾ. ವಿ. ಎಸ್. ಮಠಪತಿ ಶಿವರಾಜ ಶಿವರಾಜ್ ನರಶೆಟ್ಟಿ ಶರಣು ಅಲಗೂಡ್ ಜ್ಞಾನೇಶ್ವರ್‌ಮುಳೆ ಪ್ರಭು ಪಾಟೀಲ್ ಸಸ್ತಾಪುರ ಸಂತೋಷ್ ಗುತ್ತೇದಾರ ತಾಲೂಕು ಹಾಗೂ ಜಿಲ್ಲಾಮಟ್ಟದ ಅಧಿಕಾರಿಗಳು ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ನಗರದ ನಾರಾಯಣಪುರ ಕ್ರಾಸದಿಂದ್ ನಾಗಣ್ಣ ಕಟ್ಟೆ ವರೆಗೆ ರಸ್ತೆ ಕಾಮಗಾರಿಗೆ ಸಚಿವ ಈಶ್ವರ್‌ಪೂಜೆ ಸಲ್ಲಿಸಿದರು.

---

## ಪಟ್ಟದ್ದೇವರ ಅಮೃತ ಮಹೋತ್ಸವಕ್ಕೆ ಆಹ್ವಾನ

ಭಾಲ್ಕಿಯ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಬೆಂಗಳೂರಿನಲ್ಲಿ ಆರ್ಟ್ ಲಿವಿಂಗ್ ಫೌಂಡೇಶನ್ ಸಂಸ್ಥಾಪಕ ರವಿಶಂಕರ್‌ಗುರೂಜಿ ಅವರನ್ನು ಭೇಟಿಯಾಗಿ ಅಮೃತ ಮಹೋತ್ಸವ ಸಮಾರಂಭಕ್ಕೆ ಆಹ್ವಾನಿಸಿದರು.

**ಭಾಲ್ಕಿ:** ಪಟ್ಟಣದಲ್ಲಿ ಮುಂದಿನ ತಿಂಗಳು ಏಪ್ರಿಲ್‌ನಲ್ಲಿ ನಡೆಯಲಿರುವ ವಚನ ಜಾತ್ರೆ-2026 ಮತ್ತು ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ಸಮಾರಂಭಕ್ಕೆ ಆರ್ಟ್ ಆಫ್ ಲಿವಿಂಗ್ ಫೌಂಡೇಶನ್ ಸಂಸ್ಥಾಪಕ ರವಿಶಂಕರ್‌ಗುರೂಜಿ ಅವರನ್ನು ಆಹ್ವಾನಿಸಲಾಗಿದೆ.

ಬೆಂಗಳೂರಿನ ಕನಕಪುರ ರಸ್ತೆಯ ಆರ್ಟ್ ಆಫ್ ಲಿವಿಂಗ್ ಸಂಸ್ಥೆಗೆ ಈಚೆಗೆ ಭಾಲ್ಕಿಯ ಹಿರೇಮಠ ಸಂಸ್ಥಾನದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಭೇಟಿ ನೀಡಿ ರವಿಶಂಕರ್‌ಗುರೂಜಿ ಅವರನ್ನು ಭೇಟಿಯಾಗಿ ಆಹ್ವಾನ ಪತ್ರಿಕೆ ನೀಡಿ ಗಡಿ ಭಾಗದಲ್ಲಿ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಶೈಕ್ಷಣಿಕ, ಸಾಮಾಜಿಕ,

ಧಾರ್ಮಿಕ ಮತ್ತು ಅಧ್ಯಾತ್ಮಿಕ ಕ್ಷೇತ್ರದಲ್ಲಿ ಕಳೆದ ನಾಲ್ಕೈದು ದಶಕಗಳಿಂದ ಯಾವುದೇ ಫಲಾಪೇಕ್ಷೆ ಇಲ್ಲದೇ ದಣಿವರಿಯದ ಸೇವೆ ಸಲ್ಲಿಸುತ್ತಿದ್ದಾರೆ. ಅಂತಹ ಪೂಜ್ಯರು 75 ವಸಂತಗಳನ್ನು ಪೂರೈಸಿದ್ದು, ಅವರ ಅಮೃತ ಮಹೋತ್ಸವ ಆಚರಿಸಲು ಅಸಂಖ್ಯಾತ ಭಕ್ತ ವಲಯ ನಿರ್ಧರಿಸಿದೆ.

ಹಾಗಾಗಿ ತಾವುಗಳು ಕೂಡ ಶ್ರೀಗಳ ಐತಿಹಾಸಿಕ ಸಮಾರಂಭದಲ್ಲಿ ಭಾಗವಹಿಸಿ ನಮ್ಮ ಭಾಗದ ಭಕ್ತರನ್ನು ಆಶೀರ್ವದಿಸುವಂತೆ ಕೋರಿದರು.

ಈ ಸಂದರ್ಭದಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ ಕೋಸಂಬೆ, ಪ್ರಥಮ ದರ್ಜೆ ಗುತ್ತಿಗೆದಾರ ಸಂಗಮೇಶ ಹುಣಜೆ ಮದಕಟ್ಟಿ ಸೇರಿದಂತೆ ಹಲವರು ಇದ್ದರು.

> ನಾಡಿನ ಪ್ರಗತಿಯಲ್ಲಿ ಮಠ ಮಾನ್ಯಗಳ ಕೊಡುಗೆ ದೊಡ್ಡದಿದೆ. ಅದರಲ್ಲೂ ಗಡಿಭಾಗದಲ್ಲಿ ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು ಸಲ್ಲಿಸುತ್ತಿರುವ ಸೇವೆ ಅನುಪಮವಾಗಿದೆ. ಎಲ್ಲ ಭಕ್ತರು ಸೇರಿ ಅಂತಹ ಅಮೃತ ಮಹೋತ್ಸವ ಸಮಾರಂಭ ಆಚರಿಸುತ್ತಿರುವುದು ಸಂತಸದ ಸಂಗತಿ.
>
> **ರವಿಶಂಕರ್‌ಗುರೂಜಿ, ಆರ್ಟ್ ಆಫ್ ಲಿವಿಂಗ್ ಫೌಂಡೇಶನ್ ಸಂಸ್ಥಾಪಕ**

## ಅನುದಾನ ಹಂಚಿಕೆಯಲ್ಲಿ ತಾರತಮ್ಯ: ಆರೋಪ

**ಕೆಂಭಾವಿ:** ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿ ಕೆಕೆಆರ್‌ಡಿಬಿ ಅನುದಾನದಡಿ ಕೈಗೊಂಡಿರುವ ಕಾಮಗಾರಿಗಳನ್ನು ಕೇವಲ ಕಾಂಗ್ರೆಸ್ ಪುರಸಭೆ ಸದಸ್ಯರು ಇರುವ ಕ್ಷೇತ್ರಗಳಿಗೆ ಮಾತ್ರ ನೀಡಿ ಬಿಜೆಪಿ ಸದಸ್ಯರು ಇರುವ ಕ್ಷೇತ್ರಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರು ಅನ್ಯಾಯವೆಸಗಿದ್ದಾರೆ ಎಂದು ಪುರಸಭೆ ಪ್ರತಿ ಪಕ್ಷದ ನಾಯಕ ಶರಣಪ್ಪ ಯಾಳಗಿ ಆರೋಪಿಸಿದ್ದಾರೆ.



ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಬಿಜೆಪಿ ಪುರಸಭೆ ಸದಸ್ಯರು, ಶಹಾಪುರ ಕ್ಷೇತ್ರದ ಶಾಸಕರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ನಮ್ಮ ಕ್ಷೇತ್ರಗಳಿಗೆ ನಯಾ ಪೈಸೆ ಅನುದಾನ ಒದಗಿಸಿಲ್ಲ. ಮಾತೆತ್ತಿದರೆ ಸಾಮಾಜಿಕ ನ್ಯಾಯ ಎಂದು ಮಾಡುವುದು ಹೇಳಿಕೆ ನೀಡುವ ಸಚಿವರು ಹೇಳೊದೊಂದು, ಇನ್ನೊಂದು ಆಗಿದೆ. ಸರಕಾರದಿಂದ ಪುರಸಭೆಯ ಎಲ್ಲ ವಾರ್ಡಗಳಿಗೆ 6 ಕೋಟಿ ರು. ಅನುದಾನ ಬಂದಿದೆ. 23 ವಾರ್ಡಗಳಲ್ಲಿ ಸಚಿವರು ಸದಸ್ಯರಿರುವ 19 ವಾರ್ಡ್‌ಗಳಿಗೆ 6 ಕೋಟಿ ಹಣ ಹಂಚಿಕೆ ಮಾಡಿದ್ದಾರೆ. ಬಿಜೆಪಿ ಸದಸ್ಯರಿರುವ 4 ವಾರ್ಡಗಳಿಗೆ ಯಾವುದೇ ಅನುದಾನ ಹಂಚಿಕೆ ಮಾಡಿಲ್ಲ. ಕೇಂದ್ರ ಸರಕಾರದ ವಿರುದ್ಧ ಆರೋಪ

ಮಾಡುವ ಸಚಿವರು ತಮ್ಮ ತವರು ಕ್ಷೇತ್ರದಲ್ಲಿ ಯಾವ ರೀತಿ ಆಡಳಿತ ಮಾಡುತ್ತಿದ್ದಾರೆ ಎಂದು ಇದರಿಂದ ತಿಳಿಯುತ್ತದೆ. ರಾಜಕೀಯ ದ್ವೇಷ ಸಾಧಿ ಸಲು ನಮಗೆ ಅನುದಾನ ನೀಡುತ್ತಿಲ್ಲ. ಇದರ ವಿರುದ್ಧ ನಾವು ನಮ್ಮ ವಾರ್ಡ ಜನರ ಜತೆ ಸೇರಿ ಹೋರಾಟದ ಹಾದಿ ತುಳಿಯುವುದಾಗಿ ಅವರು ಎಚ್ಚರಿಸಿದರು. ಈ ಸಂದರ್ಭದಲ್ಲಿ ಪುರಸಭೆ ಸದಸ್ಯರಾದ ರಾಮಕೃಷ್ಣ ಯಲಮಟ್ಟಿ, ಶಾರದಾ ಭೀಮನಗೌಡ ಮಲ್ಕಾಪುರ, ಕಾಳಮ್ಮ ಮೇಲಿನಮನಿ ಇದ್ದರು.

## ಮಾಧ್ಯಮ ನಿರ್ಬಂಧ ಹಿಂಪಡೆಗೆ ಮನವಿ

ವಿಧಾನಸೌಧದಲ್ಲಿ ಮಾಧ್ಯಮದ ಮೇಲೆ ವಿಧಿಸಿದ ನಿರ್ಬಂಧ ಹಿಂಪಡೆಯಬೇಕು ಎಂದು ಒತ್ತಾಯಿಸಿ ಮೀಡಿಯಾ ಅಸೋಸಿಯೇಷನ್ ಪದಾಧಿಕಾರಿಗಳು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಮನವಿ ಪತ್ರ ಸಲ್ಲಿಸಿದರು.

**ಬೀದರ್:** ವಿಧಾನಸೌಧದ ನಿಗದಿತ ಸ್ಥಳದಲ್ಲೇ ಮಾಧ್ಯಮ ಪ್ರತಿನಿಧಿಗಳು ಜನಪ್ರತಿನಿಧಿಗಳ ಹೇಳಿಕೆ ಪಡೆಯಬೇಕು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆದೇಶ ಹೊರಡಿಸಿರುವುದನ್ನು ಜಿಲ್ಲಾ ಸ್ಯಾಟ್ಲೈಟ್ ಅಸೋಸಿಯೇಷನ್ ತೀವ್ರವಾಗಿ ಖಂಡಿಸಿದೆ. ಅಸೋಸಿಯೇಷನ್ ಪದಾಧಿಕಾರಿಗಳು ನಗರದಲ್ಲಿ ಸೋಮವಾರ ನಿಯೋಗದಲ್ಲಿ ಈ ಕುರಿತು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ವಿಧಾನಸೌಧವು ಜನಪ್ರತಿನಿಧಿಗಳು ಜನರ ಪರವಾಗಿ ಚರ್ಚೆ ನಡೆಸುವ ಸ್ಥಳವಾಗಿದೆ. ಹೀಗಾಗಿ ಅಲ್ಲಿ ಮಾಧ್ಯಮಗಳಿಗೆ ನಿರ್ಬಂಧ ಹೇರುವುದು ಸರಿಯಾದ ಕ್ರಮವಲ್ಲ. ಇದು, ಅಭಿವ್ಯಕ್ತಿ ಸ್ವಾತಂತ್ರ್ಯದ ನಡೆಸಿದ ಪ್ರಹಾರ ಎಂದು ಅಸೋಸಿಯೇಷನ್ ಅಧ್ಯಕ್ಷ ಮಲ್ಲಿಕಾರ್ಜುನ ಮರಕಲೆ ಸಭಾಪತಿ ಅವರ ಗಮನ ಸೆಳೆದರು.

ಪತ್ರಿಕಾ ರಂಗ ಪ್ರಜಾಪ್ರಭುತ್ವದ ಆಧಾರ ಸ್ತಂಭಗಳಲ್ಲಿ ಒಂದಾಗಿದೆ. ಸರಕಾರದ ಆದೇಶವು ಮಾಧ್ಯಮದ ಸ್ವಾತಂತ್ರ್ಯ ಹಾಗೂ ಪಾರದರ್ಶಕತೆಗೆ ಅಡ್ಡಿ ಉಂಟು ಮಾಡಲಿದೆ ಎಂದು ತಿಳಿಸಿದರು.

ಅಸೋಸಿಯೇಷನ್ ಗೌರವಾಧ್ಯಕ್ಷ ರಾಜಕುಮಾರ ಸ್ವಾಮಿ, ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ನಾಗರಾಳ, ಉಪಾಧ್ಯಕ್ಷರಾದ ರಾಮಕೃಷ್ಣ, ಸಂಜುಕುಮಾರ ಬುಕ್ಕಾ, ಪ್ರಧಾನ ಕಾರ್ಯದರ್ಶಿ ಸುರೇಶ್ ನಾಯ್ಕ್, ಕಾರ್ಯದರ್ಶಿಗಳಾದ ಶಿವಾನಂದ ಮಡಗೋಳ್, ನಂದಕುಮಾರ ಕರಂಜಿ, ಖಜಾಂಚಿ ವಿಶ್ವ ವಡಗಾಂವ್, ಹಿರಿಯ ಸಲಹೆಗಾರರಾದ ಅನಿಲಕುಮಾರ ದೇಶಮುಖ, ಓಂಕಾರ ಮಠಪತಿ, ಮಾಧ್ಯಮ ಸಲಹೆಗಾರ ದುರ್ಗಪ್ಪ ಹೊಸಮನಿ, ಸದಸ್ಯರಾದ ಪರಶುರಾಮ, ಆಕಾಶ್, ಅಂಬ್ರೇಶ್ ಸ್ವಾಮಿ, ಶಿವಯ್ಯ ಮಠಪತಿ, ರಾಜಕುಮಾರ ಕಲ್ಲಾ, ಅತೀಫ್, ಭರತ, ಪವನ್ ಶರಣು ಸ್ವಾಮಿ ಇದ್ದರು.

---

## ತಾರತಮ್ಯ, ವಿಳಂಬ ಖಂಡಿಸಿ ಕರ್ನಾಟಕ ರಾಜ್ಯ ಎಸ್‌ಟಿ ಹೋರಾಟ | ಕೇಂದ್ರ , ರಾಜ್ಯ ಸರಕಾರಗಳಿಗೆ ಮನವಿ

# ಕುರುಬ ಸಮುದಾಯಕ್ಕೆ ಎಸ್‌ಟಿ ಸಿಂಧುತ್ವ ಪ್ರಮಾಣಪತ್ರ ನೀಡಲು ಪ್ರತಿಭಟನೆ

**ಯಾದಗಿರಿ:** ಕರ್ನಾಟಕ ರಾಜ್ಯದ ಕುರುಬ ಸಮುದಾಯಕ್ಕೆ ಪರಿಶಿಷ್ಟ ಪಂಗಡ ಎಸ್ ಟಿ ಮಾನ್ಯತೆ ಹಾಗೂ ಸಿಂಧುತ್ವ ಪ್ರಮಾಣಪತ್ರ ನೀಡುವ ವಿಷಯದಲ್ಲಿ ನಡೆಯುತ್ತಿರುವ ತಾರತಮ್ಯ ಮತ್ತು ವಿಳಂಬವನ್ನು ಖಂಡಿಸಿ, ಕರ್ನಾಟಕ ರಾಜ್ಯ ಎಸ್.ಟಿ ಹೋರಾಟ ಸಮಿತಿ ಹಾಗೂ ಕುರುಬ ಹೋರಾಟ ಸಮಿತಿಯವರು ಕುರಿ ಹಿಂಡುಗಳೊಂದಿಗೆ ಪ್ರತಿಭಟನೆ ಮಾಡಿ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಹಾಗೂ ಕೇಂದ್ರ ಸರಕಾರಗಳಿಗೆ ಮನವಿ ಸಲ್ಲಿಸಿದರು.

ಕುರುಬ ಸಮುದಾಯಕ್ಕೆ ಕೊಡಗು, ಬೀದರ್, ಕಲಬುರಗಿ,ಯಾದಗಿರಿ ಹಾಗೂ ಕೊಳ್ಳೇಗಾಲ ಪ್ರದೇಶಗಳಲ್ಲಿ ಐತಿಹಾಸಿಕವಾಗಿ ಎಸ್.ಟಿ ಸಿಂಧುತ್ವ ನೀಡಲಾಗುತ್ತಿತ್ತು. 2016ರಲ್ಲಿ ರಾಜ್ಯ ಸರಕಾರ ಆದೇಶ ಹೊರಡಿಸಿದ್ದರೂ, ಪ್ರಾಯೋಗಿಕವಾಗಿ ಅರ್ಹರಿಗೆ ಸಿಂಧುತ್ವ ಪ್ರಮಾಣಪತ್ರ ನೀಡಲಾಗುತ್ತಿಲ್ಲ ಎಂದು ಸಮಿತಿ ಆರೋಪಿಸಿದೆ. ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಸಮೀಕ್ಷೆಯ ಪ್ರಕಾರ 25 ಜಿಲ್ಲೆಗಳ 50 ತಾಲೂಕುಗಳಲ್ಲಿ 60,595 ಜನರ ಅಧ್ಯಯನ ನಡೆಸಲಾಗಿದೆ.

73% ಸಾಕ್ಷರತೆ ಮಾತ್ರ ಇರುವುದರಿಂದ ಶಿಕ್ಷಣ ಹಿಂದುಳಿತತೆ ಸ್ಪಷ್ಟವಾಗಿದೆ. 78% ಕುಟುಂಬಗಳು ಅಲ್ಪ ಪ್ರಮಾಣದ ಕೃಷಿ ಭೂಮಿಯನ್ನು ಹೊಂದಿದ್ದು, ಆರ್ಥಿಕವಾಗಿ ಹಿಂದುಳಿದ ಸ್ಥಿತಿಯಲ್ಲಿವೆ. ಸಾಂಪ್ರದಾಯಿಕವಾಗಿ ಕುರಿ-ಮೇಕೆ ಸಾಕಣೆ, ಪ್ರಕೃತಿ ಆರಾಧನೆ ಹಾಗೂ ಪಿತೃಪ್ರಧಾನ ಪದ್ಧತಿಗಳನ್ನು ಅನುಸರಿಸುತ್ತಿರುವುದು ಬುಡಕಟ್ಟು ಲಕ್ಷಣಗಳನ್ನು ತೋರಿಸುತ್ತದೆ.

2017, 2018 ಮತ್ತು 2023 ರಲ್ಲಿ ಒಆರ್‌ಜಿಐ ಕೆಲವು ಪ್ರಸ್ತಾವನೆಗಳನ್ನು ತಿರಸ್ಕರಿಸಿದ್ದರೂ, 2018ರಲ್ಲಿ ರಾಷ್ಟ್ರೀಯ ಪರಿಶಿಷ್ಟ ಪಂಗಡ ಆಯೋಗವು ಸಾಕ್ಷ್ಯಾಧಾರಗಳ ಆಧಾರದ ಮೇಲೆ ಕುರುಬ ಸಮುದಾಯವು ಪರಿಶಿಷ್ಟ ಪಂಗಡಕ್ಕೆ ಸೇರಿದ ಲಕ್ಷಣಗಳನ್ನು ಹೊಂದಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿರುವುದಾಗಿ ಸಮಿತಿ ತಿಳಿಸಿದೆ ಎಂದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಎಸ್. ಹೋರಾಟ ಸಮಿತಿಯ ರಾಜ್ಯಾಧ್ಯಕ್ಷ ಸಿದ್ದಣ್ಣ ತೇಜಿ, ಕುರುಬ ಹೋರಾಟ ಸಮಿತಿಯ ರಾಜ್ಯ ಸಂಘಟನಾ ಕಾರ್ಯದರ್ಶಿ ಕರಿಯಪ್ಪ ಭ ಕರಿಗಾರ, ಸಂಘಟನಾ ಕಾರ್ಯದರ್ಶಿ ವಿಠಲ ಬಿರಾದಾರ, ಯಾದಗಿರಿ ಕುರುಬ ಹೋರಾಟ ಸಮಿತಿಯ ಜಿಲ್ಲಾಧ್ಯಕ್ಷ ಶಿವಕುಮಾರ ಮುನಗಲ್, ತಾಲೂಕು ಅಧ್ಯಕ್ಷ ಸಿದ್ದು ಪೂಜಾರಿ (ಚಂಡ್ರಿಕಿ), ಬಸವನಬಾಗೇವಾಡಿ ತಾಲೂಕ ಅಧ್ಯಕ್ಷ ಸುರೇಶ ಜಾಲವಾಡಿ ಅರಿಕೇರಿ, ಯಾದಗಿರಿ ಕುರುಬ ಹೋರಾಟ ಸಮಿತಿಯ ಯುವ ಘಟಕ ಜಿಲ್ಲಾಧ್ಯಕ್ಷ ಎಸ್ ನಿಜಲಿಂಗಪ್ಪ ಪೂಜಾರಿ, ಜಿಲ್ಲಾ ಉಪಾಧ್ಯಕ್ಷ ರಾಘವಾಂಕ ಪಾಟೀಲ, ತಾಲೂಕು ಅಧ್ಯಕ್ಷ ತಾಯಪ್ಪ ಕರಣಗಿ, ಯಾದಗಿರಿ ಹೋರಾಟ ಸಮಿತಿಯ ಶಹಾಪುರ ತಾಲೂಕು ಅಧ್ಯಕ್ಷ ರೇವಣ್ಣ ಸಿದ್ದಪ್ಪ ಸೇರಿದಂತೆ ಇನ್ನಿತರ ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಕರ್ನಾಟಕ ರಾಜ್ಯ ಎಸ್.ಟಿ ಹೋರಾಟ ಸಮಿತಿ ಹಾಗೂ ಕುರುಬ ಹೋರಾಟ ಸಮಿತಿಯವರು ಕುರಿ ಹಿಂಡುಗಳೊಂದಿಗೆ ಪ್ರತಿಭಟನೆ ಮಾಡಿ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯ ಹಾಗೂ ಕೇಂದ್ರ ಸರಕಾರಗಳಿಗೆ ಮನವಿ ಸಲ್ಲಿಸಿದರು.

**ಹೋರಾಟ ಸಮಿತಿಯ ಬೇಡಿಕೆಗಳು**

2016ರ ರಾಜ್ಯ ಸರಕಾರದ ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಅರ್ಹ ಕುರುಬ ಸಮುದಾಯದವರಿಗೆ ತಕ್ಷಣ ಎಸ್.ಟಿ ಸಿಂಧುತ್ವ ಪ್ರಮಾಣಪತ್ರ ನೀಡಬೇಕು. ಒಆರ್‌ಜಿಐ ಮತ್ತು ಎಸ್.ಟಿ ಆಯೋಗದ ನಡುವೆ ಸಮನ್ವಯ ಸಭೆ ನಡೆಸಿ ತಾರತಮ್ಯ ನಿವಾರಣೆ ಮಾಡಬೇಕು. ಕೇಂದ್ರ ಸರಕಾರ ತುರ್ತು ಮಧ್ಯಸ್ಥಿಕೆ ವಹಿಸಬೇಕು.

**ನ್ಯಾಯ ಒದಗಿಸಲು ಒತ್ತಾಯ**

ಸಮಿತಿ ಪ್ರತಿನಿಧಿಗಳು ಮಾತನಾಡಿ, ''ನಾವು ಶಾಂತಿಯುತ ಹಾಗೂ ಕಾನೂನುಬದ್ಧ ಹೋರಾಟದ ಮೂಲಕ ನಮ್ಮ ಸಂವಿಧಾನಾತ್ಮಕ ಹಕ್ಕುಗಳನ್ನು ಪಡೆಯಲು ಒತ್ತಾಯಿಸುತ್ತಿದ್ದೇವೆ. ಸರಕಾರ ತಕ್ಷಣ ಕ್ರಮ ಕೈಗೊಂಡು ನ್ಯಾಯ ಒದಗಿಸಬೇಕು ಎಂದರು.

{ಈಶ್ವರ ಖಂಡ್ರೆ } ಜಿಲ್ಲಾ ಉಸ್ತುವಾರಿ ಸಚಿವ

ರಾಜ್ಯ ಸರಕಾರವು ಮಹಿಳಾ ನೌಕರರ ಹಕ್ಕುಗಳ ರಕ್ಷಣೆ ಹಾಗೂ ಕೆಲಸದ ಸ್ಥಳದಲ್ಲಿ ಗೌರವ ಮತ್ತು ಭದ್ರತೆ. ಸಮಾನ ಅವಕಾಶಗಳು ಒದಗಿಸಲು ಸದಾ ಬದ್ಧವಾಗಿದೆ. ಆಡಳಿತ ಹಾಗೂ ಸೇವಾ ಕ್ಷೇತ್ರಗಳಲ್ಲಿ ಮಹಿಳೆಯರ ಕೊಡುಗೆ ಅಪಾರವಾಗಿದೆ. ಅವರ ಶ್ರಮಕ್ಕೆ ತಕ್ಕ ಗೌರವ ಹಾಗೂ ಸೌಲಭ್ಯಗಳು ದೊರಕಬೇಕು ಎಂಬುದೇ ಸರಕಾರದ ದೃಢ ನಿಲುವು.

ವಿಶ್ವವಾಣಿ
ವಿಶ್ವಾಸವೇ ವಿಶ್ವ

## ಇಂದಿನಿಂದ ರಣಜಿ ಫೈನಲ್

ಹುಬ್ಬಳ್ಳಿಯ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಇಂದು ಆರಂಭವಾಗಲಿರುವ ರಣಜಿ ಟ್ರೋಫಿ ಫೈನಲ್ ಪಂದ್ಯದಲ್ಲಿ ಕರ್ನಾಟಕವು ಜಮ್ಮು-ಕಾಶ್ಮೀರವನ್ನು ಎದುರಿಸಲಿದೆ. ಹನ್ನೊಂದು ವರ್ಷಗಳ ಬಳಿಕ ರಾಜ್ಯ ತಂಡ ಫೈನಲ್‌ಗೇರಿದೆ. ಜಮ್ಮು-ಕಾಶ್ಮೀರ ತಂಡಕ್ಕೆ ಇದು ಚೊಚ್ಚಲ ಫೈನಲ್ ಆಗಿದೆ.

### ಸೊಂಪಾದ ಪುಟಗಳು

ವಿವಿ ಚುನಾವಣೆ ವಿಷಯದಲ್ಲೇಕೆ ಗೊಂದಲ?

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ 6

ಹೊಸ ಅವಕಾಶಗಳ ಭಂಡಾರ ತೆರೆಯಲಿದೆ ಎಐ!

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ 7

### ದಾರಿದೀಪೋಕ್ತಿ

ಸೋಲು ಎನ್ನುವುದು ಬಿದ್ದಾಗ ಆಗುವ ಗಾಯವಲ್ಲ, ಬಿದ್ದಲ್ಲೇ ಮಲಗಿಕೊಂಡಾಗ ಆಗುವ ಅವಮಾನ. ಸೋಲುಂಟಾದಾಗ ಮೈಕೊಡವಿ ಎದ್ದು ನಿಲ್ಲುವುದು, ಸೋಲಿಗೆ ಮಾಡುವ ಅವಮಾನ ಮತ್ತು ತೆಗೆದುಕೊಳ್ಳುವ ಪ್ರತೀಕಾರ.

### ವಕ್ರತುಂಡೋಕ್ತಿ

ಮೌನ ಬಂಗಾರ ಅಂದವರು ಖಂಡಿತ ಮದುವೆಯಾದ ಗಂಡಸರೇ ಇರಬೇಕು.

## ಮೆಕ್ಸಿಕೋ ಡ್ರಗ್ಸ್ ಲಾರ್ಡ್ ಸೇನೆ ಗುಂಡಿಗೆ ಬಲಿ

**ಮೆಕ್ಸಿಕೋ:** ಅಮೆರಿಕ ಮತ್ತು ಮೆಕ್ಸಿಕೋದಲ್ಲಿ ಮಾದಕ ದ್ರವ್ಯ ಮಾಫಿಯಾದ ನಾಯಕನಾಗಿದ್ದ, ಎಲ್ ಮೆಂಚೊ ಹೆಸರಿನಿಂದ ಕುಖ್ಯಾತನಾಗಿದ್ದ ನೆಮೆಸಿಯೊ ಒಸೆಗುರಾ ಸೆರ್ವಾಂಟೆಸ್‌ನನ್ನು ಮೆಕ್ಸಿಕೋ ಸೇನೆ ಭಾನುವಾರ ಗುಂಡಿಕ್ಕಿ ಸಾಯಿಸಿದೆ. 59 ವರ್ಷದ ಒಸೆಗುರಾ, ಜಲಿಸ್ಕೊ ರಾಜ್ಯದ ಟಪಲ್ಪಾ ಪಟ್ಟಣದಲ್ಲಿ ಸೈನಿಕರೊಂದಿಗಿನ ಘರ್ಷಣೆಯಲ್ಲಿ ಸಾವನ್ನಪ್ಪಿದ್ದಾನೆ. ಈತನ ತಲೆಗೆ 1.5 ಕೋಟಿ ಯುಎಸ್ ಡಾಲರ್ ಬಹುಮಾನವಿತ್ತು. ಈ ದಾಳಿಗೆ ಪ್ರತೀಕಾರವಾಗಿ ಬಂದೂಕುಧಾರಿಗಳು ಪಶ್ಚಿಮ ಜಲಿಸ್ಕೊ ರಾಜ್ಯದಲ್ಲಿ ಹಿಂಸಾಚಾರ ಆರಂಭಿಸಿದ್ದಾರೆ. ಭಾರತದ ರಾಯಭಾರಿ ಕಚೇರಿ ಮೆಕ್ಸಿಕೋದಲ್ಲಿ ವಾಸಿಸುವ ಭಾರತೀಯ ಪ್ರಜೆಗಳಿಗೆ ಎಚ್ಚರಿಯಿಂದಿರಲು ಸೂಚನೆ ನೀಡಿದೆ.

## ಇಂಡಿ ಒಕ್ಕೂಟದಲ್ಲಿ ಮತ್ತೆ ಬಿರುಕು

**ಚೆನ್ನೈ:** ಪ್ರತಿಪಕ್ಷಗಳ ಒಕ್ಕೂಟ ಇಂಡಿ ಮೈತ್ರಿಯಲ್ಲಿ ಮತ್ತೆ ಬಿರುಕು ಕಾಣಿಸಿಕೊಂಡಿದೆ. ಕಾಂಗ್ರೆಸ್‌ನ ಮಿತ್ರ ಪಕ್ಷ ಡಿಎಂಕೆ, ಬಿಜೆಪಿ ವಿರುದ್ಧದ ಹೋರಾಟವನ್ನು ಎಂ.ಕೆ. ಸ್ಟಾಲಿನ್ ಮುನ್ನಡೆಸಬೇಕೆಂದು ಹೇಳಿದೆ.

ಉಪಮುಖ್ಯ ಮಂತ್ರಿ ಉದಯನಿಧಿ ಸ್ಟಾಲಿನ್ ಈ ಬೇಡಿಕೆ ಮುಂದಿಟ್ಟಿದ್ದಾರೆ. ಇದಕ್ಕೂ ಮುನ್ನ ತೃಣಮೂಲ ಕಾಂಗ್ರೆಸ್ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ಇದೇ ರೀತಿಯ ಬೇಡಿಕೆ ಮುಂದಿಟ್ಟಿದ್ದರು. ಮಮತಾ ಬ್ಯಾನರ್ಜಿ ಮೈತ್ರಿಕೂಟದ ನಾಯಕಿ ಎಂದು ಕಾಂಗ್ರೆಸ್ ಮುಖಂಡ ಅಯ್ಯರ್ ಹೇಳಿದ್ದರು.

### ಫನ್‌ತರಂಗ
- ರಘುಪತಿ ಶೃಂಗೇರಿ -

ರಾಜ್ಯದಲ್ಲಿ ಏರುತ್ತಿದೆ ಬಿಸಿಲಿನ ತಾಪ

ಸುದ್ದಿ




## ಸಂಪುಟದಲ್ಲಿ ಅವಕಾಶಕ್ಕೆ ಹೊಸಬರ ಅಹವಾಲು

### ನಾಯಕತ್ವ ಗೊಂದಲದ ನಡುವೆ ಹೊಸ ಬೇಡಿಕೆ

### ಸಿಎಂ, ಡಿಸಿಎಂಗೆ 31 ಶಾಸಕರ ಸಹಿಯುಳ್ಳ ಪತ್ರ

# ನಮಗೂ ಅವಕಾಶ ಕೊಡಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆ, ಸಂಪುಟ ಪುನಾರಚನೆ ಸೇರಿದಂತೆ ಹಲವು ವಿಷಯದಲ್ಲಿ 'ಗದ್ದಲ' ತಾರಕ್ಕೇರಿದ ಹೊತ್ತಿನಲ್ಲಿಯೇ, ನಮಗೂ ಸಚಿವ ಸ್ಥಾನ ನೀಡಿ ಎನ್ನುವ ಬೇಡಿಕೆಯನ್ನು 'ಯುವ ಪಡೆ' ಮುಂದಿಟ್ಟಿರುವುದು ಪಕ್ಷವನ್ನು ಮತ್ತಷ್ಟು ಇಕ್ಕಟ್ಟಿಗೆ ಸಿಲುಕಿಸಿದೆ.

ದಿನದಿಂದ ದಿನಕ್ಕೆ ಸಂಪುಟ ಪುನಾರಚನೆಗೆ ಪಕ್ಷದಲ್ಲಿ ಒತ್ತಡ ಹೆಚ್ಚಾಗುತ್ತಿರುವ ನಡುವೆ ಮೊದಲೇ ಬಾರಿಗೆ ಶಾಸಕರಾಗಿ ಆಯ್ಕೆಯಾಗಿರುವ 31ಕ್ಕೂ ಹೆಚ್ಚು ಶಾಸಕರು ಸಂಪುಟ ಪುನಾರಚನೆ ಸಮಯದಲ್ಲಿ ನಮಗೆ ಅವಕಾಶ ನೀಡಿ ಎನ್ನುವ ಬೇಡಿಕೆಯನ್ನು ಮುಂದಿಟ್ಟಿದ್ದಾರೆ ಎನ್ನಲಾಗಿದೆ. ಇದು ಕೇವಲ ಬಾಯಿ ಮಾತಿಗೆ ಸೀಮಿತವಾಗದೇ, ಪಕ್ಷದ ವರಿಷ್ಠ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಕೆ.ಸಿ. ವೇಣುಗೋಪಾಲ್ ಸೇರಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಸಹಿ ಹಾಕಿರುವ ಪತ್ರ ಇದೀಗ ಭಾರಿ ಕುತೂಹಲ ಸೃಷ್ಟಿಸಿದೆ. ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಈ ಪತ್ರ ಯಾವಾಗ ಬರೆಯಲಾಗಿದೆ ಎನ್ನುವ ಸ್ಪಷ್ಟನೆ ಇಲ್ಲವಾದರೂ, ಶಾಸಕರ ಸಹಿಯಿರುವ ಹಾಗೂ ಪತ್ರದಲ್ಲಿ ಹೊಸಬರಿಗೆ ಸಂಪುಟದಲ್ಲಿ ಸ್ಥಾನ ನೀಡಬೇಕು ಎನ್ನುವ ಒತ್ತಡ ಹೇರಿದ್ದಾರೆ ಎನ್ನುವ ವಿಷಯ ಇದೀಗ ಕಾಂಗ್ರೆಸ್‌ನಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿದೆ.

**ಪತ್ರದಲ್ಲಿ ಏನಿದೆ?:** ನಾಯಕರಿಗೆ ಬರೆದಿರುವ ಪತ್ರದಲ್ಲಿ ಪ್ರಮುಖವಾಗಿ, ಯುವಕರಿಗೆ ಅವಕಾಶ ನೀಡಬೇಕು ಎನ್ನುವ ಅಂಶವನ್ನು ಪ್ರಸ್ತಾಪಿಸಲಾಗಿದೆ. ಇದರೊಂದಿಗೆ ಅನೇಕ ರಾಜ್ಯಗಳಲ್ಲಿ ಮೊದಲ ಬಾರಿಗೆ ಶಾಸಕರಾದ ವರೂ ಮುಖ್ಯಮಂತ್ರಿಯಾಗಿರುವ ಉದಾಹರಣೆ ಯಿದೆ. ಹೀಗಿರುವಾಗ, ಮೊದಲ ಬಾರಿಗೆ ಗೆದ್ದ ಶಾಸಕರಿಗೆ ಸಚಿವ ಸ್ಥಾನ ನೀಡಬೇಕು ಎಂದು ಮನವಿ ಮಾಡಲಾಗಿದೆ.

'ಕಾಂಗ್ರೆಸ್‌ನಲ್ಲಿ 38 ಶಾಸಕರು ಹೊಸದಾಗಿ ಗೆದ್ದಿದ್ದೇವೆ. ಬೇರೆ ರಾಜ್ಯಗಳಲ್ಲಿ ಮೊದಲ ಬಾರಿಗೆ ಗೆದ್ದವರು ಸಿಎಂ ಆಗಿದ್ದಾರೆ. ಮೊದಲ ಬಾರಿ ಗೆದ್ದ ಶಾಸಕರಿಗೂ ಸಚಿವ ಸ್ಥಾನ ನೀಡಿ ಅವಕಾಶ ಕೊಡಬೇಕು. ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾದವರಿಗೆ ಸಂಪುಟದಲ್ಲಿ ಅವಕಾಶ ನೀಡುವುದು ಅಗತ್ಯವಾಗಿದೆ. ಇದರಿಂದ ಯುವ ಮುಖಗಳಿಗೆ ಅವಕಾಶ ಸಿಕ್ಕಂತಾಗುತ್ತದೆ. ಹೀಗಾಗಿ ಈ ಬಾರಿ ಸಂಪುಟ ಪುನಾರಚನೆ ಆದಲ್ಲಿ ಕನಿಷ್ಠ ಪಕ್ಷ ಐದು ಮಂದಿಗೆ ಅವಕಾಶ ನೀಡಬೇಕು. ನಾವು ಕಾಂಗ್ರೆಸ್ ಪಕ್ಷದ ತತ್ವಸಿದ್ಧಾಂತಕ್ಕೆ ಬದ್ಧರಾಗಿದ್ದೇವೆ. 2028ರಲ್ಲಿ ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಆಡಳಿತಕ್ಕೆ ಬರಬೇಕಾಗಿದೆ. ಹಾಗಾಗಿ ಸಂಪುಟದಲ್ಲಿ ಯುವ ಮುಖಗಳಿಗೆ ಅವಕಾಶ ನೀಡಬೇಕು ಎಂದು ಉಲ್ಲೇಖ ಮಾಡಲಾಗಿದೆ.

### ಪತ್ರದಲ್ಲಿರುವ ಪ್ರಮುಖಾಂಶ

- ಬೇರೆ ರಾಜ್ಯಗಳಲ್ಲಿ ಮೊದಲ ಬಾರಿಯ ಶಾಸಕರೇ ಸಿಎಂ ಆದ ಉದಾಹರಣೆಯಿದೆ
- ಕಾಂಗ್ರೆಸ್‌ನಿಂದ 38 ಯುವ ಶಾಸಕರು ಮೊದಲ ಬಾರಿಗೆ ಆಯ್ಕೆಯಾಗಿದ್ದಾರೆ.
- ಸಂಪುಟ ಪುನಾರಚನೆ ವೇಳೆ ಕನಿಷ್ಠ ಐವರು ಹೊಸಬರಿಗೆ ಅವಕಾಶ ನೀಡಲು ಮನವಿ
- ಮೊದಲ ಬಾರಿಯ ಶಾಸಕರಿಗೆ ಅವಕಾಶ ನೀಡಿದರೆ, ಯುವಕರಿಗೆ ಉತ್ಸಾಹ ಸಿಗಲಿದೆ

### ಸಹಿ ಹಾಕಿರುವ ಶಾಸಕರು ಯಾರು?

ರಾಮನಗರ ಶಾಸಕ ಇಕ್ಬಾಲ್ ಹುಸೇನ್, ಪಿ. ರವಿಕುಮಾರ್ ಗಣಿಗ, ವಿಕಾಸ್ ವೈದ್ಯ, ನಾರಾ ಭರತ್ ರೆಡ್ಡಿ, ಮಂಥರ್ ಗೌಡ, ಕಡಲೂರು ಉದಯ್ ಕುಮಾರ್, ಪ್ರದೀಪ್ ಈಶ್ವರ್, ಎನ್. ಶ್ರೀನಿವಾಸ್, ಬಿ.ಬಿ. ಚಿಮ್ಮನಕಟ್ಟಿ, ದೇವೇಂದ್ರಪ್ಪ, ಶಿವಗಂಗಾ ಬಸವರಾಜ್, ಎಚ್.ವಿ. ವೆಂಕಟೇಶ್, ಎ.ಎಸ್. ಪೊನ್ನಣ್ಣ, ಅಶೋಕ್ ಕುಮಾರ್ ರೈ, ಡಿ.ರವಿಶಂಕರ್, ನಯನಾ ಮೋಟಮ್ಮ, ಮಹೇಂದ್ರ ತಮ್ಮಣ್ಣನವರ್, ಶ್ರೀನಿವಾಸ್, ಬಾಬಾ ಸಾಹೇಬ್ ಪಾಟೀಲ್, ದರ್ಶನ್ ಧ್ರುವನಾರಾಯಣ, ರಾಜಾ ವೇಣುಗೋಪಾಲ್ ನಾಯಕ್, ಪ್ರಕಾಶ್ ಕೋಳಿವಾಡ, ಆನಂದ್ ಕೆಎಸ್ ಹಾಗೂ ಟಿ. ಚೆನ್ನಾರೆಡ್ಡಿ ಪಾಟೀಲ್.

## ಕಾಡಾನೆ ದಾಳಿಗೆ ಮಹಿಳೆ ಬಲಿ: ಕೊಪ್ಪ, ಬಾಳೆಹೊನ್ನೂರು, ಶೃಂಗೇರಿ, ಜಯಪುರದಲ್ಲಿ ಅಂಗಡಿ ಮುಂಗಟ್ಟು ಬಂದ್

# ಚಿಕ್ಕಮಗಳೂರು ಶಾಂತ

## 3 ತಾಲೂಕಿನಲ್ಲಿ ಬಂದ್

**ಚಿಕ್ಕಮಗಳೂರು:** ಕಾಡಾನೆ ದಾಳಿಗೆ ಮಹಿಳೆ ಬಲಿಯಾದ ಪ್ರಕರಣವನ್ನು ಖಂಡಿಸಿ ಭಾನುವಾರ ನಡೆದ ಪ್ರತಿಭಟನೆ ವೇಳೆ ಪೊಲೀಸರ ಲಾಠಿಚಾರ್ಜ್ ಖಂಡಿಸಿ ಸೋಮವಾರ ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಬಂದ್ ಆಚರಿಸಲಾಯಿತು. ಕಾಫಿ ನಾಡಿನ ಅರ್ಧ ಭಾಗದಲ್ಲಿ ಅಂಗಡಿ-ಮುಂಗಟ್ಟುಗಳು ಮುಚ್ಚಿದ್ದು, ರಸ್ತೆಗಳೆಲ್ಲಾ ಬಿಕೋ ಎನ್ನುತ್ತಿದ್ದವು.

ಎನ್. ಆರ್. ಪುರ.ತಾಲೂಕಿನ ಹುಣಿಸೆ ಹಳ್ಳಿಯಲ್ಲಿ ಐದು ದಿನಗಳ ಅಂತರದಲ್ಲಿ ಇಬ್ಬರು ವಲಸೆ ಕಾರ್ಮಿಕರು ಆನೆ ದಾಳಿಗೆ ಬಲಿಯಾದ ಘಟನೆ ಖಂಡಿಸಿ ಬಾಳೆಹೊನ್ನೂರಿನ ಕಡಬಗೆರೆಯಲ್ಲಿ ಉದ್ರಿಕ್ತ ಜನತೆ ಬೆಳಿಗ್ಗೆಯಿಂದ ಸಂಜೆ ತನಕ ರಸ್ತೆ ನಡೆಸಿದ್ದರು. ಸಂಜೆ ಪರಿಸ್ಥಿತಿ ವಿಕೋಪಕ್ಕೆ ಹೋದಾಗ ಪೊಲೀಸರು ಲಾಠಿ ಪ್ರಹಾರ ಮಾಡಿ ಜನರನ್ನು ಚದುರಿಸಿದ್ದರು. ಪೊಲೀಸ್ ಕ್ರಮವನ್ನು ಖಂಡಿಸಿ ಬಾಳೆಹೊನ್ನೂರು, ಜಯಪುರ, ಕಡಬಗೆರೆ, ಕೊಪ್ಪದಲ್ಲಿ ಸೋಮವಾರ ಅಂಗಡಿ ಮುಂಗಟ್ಟುಗಳನ್ನು ಮುಚ್ಚಿ ಸ್ವಯಂಪ್ರೇರಿತ ಬಂದ್ ಆಚರಿಸಲಾಯಿತು. ಶೃಂಗೇರಿ ಮತ್ತು ಎನ್.ಆರ್.ಪುರ ಪಟ್ಟಣದಲ್ಲೂ ಬೆಳಗ್ಗೆ ಬಂದ್ ವಾತಾವರಣ ಇತ್ತು. ಮಧ್ಯಾಹ್ನದ ನಂತರ ಕೆಲ ಅಂಗಡಿಗಳು ತೆರೆದುಕೊಂಡವು.

ಬಾಳೆಹೊನ್ನೂರಿನಲ್ಲಿ ನೂರಾರು ರೈತರು ಮೌನ ಮೆರವಣಿಗೆ ನಡೆಸಿದರು. ನಂತರ ಸಭೆ ನಡೆಸಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿತೇಂದ್ರಕುಮಾರ್ ದಯಾಮ ಅವರಿಗೆ ಮನವಿ ಸಲ್ಲಿಸಿದರು. ಈ ವೇಳೆ ವೃತ್ತದಲ್ಲಿ ನಿಂತಿದ್ದ ಪೊಲೀಸ್ ಬಸ್ಸಿಗೆ ಹೂವು ಚೆಲ್ಲಿ ವಿಶಿಷ್ಟವಾಗಿ ಪ್ರತಿಭಟನೆ ವ್ಯಕ್ತಪಡಿಸಿದರು. ಮಲೆನಾಡು ಹಿತರಕ್ಷಣಾ ವೇದಿಕೆ ಬಂದ್‌ಗೆ ಕರೆ ನೀಡಿತ್ತು. ಬಂದ್‌ಗೆ ಬಿಜೆಪಿ ಕೂಡ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿತ್ತು. 300ಕ್ಕೂ ಅಧಿಕ ಹೋರಾಟಗಾರರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಕಾಡಾನೆ ದಾಳಿಯಿಂದ ಮೃತಪಟ್ಟ ಕುಟುಂಬಗಳಿಗೆ ತಲಾ 50 ಲಕ್ಷ ಪರಿಹಾರ ನೀಡಬೇಕು. ಎಲ್ಲಾ ಆನೆಗಳನ್ನು ಹಿಡಿದು ಸ್ಥಳಾಂತರ ಮಾಡಬೇಕು. ಭಾನುವಾರ ನಡೆದ ಪ್ರತಿಭಟನೆ ವೇಳೆ ಅಮಾಯಕರ ಮೇಲೆ ಪೊಲೀಸರು ಲಾಠಿ ಬೀಸಿದ್ದಾರೆ. ಅಲ್ಲದೇ ಹಲವರ ವಿರುದ್ಧ ಸುಳ್ಳು ಮೊಕದ್ದಮೆ ದಾಖಲಿಸಿದ್ದಾರೆ. ಎಫ್‌ಐಆರ್ ರದ್ದುಗೊಳಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಬಾಳೆಹೊನ್ನೂರಿನಲ್ಲಿ ಪೊಲೀಸ್ ಬಸ್ಸಿಗೆ ಹೂ ಎರಚಿ ವಿಭಿನ್ನ ಪ್ರತಿಭಟನೆ

### ಅನಿರ್ದಿಷ್ಟಾವಧಿ ಧರಣಿ ಎಚ್ಚರಿಕೆ

ಸಂಸದ ಕೋಟ ಶ್ರೀನಿವಾಸ ಪೂಜಾರಿ ಮಾತನಾಡಿ, ಪ್ರತಿಭಟನಾಕಾರರ ಮೇಲೆ ಹಾಕಿರುವ ಎಫ್‌ಐಆರ್ ಸಂಬಂಧ ನ್ಯಾಯಾಲಯಕ್ಕೆ ಬಿ ರಿಪೋರ್ಟ್ ಸಲ್ಲಿಸಬೇಕು. 9 ಜನರ ಹೆಸರು ಮತ್ತು 20 ಇತರರು ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ. ಸಿಕ್ಕ ಸಿಕ್ಕವರನ್ನು ಕರೆತಂದು ಹಿಂಸೆ ನೀಡಿದರೆ ಠಾಣೆ ಎದುರು ಅನಿರ್ದಿಷ್ಟಾವಧಿ ಧರಣಿ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಬಿಜೆಪಿ ಮುಖಂಡ ಡಿ.ಎನ್. ಜೀವರಾಜ್, ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಸುಧಾಕರ ಶೆಟ್ಟಿ, ಕ್ಷೇತ್ರ ರೈತ ಹಿತರಕ್ಷಣಾ ಸಮಿತಿ ಅಧ್ಯಕ್ಷ ಗದ್ದೆಮನೆ ವಿಶ್ವನಾಥ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಶಾಸಕ ಲಮಾಣಿಗೆ ಬಿಜೆಪಿ ನೋಟಿಸ್?

**ಬೆಂಗಳೂರು:** ಗುತ್ತಿಗೆದಾರರಿಂದ ಲಂಚ ಪಡೆದ ಪ್ರಕರಣದಲ್ಲಿ ಲೋಕಾಯುಕ್ತರಿಂದ ಬಂಧನಕ್ಕೊಳಪಟ್ಟು ಜೈಲು ಪಾಲಾಗಿರುವ ಶಿರಹಟ್ಟಿ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ಚಂದ್ರು ಲಮಾಣಿಗೆ ಪಕ್ಷವು ವಿವರಣೆ ಕೇಳಿ ನೋಟಿಸ್ ನೀಡಲು ಮುಂದಾಗಿದೆ.

ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ ಮತ್ತು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರಕರಣದ ಕುರಿತು ಚರ್ಚೆ ನಡೆಸಿದ್ದಾರೆ. ಪ್ರಕರಣದಿಂದ ಬಿಜೆಪಿಗೆ ಭಾರೀ ಮುಜುಗರವಾಗಿದ್ದು, ಚಂದ್ರು ಲಮಾಣಿಯಿಂದ ವಿವರಣೆ ಪಡೆಯುವ ತೀರ್ಮಾನಕ್ಕೆ ಬರಲಾಗಿದೆ. ಬಿಜೆಪಿ ಶಾಸಕಾಂಗ ಪಕ್ಷದ ನಾಯಕರೂ ಆಗಿರುವ ಆರ್. ಅಶೋಕ, ಲಮಾಣಿಗೆ ಒಂದೆರಡು ದಿನದಲ್ಲಿ ಸ್ಪಷ್ಟನೆ ಕೇಳಿ ನೋಟಿಸ್ ನೀಡಲಿದ್ದಾರೆ ಎಂದು ತಿಳಿದುಬಂದಿದೆ.

## ದರ್ಶನ್ ಗನ್‌ಲೈಸೆನ್ಸ್ ಅಮಾನತಿಗೆ ತಡೆ

**ಬೆಂಗಳೂರು:** ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್‌ಗೆ ಮಂಜೂರಾಗಿದ್ದ ಶಸ್ತ್ರಾಸ್ತ್ರ ಪರವಾನಗಿಯನ್ನು ಅಮಾನತಿನಲ್ಲಿಟ್ಟ ಪೊಲೀಸ್ ಇಲಾಖೆ ಕ್ರಮಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿ ಆದೇಶಿಸಿದೆ.

ಶಸ್ತ್ರಾಸ್ತ್ರ ಪರವಾನಗಿ ಅಮಾನತು ಗೊಳಿಸಿದ್ದ ಕ್ರಮ ಪ್ರಶ್ನಿಸಿ ದರ್ಶನ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ನ್ಯಾಯಪೀಠ ಈ ಸಂಬಂಧ ಆಕ್ಷೇಪಣೆ ಸಲ್ಲಿಸುವಂತೆ ರಾಜ್ಯ ಸರಕಾರ ಮತ್ತು ಆಡಳಿತ ವಿಭಾಗದ ಡಿಸಿಪಿಗೆ ನೋಟಿಸ್ ಜಾರಿ ಮಾಡಿದೆ. ರೇಣುಕಾಸ್ವಾಮಿ ಕೊಲೆ ಪ್ರಕರಣ ಸಂಬಂಧ ಜಾಮೀನು ಪಡೆದುಕೊಂಡಿದ್ದ ಸಂದರ್ಭದಲ್ಲಿ ಶಸ್ತ್ರಾಸ್ತ್ರವನ್ನು ದುರುಪಯೋಗಪಡಿಸಿ ಕೊಳ್ಳುತ್ತಾರೆ ಎಂಬ ಕಾರಣದಿಂದ ಪರವಾನಗಿ ಅಮಾನತು ಮಾಡಲಾಗಿದೆ.

## ಇರಾನ್‌ನಲ್ಲಿ ಯುದ್ಧ ಕಾರ್ಮೋಡ

**ಟೆಹರಾನ್:** ಇರಾನ್ ಮೇಲೆ ಎರಗಲು ಅಮೆರಿಕ ಅಂತಿಮ ಸಿದ್ಧತೆಯಲ್ಲಿ ತೊಡಗಿರುವ ಹಿನ್ನೆಲೆಯಲ್ಲಿ ಅಲ್ಲಿನ ಭಾರತೀಯರು ಕೂಡಲೇ ದೇಶ ತೊರೆಯುವಂತೆ ಭಾರತೀಯ ರಾಯಭಾರ ಕಚೇರಿ ಸೂಚಿಸಿದೆ.

ಇರಾನ್‌ನಲ್ಲಿರುವ ಎಲ್ಲಾ ವಿದ್ಯಾರ್ಥಿಗಳು, ಯಾತ್ರಿಕರು, ವ್ಯಾಪಾರಸ್ಥರು ಹಾಗೂ ಪ್ರವಾಸಿಗರು ವಾಣಿಜ್ಯ ವಿಮಾನಗಳು ಸೇರಿದಂತೆ ಲಭ್ಯವಿರುವ ಯಾವುದೇ ಸಾರಿಗೆ ವ್ಯವಸ್ಥೆ ಬಳಸಿಕೊಂಡು ಕೂಡಲೇ ದೇಶ ತೊರೆಯುವಂತೆ ಎಚ್ಚರಿಕೆ ರಾಯಭಾರ ಕಚೇರಿ ಸೂಚಿಸಿದೆ. ಉದ್ವಿಗ್ನತೆ ಹೆಚ್ಚುತ್ತಿದ್ದಂತೆ ದೇಶದ ಕೆಲವು ಪ್ರದೇಶಗಳಲ್ಲಿ ಇಂಟರ್ನೆಟ್ ಸಂಪರ್ಕಗಳನ್ನು ಸ್ಥಗಿತಗೊಳಿಸಲಾಗಿದೆ.

ಇರಾನ್‌ನಲ್ಲಿ ಹೆಚ್ಚುತ್ತಿರುವ ಆತಂಕದ ಸನ್ನಿವೇಶ ಗಮನದಲ್ಲಿಟ್ಟುಕೊಂಡು ಭಾರತ ಸರಕಾರ ಜ.5 ರಂದು ಹೊರಡಿಸಿದ್ದ ಸಲಹೆಯ ಮುಂದುವರಿದ ಭಾಗವಾಗಿ ಈ ಸೂಚನೆ ನೀಡಲಾಗಿದೆ. ಎಲ್ಲಾ ಭಾರತೀಯರು ಹಾಗೂ ಭಾರತೀಯ ಮೂಲದವರು ಎಚ್ಚರಿಕೆ ವಹಿಸಬೇಕು. ಪ್ರತಿಭಟನೆಗಳು ನಡೆಯುವ ಸ್ಥಳಗಳಿಂದ ದೂರವಿರಬೇಕು. ಇರಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿರಬೇಕೆಂದು ತಿಳಿಸಲಾಗಿದೆ.

ಯಾವುದೇ ಕ್ಷಣದಲ್ಲೂ ನಿಮ್ಮ ಪಾಸ್‌ಪೋರ್ಟ್, ಇತರ ಪ್ರಯಾಣ ದಾಖಲೆಗಳನ್ನ ಸಿದ್ಧವಾಗಿಟ್ಟುಕೊಳ್ಳಿ. ಒಂದು ವೇಳೆ ರಾಯಭಾರ ಕಚೇರಿಯಲ್ಲಿ ನೋಂದಾಯಿಸದವರು ಆನ್‌ಲೈನ್ ಪೋರ್ಟಲ್ ಮೂಲಕ ನೋಂದಣಿ ಮಾಡಿಕೊಳ್ಳಬೇಕು ಎಂದು ರಾಯಭಾರ ಕಚೇರಿ ತಿಳಿಸಿದ್ದು, ಇದಕ್ಕಾಗಿ ತುರ್ತು ಸಹಾಯವಾಣಿ ಸಂಖ್ಯೆಯನ್ನ ಬಿಡುಗಡೆ ಮಾಡಿದೆ.

ಇರಾನ್ ಬಿಕ್ಕಟ್ಟಿನ ಮಧ್ಯೆ, ಡಾಲರ್ ಮೌಲ್ಯ ಕುಸಿದಿದ್ದು, ಚಿನ್ನ, ಬೆಳ್ಳಿ ಭಾರೀ ಹೆಚ್ಚಳ ಕಂಡಿದೆ. 24 ಕ್ಯಾರೆಟ್ ಚಿನ್ನದ ಬೆಲೆಯ 1 ಗ್ರಾಂ ನಲ್ಲಿ 207 ರೂಪಾಯಿ ಹೆಚ್ಚಳ ಆಗಿದೆ. 24 ಕ್ಯಾರೆಟ್‌ನ 1 ಗ್ರಾಂ ಬೆಲೆ 16,135 ರೂ ದಾಖಲಾಗಿದೆ.

## ಎಫ್‌ಐಆರ್ ರದ್ದು ಕೋರಿ ರಣವೀರ್ ಹೈಗೆ ಅರ್ಜಿ

**ಬೆಂಗಳೂರು:** ಕಾಂತಾರ ಚಾಪ್ಟರ್-1 ಚಿತ್ರದ ದೈವಪಾತ್ರದ ಬಗ್ಗೆ ಅಪಮಾನಕಾರಿಯಾಗಿ ಸನ್ನೆ ಮಾಡಿದ ಆರೋಪದ ಮೇಲೆ ಬೆಂಗಳೂರು ನಗರದ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ತಮ್ಮ ವಿರುದ್ಧ ದಾಖಲಾಗಿರುವ ಖಾಸಗಿ ದೂರು ಮತ್ತು ಹೈಗ್ರೌಂಡ್ಸ್ ಠಾಣಾ ಪೊಲೀಸರು ದಾಖಲಿಸಿರುವ ಎಫ್‌ಐಆರ್ ರದ್ದು ಕೋರಿ ಬಾಲಿವುಡ್ ನಟ ರಣವೀರ್ ಸಿಂಗ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಅರ್ಜಿಯಲ್ಲಿ ನಗರದ ಹೈಗ್ರೌಂಡ್ಸ್ ಠಾಣಾ ಪೊಲೀಸರು ಮತ್ತು ಪ್ರಕರಣದ ಖಾಸಗಿ ದೂರುದಾರ ಪ್ರಶಾಂತ್ ಮೆಥಲ್ ಅವರನ್ನು ಪ್ರತಿವಾದಿಯನ್ನಾಗಿಸಿದ್ದಾರೆ. ಅರ್ಜಿಯನ್ನು ತುರ್ತು ವಿಚಾರಣೆಗೆ ಪರಿಗಣಿಸಬೇಕು ಎಂದು ಕೋರಿ ರಣವೀರ್ ಸಿಂಗ್ ಪರ ವಕೀಲರು, ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಪೀಠದ ಮುಂದೆ ಮನವಿ ಮಾಡಿದರು.

## ತೇಜಸ್ ಹಾರಾಟಕ್ಕೆ ಐಎಎಫ್ ಬ್ರೇಕ್

**ದೆಹಲಿ:** ಎಚ್‌ಎಎಲ್ ನಿರ್ಮಿತ ಪ್ರತಿಷ್ಠಿತ ತೇಜಸ್ ಲಘು ಯುದ್ಧ ವಿಮಾನ ಇತ್ತೀಚೆಗೆ ಸರಣಿ ಅಪಘಾತಕ್ಕೀಡಾದ ಬೆನ್ನಲ್ಲೇ ಭಾರತೀಯ ವಾಯುಪಡೆ ತೇಜಸ್‌ನ ಎಲ್ಲಾ ಸಿಂಗಲ್ ಸೀಟ್ ವಿಮಾನಗಳ ಬಳಕೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ.

ಫೆ.7ರಂದು ಎಚ್‌ಎಎಲ್ ನಿರ್ಮಿತ ವಿಮಾನವು ತರಬೇತಿ ಹಾರಾಟದ ನಂತರ ಲ್ಯಾಂಡಿಂಗ್ ವೇಳೆ ಇದ್ದಕ್ಕಿದ್ದಂತೆ ತಾಂತ್ರಿಕ ವೈಫಲ್ಯ ಅನುಭವಿಸಿತ್ತು. ಈ ವೇಳೆ ಪೈಲಟ್ ಸುರಕ್ಷಿತವಾಗಿ ಹೊರಕ್ಕೆ ಹಾರಿದ್ದಾರೆ. ಆದರೆ, ಈ ತೇಜಸ್ ವಿಮಾನ ರನ್‌ವೇಯನ್ನು ಮೀರಿ ಮುಂದೆ ಸಾಗಿದ್ದು, ಅದರ ಏರ್ ಫ್ರೇಮ್‌ಗೆ ಹಾನಿಯಾಗಿತ್ತು. 2024ರಲ್ಲಿ ಮೊದಲ ಬಾರಿಗೆ ತೇಜಸ್ ಜೆಟ್ ಜೈಸಲ್ಮೇರ್ ಪ್ರದೇಶದಲ್ಲಿ ಮೊದಲ ಅಪಘಾತ ಕಂಡಿತ್ತು. ಫೈರ್ ಪವರ್ ಪ್ರದರ್ಶನದಿಂದ ಹಿಂತಿರುಗುತ್ತಿದ್ದಾಗ ವೇಳೆ ಜೈಸಲ್ಮೇರ್‌ನಲ್ಲಿ ತೇಜಸ್ ಯುದ್ಧವಿಮಾನ ಅಪಘಾತಕ್ಕೀಡಾಗಿತ್ತು. ಈ ಸಮಯದಲ್ಲಿ ಪೈಲಟ್ ಸುರಕ್ಷಿತವಾಗಿ ಹೊರಗೆ ಹಾರಿದ್ದರು. ಕಳೆದ ವರ್ಷ 2025 ನವೆಂಬರ್ ತಿಂಗಳಿನಲ್ಲಿ ದುಬೈ ಏರ್ ಶೋನಲ್ಲಿ ನಡೆದ ಏರೋಬ್ಯಾಟಿಕ್ ಪ್ರದರ್ಶನದ ವೇಳೆ ತಾಂತ್ರಿಕ ದೋಷದಿಂದಾಗಿ ತೇಜಸ್ ವಿಮಾನ ಪತನಗೊಂಡು ಪೈಲಟ್ ದುರಂತ ಸಾವು ಕಂಡಿದ್ದರು.

ಸರಣಿ ಅಪಘಾತಗಳ ಹಿನ್ನೆಲೆಯಲ್ಲಿ ತೇಜಸ್ ವಿಮಾನವನ್ನು ವ್ಯಾಪಕವಾದ ತಾಂತ್ರಿಕ ಪರಿಶೀಲನೆಗೆ ಒಳಪಡಿಸಲು ವಾಯುಪಡೆ ಮುಂದಾಗಿದೆ. ಸದ್ಯ ಬಳಕೆಯಲ್ಲಿರುವ ಸುಮಾರು 30 ಸಿಂಗಲ್-ಸೀಟ್ ತೇಜಸ್ ಜೆಟ್‌ಗಳ ಸಂಪೂರ್ಣ ಫ್ಲೀಟ್ ಗಳ ಬಳಕೆಯನ್ನು ಸ್ಥಗಿತಗೊಳಿಸಿದೆ.

**ಕುಸಿದ ಷೇರುಗಳು:** ಈ ಸುದ್ದಿಯ ಬೆನ್ನಲ್ಲೇ, ಸೋಮವಾರ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ಷೇರುಗಳು ಶೇ.3ಕ್ಕಿಂತ ಹೆಚ್ಚು ಕುಸಿತ ಕಂಡು ತಲಾ ರು. 4,037 ರಂತೆ ವಹಿವಾಟು ನಡೆಸುತ್ತಿದೆ.

## ವಿವಿಧ ಬೇಡಿಕೆಗಳ ಈಡೇರಿಕೆಗೆ ಸರಕಾರಿ ಆಸ್ಪತ್ರೆ ವೈದ್ಯರ ಪಟ್ಟು

# ಮಾರ್ಚ್ 11ರಿಂದ ವೈದ್ಯರ ಮುಷ್ಕರ

**ಬೆಂಗಳೂರು:** ವಿವಿಧ ಬೇಡಿಕೆಗಳ ಈಡೇರಿಕೆಗೆ ಪದೇ ಪದೇ ಒತ್ತಾಯಿಸಿದರೂ ಸ್ಪಂದಿಸದ ರಾಜ್ಯ ಸರಕಾರದ ವಿರುದ್ಧ ಸರಕಾರಿ ಆಸ್ಪತ್ರೆ ವೈದ್ಯರು ಹೋರಾಟ ತೀವ್ರಗೊಳಿಸಲು ನಿರ್ಧರಿಸಿದ್ದಾರೆ.

ಬೇಡಿಕೆ ಈಡೇರಿಸದಿದ್ದರೆ ಮೊದಲ ಹಂತದಲ್ಲಿ ಮಾ. 11 ರಿಂದ 15 ರವರೆಗೆ ರಾಜ್ಯವ್ಯಾಪಿ ಪ್ರತಿಭಟನೆಗೆ ಕರೆ ನೀಡುವುದಾಗಿ ಸರಕಾರಿ ವೈದ್ಯಾಧಿಕಾರಿಗಳ ಸಂಘ, ಕರ್ನಾಟಕ ರಾಜ್ಯ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖಾ ನೌಕರರ ಸಂಘ ಸರಕಾರಕ್ಕೆ ಎಚ್ಚರಿಕೆ ನೀಡಿವೆ.

ಆಸ್ಪತ್ರೆಗೆ ನಿಗದಿತ ಸಮಯಕ್ಕೆ ಔಷಧಿಗಳ ಸರಬರಾಜು ಆಗುತ್ತಿಲ್ಲ. ಔಷಧಿಗಳ ಕೊರತೆಯ ಬಗ್ಗೆ ಹಲವು ಬಾರಿ ಹೇಳಿದರೂ ಸ್ಪಂದಿಸಿಲ್ಲ. ಈಗಾಗಲೇ ಹಲವು ಕಡೆ ವೈದ್ಯರ ಮೇಲೆ ಹಲ್ಲೆ ಮಾಡಿರುವ ಉದಾಹರಣೆಗಳಿವೆ ಎಂದು ಸಂಘ ಆರೋಪಿಸಿದೆ. ವೈದ್ಯಕೀಯ ಶಿಕ್ಷಣ ಇಲಾಖಾ ನೌಕರರ ಕೇಂದ್ರ ಸಂಘದ ರಾಜ್ಯಾಧ್ಯಕ್ಷ ಡಾ. ರವೀಂದ್ರನಾಥ್ ಎಂ. ಮೇಟಿ ಮಾತನಾಡಿ, ಬೇಡಿಕೆಗಳನ್ನು ಈಡೇರಿಸು ವಂತೆ ರಾಜ್ಯ ಸರಕಾರಕ್ಕೆ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಆದ್ದರಿಂದ ಮೊದಲ ಹಂತದಲ್ಲಿ ಮಾ. 11 ರಿಂದ 15 ರವರೆಗೆ ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯರು, ಅಧಿಕಾರಿ, ನೌಕರರು ಕಪ್ಪು ಪಟ್ಟಿ ಧರಿಸಿ ಹೊರರೋಗಿಗಳ ಚಿಕಿತ್ಸೆಯನ್ನು ಸ್ಥಗಿತಗೊಳಿಸಿ, ಮುಷ್ಕರದಲ್ಲಿ ಪಾಲ್ಗೊಳ್ಳಲಿದ್ದೇವೆ ಎಂದು ಮಾಹಿತಿ ನೀಡಿದರು. ಎರಡನೇ ಹಂತದಲ್ಲಿ ಮಾ. 16 ರಿಂದ ಬೇಡಿಕೆ ಈಡೇರುವವರೆವಿಗೂ ಆರೋಗ್ಯ ಇಲಾಖೆಯ ಎಲ್ಲಾ ವೈದ್ಯರು, ಅನಿರ್ದಿಷ್ಟಾವಧಿವರೆಗೆ ಗೈರು ಹಾಜರಾಗಲಿದ್ದಾರೆ ಎಂದರು.

### ಬೇಡಿಕೆಗಳೇನು ?

- ರಾಜ್ಯದ ಎಲ್ಲಾ ಸರಕಾರಿ ಆಸ್ಪತ್ರೆಗಳಿಗೆ ಇಲಾಖೆಯಿಂದ ಸಮರ್ಪಕ ಔಷಧಿ ಸರಬರಾಜು
- ಆರೋಗ್ಯ ಇಲಾಖೆಯ ವೃಂದ ಮತ್ತು ನೇಮ ಕಾತಿ ನಿಯಮಗಳಿಗೆ ತಿದ್ದುಪಡಿ ತರಬೇಕು
- ಇಲಾಖೆಯ ಎಲ್ಲಾ ವೃಂದಗಳ ಜೇಷ್ಠತಾ ಪಟ್ಟಿಯನ್ನು ಕಾಲ ಕಾಲಕ್ಕೆ ಪ್ರಕಟಿಸುವುದು.
- ಇಲಾಖೆಯ ಎಲ್ಲಾ ವೃಂದದವರಿಗೆ ಕೂಡಲೇ ಮುಂಬಡ್ತಿ ನೀಡುವುದು.
- ಸೇವಾನಿರತ ವೈದ್ಯರು, ಅಧಿಕಾರಿ, ನೌಕರರ ಉನ್ನತ ವ್ಯಾಸಂಗಕ್ಕೆ ಅವಕಾಶ.

## ಜನಸಂದಣಿ ನಿಯಂತ್ರಣಕ್ಕೆ ಎಸ್‌ಒಪಿ ಜಾರಿಗೆ ಹೈ ಆದೇಶ

# ಚಿನ್ನಸ್ವಾಮಿ ಕಾಲ್ತುಳಿತ ಪಿಐಎಲ್ ವಿಲೇವಾರಿ

**ಬೆಂಗಳೂರು:** ಕರ್ನಾಟಕ ಜನಸಂದಣಿ ನಿಯಂತ್ರಣ (ಕಾರ್ಯಕ್ರಮ ಮತ್ತು ಗುಂಪುಗೂಡುವ ಸ್ಥಳಗಳಲ್ಲಿ ಜನಸಂದಣಿಯ ನಿಯಂತ್ರಣ) ಮಸೂದೆಯು ಕಾಯಿದೆ ರೂಪ ಪಡೆಯುವವರೆಗೆ ಜನಸಂದಣಿ ನಿಯಂತ್ರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರಕಾರ ಬಿಡುಗಡೆ ಮಾಡಿರುವ ಪ್ರಮಾಣೀಕೃತ ಕಾರ್ಯವಿಧಾನ (ಎಸ್‌ಒಪಿ) ಜಾರಿಗೊಳಿಸಲು ರಾಜ್ಯ ಸರಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದ್ದು, ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಿಲೇವಾರಿ ಮಾಡಿದೆ.

ಚಿನ್ನಸ್ವಾಮಿ ಕ್ರೀಡಾಂಗಣದ ಮುಂಭಾಗ ಸಂಭವಿಸಿದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು

ಬಕ್ರು ಮತ್ತು ನ್ಯಾಯಮೂರ್ತಿ ಸಿ.ಎಂ. ಪೂಣಚ್ಚ ಅವರ ವಿಭಾಗೀಯ ಪೀಠ ನಡೆಸಿತು. ರಾಜ್ಯ ಸರಕಾರವನ್ನು ಪ್ರತಿನಿಧಿಸಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರು ಸಾಕಷ್ಟು ಸಮಯ ತೆಗೆದುಕೊಂಡು ಎಸ್‌ಒಪಿ ಸಿದ್ಧಪಡಿಸಿದ್ದೇವೆ ಎಂದು ಜ.13ರಂದು ರೂಪಿಸಿರುವ ಎಸ್‌ಒಪಿಯನ್ನು ಪೀಠಕ್ಕೆ ಸಲ್ಲಿಸಿದರು. ಅಮಿಕಸ್ ಕ್ಯೂರಿ ಎಸ್. ಸುಶೀಲಾ ಅವರು ಏನು ನಡೆಯಿತು ಎಂಬ ವಿಚಾರಕ್ಕೆ ನಾವು ಹೋಗುತ್ತಿಲ್ಲ.

→ 4

## ಮೂಲ ಯೋಜನೆ ಮರು ಸ್ಥಾಪನೆವರೆಗೂ ಕಾಂಗ್ರೆಸ್ ಹೋರಾಟ ನಿಲ್ಲದು: ಕಾಂಗ್ರೆಸ್ ಪಣ

# ನರೇಗಾ ರದ್ದು ಬಡವರ ಮೇಲಿನ ದಾಳಿ: ಸಿಎಂ

**ಚಿಕ್ಕಬಳ್ಳಾಪುರ:** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ಮನರೇಗಾ) ಸ್ವರೂಪ ಬದಲಿಸುವ ಮೂಲಕ ಕೇಂದ್ರ ಸರಕಾರವು ಆದಿವಾಸಿಗಳು, ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದವರು ಸೇರಿದಂತೆ ಅಶಕ್ತರ ಬದುಕುವ ಮತ್ತು ಉದ್ಯೋಗದ ಹಕ್ಕು ಕಿತ್ತುಕೊಂಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಮನರೇಗಾ ಮರುಸ್ಥಾಪಿಸಬೇಕು, ವಿಬಿಜಿ ರಾಮ್ ಜಿ ರದ್ದುಗೊಳಿಸಬೇಕು ಎಂದು ಆಗ್ರಹಿಸಿ ಕಾಂಗ್ರೆಸ್ ಸೋಮವಾರ ಇಲ್ಲಿ ಹಮ್ಮಿಕೊಂಡಿದ್ದ ಮನರೇಗಾ ಬಚಾವ್ ಸಂಗ್ರಾಮ ಬೃಹತ್ ಪ್ರತಿಭಟನಾ ಸಮಾವೇಶದಲ್ಲಿ ಅವರು ಮಾತನಾಡಿದರು.

ದೇಶದಾದ್ಯಂತ ಮನರೇಗಾ ಉಳಿಸಿ ಅಭಿಯಾನ ಆರಂಭವಾಗಿದೆ. ಕಾಂಗ್ರೆಸ್‌ನ ಹೋರಾಟದ ಉದ್ದೇಶವನ್ನು ತಿಳಿದು ಜನರು ಕೈಜೋಡಿಸಬೇಕು. ಮನರೇಗಾ ಅಡಿ 12.16 ಕೋಟಿ ಜನರಿಗೆ ಉದ್ಯೋಗ ದೊರಕಿತ್ತು. ಗ್ರಾಮೀಣಾಭಿವೃದ್ಧಿಯ ಕನಸು ಕಂಡಿದ್ದ ಮಹಾತ್ಮ ಗಾಂಧೀಜಿ ಅವರ ಹೆಸರಿನಲ್ಲಿ ಯೋಜನೆಯನ್ನು ಮನಮೋಹನ್ ಸಿಂಗ್ ಅವರ ಸರಕಾರ ಜಾರಿಗೊಳಿಸಿತ್ತು. ಗ್ರಾಮ ಸ್ವರಾಜ್ಯದ ಕಲ್ಪನೆಗೆ ಮನರೇಗಾ ಶಕ್ತಿ ತುಂಬಿತ್ತು. ಆದರೆ ಕೇಂದ್ರ ಸರಕಾರ ಮನರೇಗಾ ಯೋಜನೆಯ ಹೆಸರು ಮತ್ತು ಸ್ವರೂಪ ಬದಲಿಸುವ ಮೂಲಕ ಆದಿವಾಸಿಗಳು, ಮಹಿಳೆಯರು, ಕೂಲಿಕಾರ್ಮಿಕರ ಬದುಕನ್ನು ಕಷ್ಟಕ್ಕೆ ದೂಡಿದೆ ಎಂದು ದೂರಿದರು.

→ 4

ಚಿಕ್ಕಬಳ್ಳಾಪುರದಲ್ಲಿ ನಡೆದ ನರೇಗಾ ಬಚಾವೋ ಆಂದೋಲನದ ಬೃಹತ್ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

### ರಾಜ್ಯ ಹಿತಕ್ಕೆ ಧಕ್ಕೆ

100 ದಿನಗಳ ಉದ್ಯೋಗದ ಖಾತ್ರಿ ನೀಡುತ್ತಿದ್ದ ಮನರೇಗಾ ಕಾಯ್ದೆಯಡಿ, ಕೂಲಿಕಾರರು ಸ್ಥಳೀಯ ಮಟ್ಟದಲ್ಲಿಯೇ ಕೆಲಸ ಮಾಡಬಹುದಿತ್ತು. ಗ್ರಾಮಪಂಚಾಯತಿ ಮತ್ತು ಗ್ರಾಮಸಭೆಗಳು ಕಾಮಗಾರಿ ನಿರ್ಧರಿಸುವ ಅಧಿಕಾರವಿತ್ತು. ಆದರೀಗ ಈ ನಿರ್ಧಾರವನ್ನು ಕೇಂದ್ರ ಸರಕಾರವೇ ಕೈಗೊಳ್ಳಲಿದೆ. ಹೊಸ ಕಾಯ್ದೆಯಂತೆ ಕೇಂದ್ರ 60% ಅನುದಾನ ಮತ್ತು ರಾಜ್ಯಗಳು 40% ಅನುದಾನ ಕೊಡಬೇಕಾಗಿದೆ. ರಾಜ್ಯದ ಹಿತವನ್ನು ಕಾಪಾಡುವಲ್ಲಿ ಕೇಂದ್ರ ಸೋತಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಒಳಮೀಸಲಾತಿ ವಿಷಯದಲ್ಲಿ ಕಾಂಗ್ರೆಸ್ ಸರಕಾರದ ಎಡವಟ್ಟು | ಬಿಜೆಪಿ ನಿಯೋಗದಿಂದ ರಾಜ್ಯಪಾಲರ ಭೇಟಿ

# ಒಳಮೀಸಲಾತಿ: ರಾಜ್ಯಪಾಲರಿಗೆ ಮನವಿ ಸಲ್ಲಿಸಿದ ಬಿಜೆಪಿ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಸುಪ್ರೀಂಕೋರ್ಟ್ ತೀರ್ಪು ಬಂದು 18 ತಿಂಗಳಾದರೂ ಒಳ ಮೀಸಲಾತಿ ಜಾರಿಯಾಗಿಲ್ಲ ಎಂದು ರಾಜ್ಯಪಾಲರನ್ನು ಭೇಟಿ ಮಾಡಿರುವ ಬಿಜೆಪಿ ನಿಯೋಗ ಮನವಿ ಸಲ್ಲಿಸಿದೆ.

ಸುಪ್ರೀಂ ಆದೇಶ ಬಂದ ಆರು ತಿಂಗಳಿಗೆ ತೆಲಂಗಾಣ, ಆಂಧ್ರಪ್ರದೇಶ, ಹರಿಯಾಣ ಸರಕಾರಗಳು ಒಳ ಮೀಸಲಾತಿ ಜಾರಿ ಮಾಡಿ ನ್ಯಾಯ ಕೊಟ್ಟಿದೆ. ಆದರೆ ಕರ್ನಾಟಕದಲ್ಲಿ ಇನ್ನೂ ನ್ಯಾ.ನಾಗಮೋಹನ್ ದಾಸ್ ಆಯೋಗ ರಚನೆ ಮಾದಿಗ ಸಮಾಜದ ಬೇಡಿಕೆ ಆಗಿರಲಿಲ್ಲ. ಈ ಹಿಂದೆ ತಯಾರಿಸಿದ ನ್ಯಾ.ಸದಾಶಿವ ಆಯೋಗದ ವರದಿ ಮತ್ತು ಮಾಧುಸ್ವಾಮಿ ಸಮಿತಿ ವರದಿಯ ದತ್ತಾಂಶಗಳು ಸರಕಾರದ ಬಳಿ ಇದೆ. ಹೀಗಿದ್ದರೂ ನ್ಯಾ.ನಾಗಮೋಹನ ದಾಸ್ ಆಯೋಗ ರಚಿಸಿ ವರದಿ ಪಡೆಯಲು ಸರಕಾರ ನಿಶ್ಚಯಿಸಿ ಆರು ತಿಂಗಳು ಶ್ರಮವಹಿಸಿ, 110 ಕೋಟಿ ತೆರಿಗೆ ಹಣ ವ್ಯಯಿಸಿ ಆಯೋಗದಿಂದ ಶಿಫಾರಸುಗಳನ್ನು ಪಡೆದಿದ್ದರೂ ಇನ್ನೂ ಜಾರಿಯಾಗಿಲ್ಲ ಎಂದು ರಾಜ್ಯಪಾಲರಿಗೆ ಬಿಜೆಪಿ ನಿಯೋಗ ವಿವರಿಸಿದೆ.

ಒಳಮೀಸಲಾರಿ ಸೂತ್ರವನ್ನು ಯಾವ ಆಧಾರದಲ್ಲಿ ರೂಪಿಸಲಾಯಿತು. ಸರಕಾರವಾಗಲಿ, ಸಚಿವರಾಗಲಿ, ಮುಖ್ಯಮಂತ್ರಿಗಳಾಗಲಿ ವಿವರಿಸಲಿಲ್ಲ. ಈ ಬಗ್ಗೆ ಸದನದಲ್ಲಿ ಮಸೂದೆ ಮಂಡಿಸಲಾಯಿತಾದರೂ ವಿಸ್ತೃತ ಚರ್ಚೆಗೆ ಅವಕಾಶವನ್ನೇ ಕೊಡಲಿಲ್ಲ. ರಾತ್ರಿ 7ಕ್ಕೆ ಮಸೂದೆಯನ್ನು ತಂದು ಸಂಖ್ಯಾಬಲದಿಂದ ತರಾತುರಿಯಲ್ಲಿ ಅಂಗೀಕಾರ ಪಡೆಯಲಾಯಿತು. ಐತಿಹಾಸಿಕವಾದ ಒಳ ಮೀಸಲಾತಿಯನ್ನು ಜಾರಿ ಮಾಡುವ ಇಡೀ ಪ್ರಕ್ರಿಯೆಯಲ್ಲಿ ಸರ್ವಪಕ್ಷಗಳ ಪ್ರಮುಖರ ಸಭೆ ಮಾಡಲಿಲ್ಲ, ಸಲಹೆ ಕೇಳಲಿಲ್ಲ, ದಲಿತ ಸಂಘಟನೆಗಳ ಪ್ರಮುಖರ, ಹೋರಾಟಗಾರರ, ಕಾನೂನು ತಜ್ಞರ, ಬುದ್ಧಿಜೀವಿಗಳ ಸಭೆ ಕರೆಯಲಿಲ್ಲ, ಸದಾ ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುತ್ತಾ ಅಹಂಕಾರದ ಮಾತುಗಳನ್ನು ಆಡುತ್ತಾ ದಿನ ದೂಡುವುದು ಸರಕಾರದ ಹಳೇ ಚಾಳಿ ಯಾಗಿದೆ. ಒಳಮೀಸಲಾತಿಯೂ ಸರ್ಕಾರದ ಈ ಅಹಂಕಾರದಿಂದ ನೆಲಕಚ್ಚಿದೆ ಎಂದು ಬಿಜೆಪಿ ತಿಳಿಸಿದೆ.

### ನ್ಯಾ. ನಾಗಮೋಹನ್ ದಾಸ್ ಶಿಫಾರಸು

- ಪ್ರವರ್ಗ 1 59 ಸಣ್ಣ ಅಲೆಮಾರಿ ಜಾತಿಗಳು : ಶೇ.1
- ಪ್ರವರ್ಗ 2 ಮಾದಿಗ ಸಂಬಂಧಿತ ಜಾತಿಗಳು : ಶೇ.6
- ಪ್ರವರ್ಗ 3 ಹೊಲೆಯ ಸಂಬಂಧಿತ ಜಾತಿಗಳು : ಶೇ.5
- ಪ್ರವರ್ಗ 4 ಭೋವಿ, ಬಂಜಾರ, ಕೊರಚ, ಕೊರಮ ಜಾತಿಗಳಿಗೆ : ಶೇ.4
- ಪ್ರವರ್ಗ 5 ಮೂಲ ಜಾತಿ ಗುರುತಿಸಿಕೊಳ್ಳದೆ ಉಳಿದ ಎಕೆ, ಎಡಿ,ಎಎ: ಶೇ.1

ಆದರೆ ಸರಕಾರ ಈ ಶಿಫಾರಸನ್ನು ಏಕೆ ಪರಿಗಣಿಸಲಿಲ್ಲ .ಬದಲಾಗಿ ರಾಜಕೀಯ ಒತ್ತಡಕ್ಕೆ ಮಣಿದು 6 : 6 : 5 ರ ಹೊಸ ಸೂತ್ರ ಸರಕಾರ ರೂಪಿಸಿದೆ ಎಂದು ವಿವರಿಸಲಾಗಿದೆ.

ನ್ಯಾ.ಸದಾಶಿವ ಆಯೋಗ, ಮಾಧುಸ್ವಾಮಿ ಆಯೋಗ, ನ್ಯಾ.ನಾಗಮೋಹನ್ ದಾಸ್ ಆಯೋಗ – ಮೂರೂ ವರದಿಗಳು ಅಲೆಮಾರಿ, ಸಣ್ಣ ಜಾತಿಗಳ ಗುಂಪಿಗೆ ಪ್ರತ್ಯೇಕ ಪ್ರವರ್ಗದಲ್ಲಿ ಶೇ.1ರ ಮೀಸಲಾತಿ ಕೊಟ್ಟಿದ್ದವು. ಆದರೆ ಕರ್ನಾಟಕ ಸರಕಾರ ಸುಪ್ರೀಂಕೋರ್ಟ್ ನಿರ್ದೇಶನಗಳನ್ನು ಗಾಳಿಗೆ ತೂರಿ ಬೇಕಾಬಿಟ್ಟಿಯಾಗಿ ಒಳ ಮೀಸಲಾತಿ ಜಾರಿ ಮಾಡಲು ಹೋಗಿ ಜಾರಿಬಿದ್ದು ನಗೆಪಾಟಲಾಗಿದೆ. ಬಡ್ತಿ ಮೀಸಲಾತಿಯಲ್ಲಿ, ಎಸ್‌ಎಸ್‌ಪಿ ಸೌಲಭ್ಯ ವಿತರಣೆಯ ವಿಷಯದಲ್ಲಿ ಒಳಮೀಸಲಾತಿ ಜಾರಿ ಮಾಡಲಿಲ್ಲ, ಬ್ಯಾಕ್ ಲಾಗ್ ನೇಮಕಾತಿಯಲ್ಲಿ ರೋಸ್ಟರ್ ರೂಪಿಸುವಲ್ಲಿಯೂ ಸರಕಾರ ಸೋತಿದೆ. ಹೀಗಾಗಿ ಪರಿಶಿಷ್ಟರ ಎಲ್ಲ 101 ಜಾತಿಗಳಲ್ಲಿಯೂ ಅಸಮಾಧಾನ ಹೆಪ್ಪುಗಟ್ಟಿದೆ. ಪರಿಶಿಷ್ಟರ ಎಲ್ಲ ಗುಂಪುಗಳು ಬೀದಿಗಿಳಿದಿವೆ. ಅಲೆಮಾರಿ ಸಮುದಾಯಗಳ ಪ್ರಮುಖರೆದುರು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ' ಇದೊಂದು ರಾಜಕೀಯ ಪ್ರೇರಿತ ನಿರ್ಧಾರ. ಇದರಲ್ಲಿ ಸಾಮಾಜಿಕ ನ್ಯಾಯ ಇಲ್ಲ, ನ್ಯಾಯ ಬೇಕಿದ್ದರೆ ಕೋರ್ಟಿಗೆ ಹೋಗಿ ಎಂದು ಹೇಳಿದ್ದರು. ಇದಕ್ಕಿಂತ ದುರಂತ ಯಾವುದಿದೆ ? ಈಗ ಒಳಮೀಸಲಾತಿಯ ವಿಷಯ ಕೋರ್ಟಿನ ಮೆಟ್ಟಿಲು ಹತ್ತಿದೆ. ನ್ಯಾಯಾಲಯದ ಮುಂದೆ ವಾದಿಸುವ ಸಿದ್ಧತೆ, ಮುತುವರ್ಜಿಗಳೂ ಕಾಣದಾಗಿದೆ. ಇಂತಹ ಬೇಜವಾಬ್ದಾರಿಯ ಸರಕಾರವನ್ನು ಕರ್ನಾಟಕದ ಜನತೆ ಹಿಂದೆಂದು ನೋಡಿರಲಿಲ್ಲ ಎಂದು ದೂರಿದೆ. ಈ ಎಲ್ಲ ವಿಷಯಗಳ ಬಗ್ಗೆ ಸ್ಪಷ್ಟನೆ ಕೇಳಿ ರಾಜ್ಯಪಾಲರಾದ ತಾವು ಸರಕಾರಕ್ಕೆ ಪತ್ರಬರೆದಿದ್ದಿರಿ. ಸರಕಾರದಿಂದ ಉತ್ತರ ನಿಮಗೆ ಬಂದಿದೆ. ಅದನ್ನು ಅಂಗೀಕರಿಸುವುದು ನಿಮ್ಮ ವಿವೇಚನೆಗೆ ಬಿಟ್ಟಿದ್ದು. ಸಾಮಾಜಿಕ ನ್ಯಾಯದ ಹಂಚಿಕೆಯ ವಿಷಯದಲ್ಲಿ ಅನುಭವಿ ರಾಜ್ಯಪಾಲರಾಗಿ ನಿಮ್ಮ ಗಟ್ಟಿ ನಿಲುವುಗಳನ್ನು ನಾವು ಅಭಿನಂದಿಸುತ್ತೇವೆ. ನೀವು ಎಲ್ಲ ನೂರೊಂದು ಜಾತಿಗಳ ಹಿತ ಕಾಯುವಿರೆಂಬ ಭರವಸೆ ನಮ್ಮದು ಎಂದು ನಿಯೋಗ ತಿಳಿಸಿದೆ.

ನಿಯೋಗದಲ್ಲಿ ಸಂಸದ ಗೋವಿಂದ ಕಾರಜೋಳ, ಕೇಂದ್ರದ ಮಾಜಿ ಸಚಿವ ಎ. ನಾರಾಯಣಸ್ವಾಮಿ, ಶಾಸಕ ದುರ್ಯೋಧನ ಐಹೊಳೆ, ಬಸವರಾಜ್ ಮತ್ತಿಮಡು, ನಿವೃತ್ತ ಐ.ಎ.ಎಸ್ ಅಧಿಕಾರಿ ಲಕ್ಷ್ಮೀನಾರಾಯಣ್ ಉಪಸ್ಥಿತರಿದ್ದರು.

## ಕಾಂಗ್ರೆಸ್ ಸರಕಾರ ದಿವಾಳಿ: ಕಾರಜೋಳ

**ಬೆಂಗಳೂರು:** ರಾಜ್ಯದ ಕಾಂಗ್ರೆಸ್ ಸರಕಾರ ಆರ್ಥಿಕವಾಗಿ ದಿವಾಳಿ ಆಗಿದೆ. ರಾಜ್ಯ ಸರಕಾರದಲ್ಲಿ 2.85 ಲಕ್ಷ ಹುದ್ದೆಗಳು ಖಾಲಿ ಇದ್ದು, ಹಣ ಇಲ್ಲದುದಕ್ಕಾಗಿ, ಖಜಾನೆ ಖಾಲಿ ಆದುದರಿಂದ ಮೀಸಲಾತಿಯ ಗೊಂದಲ ಸೃಷ್ಟಿಸಿ ನೇಮಕಾತಿ ಮುಂದೂಡುತ್ತಿದ್ದಾರೆ ಎಂದು ಸಂಸದ ಗೋವಿಂದ ಕಾರ ಜೋಳ ಆರೋಪಿಸಿದ್ದಾರೆ.

# ಲಮಾಣಿಗೆ ಒತ್ತಾಯದಿಂದ ಹಣ ನೀಡುವ ಯತ್ನ

**ಹಾವೇರಿ:** ಶಿರಹಟ್ಟಿ ಬಿಜೆಪಿ ಶಾಸಕ ಚಂದ್ರು ಲಮಾಣಿ ಅವರ ವಿರುದ್ಧ

ಷಡ್ಯಂತ್ರ ನಡೆದಿದೆ. ಒತ್ತಾಯಪೂರ್ವಕವಾಗಿ ಅವರಿಗೆ ಹಣ ನೀಡುವ ಪ್ರಯತ್ನ ನಡೆದಿದೆ. ಭ್ರಷ್ಟಾಚಾರ ನಿಗ್ರಹ ಕಾಯ್ದೆಯ ಪ್ರಕಾರ ಲಂಚ ಕೊಡುವ ಒತ್ತಾಯ ಮಾಡುವುದೂ ಕೂಡ ತಪ್ಪು ಹೀಗಾಗಿ ಎಲ್ಲ ಆಯಾಮಗಳಲ್ಲಿ ಸರಿಯಾದ ರೀತಿಯಲ್ಲಿ ತನಿಖೆಯಾಗಬೇಕೆಂದು ಒತ್ತಾಯಿಸುದಾಗಿ ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಹಾವೇರಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಶಾಸಕ ಚಂದ್ರು ಲಮಾಣಿ ಅವರ ಆಸ್ಪತ್ರೆಯಲ್ಲಿ ಎಲ್ಲ ರೀತಿಯ ಜನರು ಬಂದಿರುತ್ತಾರೆ. ಹೀಗಾಗಿ ಅದರಲ್ಲಿ ಯಾವುದೂ ಸ್ಪಷ್ಟತೆ ಇಲ್ಲ. ಲೋಕಾಯುಕ್ತರು ಕೇಸ್ ಹಾಕಿದ್ದಾರೆ. ತನಿಖೆ ನಂತರ ಸತ್ಯಾ ಸತ್ಯತೆ ಹೊರ ಬರುತ್ತದೆ. ಒಬ್ಬ ಯುವ ವೈದ್ಯರು ಒಳ್ಳೆಯ ಕೆಲಸ ಮಾಡುತ್ತಿರುವಾಗ ಒಂದು ಕರಿ ನೆರಳು ಅವರ ಸೇವೆಗೆ ಅಡ್ಡಿಯಾಗಿದೆ. ಲಂಚ ಕೊಡುವ ಒತ್ತಾಯ ಮಾಡುವುದೂ ಕೂಡ ಭ್ರಷ್ಟಾಚಾರ ನಿಗ್ರಹ ಕಾಯ್ದೆಯ ಪ್ರಕಾರ ತಪ್ಪು. ಹೀಗಾಗಿ ಎಲ್ಲ ಆಯಾಮಗಳಲ್ಲಿ ಸರಿಯಾದ ರೀತಿಯಲ್ಲಿ ತನಿಖೆಯಾಗಲು ಒತ್ತಾಯ ಮಾಡುತ್ತೇನೆ. ಯಾವುದೇ ಒಬ್ಬರ ಸಾರ್ವಜನಿಕರ ಜೀವನವನ್ನು ಷಡ್ಯಂತ್ರದಿಂದ ಮುಗಿಸುವ ಕೆಲಸವನ್ನು ಯಾರೂ ಪ್ರೋತ್ಸಾಹ ಮಾಡಬಾರದು ಖಂಡಿಸಬೇಕು ಎಂದು ಹೇಳಿದರು.

# ದಲಿತ ವಿದ್ಯಾವಂತ ಶಾಸಕನ ತುಳಿಯುವ ಯತ್ನ: ಶಾಸಕ ರಮೇಶ್ ಜಾರಕಿಹೊಳಿ

**ಬೆಳಗಾವಿ:** ಡಾ. ಚಂದ್ರು ಲಮಾಣಿ

ಭ್ರಷ್ಟಾಚಾರ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ, ಆದರೆ ದಲಿತ ವಿದ್ಯಾವಂತ ಶಾಸಕ ಎಂದು ಷಡ್ಯಂತ್ರ ಮಾಡಿ ಅವರನ್ನು ಸಿಲುಕಿಸಿದ್ದಾರೆ ಎಂದು ಗೋಕಾಕ್ ಶಾಸಕ ರಮೇಶ್ ಜಾರಕಿಹೊಳಿ ಹೇಳಿದರು.

ಸೋಮವಾರ ಬೆಳಗಾವಿ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಶಾಸಕ ಡಾ. ಚಂದ್ರು ಲಮಾಣಿ ಅವರು ಹಣ ಪಡೆದಿರುವುದು ನಮಗೆ ಗೊತ್ತಿಲ್ಲ, ಕಳೆದ 20 ವರ್ಷದಿಂದ ಪಕ್ಷಾತೀತವಾಗಿ ದಲಿತ ವಿದ್ಯಾವಂತ ಶಾಸಕರನ್ನು ವ್ಯವಸ್ಥಿತವಾಗಿ ತುಳಿಯುವ ಹುನ್ನಾರ ನಡೆಸಿದ್ದಾರೆ. ಜನಪ್ರತಿನಿಧಿಗಳಷ್ಟೆ ಅಲ್ಲ, ಹಿರಿಯ ದಲಿತ ಅಧಿಕಾರಿಗಳನ್ನು ತುಳಿಯುವ ಷಡ್ಯಂತ್ರ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಪೂಜಾರಿಯ ಜೊತೆಗೆ ಗುತ್ತಿಗೆಯ ವ್ಯವಹಾರದಲ್ಲಿದ್ದಾಗ ದಲಿತ ಸಮಾಜದ ಗುತ್ತಿಗೆದಾರನ ಮುಂದು ಮಾಡಿ ದುಡ್ಡು ಕೊಡಲು ಹೋದಾಗ ಆಸ್ಪತ್ರೆಗೆ ಬಂದು ದುಡ್ಡು ಕೊಡುವಾಗ ಷಡ್ಯಂತ್ರ ಮಾಡಿ ಅವರನ್ನು ಸಿಲುಕಿಸಿದ್ದಾರೆ ಎನ್ನುವ ಶಂಕೆ ವ್ಯಕ್ತವಾಗಿದೆ. ಇದು ತನಿಖೆಯ ನಂತರ ತಿಳಿದು ಬರಲಿದೆ ಎಂದರು. ಮಾಜಿ ಸಿಎಂ, ಜಗದೀಶ್ ಶೆಟ್ಟರ್ ನಮ್ಮ ಸಮಾಜದ ಪರವಾಗಿ ಧ್ವನಿ ಎತ್ತಿದ್ದಾರೆ. ಅವರಿಗೆ ಧನ್ಯವಾದ ತಿಳಿಸುತ್ತೇನೆ. ನಾನು ಭ್ರಷ್ಟಾಚಾರ, ಲೋಕಾಯುಕ್ತದ ಮೇಲೆ ಅನುಮಾನ ಇಲ್ಲ, ನಾನು ಅದಕ್ಕೆ ಪ್ರಶ್ನೆ ಮಾಡುವುದಿಲ್ಲ ಎಂದರು.

ಕಾಂಗ್ರೆಸ್ ಸರಕಾರ ದಲಿತರ ಸರಕಾರ ಎಂದು ಹೇಳುತ್ತಾರೆ. ಆದರೆ ದಲಿತ ಶಾಸಕರಿಗೆ ನ್ಯಾಯ ಕೊಡಿಸುತ್ತಿಲ್ಲ. ಸರಕಾರದಲ್ಲಿ ಸಿದ್ದರಾಮಯ್ಯ, ಸತೀಶ್ ಜಾರಕಿಹೊಳಿ, ಮುನಿಯಪ್ಪ. ಮಹಾದೇವಪ್ಪ, ಡಾ.ಜಿ ಪರಮೇಶ್ವರ ಸಚಿವರಿದ್ದಾರೆ ಅವರು ಧ್ವನಿ ಎತ್ತಬೇಕಿತ್ತು ಎಂದರು.

# ಮನರೇಗಾ ರದ್ದು ಬಡವರ ಮೇಲಿನ ದಾಳಿ: ಸಿಎಂ ವಾಗ್ದಾಳಿ

← ಮೊದಲಪುಟದಿಂದ

ವಿಕಸಿತ ಭಾರತ್ ಗ್ಯಾರಂಟಿ ಫಾರ್ ರೋಜ್‌ಗಾರ್ ಮತ್ತು ಆಜೀವಿಕ ಮಿಷನ್ (ವಿಬಿ ಜಿ ರಾಮ್ ಜಿ) ರದ್ದುಗೊಳಿಸಬೇಕು. ಮನರೇಗಾ ಮರುಸ್ಥಾಪಿಸಬೇಕು.ಈ ಬೇಡಿಕೆಗಳು ಈಡೇರುವವರೆಗೆ ನಮ್ಮ ಆಂದೋಲನ ನಿಲ್ಲುವುದಿಲ್ಲ ಎಂದು ಸಿಎಂ ಸ್ಪಷ್ಟಪಡಿಸಿದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಬಡವರ ಕೈಗೆ ಉದ್ಯೋಗ ನೀಡುವುದು, ಅವರ ಬದುಕಿನಲ್ಲಿ ಬದಲಾವಣೆ ತರುವುದು ಮನರೇಗಾ ಪ್ರಮುಖ ಉದ್ದೇಶ. ಪಂಚಾಯಿತಿಗಳೇ ಯೋಜನೆಯ ಕಾರ್ಯಕ್ರಮ ರೂಪಿಸುವ ಬಗ್ಗೆ ತೀರ್ಮಾನಿಸುತ್ತಿದ್ದವು. ಆದರೆ ಕೇಂದ್ರ ಸರಕಾರ ಈ ಎಲ್ಲವನ್ನೂ ನಾಶಗೊಳಿಸಿದೆ ಎಂದು ಕಿಡಿಕಾರಿದರು. ದೇಶದಲ್ಲಿ ಮಹಾತ್ಮ ಗಾಂಧಿ ಅವರ ಹೆಸರು ಅಳಿಸಲು ಸಾಧ್ಯವಿಲ್ಲ. ನರೇಗಾ ಯೋಜನೆಯನ್ನು ನಾಶ ಮಾಡುವ ಪ್ರಯತ್ನಕ್ಕೆ ಕಾಂಗ್ರೆಸ್ ತಡೆಯಾಗಲಿದೆ ಎಂದು ಹೇಳಿದರು. ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಮಾತನಾಡಿ, ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಸೇರಿ ಕುತಂತ್ರ ಮಾಡಿ ಶ್ರಮಿಕರ ರೈತರ ಹೊಟ್ಟೆಯ ಮೇಲೆ ಹೊಡೆಯುತ್ತಿವೆ. ನರೇಗಾ ಸ್ವರೂಪ ಬದಲಾವಣೆ ಕಾಂಗ್ರೆಸ್ ಮೇಲಿನ ಹಲ್ಲೆಯಲ್ಲ, ಬಡವರ ಬದುಕಿನ ಮೇಲಿನ ಹಲ್ಲೆ ಎಂದರು. ಕೋಟ್ಯಂತರ ಜನರಿಗೆ ಕೂಲಿ ದೊರೆಯುತ್ತಿರಲಿಲ್ಲ. ಅವರ ಬದುಕು ಕಷ್ಟದಲ್ಲಿ ಇತ್ತು. ಇದನ್ನು ಮನಗಂಡು ಅಂದಿನ ಪ್ರಧಾನಿ ಮನಮೋಹನ್ ಸಿಂಗ್ ಅವರು ಈ ಯೋಜನೆ ಜಾರಿಗೊಳಿಸಿದರು. ಈಗ ಬಿಜೆಪಿ ಕಾನೂನನ್ನು ಗಾಳಿಗೆ ತೂರುತ್ತಿದೆ. ಬಡವರಿಗೆ ಉದ್ಯೋಗ ದೊರೆಯಬಾರದು ಎನ್ನುವ ಮನಸ್ಥಿತಿಯಿಂದ ಯೋಜನೆಯ ಸ್ವರೂಪ ಬದಲಿಸಿದೆ ಎಂದು ಆರೋಪಿಸಿದರು.

ಸಚಿವರಾದ ಡಾ.ಎಂ.ಸಿ.ಸುಧಾಕರ್, ಕೆ.ಎಚ್.ಮುನಿಯಪ್ಪ, ಬೈರತಿ ಸುರೇಶ್, ಕೃಷ್ಣಬೈರೇಗೌಡ, ಬೋಸರಾಜು, ಶಾಸಕರಾದ ಪ್ರದೀಪ್ ಈಶ್ವರ್, ಕೆ.ಎಚ್.ಪುಟ್ಟಸ್ವಾಮಿಗೌಡ, ಎನ್.ಎಸ್ .ನಾರಾಯಣ ಸ್ವಾಮಿ, ಕೊತ್ತೂರು ಮಂಜುನಾಥ್, ಕೆ.ವೈ ನಂಜೇಗೌಡ, ರೂಪಕಲಾ, ತನ್ವೀರ್ ಸೇಠ್, ಮಾಜಿ ಸಚಿವರಾದ ಎನ್.ಎಚ್.ಶಿವಶಂಕರ ರೆಡ್ಡಿ, ರಮಾನಾಥ ರೈ, ಎಚ್. ಆಂಜನೇಯ, ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ವಿನಯ್ ಕುಮಾರ್ ಸೊರಕೆ, ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ ಚಂದ್ರಶೇಖರ್, ಮುಖಂಡರಾದ ರಕ್ಷಾ ರಾಮಯ್ಯ ಕೆ.ಪಿ.ಬಚ್ಚೇಗೌಡ, ರಮಾನಾಥ ರೈ ಮತ್ತಿತರರು ಪಾಲ್ಗೊಂಡಿದ್ದರು.

# ಚಿನ್ನಸ್ವಾಮಿ ಕಾಲ್ತುಳಿತ: ಪಿಐಎಲ್ ವಿಲೇವಾರಿ

← ಮೊದಲಪುಟದಿಂದ

ನ್ಯಾಯಾಲಯ ಕೆಲವು ನಿರ್ದೇಶನ ನೀಡಬೇಕು. ಈ ಅರ್ಜಿ ದಾಖಲಿಸಿಕೊಳ್ಳುವಾಗ ಒಂಭತ್ತು ಪ್ರಶ್ನೆಗಳನ್ನು ಎತ್ತಲಾಗಿತ್ತು. ಈ ಅರ್ಜಿಯ ಕುರಿತಾದ ಮಿತಿಯ ಅರಿವು ನನಗಿದೆ. ಕರ್ನಾಟಕ ಜನಸಂದಣಿ ನಿಯಂತ್ರಣ (ಕಾರ್ಯಕ್ರಮ ಮತ್ತು ಗುಂಪುಗೂಡುವ ಸ್ಥಳಗಳಲ್ಲಿ ಜನಸಂದಣಿಯ ನಿಯಂತ್ರಣ) ಮಸೂದೆಯು ಕಾಯಿದೆಯಾಗಿ ಜಾರಿಯಾಗುವವರೆಗೆ ಎಸ್‌ಒಪಿ ಜಾರಿಗೊಳಿಸಬೇಕು ಎಂದರು.

ಆಗ ಪೀಠವು ಈಗ ಎಸ್‌ಒಪಿಯಾಗಿದೆ. ಕಾನೂನು ಸದನ ಸಮಿತಿಯ ಮುಂದಿದೆ. ಕಾನೂನು ಜಾರಿಯಾದ ಮೇಲೆ ಅದು ಅಸ್ತಿತ್ವಕ್ಕೆ ಬರಲಿದೆ. ಅಲ್ಲಿಯವರೆಗೆ ಎಸ್‌ಒಪಿ ಪಾಲಿಸಬೇಕು. ಕಾಯಿದೆ ಜಾರಿಯಾದ ಮೇಲೆ ಅಹವಾಲುಗಳಿದ್ದರೆ ಈ ಅರ್ಜಿಯನ್ನು ಪುನರ್ ತೆರೆಯಬಹುದು ಎಂದಿತು. ವಕೀಲ ಮೋಹನ್ ಅವರು ಮುಂದಿನ ತಿಂಗಳು ಐಪಿಎಲ್ ನಡೆಸುವುದಕ್ಕೆ ಸಂಬಂಧಿಸಿದಂತೆ ಸಮಿತಿಯು ವರದಿ ಸಲ್ಲಿಸಿದೆ. ಇದನ್ನು ಆಧರಿಸಿ ಸಂಪುಟದಲ್ಲಿ ನಿರ್ಧರಿಸಲಾಗಿದ್ದು, ಗೃಹ ಇಲಾಖೆ ಕ್ರಮಕೈಗೊಳ್ಳಲಿದೆ ಎಂದು ಹೇಳಲಾಗಿದೆ. ಈ ವರದಿಯನ್ನು ನ್ಯಾಯಾಲಯದ ಮುಂದೆ ಇಡಲು ಆದೇಶಿಸಬೇಕು ಎಂದು ಕೋರಿದರು. ಎಲ್ಲರ ವಾದ ಆಲಿಸಿದ ಪೀಠವು ಅಡ್ವೊಕೇಟ್ ಜನರಲ್ ಅವರು ಜನವರಿ 13ರಂದು ಜನಸಂದಣಿ ಮತ್ತು ಜನಸಮೂಹ ನಿಯಂತ್ರಣ ವ್ಯವಸ್ಥೆಗೆ ಸಂಬಂಧಿಸಿದ ಎಸ್‌ಒಪಿ ಸಲ್ಲಿಸಿದ್ದಾರೆ. ಅಮಿಕಸ್ ಕ್ಯೂರಿಯು ಎಸ್‌ಒಪಿಯಲ್ಲಿನ ಗಂಭೀರ ಕೊರತೆಗಳತ್ತ ಬೆರಳು ಮಾಡಿದ್ದು, ಅದನ್ನು ಪರಿಗಣಿಸಲಾಗಿದೆ. ಮಸೂದೆಯೂ ಸದನ ಸಮಿತಿಯ ಪರಿಗಣನೆಗೆ ಸಲ್ಲಿಕೆಯಾಗಿದೆ. ಅಮಿಕಸ್ ಕ್ಯೂರಿ ಸಲಹೆಯನ್ನು ಸದನ ಸಮಿತಿಗೆ ತಿಳಿಸಲಾಗುವುದು. ಈ ಸಂಬಂಧ ಸರಕಾರವು ಮೆಮೊ ಸಲ್ಲಿಸಿದೆ. ಇದನ್ನು ಪರಿಗಣಿಸಿ, ಮಸೂದೆ ಜಾರಿಯಾಗು ವವರೆಗೆ ಎಸ್‌ಒಪಿ ಜಾರಿಗೊಳಿಸಬೇಕು ಎಂದು ನಿರ್ದೇಶಿಸಿ, ಅರ್ಜಿ ಇತ್ಯರ್ಥಪಡಿಸಿತು.

# ಮೊಬೈಲ್ ಬ್ಯಾನ್ ಪರಿಶೀಲನಾ ಹಂತದಲ್ಲಿದೆ

**ಬೆಂಗಳೂರು:** ಶಾಲೆಗಳಲ್ಲಿ ಮೊಬೈಲ್ ಬ್ಯಾನ್ ಮಾಡುವ



ವಿಚಾರ ಚರ್ಚೆಯಲ್ಲಿದೆ. ಪೋಷಕರಿಂದಲೂ ಈ ಬಗ್ಗೆ ಒತ್ತಡವಿದೆ. ಅನೇಕ ದೇಶಗಳಲ್ಲೂ ಈ ಕ್ರಮ ಕೈಗೊಳ್ಳಲಾಗಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿಯೂ ಚರ್ಚೆಯಾಗುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಾಲೆಗಳಲ್ಲಿ ಮಕ್ಕಳು ಮೊಬೈಲ್ ಬಳಕೆಗೆ ಕಡಿವಾಣ ಹಾಕುವ ವಿಚಾರ ಸರಕಾರದ ಹಂತದಲ್ಲಿದೆ. ನಮ್ಮ ಶಾಲೆಗಳಲ್ಲೂ ಮೊಬೈಲ್ ಬ್ಯಾನ್ ಮಾಡಿದ್ದೇವೆ. ಯಾವ ರೀತಿ ಮೊಬೈಲ್ ಬಳಕೆ ದುರುಪಯೋಗವಾಗುತ್ತಿದೆ ಎಂದು ಬಹಿರಂಗಗೊಳಿಸಲು ಆಗುವುದಿಲ್ಲ. ಅದಕ್ಕೆ ಈ ವಿಚಾರವಾಗಿ ಚರ್ಚೆ ನಡೆಸಲಾಗುತ್ತಿದೆ ಎಂದರು. ರಾಷ್ಟ್ರೀಯ ನೀರು ಗುಣಮಟ್ಟ ಪ್ರಮಾಣಿತ ಸಂಸ್ಥೆ ಬೆಂಗಳೂರು ಕೆರೆಗಳ ನೀರು ಕುಡಿಯಲು ಅರ್ಹವಲ್ಲ ಎಂದು ನೀಡಿರುವ ವರದಿ ಬಗ್ಗೆ ಕೇಳಿದಾಗ, ಬೆಂಗಳೂರಿನ ಕೆರೆ ನೀರನ್ನು ಕುಡಿಯಲು ಹಾಗೂ ಸ್ನಾನಕ್ಕೆ ಬಳಸಿ ಎಂದು

- ಮೊಬೈಲ್ ಬ್ಯಾನ್ ವಿಚಾರ ಅಂತಾರಾಷ್ಟ್ರೀಯ ಮಟ್ಟದಲ್ಲಿ ಚರ್ಚೆ
- ಶಾಲೆಗಳಲ್ಲಿ ಮಕ್ಕಳು ಮೊಬೈಲ್ ಬಳಕೆಗೆ ಕಡಿವಾಣ ಒಳ್ಳೆಯದೆ
- ಮೊಬೈಲ್ ಹೇಗೆ ದುರುಪಯೋಗವಾಗ ಎನ್ನುವುದು ಬಹಿರಂಪಡಿಸಲ್ಲ

ಸರಕಾರ ಹೇಳಿಲ್ಲ. ಈ ಕೆರೆಗಳು ಇರುವುದು ಅಂತರ್ಜಲ ಹೆಚ್ಚಳ ಮಾಡಲು. ತಿಪ್ಪಗೊಂಡನಹಳ್ಳಿ ಕೆರೆ ನೀರನ್ನು ಬಿಡಬ್ಲ್ಯುಎಸ್ ಎಸ್ ಬಿಯಿಂದ ಶುದ್ಧಿ ಮಾಡಲಾಗುತ್ತಿದೆ. ಬೆಂಗಳೂರಿನ ಕೆರೆಗಳ ನೀರು ಕುಡಿಯಲು, ಸ್ನಾನಮಾಡಲು ಅಲ್ಲ ಎಂದರು. ವಿಬಿ ಗ್ರಾಮ್ ಜೀ ವಿಚಾರವಾಗಿ ಕೇಳಿದಾಗ, ವಿಬಿ ಗ್ರಾಮ್ ಜೀ ವಿಚಾರವಾಗಿ ಕೇಂದ್ರ ಸರಕಾರ ಯಾವುದೇ ಸ್ಪಷ್ಟನೆ ನೀಡಿಲ್ಲ. ಹಾಗೂ ಯಾವುದೇ ನಿರ್ದೇಶನ ನೀಡಿಲ್ಲ. ಈ ಹಿಂದೆ ಕೂಲಿ ಮಾಡಿದವರಿಗೂ ಹಣ ಬಿಡುಗಡೆ ಮಾಡಿಲ್ಲ. ಕಾಯ್ದೆಯನ್ನು ಸಂಪೂರ್ಣವಾಗಿ ನಿಷ್ಕ್ರಿಯಗೊಳಿಸಲಾಗಿದೆ. ಕೂಲಿ ಕಾರ್ಮಿಕರು, ಬಡವರ ಮೇಲೆ ದೌರ್ಜನ್ಯ ನಡೆಸಲಾಗುತ್ತಿದೆ. ಇದರ ವಿರುದ್ಧ ದೊಡ್ಡ ಹೋರಾಟ ನಡೆಸುತ್ತಿದ್ದೇವೆ ಎಂದರು.


ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಕಛೇರಿ
**ರೇಷ್ಮೆ ಇಲಾಖೆ**
ಬಹುಮಹಡಿ ಕಟ್ಟಡ, 5ನೇ ಮಹಡಿ, 1ನೇ ಹಂತ, ಡಾ.ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು–560001
ದೂರವಾಣಿ: 080–22252611, ಇ–ಮೇಲ್: teamsilk.tech2@gmail.com
ಸಂಖ್ಯೆ: DOS:EPRO:RFIX:1:2026 ದಿನಾಂಕ: 21–02–2026
**ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ (ಕರೆ–2)**
ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು, ರೇಷ್ಮೆ ಇಲಾಖೆ, ಬೆಂಗಳೂರು ಇವರು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ https://kppp.karnataka.gov.in ಮೂಲಕ ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಬಳಕೆ ಮಾಡುವ ಯಂತ್ರೋಪಕರಣಗಳ ಸರಬರಾಜಿಗಾಗಿ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ. (SD/2025-26/IND0163/CALL-2).
ಟೆಂಡರ್ ಸಲ್ಲಿಕೆಗೆ ಕೊನೆಯ ದಿನಾಂಕ: 02/03/2026 ಸಂಜೆ 5.00 ಗಂಟೆಯವರೆಗೆ. ಆಸಕ್ತ ಬಿಡ್ಡುದಾರರು ಟೆಂಡರ್‌ನ ಬಿಡ್ ದಾಖಲೆಗಳ ಕುರಿತು ಹೆಚ್ಚಿನ ಮಾಹಿತಿಯನ್ನು https://kppp.karnataka.gov.in ವೆಬ್‌ಸೈಟ್ ಭೇಟಿ ನೀಡಿ ಪಡೆಯಬಹುದು.
ಸಹಿ/–
ರೇಷ್ಮೆ ಹೆಚ್ಚುವರಿ ನಿರ್ದೇಶಕರು (ತಾಂತ್ರಿಕ) ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ವಾಸಾಸಂಇ/ವಾಪ್ರ/5823/ಸ್ಕ್ಯಾನ್/2025–26



**ನಗರಸಭಾ ಕಾರ್ಯಾಲಯ, ಮಾದನಾಯಕನಹಳ್ಳಿ**
ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562162,
ದೂರವಾಣಿ ಸಂಖ್ಯೆ.: 080–23718487 Email : itstaff_ulb_mnhalli@yahoo.com
ಸಂಖ್ಯೆ:ಮಾ.ನ.ಕಾ/ಆ.ಶಾ/ಸಿಆರ್/08/2025–26 ದಿನಾಂಕ: 21.02.2026
**"ಟೆಂಡರ್ ಪ್ರಕಟಣೆ"**
ಮಾದನಾಯಕನಹಳ್ಳಿ, ನಗರಸಭೆ ವ್ಯಾಪ್ತಿಯಲ್ಲಿ ಜನಗಣತಿ 2027ನ್ನು ಕೈಗೊಳ್ಳಲು ಹೊರಗುತ್ತಿಗೆ ಮೂಲಕ ತಾಂತ್ರಿಕ ಸಹಾಯಕರನ್ನು ನೇಮಿಸಿಕೊಳ್ಳಲು, ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ಅರ್ಹ ಮಾನವ ಸಂಪನ್ಮೂಲಗಳ ಸರಬರಾಜುದಾರರು ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್‌ನಂತೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. 1. ಇಂಡೆಂಟ್ ನಂ. DMA/2025-26/SE7371, ಟೆಂಡರ್‌ಗಿಟ್ಟ ಮೊತ್ತ– ರೂ.4,72,500.00, ಇಎಂಡಿ ರೂ.11,850.00, ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:10.03.2026 ಸಂಜೆ: 16:30 ಗಂಟೆಯವರೆಗೆ, ಬಿಡ್ ತೆರೆಯುವ ದಿನಾಂಕ:11.03.2026 ಸಂಜೆ: 17:00 ಗಂಟೆಗೆ. ಹೆಚ್ಚಿನ ವಿವರಗಳನ್ನು ಕಛೇರಿಯಿಂದ ಅಥವಾ https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆದುಕೊಳ್ಳಬಹುದಾಗಿದೆ. ಯಾವುದೇ ತಿದ್ದುಪಡಿ ಮತ್ತು ಬದಲಾವಣೆಯಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ ತಿಳಿಸಲಾಗುವುದು.
ಸಹಿ/– ಪೌರಾಯುಕ್ತರು
ನಗರಸಭೆ ಮಾದನಾಯಕನಹಳ್ಳಿ.
ವಾ.ಸಾ.ಸಂ.ಇ/ವಾಪ್ರ/5825/ಶಿರಡಿಸಾಯಿ/2025–26



ಕರ್ನಾಟಕ ಸರ್ಕಾರ
**ಮೈಸೂರು ಮಹಾನಗರಪಾಲಿಕೆ**
ಕಾರ್ಯಪಾಲಕ ಅಭಿಯಂತರವರ ಕಛೇರಿ, ನೀಸ&ಒಚ (ಪೂರ್ವ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು.
ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಕಾಇಂ/ನೀಸ&ಒಚ(ಪೂರ್ವ)/ಟಿಎನ್–20/1322 /2025–26
ದಿನಾಂಕ: 23–02–2026
**ಟೆಂಡರ್ ಪ್ರಕಟಣೆ**
ಕರ್ನಾಟಕ ಸರ್ಕಾರದ ಕೆ.ಪಿಪಿ ಪೋರ್ಟಲ್ ಮುಖಾಂತರ ಮಾತ್ರ
ಪಾಲಿಕೆ ಅನುದಾನದಡಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

| | | | | ಸಂಜೆ 4.30 ಗಂಟೆ ನಂತರ | ಸಂಜೆ 4.00 ಗಂಟೆ | ಬೆಳಿಗ್ಗೆ 11.30 ಗಂಟೆ ನಂತರ |
|---|---|---|---|---|---|---|
| ಕ್ರ. ಸಂ | ವಿವರ | ಕಾಮಗಾರಿ ಸಂಖ್ಯೆ | ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ) | ಕೆ.ಪಿಪಿ ಪೋರ್ಟಲ್ ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ | ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ | ತಾಂತ್ರಿಕ / ಆರ್ಥಿಕ ಬಿಡ್ ತೆರೆಯುವ ದಿನಾಂಕ |
| 1 | Kw-1 & Kw-2 | 7 | 102.81 | 25.02.2026 | 12.03.2026 | 13.03.2026 |

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.
ಸಹಿ/- ಕಾರ್ಯಪಾಲಕ ಅಭಿಯಂತರರು
ನೀಸ & ಒಚ (ಪೂರ್ವ) ವಿಭಾಗ, ಮೈಸೂರು ಮಹಾನಗರ ಪಾಲಿಕೆ, ಮೈಸೂರು



**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ**
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.
ನಂ:ಬೆಂಅಪ್ರಾ/ನಯೋಸ/CLU–456/4174/2025–26 ದಿನಾಂಕ: 21.02.2026
**ಪ್ರಕಟಣೆ**
ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

| ಕ್ರ. ಸಂ. | ಅರ್ಜಿದಾರರ ಹೆಸರು | ತಾಲ್ಲೂಕು | ಹೋಬಳಿ | ಗ್ರಾಮದ ವಿವರ | ಸರ್ವೆ ನಂ. | ವಿಸ್ತೀರ್ಣ ಎ–ಗುಂ | ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂಉಪಯೋಗ | ಬದಲಾವಣೆ ಕೋರಿರುವ ಭೂಉಪಯೋಗ |
|---|---|---|---|---|---|---|---|---|
| 1 | ಶ್ರೀ ಶಿವರಾಜು ಬಿ.ಸಿ. ನಂ.29, ಅಂಚೆ ಕಛೇರಿ ಕಾಂಪ್ಲೆಕ್ಸ್, ಬೆಟ್ಟಹಲಸೂರು ಗ್ರಾಮ, ಬೆಂಗಳೂರು–562 157 | ಯಲಹಂಕ | ಜಾಲ | ಬೆಟ್ಟ ಹಲಸೂರು | 232/2 | 2ಎ–00ಗುಂ | ವ್ಯವಸಾಯ | ವಸತಿ |

**ಷರಾ:** ಅರ್ಜಿದಾರರು ಪ್ರಶ್ನಿತ ಜಮೀನನ್ನು ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡುವುದರಿಂದ ಸದರಿ ಜಮೀನಿನ ಸುತ್ತಮುತ್ತ ವಸತಿ ಉದ್ದೇಶಕ್ಕಾಗಿ ಬೇಡಿಕೆ ಇದ್ದು, ಪ್ರಶ್ನಿತ ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ನಿವಾಸಿಗಳಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುತ್ತದೆ. ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಯಾಗಿರುತ್ತದೆ ಮತ್ತು ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ' ವಲಯದಿಂದ 'ವಸತಿ' ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.
ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು



**ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ**
ನೋಂದಣಿ ಕಚೇರಿ : 30/1, 1ನೇ & 2ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಪ್ರದೇಶ, ವಸಂತ ನಗರ, ಬೆಂಗಳೂರು –560051.
ಸಂಖ್ಯೆ: DGM-3/ಬೆಂ.ಘ.ನಿ.ನಿ/ಪಿಆರ್/787/2025–26 ದಿನಾಂಕ: 23.02.2026
**ಆಸಕ್ತಿ ಅಭಿವ್ಯಕ್ತಿ ಆಹ್ವಾನಿಸಲು ಪ್ರಕಟಣೆ**
ಕೇಂದ್ರ ಸರ್ಕಾರದ ವಸತಿ ಮತ್ತು ನಗರ ಸಚಿವಾಲಯ ವತಿಯಿಂದ ನಿರ್ವಹಿಸಲಾಗುತ್ತಿರುವ ಸ್ವಚ್ಛ ಭಾರತ ಅಭಿಯಾನ 2.0 ರಡಿಯಲ್ಲಿ ಸಮರ್ಪಕ ಘನ ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಡಿಯಲ್ಲಿ ಬರುವ 5 ನಗರ ಪಾಲಿಕೆಗಳಲ್ಲಿ 03 ವರ್ಷಗಳ ಅವಧಿಗೆ ಪೂರ್ಣ ಸಮಯದ ಪಾತ್ರದ ಅಡಿಯಲ್ಲಿ IEC ಚಟುವಟಿಕೆಗಳನ್ನು ಕೈಗೊಳ್ಳಲು Day-NULM ಯೋಜನೆಯಡಿ ನೊಂದಾಯಿತ SHG ಸದಸ್ಯರಿಂದ **'ಆಸಕ್ತಿ ಅಭಿವ್ಯಕ್ತಿ'** ಯನ್ನು ಆಹ್ವಾನಿಸಿದ್ದು, Day-NULM ನಲ್ಲಿ ನೋಂದಾಯಿಸಿಕೊಂಡಿರುವ ಆಸಕ್ತ SHG ಸದಸ್ಯರು ತಮ್ಮ ಆಸಕ್ತಿಯ ಅಭಿವ್ಯಕ್ತಿಯನ್ನು www.bswml.karnataka.gov.in ವೆಬ್‌ಸೈಟ್‌ನಲ್ಲಿ ಲಭ್ಯವಿರುವ ನಿಗದಿತ ನಮೂನೆಯಲ್ಲಿ **ದಿನಾಂಕ: 02.03.2026ರ ಸಂಜೆ 5:00 ಗಂಟೆಯ** ಒಳಗಾಗಿ ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತದ ಕಛೇರಿ ವಿಳಾಸ: # 30/1, 3rd Floor, BBMP Building, Thimmaiah Road, Millers Tank Bund Area, VasanthNagar, Bengaluru- 560051 ಇಲ್ಲಿಗೆ ಸಲ್ಲಿಸುವುದು. Terms of Reference (TOR), Template for submission of TOR, Endorsement Form, ಮತ್ತಿತರೆ ವಿವರಗಳನ್ನು www.bswml.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.
ಆಸಕ್ತ SHG ಸದಸ್ಯರು 1) ಗುರುತಿನ ಪುರಾವೆ, 2) ವಿಳಾಸದ ಪುರಾವೆ, 3) ಅರ್ಹತಾ ಪಟ್ಟಿಯಲ್ಲಿ ನೊಂದಾಯಿಸಿಕೊಂಡಿರುವುದಕ್ಕೆ ದಾಖಲೆಗಳು, 4) ಶೈಕ್ಷಣಿಕ ಅರ್ಹತೆ & 5) Day-NULM ಹಿಂಬರಹ / ದೃಢೀಕರಣ ಪತ್ರದ ನಮೂನೆಯನ್ನು ಸಹ ಲಗತ್ತಿಸಬೇಕು. ಆಯ್ಕೆಯಾದ ಅಭ್ಯರ್ಥಿಗಳನ್ನು ಅವರ ಕೌಶಲ್ಯವನ್ನು ನಿರ್ಣಯಿಸಲು ವಿಷಯದ ಬಗ್ಗೆ ತಿಳುವಳಿಕೆಗಾಗಿ ಸಂದರ್ಶನಕ್ಕೆ ಕರೆಯಲಾಗುವುದು.

| ಕ್ರ.ಸಂ. | ವಿವರ | ಅರ್ಜಿ ಸಲ್ಲಿಸಲು ಅರ್ಹತೆ |
|---|---|---|
| 1. | ಸಮುದಾಯ ಸಂಚಾಲಕರು (Community Mobilizer) | (1) ಎಸ್.ಎಸ್.ಎಲ್.ಸಿ. / 10ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ಕಡ್ಡಾಯವಾಗಿ ಕನ್ನಡ ಭಾಷಾ ಜ್ಞಾನದ ಜೊತೆಗೆ ಕೆಲಸ ನಿರ್ವಹಿಸುವವರಿಗೆ ಆದ್ಯತೆ. (2) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ Day-NULM ಶಾಖೆಯಲ್ಲಿ ನೊಂದಾಯಿತ ಸ್ವ–ಸಹಾಯ ಗುಂಪಿನ ಸದಸ್ಯರಾಗಿರಬೇಕು (SHG) (3) ಅರ್ಜಿದಾರರು MS Office ಮತ್ತು MS Excel ಕಂಪ್ಯೂಟರ್ ಸಾಕ್ಷರತೆಯನ್ನು ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಹೊಂದಿರಬೇಕು. (4) ಐ.ಇ.ಸಿ. ಕ್ಷೇತ್ರದಲ್ಲಿ ಅನುಭವವಿರುವ ಅರ್ಜಿದಾರರಿಗೆ ಅಥವಾ ಕರ್ನಾಟಕದಲ್ಲಿನ ನಗರ ಸ್ಥಳೀಯ ಸಂಸ್ಥೆಗಳು ಅಥವಾ ಗ್ರಾಮ ಪಂಚಾಯತ್‌ಗಳೊಂದಿಗೆ ಸಂವಹನ ಕಾರ್ಯಗಳಲ್ಲಿ ತೊಡಗಿಸಿಕೊಂಡ ಅನುಭವ ಇರುವವರಿಗೆ ಆಧ್ಯತೆ ನೀಡಲಾಗುವುದು. (5) ಸಂಬಂಧಿಸಿದ ವಾರ್ಡ್ ವ್ಯಾಪ್ತಿಯಲ್ಲಿ ವಾಸವಿರುವ ಸ್ಥಳೀಯ ಅಭ್ಯರ್ಥಿಗಳಿಗೆ ಆಧ್ಯತೆ ನೀಡಲಾಗುವುದು. |

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–3, ಬಿಎಸ್‌ಡಬ್ಲ್ಯೂಎಂಎಲ್
ವಾಸಾಸಂಇ/ವಾ.ಪ್ರ/5833/ಎಸ್‌ಎಸ್‌ಸಿ/2025–26



ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಚಿಕ್ಕೋಡಿ
ದೂರವಾಣಿ ಸಂಖ್ಯೆ: 08338–275101. E-Mail:ee.rdws.ckd@gmail.com
ಸಂಖ್ಯೆ: ಕಾಇಂ/ಗ್ರಾಕುನೀ&ನೈ/ವಿಚಿ/ತಾಂಶಾ:ಕೆಡಬ್ಲ್ಯು4:ಟೆಂಡರ್:2025–26/2235 ದಿನಾಂಕ:18/02/2026
**ಅಲ್ಪಾವಧಿ ಟೆಂಡರ್ ಪ್ರಕಟಣೆ**
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ KW-3&4 (ಸ್ಟ್ಯಾಂಡರ್ಡ ಟೆಂಡರ್ ಡಾಕ್ಯುಮೆಂಟ್) ನಿಯಮಾನುಸಾರ ಹಾಗೂ ಕರ್ನಾಟಕ ಸಾರ್ವಜನಿಕ ಸಂಗಹಣೆ ಕಾಯ್ದೆಗಳಲ್ಲಿಯ ನಿಯಮಗಳು ಹಾಗೂ ಸರಕಾರದ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ ವಿಭಾಗ ಚಿಕ್ಕೋಡಿ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿರುವ ಸರಬರಾಜು ಯೋಜನೆ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ.
Work Indent No:- 9662/Call-2
ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ( http://kppp.karnataka.Gov.in) ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.
01)ಟೆಂಡರ ಪೂರ್ವಬಾವಿ ಸಭೆ:21–02–2026 ಕಾರ್ಯನಿರ್ವಾಹಕ ಅಭಿಯಂತರರು ಗ್ರಾ ಕು ನೀ & ನೈ ವಿಭಾಗ ಚಿಕ್ಕೋಡಿ ಕಚೇರಿಯಲ್ಲಿ. 02)ಇ–ಪ್ರೊಕ್ಯೂರಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: 26–02–2026 ಸಾಯಂಕಾಲ 17.00 ಘಂಟೆವರೆಗೆ.03)ಇ–ಪ್ರೊಕ್ಯೂರಮೆಂಟ್ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ:27–02–2026 ಸಂಯಕಾಲ 5.30 ಘಂಟೆ ನಂತರ.
ಸಹಿ/–ಕಾರ್ಯನಿರ್ವಾಹಕ ಅಭಿಯಂತರು, ಗ್ರಾ. ಕು. ನೀ. & ನೈ. ವಿಭಾಗ, ಚಿಕ್ಕೋಡಿ.
DIPR/BGM/RO-NO-1911/KSMCA/2025-26



ಕರ್ನಾಟಕ ಸರ್ಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕರ್ನಾಟಕ ಜಲಸಾರಿಗೆ ಮಂಡಳಿ
ಕಾರ್ಯನಿರ್ವಾಹಕ ಇಂಜಿನೀಯರರ ಕಚೇರಿ, ಬಂದರು ವಿಭಾಗ, ಬೈತಖೋಲ್, ಕಾರವಾರ, ಉತ್ತರ ಕನ್ನಡ ಜಿಲ್ಲೆ–581302
ದೂ: 08382-229672 ಇ–ಮೇಲ್: eepdkwr4@gmail.com/eepdk@rediffmail.com
ಸಂ:ಕಾನಿಇಂ/ಬಂವಿಕಾ/ಟೆಂಡರ್/ಹೊವಾಟೆಂ/2025–26/1051 ದಿನಾಂಕ: 19–02–2026
**ಟೆಂಡರು ಪ್ರಕಟಣೆ**
ಕಾರ್ಯನಿರ್ವಾಹಕ ಇಂಜಿನೀಯರ್, ಬಂದರು ವಿಭಾಗ ಕಾರವಾರ ಮತ್ತು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್, ಬಂದರು ಉಪ–ವಿಭಾಗ, ಹೊನ್ನಾವರರವರಿಗೆ ಕಛೇರಿಯ / ಇಲಾಖೆಯ ಅಧಿಕೃತ ಕೆಲಸ ಕಾರ್ಯಗಳಿಗೆ ಪ್ರತ್ಯೇಕವಾಗಿ ಹವಾನಿಯಂತ್ರಿತ (ಎ.ಸಿ) ಟೊಯಾಟಾ ಎಟಿಯೋಸ್/ ಮಹೀಂದ್ರಾ ಬೊಲೆರೊ/ಮಾರುತಿ ಎರ್ಟಿಗಾ/ ಮಾರುತಿ ಸ್ವಿಫ್ಟ ಡಿಜೈರ್/ ಇದೇ ಮಾದರಿಯ ಖಾಸಗಿ ವಾಹನವನ್ನು ಚಾಲಕ ಸಹಿತ ಮಾಸಿಕ ಬಾಡಿಗೆ ಆಧಾರದ ಮೇಲೆ ಪಡೆಯಲು 2023 ರಿಂದ ಮೇಲ್ಪಟ್ಟ ಮಾದರಿಯ ವಾಹನ ದರಪಟ್ಟಿಯನ್ನು EMD ಮೊತ್ತ ಕ್ರಮವಾಗಿ ರೂ. 9,300.00 ಮತ್ತು 8,200.00 ಹಾಗೂ ಅಗತ್ಯ ದಾಖಲೆಗಳೊಂದಿಗೆ ದಿನಾಂಕ: 27–02–2026 ರಂದು ಸಂಜೆ 4:30 ಗಂಟೆಯ ಒಳಗಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಬಂದರು ವಿಭಾಗ, ಕಾರವಾರರವರಿಗೆ ಮೊಹರು ಮಾಡಿದ ಲಕೋಟೆಯಲ್ಲಿ ಕಚೇರಿ ವೇಳೆಯಲ್ಲಿ ಸಲ್ಲಿಸತಕ್ಕದ್ದು. ಖಾಲಿ ಟೆಂಡರ ನಮೂನೆಗಳು, ಷರತ್ತುಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

| ಕ್ರ. ಸಂ | ಹವಾನಿಯಂತ್ರಿತ ವಾಹನಗಳಿಗೆ ದರ | ದರ ಅಂಕೆಯಲ್ಲಿ | ದರ ಅಕ್ಷರಗಳಲ್ಲಿ |
|---|---|---|---|
| ಅ) | ಮಾಸಿಕ 2500 ಕಿ.ಮೀ ಅಥವಾ 300 ಗಂಟೆಗಳು | | |
| ಆ) | 2500 ಕಿ.ಮೀ ನಂತರ ಪ್ರತಿ ಕಿ.ಮೀಗೆ | | |

Tender Fee: Rs. 500.00+ GST (For Each Form)
(1) ಟೆಂಡರು ಫಾರ್ಮಗಾಗಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 25–02–2026 ಸಂಜೆ 4.00 ಗಂಟೆವರೆಗೆ. (2) ಟೆಂಡರು ಫಾರ್ಮ ನೀಡುವ ದಿನಾಂಕ: 26–02–2026 ಸಂಜೆ 4.00 ಗಂಟೆವರೆಗೆ (3) ಭರ್ತಿ ಮಾಡಿದ ಟೆಂಡರು ಸಲ್ಲಿಸಲು ಕೊನೆಯ ದಿನಾಂಕ: 27–02–2026 ಸಂಜೆ 4.30 ಗಂಟೆವರೆಗೆ. (4) ಟೆಂಡರ್ ತೆರೆಯುವ ದಿನಾಂಕ: 27–02–2026 ಸಂಜೆ 5:00 ಗಂಟೆಗೆ.
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ಬಂದರು ವಿಭಾಗ, ಕಾರವಾರ (ಉ.ಕ)
DIPR/ADK/KSMCA/1128/25-26 Dt.20.02.2026

## ಸಮಾಚಾರ ಸಣ್ಣದಲ್ಲ

### ಬುಲೆಟ್ ಬೈಕ್‌ನಿಂದ ಬಿದ್ದು ಯುವತಿ ಸಾವು

**ಹಾಸನ:** ಬುಲೆಟ್ ಬೈಕ್ ಚಲಾಯಿಸುವಾಗ ಹಂಪ್ಸ್ ಕಾಣದೇ ಯುವತಿಯವರು ರಸ್ತೆಗೆ ಹಾರಿ ಬಿದ್ದಿದ್ದು, ಪರಿಣಾಮ ಒಬ್ಬ ಯುವತಿ ಸಾವನ್ನಪ್ಪಿರುವ ಘಟನೆ

ಹಾಸನದ ನಗರ ಕೈಗಾರಿಕಾ ಪ್ರದೇಶದಲ್ಲಿ ನಡೆದಿದೆ. ಸತ್ಯಮಂಗಲ ಬಡಾವಣೆಯ ಪ್ರಿಯಾ (23) ಮೃತ ಯುವತಿ. ಮತ್ತೊಬ್ಬ ಯುವತಿ ಸ್ವಾತಿ (24) ಸ್ಥಿತಿ ಗಂಭೀರವಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ. ಮೃತ ಪ್ರಿಯಾ ಖಾಸಗಿ ಕಾಲೇಜಿನಲ್ಲಿ ಎಂಸಿಎ ಫೈನಲ್ ಇಯರ್ ಓದುತ್ತಿದ್ದಳು, ಸ್ವಾತಿಗೆ ಕಳೆದ ನವೆಂಬರ್‌ನಲ್ಲಿ ಮದುವೆಯಾಗಿತ್ತು ಎಂದು ತಿಳಿದುಬಂದಿದೆ. ಇಬ್ಬರು ಯುವತಿಯರು ಹೆಲ್ಮೆಟ್ ಧರಿಸದೇ ಬುಲೆಟ್ ಬೈಕ್‌ನಲ್ಲಿ ಜಾಲಿ ರೈಡ್‌ಗೆ ಹೊರಟಿದ್ದರು. ಪ್ರಿಯಾ ಬೈಕ್ ಚಲಾಯಿಸುತ್ತಿದ್ದು, ಸ್ವಾತಿ ಹಿಂಬದಿ ಸೀಟ್‌ನಲ್ಲಿ ಕುಳಿತಿದ್ದಳು. ಈ ವೇಳೆ ಹಂಪ್ಸ್ ಕಾಣದೇ ಇಬ್ಬರು ರಸ್ತೆಗೆ ಹಾರಿ ಬಿದ್ದಿದ್ದಾರೆ. ಪರಿಣಾಮ ಒಬ್ಬ ಯುವತಿ ಸಾವನ್ನಪ್ಪಿದ್ದು, ಇನ್ನೊಬ್ಬಾಕೆ ಸ್ಥಿತಿ ಗಂಭೀರವಾಗಿದೆ. ಸದ್ಯ ಹೆಚ್ಚಿನ ಚಿಕಿತ್ಸೆಗಾಗಿ ಸ್ವಾತಿಯನ್ನು ಬೆಂಗಳೂರಿನ ಆಸ್ಪತ್ರೆ ರವಾನೆ ಮಾಡಲಾಗಿದೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಹಾಸನ ಗ್ರಾಮಾಂತರ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

### ಮಹದೇವಪ್ಪ ಸಿಎಂ ಆಗಲಿ, ನನಗೆ ಸಂತಸ

**ಮೈಸೂರು:** ಡಾ.ಎಚ್.ಸಿ.ಮಹದೇವಪ್ಪ ನನ್ನ ಆತ್ಮೀಯ ಸ್ನೇಹಿತ, ಅವರು ರಾಜ್ಯದ ಮುಖ್ಯ



ಮಂತ್ರಿ ಆದರೆ ಸಂತೋಷ ಎಂದು ರೇಷ್ಮೆ ಮತ್ತು ಪಶುಸಂಗೋಪನೆ ಸಚಿವ ಕೆ. ವೆಂಕಟೇಶ್ ಹೇಳಿದರು. ಇಲ್ಲಿ ಸುದ್ದಿಗಾರರಿಗೆ ಉತ್ತರಿಸಿದ ಅವರು, ಸದ್ಯ ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ, ಖಾಲಿ ಆದ ಮೇಲೆ ದಲಿತ, ಲಿಂಗಾಯತ, ಒಕ್ಕಲಿಗ, ಕುರುಬ.. ಹೀಗೆ ಯಾವುದಾದರೂ ಸಮುದಾಯದ ಒಬ್ಬರು ಮುಖ್ಯಮಂತ್ರಿ ಆಗುತ್ತಾರೆ ಎಂದರು. ಬಂಡೀಪುರ ನಾಗರಹೊಳೆ ಸಫಾರಿಯನ್ನು ರಾಜ್ಯ ಸರಕಾರ ಏಕಾಏಕಿ ಪುನರಾರಂಭ ಮಾಡಿಲ್ಲ. ತಜ್ಞರ ಸಮಿತಿ ಮಾಡಿ, ಚರ್ಚಿಸಿಯೇ ತೀರ್ಮಾನ ತೆಗೆದುಕೊಂಡಿದೆ. ರೈತರು ಪ್ರತಿಭಟನೆಗೆ ಮುಂದಾದರೆ ಏನನ್ನು ಹೇಳಲಾಗದು ಎಂದರು.

### ಆರೈಕೆ ಇಲ್ಲದೆ ರೈಲಿಗೆ ತಲೆ ಕೊಟ್ಟ ವೃದ್ಧ ದಂಪತಿ

**ಹಾಸನ:** ಆರೈಕೆ ಮಾಡುವವರು ಇಲ್ಲ ಎಂದು ಮನನೊಂದು ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕಿನ ಅರೆಹೊಸೂರಿನ ನಿವಾಸಿಗಳಾದ ಡೇವಿಡ್ (80) ಮತ್ತು ಮೇರಿ (73) ವೃದ್ಧ ದಂಪತಿ ನಗರದಲ್ಲಿ ರೈಲಿಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ದಂಪತಿಗೆ ಆಸ್ತಿ, ಮನೆ ಹಾಗೂ ಕಾಫಿ ತೋಟ ಇದ್ದರೂ ವೃದ್ಧಾಪ್ಯದಲ್ಲಿ ನೋಡಿಕೊಳ್ಳುವವರು ಇಲ್ಲದೇ ಒಂಟಿಯಾಗಿದ್ದರು. ಇಬ್ಬರು ಪುತ್ರರಿದ್ದರೂ ತಮ್ಮ ಬಗ್ಗೆ ಸೂಕ್ತ ಗಮನ ಹರಿಸುತ್ತಿಲ್ಲ ಎಂಬ ಬೇಸರ ದಂಪತಿಯನ್ನು ಕಾಡುತ್ತಿತ್ತು ಎನ್ನಲಾಗಿದೆ. ಕೆಲ ದಿನಗಳ ಹಿಂದೆ ವಿರಾಜಪೇಟೆಯ ವೃದ್ಧಾಶ್ರಮದಲ್ಲೂ ಅವರು ಉಳಿದಿದ್ದರು. ಒಬ್ಬ ಪುತ್ರ ಬೆಂಗಳೂರಿನಲ್ಲಿ ನೆಲೆಸಿದ್ದರೆ, ಮತ್ತೊಬ್ಬ ಪುತ್ರ ಊರಿನಲ್ಲೇ ವಾಸವಾಗಿದ್ದಾನೆ. ಶನಿವಾರ ರಾತ್ರಿ ನಗರದ ಕೇಂದ್ರ ಬಸ್ ನಿಲ್ದಾಣದ ಸಮೀಪ ರೈಲಿಗೆ ಸಿಲುಕಿ ದಂಪತಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹಾಸನ ರೈಲ್ವೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ರೈಲ್ವೆ ಠಾಣೆ ಪ್ರಕರಣ ದಾಖಲಾಗಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ವಿಶ್ವವಾಣಿ ಕ್ಲಬ್ ಹೌಸ್
24.02.2026
ಸಂಜೆ: 06.55 ರಿಂದ 08.05 ರವರೆಗೆ

ಮಂಗಳವಾರದ ಅತಿಥಿ
ಡಾ.ರಾಘವೇಂದ್ರ
ವಿಷಯ
ರಾಮಕೃಷ್ಣಂ ವಂದೇ ಜಗದ್ಗುರು
vishwavani.news

### ದಿನ ವಿಶೇಷ

24 ಫೆಬ್ರವರಿ 2026 ಮಂಗಳವಾರ

| | |
|---|---|
| » ಸೂರ್ಯೋದಯ | 06-41 |
| » ಸೂರ್ಯಾಸ್ತ | 06-29 |
| » ತಿಥಿ | ಸಪ್ತಮಿ |
| » ನಕ್ಷತ್ರ | ಕೃತ್ತಿಕಾ |
| » ಸಂವತ್ಸರ | ವಿಶ್ವಾವಸು |
| » ಆಯನ | ಉತ್ತರಾಯಣ |
| » ಋತು | ಶಿಶಿರ |
| » ಮಾಸ | ಫಾಲ್ಗುಣ |
| » ಪಕ್ಷ | ಶುಕ್ಲ ಪಕ್ಷ |

ಕಾಂಗ್ರೆಸ್‌ನ ಜನಪರ ಯೋಜನೆ ಕಿತ್ತುಹಾಕುತ್ತಿರುವ ಕೇಂದ್ರದ ಬಿಜೆಪಿ | ಚಿಕ್ಕಬಳ್ಳಾಪುರದಿಂದ ನರೇಗಾ ಬಚಾವ್ ಆಂದೋಲನ ಆರಂಭ

# ನರೇಗಾ ಉಳಿಸಲು ಹೋರಾಟ ಅನಿವಾರ್ಯ: ಸಿಎಂ

**ಚಿಕ್ಕಬಳ್ಳಾಪುರ:** ಗ್ರಾಮೀಣ ಜನರ ಉದ್ಯೋಗದ ಹಕ್ಕನ್ನು ಕಸಿಯುತ್ತಿರುವ ವಿಬಿಜಿರಾಮ್‌ಜಿ ಕಾಯ್ದೆಯನ್ನು ರದ್ದುಪಡಿಸಿ, ಮನರೇಗಾ ಮರುಸ್ಥಾಪಿಸುವವರೆಗೆ ದೇಶಾದ್ಯಂತ ಕಾಂಗ್ರೆಸ್ ನಡೆಸುತ್ತಿರುವ ಹೋರಾಟವನ್ನು ಬೆಂಬಲಿಸಬೇಕೆಂದು ರಾಜ್ಯದ ಜನರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ಚಿಕ್ಕಬಳ್ಳಾಪುರ ಹೊರವಲಯ ರಾಷ್ಟ್ರೀಯ ಹೆದ್ದಾರಿ 44 ಅಗಲಗುರ್ಕಿ ಸಮೀಪ ಆಯೋಜನೆ ಮಾಡಿದ್ದ ನರೇಗಾ ಬಚಾವ್ ಆಂದೋಲನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ವತಿಯಿಂದ ದೇಶಾದ್ಯಂತ ಮನರೇಗಾವನ್ನು ಉಳಿಸಿ ಅಭಿಯಾನ ಪ್ರಾರಂಭಿಸಲಾಗಿದೆ. ಇತ್ತೀಚೆಗೆ ನಡೆದ ಚಳಿಗಾಲದ ಅಧಿವೇಶನದಲ್ಲಿ ಕೇಂದ್ರ ಬಿಜೆಪಿ ಸರಕಾರ ಮನರೇಗಾವನ್ನು ರದ್ದುಪಡಿಸಿ, ವಿಬಿಜಿರಾಮ್ ಜಿ ಕಾಯ್ದೆಯನ್ನು ಜಾರಿ ಮಾಡಿದೆ.20 ವರ್ಷಗಳ ಕಾಲ ಗ್ರಾಮೀಣ ಪ್ರದೇಶದ ಬದುಕು ಸುಧಾರಣೆಗೆ ಕಾರಣವಾಗಿರುವ ಮನರೇಗಾದ ರದ್ದು ಅಗತ್ಯವಿರಲಿಲ್ಲ. ದುರುದ್ದೇಶದಿಂದ ಹೀಗೆ ಮಾಡಲಾಗಿದೆ ಎಂದರು.

ಡಾ.ಮನಮೋಹನ್ ಸಿಂಗ್ 2005 ರಲ್ಲಿ ಅವರು ಪ್ರಧಾನಿಯಾಗಿದ್ದಾಗ ಕೂಲಿಕಾರರು, ಆದಿವಾಸಿಗಳು, ಸಣ್ಣರೈತರಿಗೆ, ಮಹಿಳೆಯರಿಗೆ ಉದ್ಯೋಗದ ಅನುಕೂಲ ಕಲ್ಪಿಸುವ ದಿಸೆಯಲ್ಲಿ ಪಕ್ಷದ ನಾಯಕಿ ಸೋನಿಯಾ ಗಾಂಧಿ ಅವರ ನೇತೃತ್ವದಲ್ಲಿ ಈ ಕಾಯ್ದೆ ಜಾರಿಯಾಯಿತು. ಇದೇ ಕಾಯ್ದೆಯಲ್ಲದೇ, ಶಿಕ್ಷಣ, ಆಹಾರ, ಮಾಹಿತಿ ಹಕ್ಕು ಸೇರಿದಂತೆ ಹಲವು ಜನಪರ ಕಾಯ್ದೆಗಳನ್ನು ಕೂಡ ಜಾರಿಗೆ ತಂದಿದ್ದರು. ಆದರೆ ಈ ಎಲ್ಲ ಜನಪರ ಕಾಯ್ದೆಗಳನ್ನು ದುರ್ಬಲಗೊಳಿಸುವ ಕೆಲಸವನ್ನು ಮೋದಿಯವರ ನೇತೃತ್ವದ ಸರ್ಕಾರ ಮಾಡುತ್ತಿದೆ ಎಂದು ದೂರಿದರು.

**ಮನರೇಗಾ ಅಡಿ 12.16 ಕೋಟಿ ಜನರಿಗೆ ಉದ್ಯೋಗ**

ಸದನದಲ್ಲಿ ಕೇವಲ 8 ಗಂಟೆಗಳ ಕಾಲ ಚರ್ಚೆ ಮಾಡಿದ ಕೇಂದ್ರ ಸರಕಾರ ವಿಜಿಜಿರಾಮ್ ಜಿ ಎಂಬ ಹೊಸ ಕಾಯ್ದೆಯನ್ನು ಜಾರಿಗೆ ತಂದಿದೆ. ಇದಕ್ಕೂ ಮೊದಲು ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜಗಾರ್ ಅಜೀವಿಕ ಮಿಷನ್ ಗ್ರಾಮೀಣ ಕಾಯ್ದೆ ಅಡಿಯಲ್ಲಿ 12.16 ಕೋಟಿ ಜನರು ಕೆಲಸ ಪಡೆಯುತ್ತಿದ್ದರು. ಈ ಪೈಕಿ ಸುಮಾರು 53 % ಉದ್ಯೋಗ ಪಡೆಯುತ್ತಿದ್ದರು. ಅಲ್ಲದೇ ಪರಿಶಿಷ್ಟ ಜಾತಿಯ 17% ಮತ್ತು ಪರಿಶಿಷ್ಟ ವರ್ಗದ 11% ಜನರು ಉದ್ಯೋಗ ಪಡೆಯುತ್ತಿದ್ದರು. ಈ ಎಲ್ಲ ಜನರ ಹಕ್ಕುಗಳನ್ನು ಕಸಿದುಕೊಳ್ಳಲಾಗಿದೆ ಎಂದರು. ಸಚಿವ ಕೃಷ್ಣಬೈರೇಗೌಡ ಮಾತನಾಡಿ, ಉದ್ಯೋಗ ಖಾತ್ರಿ ನಿರ್ನಾಮಕ್ಕೆ ಕೇಂದ್ರ ಮುಂದಾಗಿದೆ. ಗ್ರಾಮ ಪಂಚಾಯಿತಿ ಉಳಿದಿವೆ ಎಂದರೆ ಮನ್ರೇಗಾ ಯೋಜನೆಯಿಂದ ಮಾತ್ರ.ಮನರೇಗಾದಿಂದಲೇ ಗ್ರಾಮ ಪಂಚಾಯಿತಿ ಸದಸ್ಯ ತಲೆಯೆತ್ತಿ ನಡೆಯುವಂತೆ ಆಗಿತ್ತು. ವಿಬಿಜಿಯಿಂದ ಈ ಪರಿಸ್ಥಿತಿ ಬದಲಾಗಲಿದೆ.ಟೆಂಡರ್ ಇಲ್ಲದೆ ಹಳ್ಳಿಗಾಡಿನಲ್ಲಿ ಜನ ಕೆಲಸ ಮಾಡುತ್ತಿದ್ದರು. ಈಗ ಯಾವುದೇ ಕೆಲಸಕ್ಕೆ ಟೆಂಡರ್ ಹಾಕಬೇಕು. ಬಡವರನ್ನು ತುಳಿಯಲು, ಹಳ್ಳಿಗಳನ್ನು ಹಾಳು ಮಾಡಲು ನರೇಗಾ ಬಂದಲಾವಣೆ ಮಾಡಿದ್ದಾರೆ.ಮನರೇಗಾ ಬಚಾವೋ ಕಾರ್ಯಕ್ರಮ ಹಳ್ಳಿಗಳ ಉಳಿವಿಗಾಗಿ ಮಾಡುತ್ತಿದ್ದೇವೆ. ಇದು ಉದ್ಯೋಗ ಮತ್ತು ಬರೀ ಕಾರ್ಮಿಕರ ಸಮಸ್ಯೆ ಅಲ್ಲ, ಎಷ್ಟು ರೈತರ ಆರ್ಥಿಕ ಶಕ್ತಿ ಮುರಿಯುತ್ತಿದ್ದಾರೆ.ಹೀಗಾಗಿ ನಾವು ನೀವು ಸೇರಿ ಮನರೇಗಾ ಉಳಿಸೋಣ ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಉಸ್ತುವಾರಿ ಸಚಿವರಾದ ಬೈರತಿ ಸುರೇಶ್, ಕೆ.ಎಚ್.ಮುನಿಯಪ್ಪ,ಡಾ. ಎಂ.ಸಿ.ಸುಧಾಕರ್, ಎನ್.ಎಸ್, ಬೋಸರಾಜು, ಸಲೀಂ ಅಹ್ಮದ್,ಎನ್,ಎಸ್.ಶಿವಶಂಕರ್‌ರೆಡ್ಡಿ, ವಿ.ಆರ್. ಸುದರ್ಶನ್, ಶಾಸಕರಾದ ಎಸ್.ಎನ್ ನಾರಾಯಣಸ್ವಾಮಿ, ರೂಪಕಲಾ ಶಶಿಧರ್, ಕೆ. ವೈ.ನಂಜೇಗೌಡ, ಕೊತ್ತೂರು ಮಂಜುನಾಥ್, ಅನಿಲ್ ಕುಮಾರ್, ಶಾಸಕ ಪ್ರದೀಪ್ ಈಶ್ವರ್ ಮಾಜಿ ಶಾಸಕರಾದ ವೆಂಕಟರಮಣಯ್ಯ, ಗೌತಮ್, ಮತ್ತಿತರರು ಇದ್ದರು.

ತಲೆ ಮೇಲೆ ಮಣ್ಣುಹೊರುವ ಮೂಲಕ ಚಿಕ್ಕಬಳ್ಳಾಪುರದಲ್ಲಿ ನಡೆದ ನರೇಗಾ ಬಚಾವೋ ಆಂದೋಲನ ಕಾರ್ಯಕ್ರಮಕ್ಕೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಎಐಸಿಸಿ ಅಧ್ಯಕ್ಷ ರಣದೀಪ್‌ಸಿಂಗ್ ಸುರ್ಜೇವಾಲಾ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ ಮಾತನಾಡಿದರು. ಶಾಸಕ ಪ್ರದೀಪ್ ಈಶ್ವರ್ ಇದ್ದರು.

### ಮನರೇಗಾ ವಾಪಸ್ ಆಗುವವರೆಗೆ ನಮ್ಮ ಹೋರಾಟ ನಿಲ್ಲದು: ಪ್ರದೀಪ್ ಈಶ್ವರ್

ಶಾಸಕ ಪ್ರದೀಪ್ ಈಶ್ವರ್ ತಮ್ಮ ಸ್ವಾಗತ ಭಾಷಣದಲ್ಲಿ ಚಿಕ್ಕಬಳ್ಳಾಪುರ ನೆಲದ ಮಹಿಮೆ ಸಾಧುಸಂತರ ಅಭಯ, ಸರ್.ಎಂ.ವಿಶ್ವೇಶ್ವರಯ್ಯ ಅವರ ಕೊಡುಗೆಯನ್ನು ಸ್ಮರಿಸುತ್ತಲೇ ಪ್ರಧಾನಿ ನರೇಂದ್ರ ಮೋದಿಯವರಿಗೆ ತಲುಪುವಂತೆ ಬಡವರ ಬದುಕಿಗೆ ಆಸರೆಯಾಗಿದ್ದ ಮನರೇಗಾ ಯೋಜನೆ ಬದಲಾವಣೆ ಬೇಡ. ವಿಬಿಜಿ ರಾಮ್‌ಜಿ ಯೋಜನೆ ವಾಪಸ್ಸು ಮಾಡುವವರೆಗೆ ಹೋರಾಟ ನಿರಂತರ ಎಂದರು.

### ಕೇಂದ್ರದ ವಿರುದ್ಧ ಕಾಂಗ್ರೆಸ್ ಕೆಂಡ

- ನರೇಗಾ ಯೋಜನೆಯು ಬಡವರ ಪಾಲಿನ ಸಂಜೀವಿನಿ
- ಬಡವರ ಬದುಕಿನ ಹಕ್ಕನ್ನು ಕಿತ್ತುಕೊಂಡ ಕೇಂದ್ರ ಸರಕಾರ
- ಕಾಯಕವೇ ಕೈಲಾಸ ತತ್ವಕ್ಕೆ ಮೋದಿಯಿಂದ ಅಪಮಾನ
- ದೆಹಲಿ ಆಡಳಿತಗಾರರ ವಿರುದ್ಧ ಹೋರಾಟ ಅನಿವಾರ್ಯ
- ಪ್ರತಿಯೊಂದು ಮನೆಯಿಂದಲೂ ನ್ಯಾಯಕ್ಕಾಗಿ ಧ್ವನಿ ಏರಲಿ
- ಹತ್ತೊಂಬತ್ತು ಸಂಸದರ ಮೌನಕ್ಕೆ ಧಿಕ್ಕಾರ
- ಕಾರ್ಮಿಕರ ಹಿತಕ್ಕಾಗಿ ಕಾಂಗ್ರೆಸ್ ಸದಾ ಸನ್ನದ್ಧ
- ರಾಜ್ಯದ ಹಿತರಕ್ಷಣೆ ಕಾಪಾಡುವಲ್ಲಿ ಬಿಜೆಪಿ ವಿಫಲ
- ಬಡವರ ಹಕ್ಕುಗಳಿಗೆ ಕತ್ತರಿಯನ್ನು ಕಾಂಗ್ರೆಸ್ ಸಹಿಸುವುದಿಲ್ಲ.

### ಬೇಡಿಕೆ ಈಡೇರಿಕೆಗೆ ಹೋರಾಟ

ವಿಬಿಜಿರಾಮ್ ಜಿ ಯೋಜನೆಯನ್ನು ಸಂಪೂರ್ಣವಾಗಿ ರದ್ದುಪಡಿಸಿ, ಮನರೇಗಾವನ್ನು ಮರು ಜಾರಿಗೊಳಿಸಬೇಕು. ಜನರ ಉದ್ಯೋಗದ ಹಕ್ಕನ್ನು ಮರುಸ್ಥಾಪಿಸಬೇಕು. ಪಂಚಾಯತ್ ಸ್ವಯಂ ಆಡಳಿತದ ಹಕ್ಕು ಮರುಸ್ಥಾಪನೆ, ದಿನಕ್ಕೆ 400 ರೂ.ಗಳ ಕನಿಷ್ಠ ವೇತನವನ್ನು ದೇಶಾದ್ಯಂತ ನೀಡಬೇಕು ಎಂಬ ಈ ಬೇಡಿಕೆಗಳು ಈಡೇರುವವರೆಗೆ ನಮ್ಮ ಆಂದೋಲನ ನಿಲ್ಲುವುದಿಲ್ಲ, ರೈತವಿರೋಧಿ ಕಾಯ್ದೆಗಳನ್ನು ಹೋರಾಟದ ಫಲವಾಗಿ ರದ್ದುಗೊಳಿಸಲಾಯಿತು. ಅದೇ ರೀತಿಯಲ್ಲಿ ಈ ಹೋರಾಟ ನಿಲ್ಲುವುದಿಲ್ಲ. ಈ ಹೋರಾಟಕ್ಕೆ ರಾಜ್ಯದ ಜನರೆಲ್ಲರೂ ನಮ್ಮ ಜೊತೆಯಾಗಬೇಕು. ಹಳ್ಳಿಗಾಡಿನ ಜನರಿಗೆ ಅನುಕೂಲ ಕಲ್ಪಿಸುವ ಮನರೇಗಾ ಯೋಜನೆಯ ಮರುಸ್ಥಾಪಿಸುವ ಕಾಂಗ್ರೆಸ್ ನ ಸಾರ್ಥಕ ಉದ್ದೇಶಕ್ಕೆ ಜನರು ಬೆಂಬಲಿಸಬೇಕು ಎಂದು ಸಿಎಂ ಸಿದ್ದರಾಮಯ್ಯ ಮನವಿ ಮಾಡಿದರು.




### ಮನರೇಗಾ ಹೋರಾಟಕ್ಕೆ ಕೈ ಜೋಡಿಸಿ: ಡಿಕೆಶಿ

ಕಾಂಗ್ರೆಸ್ ಶಕ್ತಿಯೇ ದೇಶದ ಶಕ್ತಿ. 20 ವರ್ಷಗಳ ಕಾಲ ದುಡಿಯುವ ಕೈಗಳಿಗೆ ಉದ್ಯೋಗ, ಹಸಿದ ಹೊಟ್ಟೆಗೆ ಅನ್ನ ನೀಡಿದ್ದು ಮನರೇಗಾ. 5900 ಗ್ರಾಮ ಪಂಚಾಯಿತಿಗಳ ಸಬಲತೆಗೆ ಕಾರಣವಾಗಿದೆ. ದೇಶದಲ್ಲಿ ಉದ್ಯೋಗ ಸೃಷ್ಟಿಯ ಶಕ್ತಿಯಾಗಿ ನರೇಗಾ ಕೆಲಸ ಮಾಡುತ್ತಿತ್ತು. ಹೀಗಾಗಿ ಕಾಂಗ್ರೆಸ್ ನರೇಗಾ ಉಳಿಸಿ, ದೇಶ ಉಳಿಸಿ ಅಭಿಯಾನವನ್ನು ಕೈಗೊಂಡಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ರಥ ಕಾರ್ಮಿಕರಿರುವ ಹಳ್ಳಿಗಳನ್ನು ಉಳಿಸಿ ಆ ಮೂಲಕ ಮಹಾತ್ಮ ಗಾಂಧೀಜಿ ಹೆಸರು ಉಳಿಸಿ ಎಂದು ನಮ್ಮ ಪಕ್ಷ ಹೋರಾಟ ಪ್ರಾರಂಭಿಸಿದೆ. ಇದಕ್ಕೆ ರಾಜ್ಯದ ಜನತೆ ಕೈಜೋಡಿಸಬೇಕಿದೆ ಎಂದ ಅವರು ಬಿಜೆಪಿ ದೇಶದಿಂದ ನಿರ್ಮೂಲನೆ ಆಗುವ ಸಂದರ್ಭದಲ್ಲಿ ವಿಬಿಜಿ ರಾಮ್ ಜಿ ಬಂದಿದೆ. ಮಹಾತ್ಮಾಗಾಂಧೀಜಿ ಹೆಸರು ಚಿರಸ್ಥಾಯಿಯಾಗಿಸಲು ರಾಜ್ಯದ ಪ್ರತಿ ಗ್ರಾಪಂ ಹೆಸರಿನ ಮೊದಲು ಗಾಂಧೀಜಿ ಹೆಸರನ್ನು ಸೇರಿಸಲು ಸೂಚನೆ ನೀಡಲಾಗಿದೆ ಎಂದರು. ಹೊಟ್ಟೆಪಾಡಿಗಾಗಿ ಮಾತ್ರವಲ್ಲ, ಇದ್ದ ಊರಿನಲ್ಲಿಯೇ ಬದುಕು ಕಟ್ಟಿಕೊಳ್ಳಲು ಉದ್ಯೋಗ ಬೇಕು.ಮನರೇಗಾ ಇದಕ್ಕೆಲ್ಲಾ ಆಶ್ರಯವಾಗಿತ್ತು. ಮನರೇಗಾ ಉಳಿಸಲು ಹೋರಾಟಕ್ಕೆ ಬನ್ನಿ ಎಂದು ಕರೆ ನೀಡಿದರು.

> ಕೇಂದ್ರ ಸರಕಾರದಿಂದ ಕನ್ನಡಿಗರ ಮೇಲೆ ನಿರಂತರವಾಗಿ ಅನ್ಯಾಯ ನಡೆಯುತ್ತಿದೆ. ಕರ್ನಾಟಕ ಸರಕಾರ ಇದನ್ನು ಎಂದಿಗೂ ಸಹಿಸುವುದಿಲ್ಲ.ವಿಬಿಜಿರಾಮ್‌ಜಿ ಪ್ರಕಾರ ಕೇಂದ್ರದ ಅನುದಾನ 40 ರಾಜ್ಯದ ಅನುದಾನ ಶೇ.60ರಷ್ಟಿದೆ.ಈ 60 ಪರ್ಸೆಂಟ್ ಕೊಡಲು ಬಿಜೆಪಿ ಇರುವ ರಾಜ್ಯಗಳಲ್ಲಿಯೇ ಜಾರಿ ಮಾಡಲು ಹಿಂದೇಟು ಹಾಕುತ್ತಿದ್ದಾರೆ. ಆಂಧ್ರ ಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಕೂಡ ಇದನ್ನು ಒಪ್ಪಿಲ್ಲ.
>
> -ಡಿ.ಕೆ.ಶಿವಕುಮಾರ್, ಡಿಸಿಎಂ

ವಿಜಿರಾಮ್ ಜಿ ವಿರುದ್ಧ ಚಿಕ್ಕಬಳ್ಳಾಪುರದಲ್ಲಿ ಡಿಸಿಎಂ ಡಿಕೆಶಿ ಬೈಕ್ ರ್‍ಯಾಲಿ ನಡೆಸಿದರು.

### ನರೇಗಾ ಕೇವಲ ಉದ್ಯೋಗವಲ್ಲ, ಬಡವರ ಬದುಕಿನ ಹಕ್ಕು

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಎಂಬುದು ಕೇವಲ 11 ಕೋಟಿ ಕಾರ್ಮಿಕರಿಗೆ ನೀಡಲಾದ

ಉದ್ಯೋಗದ ಭರವಸೆಯಲ್ಲ, ಬದಲಾಗಿ, ಈ ದೇಶದ ಅಭಿವೃದ್ಧಿ ಮತ್ತು ಪ್ರಗತಿಯಲ್ಲಿ ಬಡವರು, ವಂಚಿತರು ಹಾಗೂ ಶೋಷಿತರಿಗೂ ಸಮಾನ ಪಾಲಿದೆ ಎಂದು ಸರಕಾರ ನೀಡಿದ್ದ ಪವಿತ್ರ ಪ್ರಮಾಣವಾಗಿತ್ತು ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಕೇಂದ್ರ ಸರಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ಚಿಕ್ಕಬಳ್ಳಾಪುರದಲ್ಲಿ ಆಯೋಜಿಸಲಾಗಿದ್ದ ಮನರೇಗಾ ಉಳಿಸಿ, ಕಾರ್ಮಿಕರನ್ನು ಉಳಿಸಿ ಬೃಹತ್ ಆಂದೋಲನವನ್ನು ಉದ್ದೇಶಿಸಿ ಮಾತನಾಡಿದ ಅವರು, ಮನರೇಗಾ ಯೋಜನೆಯನ್ನು ಬದಲಾಯಿಸುವ ಮೂಲಕ ಮೋದಿ ಸರಕಾರ ಬಡವರ ಹೊಟ್ಟೆ ಮೇಲೆ ಹೊಡೆದಿದೆ ಎಂದು ಆಕ್ರೋಶ ಹೊರಹಾಕಿದರು. ಭಾರತದ ಬೆಳವಣಿಗೆಯ ಪಯಣದಲ್ಲಿ ಪ್ರತಿಯೊಬ್ಬ ಕಾರ್ಮಿಕನೂ ಸಮಾನ ಪಾಲುದಾರ ಎಂಬ ನಂಬಿಕೆಯನ್ನು ಕಾಂಗ್ರೆಸ್ ಬಿತ್ತಿತ್ತು. ಆದರೆ, ಮೋದಿ ಸರಕಾರ ಈ ಯೋಜನೆಯನ್ನು ಹಂತಹಂತವಾಗಿ ರದ್ದುಗೊಳಿಸುವ ಮೂಲಕ ಭಾರತದ 7.5 ಲಕ್ಷ ಹಳ್ಳಿಗಳ ಕೋಟ್ಯಂತರ ಬಡವರ ಜೀವನ ಮತ್ತು ಜೀವನೋಪಾಯದ ಮೇಲೆ ನೇರ ದಾಳಿ ನಡೆಸಿದೆ. ನಮಗೆ ಕಾಯಕವೇ ಕೈಲಾಸ ಎಂಬುದು ಕೇವಲ ಘೋಷಣೆಯಲ್ಲ, ಅದು ನಮ್ಮ ದಾರಿದೀಪ. ಶ್ರಮಿಕರ ಬೆವರಿನ ಹನಿಗೆ ಬೆಲೆ ಕೊಡದ ಸರಕಾರವು ಬಡವರ ವಿರೋಧಿಯಾಗಿದೆ ಎಂದು ಕಿಡಿಕಾರಿದರು.

**ದೆಹಲಿ ಆಡಳಿತಗಾರರ ವಿರುದ್ಧ ನಿರ್ಣಾಯಕ ಸಮರ:** ಕೇಂದ್ರದ ದಬ್ಬಾಳಿಕೆಗೆ ಉತ್ತರ ನೀಡುವ ಕಾಲ ಬಂದಿದೆ ಎಂದು ಕರೆ ನೀಡಿದ ಸುರ್ಜೇವಾಲ, ಈಗ ದೆಹಲಿಯಲ್ಲಿ ಕುಳಿತಿರುವ ಆಡಳಿತಗಾರರ ವಿರುದ್ಧ ನಿರ್ಣಾಯಕ ಯುದ್ಧವೊಂದೇ ಏಕೈಕ ಉತ್ತರವಾಗಿದೆ. ನ್ಯಾಯಕ್ಕಾಗಿ ನಾವು ಎತ್ತಿರುವ ಈ ಧ್ವನಿಯು ಪ್ರತಿಯೊಂದು ಹಳ್ಳಿಯ ಪ್ರತಿಯೊಂದು ಮನೆಯಿಂದಲೂ ಮೊಳಗಬೇಕು. ದುಡಿಯುವ ಜನತೆಯ ಹಕ್ಕುಗಳನ್ನು ಹತ್ತಿಕ್ಕಲು ಸಾಧ್ಯವಿಲ್ಲ ಎಂಬ ಸಂದೇಶಕ್ಕೆ ಪ್ರತಿಯೊಬ್ಬರು ಪ್ರತಿಧ್ವನಿಸಬೇಕು ಎಂದು ಕಿಡಿಕಾರಿದರು.

> ಕರ್ನಾಟಕದ ಹಿತರಕ್ಷಣೆಯನ್ನು ಕಾಪಾಡುವಲ್ಲಿ ರಾಜ್ಯ ಬಿಜೆಪಿ ಸಂಸದರು ವಿಫಲರಾಗಿದ್ದಾರೆ. ಯೋಜನೆಯ ಅನುದಾನ ಕಡಿತವಾಗುತ್ತಿದ್ದರೂ ಮೌನಕ್ಕೆ ಶರಣಾಗಿರುವ 19 ಸಂಸದರಿಗೆ ನಮ್ಮ ಧಿಕ್ಕಾರ ಎಂದು ಘೋಷಣೆ ಕೂಗಿದರು. ರಾಜ್ಯದಲ್ಲಿ ನಡೆಯುತ್ತಿರುವ ವ್ಯವಸ್ಥಿತ ಲೂಟಿ ಮತ್ತು ಬಡವರ ಹಕ್ಕುಗಳ ಕಸಿದುಕೊಳ್ಳುವಿಕೆಯನ್ನು ಕಾಂಗ್ರೆಸ್ ಸಹಿಸುವುದಿಲ್ಲ.
>
> -ರಣದೀಪ್ ಸಿಂಗ್ ಸುರ್ಜೇವಾಲಾ, ಎಐಸಿಸಿ ಪ್ರಧಾನ ಕಾರ್ಯದರ್ಶಿ

### ದಲಿತ ನಾಯಕರೇ ಸಿಎಂ ಆಗಲಿ

**ಮಡಿಕೇರಿ:** ರಾಜ್ಯದಲ್ಲಿ ಮುಂದೆ ದಲಿತ ನಾಯಕರೇ ಸಿಎಂ ಆಗಬೇಕು ಎಂದು ಸಚಿವ ಎಚ್.ಸಿ.ಮಹದೇವಪ್ಪ ಹೈಕಮಾಂಡ್‌ಗೆ ಒತ್ತಾಯಿಸಿದ್ದಾರೆ.

ಮಡಿಕೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದಲಿತ ಸಿಎಂ ಕೂಗು ಇನ್ನೂ ಮುಟ್ಟಿಲ್ಲ. ಸಿದ್ದರಾಮಯ್ಯ ಅವರು ಇನ್ನೂ ಅಧಿಕಾರದಲ್ಲಿ ಇರುವುದರಿಂದ ಮುಂದೆ ರಾಜ್ಯದಲ್ಲಿ ದಲಿತ ಸಿಎಂ ಆಗಬೇಕು. ಸಿದ್ದರಾಮಯ್ಯನವರು ಹೈಕಮಾಂಡ್ ಹಾದಿಯಾಗಿ ಸೂಕ್ತ ದಲಿತ ಅಭ್ಯರ್ಥಿಯನ್ನು ಆಯ್ಕೆ ಮಾಡಿ ಮುಖ್ಯಮಂತ್ರಿ ಸ್ಥಾನದಲ್ಲಿ ಕೂರಿಸಬೇಕು ಎಂದು ಮನವಿ ಮಾಡಿದ್ದಾರೆ.

ದಲಿತ ನಾಯಕರ ಆಯ್ಕೆಯಲ್ಲಿ ಯಾವುದೇ ಗೊಂದಲಗಳು ಇರಬಾರದು. ಏಕೆಂದರೆ ದಲಿತರು ರಾಜ್ಯದಲ್ಲಿ ಗಣನೀಯ ಪ್ರಮಾಣದಲ್ಲಿ ಇದ್ದಾರೆ. ಸದಾ ಕಾಂಗ್ರೆಸ್ ನೊಂದಿಗೆ ಬೆನ್ನೆಲುಬಾಗಿ ನಿಂತಿದ್ದಾರೆ. ಕಾಂಗ್ರೆಸ್‌ನ ಬೆನ್ನೆಲುಬು ಕಳೆದುಕೊಂಡು ಪಕ್ಷ ಬಲವಾಗಿ ಇರಲು ಸಾಧ್ಯವಿಲ್ಲ. ಹೀಗಾಗಿ ಬೆನ್ನೆಲುಬು ಬಲ ಪಡಿಸಬೇಕು ಎಂದರೆ ದಲಿತ ನಾಯಕರು ಸಿಎಂ ಆಗಬೇಕೆಂಬ ತೀರ್ಮಾನ ಆಗಬೇಕು. ಹೈಕಮಾಂಡ್ ಕೂಡ ಇದನ್ನು ಗಮನದಲ್ಲಿಟ್ಟುಕೊಂಡಿದೆ ಎಂದು ಹೇಳಿದ್ದಾರೆ. ಇನ್ನೂ ಡಿ.ಕೆ.ಶಿವಕುಮಾರ್ ಅವರು ಹೈಕಮಾಂಡ್ ತನಗೆ ಸರಿಯಾದ ರೀತಿಯಲ್ಲಿ ತನ್ನ ಶ್ರಮಕ್ಕೆ ಸ್ಥಾನಮಾನ ಕೊಡುತ್ತಾರೆ ಎಂಬ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯಿಸಿ, ಪ್ರತಿಯೊಬ್ಬರಲ್ಲೂ ಆಸೆ ಆಕಾಂಕ್ಷೆಗಳು ಇರುತ್ತವೆ. ಅದಕ್ಕೆ ತಪ್ಪು ಎಂದು ಹೇಳಲು ಆಗೋಲ್ಲ ಎಂದರು.

### ಡಿಕೆಶಿ ಏನೇ ಹೇಳಿದರೂ ಸ್ವೀಕರಿಸುವೆ

**ರಾಮನಗರ:** ಕೆಲವು ಸಚಿವರು ಶಾಸಕರ ಭೇಟಿಗೂ ಸಿಗುತ್ತಿಲ್ಲ. ಕೆಲಸಕಾರ್ಯಗಳಿಗೂ ಸ್ಪಂದಿಸುತ್ತಿಲ್ಲ. ಸಚಿವರ ಈ ನಡೆ ಬಗ್ಗೆ ಮುಖ್ಯ

ಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಡಿಸಿಎಂ ಡಿ.ಕೆ. ಶಿವಕುಮಾರ್ ಗಮನಕ್ಕೆ ತಂದಿದ್ದೇವೆ. ನಾಯಕತ್ವ ಬದಲಾವಣೆ ಜತೆಗೆ ಸ್ಪಂದಿಸದ ಸಚಿವರ ಬದಲಾವಣೆಯ ಅಗತ್ಯವಿದೆ ಎಂದು ಡಿಸಿಎಂ ಆಪ್ತ ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಒತ್ತಾಯಿಸಿದರು.

ಸಂಪುಟ ಪುನರ್ ರಚನೆಗಾಗಿ ಪಕ್ಷದ ಹೈಕಮಾಂಡ್‌ಗೆ ತಾವು ಸೇರಿದಂತೆ ಕೆಲ ಶಾಸಕರು ಪತ್ರ ಬರೆದಿರುವ ಕುರಿತು ನಗರದಲ್ಲಿ ಸೋಮವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ಸರಿಯಾಗಿ ಕೆಲಸ ಮಾಡದ ಸಚಿವರ ಮೇಲೆ ನನಗೆ ಅಸಮಾಧಾನವಿದೆ. ಅವರ ಹೆಸರನ್ನು ನಾನು ಹೇಳಲಿಚ್ಚಿಸುವುದಿಲ್ಲ. ನಾನು ಶಾಸಕನಾಗಿದ್ದರೂ ಸಚಿವರಿಗಿಂತ ಉತ್ತಮ ಕೆಲಸ ಮಾಡುತ್ತಿದ್ದೇನೆ ಎಂದರು. ಚುನಾವಣೆಗಳು ಸಮೀಪಿಸುತ್ತಿರುವುದರಿಂದ ಒಳ್ಳೆಯ ಆಡಳಿತಬೇಕು. ಅದಕ್ಕಾಗಿ, ಕೆಲವರನ್ನು ಬದಲಾಯಿಸಿ ಎಂದು ಎರಡ್ಮೂರು ಸಭೆಯಲ್ಲಿ ಒತ್ತಾಯಿಸಿದ್ದೇವೆ. ಆರು ತಿಂಗಳಿಂದ ಈ ಪ್ರಕ್ರಿಯೆ ನಡೆಯುತ್ತಲೇ ಇದೆ ಎಂದು ತಿಳಿಸಿದರು. ನಮ್ಮ ನಾಯಕರಾದ ಡಿ.ಕೆ. ಶಿವಕುಮಾರ್ ಅವರು ಪಕ್ಷಕ್ಕಾಗಿ ಬಹಳ ದುಡಿದಿದ್ದಾರೆ. ಅವರಿಗೆ ಮುಖ್ಯಮಂತ್ರಿಯಾಗಲು ಒಂದು ಅವಕಾಶ ಕೊಡಿ ಎಂಬುದದಷ್ಟೇ ನಮ್ಮ ಬೇಡಿಕೆ. ಬೇರೆ ವಿಚಾರದ ಬಗ್ಗೆ ನನಗೆ ಗೊತ್ತಿಲ್ಲ ಎಂದರು.

### ನಕಲಿ ಸಿಗರೇಟು ಹಾವಳಿ ತಡೆಗೆ ಗ್ರಾಹಕರು ಆಗ್ರಹ

**ಚಿಕ್ಕಬಳ್ಳಾಪುರ:** ಜಿಲ್ಲೆಯ ಬಾಗೇಪಲ್ಲಿ ಪಟ್ಟಣ, ಗ್ರಾಮಗಳ ಚಿಲ್ಲರೆ, ದಿನಸಿ, ಕಾಫಿ, ಟೀ ಮಾರಾಟ ಅಂಗಡಿಗಳಲ್ಲಿ, ಕಳೆದ 3 ತಿಂಗಳಿಂದ ರಾಜಾರೋಷವಾಗಿ ನಕಲಿ ಸಿಗರೇಟು ಹಾವಳಿ ಹೆಚ್ಚಾಗಿದೆ ಎಂದು ಗ್ರಾಹಕರ ಆರೋಪಿಸಿದ್ದಾರೆ. ಸಿಗರೇಟುಗಳ ಬೆಲೆ ಹೆಚ್ಚಾಗಿರುವುದರಿಂದ ಬೇಡಿಕೆ ಹೆಚ್ಚಾಗಿದೆ ಎಂದು ಚಿಲ್ಲರೆ ವ್ಯಾಪಾರಿಗಳಿಗೆ ದುಪ್ಪಟ್ಟು ಬೆಲೆಗೆ ಮಾರಾಟ ಮಾಡುತ್ತಾರೆ. ಚಿಲ್ಲರೆ ಅಂಗಡಿಗಳಲ್ಲಿ ಸಿಗರೇಟಿನ ಮಾರಾಟ ಬೆಲೆ ಹೆಚ್ಚಾಗಿದೆ ಎಂದು ಗ್ರಾಹಕರಿಂದ ದುಪ್ಪಟ್ಟು ಬೆಲೆ ವಸೂಲಿ ಮಾಡಲಾಗುತ್ತಿದೆ. ಈ ಹಿಂದೆ ದೊಡ್ಡ ಗಾತ್ರದ ಸಿಗರೇಟಿನ ಬೆಲೆ 15 ರು. ಇತ್ತು. ನಂತರ 18 ರು.ಆಗಿದೆ. ಚಿಲ್ಲರೆ ಅಂಗಡಿಯವರು 2 ರು.ಹೆಚ್ಚು ಬೆಲೆ ಪಡೆಯುತ್ತಾರೆ. ಇದೀಗ ಅಂಗಡಿಗಳಲ್ಲಿ 25 ರು.ವರೆಗೆ ಗ್ರಾಹಕರಿಂದ ವಸೂಲಿ ಮಾಡಲಾಗುತ್ತಿದೆ. ಕೆಲ ಅಂಗಡಿಗಳಲ್ಲಿ ಅಸಲಿ ಸಿಗರೇಟು ಸಿಗುತ್ತಿಲ್ಲ. ನಕಲಿ ಸಿಗರೇಟುಗಳ ಮಾರಾಟದ ಜಾಲವನ್ನು ಸಂಬಂಧಪಟ್ಟ ಆರೋಗ್ಯ, ಪೊಲೀಸ್, ಪುರಸಭೆ ಅಧಿಕಾರಿಗಳು ಜಂಟಿ ಕಾರ್ಯಾಚರಣೆ ಮಾಡಿ ಕಾನೂನು ಕ್ರಮ ಜರುಗಿಸಬೇಕು ಎಂದು ಗ್ರಾಹಕರು ಮನವಿ ಮಾಡಿದ್ದಾರೆ.

### ದಲಿತ ಸಿಎಂ ಆಗುವುದನ್ನು ತಪ್ಪಿಸಿದ್ದು ಸಿದ್ದರಾಮಯ್ಯ

**ರಾಯಚೂರು:** ದಲಿತರು ಮುಖ್ಯಮಂತ್ರಿ ಆಗುವುದನ್ನು ತಪ್ಪಿಸಿದವರೇ ಸಿದ್ದರಾಮಯ್ಯ. ಕಾಂಗ್ರೆಸ್‌ನಲ್ಲಿರುವ ಮಲ್ಲಿಕಾರ್ಜುನ ಖರ್ಗೆ ಹಾಗೂ ಪರಮೇಶ್ವರ ಅವರು ಯಾವತ್ತೋ ಮುಖ್ಯಮಂತ್ರಿ ಆಗಬೇಕಿತ್ತು. ಅವರನ್ನು ಇಲ್ಲಿಂದ ಖಾಲಿ ಮಾಡಿಸಿ ಒಳಗಡೆ ಹುತ್ತಿನಲ್ಲಿ ಸೇರಿಕೊಂಡಿದ್ದಾರೆ ಎಂದು

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದರು.

ಪಾಪ ಮಲ್ಲಿಕಾರ್ಜುನ ಖರ್ಗೆ ಅವರನ್ನು ದೆಹಲಿಗೆ ಓಡಿಸಿ, ಪರಮೇಶ್ವರ ಅಧ್ಯಕ್ಷರಿದ್ದರೂ ಅವರನ್ನು ಸೋಲಿಸಿ ಮನೆಗೆ ಕಳುಹಿಸಿ ಸಿದ್ದರಾಮಯ್ಯ ಸಿಎಂ ಆದರು. ದಲಿತರು ಮುಖ್ಯಮಂತ್ರಿ ಆಗುವುದಿದ್ದರೆ ಯಾವುತ್ತೋ ಆಗುತ್ತಿತ್ತು. 75 ವರ್ಷ ಆದರೂ ಏಕೆ ಆಗಲಿಲ್ಲ ಎಂದು ಪ್ರಶ್ನಿಸಿದರು. ನಾನು ಕೇಂದ್ರದಲ್ಲಿ ಕೈಗಾರಿಕೆ ಸಚಿವನಾಗಿರುವ ಕಾರಣ ಗೃಹ ಸಚಿವ ಪರಮೇಶ್ವರ ಅವರು ವೈಯಕ್ತಿಕ ಕೆಲಸಕ್ಕೆ ಭೇಟಿ ಮಾಡಿದ್ದಾರೆ. ಅದನ್ನು ಬಿಟ್ಟು ಯಾವುದೇ ರಾಜಕೀಯ ಚರ್ಚೆ ಆಗಿಲ್ಲ ಎಂದು ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

**ಚೂರಿ ಹಾಕಿಲ್ಲ:** ನಾವು ಯಾರ ಬೆನ್ನಿಗೂ ಚೂರಿ ಹಾಕಿಲ್ಲ. ಯಾವಾಗ ದೇವೇಗೌಡರ ಬೆನ್ನಿಗೆ ಚೂರಿ ಹಾಕೋಕೇ ಹೋದ್ರೋ, ಆಗ ಸಿದ್ದರಾಮಯ್ಯ ಮನೆಗೆ ಹೋದರು. ಸಿಎಂ ಸಿದ್ದರಾಮಯ್ಯ ಅವರು ಇವತ್ತು ಮಾನಸಿಕ ಅಸಮತೋಲನಕ್ಕೆ ಒಳಗಾಗಿದ್ದಾರೆ ಎಂದು ಟೀಕಿಸಿದರು. ನಾನು ಸಿಎಂ ಇದ್ದಾಗ ಖರ್ಚಿ ಉಳಿಸಿಕೊಳ್ಳೋಕೆ ಒಕ್ಕಲಿಗರಿಗೆ ದಂಗೆ ಏಳಿ ಅಂದಿದ್ನಾ? ನಾನು ಸಮಾಜದ ಹೆಸರಿನಲ್ಲಿ, ಜಾತಿ ಹೆಸರಿನಲ್ಲಿ ರಕ್ಷಣೆ ಕೇಳಿಲ್ಲ ಎಂದರು. ನಾನು ಕುರುಬ ಸಮುದಾಯದಲ್ಲಿ ಕುರಿ ಕಾಯುತ್ತಿರುವವನು, ನನ್ನ ಬೆಳವಣಿಗೆ ಸಹಿಸಲಾಗದೇ ಷಡ್ಯಂತ್ರ ಮಾಡ್ತಿದ್ದಾರೆಂದು ಸಿದ್ದರಾಮಯ್ಯ ಹೇಳುತ್ತಾರೆ. ಆದರೆ, ಇದೇ ಕುರಿ ಕಾಯೋವವನನ್ನು ಜಾತ್ಯತೀತ ದಳ ಎರಡು ಬಾರಿ ಡಿಸಿಎಂ ಹಾಗೂ ಹಣಕಾಸು ಸಚಿವರನ್ನಾಗಿ ಮಾಡಿತು ಎಂದರು.

25ಕೋಟಿ ರು.ಮೀಸಲಿಡುವಂತೆ ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ ಆಗ್ರಹ

## ಬಜೆಟ್‌ನಲ್ಲಿ ಪುಸ್ತಕ ಖರೀದಿಗೆ ₹25 ಕೋಟಿ ಮೀಸಲಿಡಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕನ್ನಡ ಪುಸ್ತಕ ಲೇಖಕರಿಗೆ, ಪ್ರಕಾಶಕರಿಗೆ ಪ್ರೋತ್ಸಾಹದಾಯಕ ಯೋಜನೆ ಹಾಗೂ ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿನ ಏಕಗವಾಕ್ಷಿ ಸಗಟು ಪುಸ್ತಕ ಖರೀದಿ ಯೋಜನೆಗೆ ಈ ಬಾರಿ ಬಜೆಟ್‌ನಲ್ಲಿ 25ಕೋಟಿ ರು. ಮೀಸಲಿಡುವಂತೆ ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ ಆಗ್ರಹಿಸಿದೆ.

ಸರಕಾರ 2006ರಿಂದ ಅನುಷ್ಠಾನಕ್ಕೆ ತಂದು, ಸರಕಾರದ ಉನ್ನತ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಪುಸ್ತಕಗಳ 300 ಪ್ರತಿಗಳನ್ನು ಖರೀದಿಸಿ ಆರ್ಥಿಕವಾಗಿ ಹಿಂದುಳಿದ ಜಿಲ್ಲಾ / ನಗರ ಕೇಂದ್ರ ಗ್ರಂಥಾಲಯಗಳಿಗೆ ವಿತರಿಸುವ ಯೋಜನೆ ಜಾರಿಗೆ ತಂದರು. ಈ ಯೋಜನೆಗೆ ಕ್ರಮಬದ್ಧವಾಗಿ ಅನುದಾನ ನೀಡದೆ ಪುಸ್ತಕಗಳನ್ನು 2 ವರ್ಷಗಳಿಂದ ಖರೀದಿಸದೆ ನನೆಗುದಿಗೆ ಬಿದ್ದಿದೆ. ಲೇಖಕ, ಪ್ರಕಾಶಕರು ಜ್ಞಾನ ಹಂಚುವ ಕಾಯಕದಲ್ಲಿ ತೊಡಗಿಸಿಕೊಂಡು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ.

ತಮಿಳುನಾಡಿನಲ್ಲಿ 500 ಪ್ರತಿ, ಕೇರಳ ರಾಜ್ಯದಲ್ಲಿ 1000 ಪ್ರತಿ ಖರೀದಿಸಿ, ಸರಕಾರವೇ ಪುಸ್ತಕ ಪ್ರದರ್ಶನ ಏರ್ಪಡಿಸುವ ಮೂಲಕ ಪುಸ್ತಕೋದ್ಯಮಕ್ಕೆ ಪ್ರೋತ್ಸಾಹ ನೀಡುತ್ತಿದ್ದಾರೆ. ಪ್ರತಿ ವರ್ಷದ ಆಯವ್ಯಯದಲ್ಲಿ ವಿಶೇಷ ಅನುದಾನವೆಂದು ಪರಿಗಣಿಸಿ 25 ಕೋಟಿ ರು. ಸಾರ್ವಜನಿಕ ಗ್ರಂಥಾಲಯ ಸಗಟು ಕನ್ನಡ ಪುಸ್ತಕ ಖರೀದಿ ಯೋಜನೆ ಮುಂದುವರಿದು ಉತ್ತಮ ಗುಣಮಟ್ಟದ ಪುಸ್ತಕ ಓದುಗರಿಗೆ ನೀಡುವ ಮೂಲಕ ಪುಸ್ತಕ ಸಂಸ್ಕೃತಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ. ಈ ಹಿಂದೆ 2023-24ನೇ ಸಾಲಿನ ಆಯವ್ಯಯದಲ್ಲಿ 10 ಕೋಟಿ ರು. ಘೋಷಿಸಲಾಗಿತ್ತು.

ಕನ್ನಡ ಭಾಷಾ ಪುಸ್ತಕಗಳನ್ನು 2022ನೇ ಸಾಲಿನಿಂದಲೂ ಖರೀದಿಸದೆ, ಖರೀದಿಸಿರುವ ಪುಸ್ತಕಗಳಿಗೆ ಹಣ ಪಾವತಿಸದೆ, ಕನ್ನಡ ಲೇಖಕ, ಪ್ರಕಾಶಕರನ್ನು ಆರ್ಥಿಕ ಸಂಕಷ್ಟಕ್ಕೆ ದೂಡಿದ್ದಾರೆ. ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ ಅಗತ್ಯವಾದ ಹೊಸ ಪುಸ್ತಕಗಳನ್ನು ಖರೀದಿಸಲು ಸರಕಾರದ 2005ರ ಆದೇಶದಲ್ಲಿರುವ ಅನುಬಂಧ-1ರ (17) ಮತ್ತು (20)ರ ಪ್ರಕಾರ ಪುಸ್ತಕ ಆಯ್ಕೆ ಸಮಿತಿಗೆ ಅಧಿಕಾರವಿತ್ತು. ಜತೆಗೆ ಅದೇ ಸರಕಾರದ ಆದೇಶದ ಉಲ್ಲೇಖ (3)ರ ಪ್ರಕಾರ ಮುಖ್ಯ ಗ್ರಂಥಾಲಯ ಅಧಿಕಾರಿಗಳ ವಿವೇಚನಾ ಕೋಟಾದಲ್ಲಿ ಶೇ. 75ರಷ್ಟು ಸ್ಪರ್ಧಾತ್ಮಕ, ಪಠ್ಯಪುಸ್ತಕ, ಪರಾಮರ್ಶನ, ಸ್ಥಳೀಯ ಬೇಡಿಕೆಗಳ ಪುಸ್ತಕ ಖರೀದಿಸಲು ಅವಕಾಶವಿತ್ತು. ಇವುಗಳನ್ನು ಗಣನೆಗೆ ತೆಗೆದುಕೊಳ್ಳದೆ ಏಕಕಡತದ ಮೂಲಕ ಒಟ್ಟು ಹಣದಲ್ಲಿ ಶೇ. 40ರಷ್ಟು ಸ್ಪರ್ಧಾತ್ಮಕ, ಪಠ್ಯಪುಸ್ತಕ, ಪರಾಮರ್ಶನ, ಓದುಗರ ಬೇಡಿಕೆಗಳಿಗೆ ಕೆಪಿಟಿಟಿ ಕಾಯಿದೆ ಮತ್ತು ನಿಯಮಗಳ ಅನ್ವಯ ಪಾರದರ್ಶಕ ಟೆಂಡರ್ ಮೂಲಕ ಪುಸ್ತಕ ಖರೀದಿಸಲು ಆದೇಶಿಸಿದ್ದಾರೆ.

### ಪುಸ್ತಕಗಳ ಖರೀದಿ ಶೇ.20ಕ್ಕೆ ಇಳಿಕೆ ಪ್ರಶ್ನಾರ್ಹ

ಕನ್ನಡ ಭಾಷೆ ಹಾಗೂ ಸಂಸ್ಕೃತಿಯ ಬೆಳವಣಿಗೆಗಾಗಿ ಹೆಚ್ಚಾಗಿ ಪ್ರಕಟವಾಗುತ್ತಿರುವ ಕನ್ನಡ ಸಾಹಿತ್ಯದ ಪುಸ್ತಕಗಳ ಖರೀದಿಯನ್ನು ಹಾಲಿ ಇರುವ ಶೇ 40ರಿಂದ 20ಕ್ಕೆ ಇಳಿಸಿರುವುದು ಪ್ರಶ್ನಾರ್ಹವಾಗಿದೆ. 2 ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಭಾಷೆಗೆ ಕನ್ನಡ ಸಾಹಿತ್ಯಕ್ಕೆ ಅನ್ಯಾಯವಾಗುತ್ತದೆ. ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ 2025-26ನೇ ಸಾಲಿನ ಬಜೆಟ್ ಅನುಮೋದಿಸದೆ ಪ್ರಸಕ್ತ ಆರ್ಥಿಕ ವರ್ಷ ಮುಗಿಯಲು 35 ದಿನಗಳು ಬಾಕಿ ಇರುವಾಗ, ಇಂತಹ ತಿದ್ದುಪಡಿ ಆದೇಶ ಸಮಂಜಸವಲ್ಲ. ಆದ್ದರಿಂದ ಮಾ. 18ರ ಆದೇಶ ಅಮಾನತ್ತಿನಲ್ಲಿಡಬೇಕು. 2025-2026ನೇ ಸಾಲಿನ ಪುಸ್ತಕಗಳನ್ನು ಖರೀದಿಸಲು ಸಮಯಾವಕಾಶ ಕಡಿಮೆ ಇರುವುದರಿಂದ ಹಿಂದಿನ ಆದೇಶದನ್ವಯ ಪುಸ್ತಕ ಖರೀದಿಸಿ, ಲೇಖಕ, ಪ್ರಕಾಶಕರನ್ನು ಆರ್ಥಿಕ ಸಂಕಷ್ಟದಿಂದ ಪಾರು ಮಾಡಿ, ಓದುಗರಿಗೆ ಹೊಸ ಪುಸ್ತಕ ನೀಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಲು ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ ಒತ್ತಾಯಿಸಿದೆ.

ವಿಶ್ವವಾಣಿ

## ಸಂಪಾದಕೀಯ

# ಇದು ಬಹಿರಂಗ ಎಚ್ಚರಿಕೆ

ಶತ್ರುವನ್ನು ಅಥವಾ ಪ್ರತಿಕೂಲ ಪರಿಸ್ಥಿತಿಯನ್ನು ನಿಯಂತ್ರಿಸಲು ಭಾರತೀಯ ಪರಂಪರೆಯಲ್ಲಿ ಉಲ್ಲೇಖಿಸಲಾಗಿರುವ ನಾಲ್ಕು ಪುರಾತನ ತಂತ್ರಗಳಲ್ಲಿ ಸಾಮ, ದಾನ, ಭೇದ ಮತ್ತು ದಂಡ ಸೇರಿವೆ. ಇವನ್ನು 'ಚತುರೋಪಾಯಗಳು' ಎಂದೂ ಕರೆಯುವುದು ವಾಡಿಕೆ. ಒಳ್ಳೆಯ ಮಾತಿಗೆ ಅಥವಾ ಮೊದಲ ಮೂರು ಉಪಾಯಗಳಿಗೆ ಬಗ್ಗದವರನ್ನು ಬಗ್ಗಿಸಲು 'ದಂಡ'ವನ್ನೇ ಕೈಗೆತ್ತಿಕೊಳ್ಳಬೇಕಾಗುತ್ತದೆ. ಜಮ್ಮು-ಕಾಶ್ಮೀರದ ಕಿಶ್ತ್ವಾರ್ ಪ್ರದೇಶದ ರಹಸ್ಯತಾಣದಲ್ಲಿ ಅಡಗಿಕೊಂಡಿದ್ದ ಮೂವರು ಭಯೋತ್ಪಾದಕರನ್ನು ಭಾರತೀಯ ಸೇನೆಯನ್ನು ಒಳಗೊಂಡ ಜಂಟಿ ಭಯೋತ್ಪಾದಕ ನಿಗ್ರಹ ಪಡೆಯು ಮೊನ್ನೆ ಹೊಸಕಿಹಾಕಿದೆ. ಇವರ ಪೈಕಿ ಭಾರತದ ಪಾಲಿಗೆ 'ಮೋಸ್ಟ್ ವಾಂಟೆಡ್ ಉಗ್ರವಾದಿ' ಎನಿಸಿದ್ದ ಸೈಫುಲ್ಲಾ ಕೂಡ ಸೇರಿದ್ದಾನೆ ಎಂಬುದು ಗಮನಿಸಬೇಕಾದ ಸಂಗತಿ. ಉಗ್ರವಾದವನ್ನು ಮತ್ತು ಉಗ್ರವಾದಿಗಳನ್ನು ಇನ್ನೆಂದಿಗೂ ಸಹಿಸಲಾಗದು ಅಂತ ಭಾರತವು ವರ್ಷಗಳಿಂದಲೂ ಹೇಳುತ್ತಲೇ ಬಂದಿದೆ. ಇಷ್ಟಾಗಿಯೂ ಉಗ್ರರು ಕಿತಾಪತಿ-ಕಿಡಿಗೇಡಿತನಗಳನ್ನು ಮುಂದುವರಿಸಿದಾಗ, ಕೆಲ ವರ್ಷದ ಹಿಂದೆ 'ಸರ್ಜಿಕಲ್ ಸ್ಟ್ರೈಕ್' ನಡೆಸಿ, ಅವರ ಠಾಣ್ಯಗಳನ್ನು ನಾಶಪಡಿಸಲಾಯಿತು. ಆಗಲೂ ಬುದ್ಧಿ ಕಲಿಯದ ಉಗ್ರರು ಕಾಶ್ಮೀರದ ಪಹಲ್ಗಾಮ್‌ನಲ್ಲಿ 26 ಮಂದಿ ಅಮಾಯಕರ ಮಾರಣಹೋಮ ನಡೆಸಿದಾಗ ಅದರ ಪ್ರತೀಕಾರಾರ್ಥವಾಗಿ ಭಾರತವು 'ಆಪರೇಷನ್ ಸಿಂದೂರ' ಕಾರ್ಯಾಚರಣೆಯನ್ನು ನಡೆಸಿ, ಪಾಕಿಸ್ತಾನದಲ್ಲಿ ಬೆಚ್ಚಗೆ ಆಶ್ರಯ ಪಡೆದಿದ್ದ ಉಗ್ರರಿಗೆ ಸರಿಯಾದ ಬರೆಯನ್ನೇ ಹಾಕಿತು. ಇದನ್ನೆಲ್ಲ ಕಂಡ ಮೇಲಾದರೂ ಉಗ್ರರಿಗೆ ಬುದ್ಧಿ ಬರಬೇಕಿತ್ತು; ಆದರೆ ಅವರ ವಿಧ್ವಂಸಕ ಚಿತ್ತಸ್ಥಿತಿ ಲಂಗುಲಗಾಮಿಲ್ಲದೆ ಹರಿಯತೊಡಗಿತು. ಈ ಕಾರಣದಿಂದಲೇ ಭಾರತವು 'ದಂಡೋಪಾಯ'ಕ್ಕೆ ಮುಂದಾಗಿದೆ. ಕಿಶ್ತ್ವಾರ್ ಪ್ರದೇಶದಲ್ಲಿ ಮೊನ್ನೆ ನಡೆದ ಕಾರ್ಯಾಚರಣೆಯು ಅದರ ಒಂದು ಭಾಗವಷ್ಟೇ. ಇದು ಉಗ್ರರಿಗೆ ನೀಡಲಾದ ಬಹಿರಂಗ ಎಚ್ಚರಿಕೆಯೂ ಹೌದು. ಭಯೋತ್ಪಾದನೆ ಜಾಗತಿಕ ಮಟ್ಟದಲ್ಲಿ ತಾಂಡವವಾಡುತ್ತಿರುವ ಪಿಡುಗಾಗಿರುವುದರಿಂದ ವಿಶ್ವದ ಮಿಕ್ಕ ರಾಷ್ಟ್ರಗಳೂ ಭಾರತದ ಈ ಮೇಲ್ಪಂಕ್ತಿಯನ್ನು ಅನುಸರಿಸಬೇಕಿದೆ.

## ಸೊಂಪಾದಕೀಯ

# ಕಾರ್ಯವಾಸಿ ಕತ್ತೆ ಹಾಲು ಹಿಡಿ

ಕತ್ತೆ ಹಾಲಿಗೆ ಈಗ ಲೀಟರ್‌ಗೆ 1,350 ರು. ಆಗಿದೆಯಂತೆ. ಆದರೆ ಈ ಸುದ್ದಿ ಕೇಳಿ ಕತ್ತೆ ಹಾಲು ಯಾರು ಮಾರಾಟ ಮಾಡುತ್ತಾರೆ, ಅದರ ಮಾರಾಟ ಮಳಿಗೆ ಎಲ್ಲಿದೆ ಅನ್ನೋ ಪ್ರಶ್ನೆಗಳು ಮೂಡುತ್ತವೆ. ಆದರೆ ಕತ್ತೆ ಹಾಲನ್ನು ದೈನಂದಿನ ಬಳಕೆಗೆ ಬಳಸದೆ ಕೇವಲ ಅದರ ಔಷಧೀಯ ಗುಣಗಳಿಗಾಗಿ ಬಳಸಲಾಗುತ್ತದೆ ಅನ್ನೋದು ವಾಸ್ತವ. ಹಾಗೆ ನೋಡಿದರೆ, ಮೇಕೆ ಮತ್ತು ಒಂಟೆ ಹಾಲಿಗೂ ಈ ರೀತಿಯ ಔಷಧೀಯ ಗುಣಗಳಿದ್ದರೂ ಕತ್ತೆ ಹಾಲು ಅವೆರಡಕ್ಕಿಂತ ಜಾಸ್ತಿ ಎಫೆಕ್ಟಿವ್ ಅಂತೆ. ಹಾಗಾಗಿ 'ಕೆಲಸಕ್ಕೆ ಬಾರದ ಕತ್ತೆ' ಅಂತ ಬಯ್ಯೋರಿಗೆ ಕತ್ತೆ ಹಾಲಿಗೂ ಬೆಲೆ ಇದೆ ಅಂತ ಹೇಳಬೇಕಾಗಿದೆ. ದೆಹಲಿಯ ಮಹಿಳೆಯೊಬ್ಬರು ಕತ್ತೆ ಹಾಲಿನಿಂದ ಲಿಪ್‌ಬಾಮ್, ಸೋಪ್, ಸೌಂದರ್ಯವರ್ಧಕಗಳನ್ನು ತಯಾರಿಸುತ್ತಾರಂತೆ. ಹಾಗಾಗಿ ಹುಡುಗಿಯೊಬ್ಬಳಿಗೆ ಮುತ್ತು ಕೊಡುವ ಮುಂಚೆ ಆಕೆ ತುಟಿಗೆ ಕತ್ತೆ ಹಾಲಿನ ಲಿಪ್ ಬಾಮ್ ಹಚ್ಚಿಕೊಂಡಿರುವ ಸಾಧ್ಯತೆ ಇರುತ್ತದೆ ಅನ್ನೋದನ್ನು ಗಮನದಲ್ಲಿ ಇಟ್ಟುಕೊಂಡಿರಬೇಕಾಗುತ್ತದೆ. ಒಂದು ಹುಡುಗಿಯನ್ನ, 'ನೋಡೋಕೆ ಇಷ್ಟ್ ಚೆನ್ನಾಗಿದ್ದೀರಲ್ಲ ಯಾವ ಸೋಪಲ್ಲಿ ಸ್ನಾನ ಮಾಡೋದು?' ಅಂತ ಕೇಳಿದ್ರೆ, 'ಕತ್ತೆ ಹಾಲಿನ ಸೋಪ್' ಅನ್ನೋ ಉತ್ತರವೂ ಬರಬಹುದು. ಅಲ್ಲದೆ ಕತ್ತೆ ಹಾಲಿಗೆ ಕೆಲ ರೋಗಗಳನ್ನು ಗುಣಪಡಿಸೋ ಶಕ್ತಿ ಇದೆಯಂತೆ. ಆದರೆ ಕೆಲಸಕ್ಕೆ ಬಾರದ ಕತ್ತೆಗಳಿಗೆ ಬುದ್ಧಿ ಕಲಿಸೋ ಶಕ್ತಿ ಕತ್ತೆ ಹಾಲಿನಲ್ಲಿ ಇದೆಯೇ ಅನ್ನೋದು ಗೊತ್ತಾಗಬೇಕಿದೆ. ಒಟ್ಟಿನಲ್ಲಿ 'ಕಾರ್ಯವಾಸಿ ಕತ್ತೆ ಕಾಲು ಹಿಡಿ' ಅನ್ನೋ ಮಾತಿನಂತೆ ಈಗ ಕಾರ್ಯ ವಾಸಿ ಅಲ್ಲ, ರೋಗ ವಾಸಿ ಆಗಲು ಕತ್ತೆ ಬೇಕಿದೆ. ಆದರೆ ಹಿಡಿಯಬೇಕಾಗಿರೋದು ಕತ್ತೆಯ ಕಾಲನ್ನಲ್ಲ, ಕತ್ತೆ ಹಾಲನ್ನ!

## ಸಂಪಾದಕರ ಸದ್ಯಶೋಧನೆ

# ಅಲ್ಜೀರಿಯಾ ಸಿಂಡ್ರೋಮ್ ಎಂದರೇನು?

ಮೊನ್ನೆ ಲೋಕಸಭೆಯಲ್ಲಿ ಮಾತಾಡುವಾಗ ಬಿಜೆಪಿಯ ನಿಶಿಕಾಂತ್ ದುಬೆ ಅವರು ಕಾಂಗ್ರೆಸ್ 'ಅಲ್ಜೀರಿಯಾ ಸಿಂಡ್ರೋಮ್' (Algeria Syndrome) ನಿಂದ ಬಳಲುತ್ತಿದೆ ಎಂದು ಹೇಳಿದರು. ಆದರೆ ಆ ಸಿಂಡ್ರೋಮ್ ಅಂದ್ರೆ ಏನು ಎಂಬುದನ್ನು ಅವರು ವಿವರಿಸಲಿಲ್ಲ. 'ಅಲ್ಜೀರಿಯಾ ಸಿಂಡ್ರೋಮ್' ಎಂಬುದು ವೈದ್ಯಕೀಯ ಶಾಸ್ತ್ರಕ್ಕೆ ಸಂಬಂಧಿಸಿದ ಪದವಲ್ಲ, ಬದಲಿಗೆ ಇದು ರಾಜತಾಂತ್ರಿಕ ಮತ್ತು ರಾಜಕೀಯ ಇತಿಹಾಸಕ್ಕೆ ಸಂಬಂಧಿಸಿದ ಒಂದು ಪ್ರಮುಖ ವಿದ್ಯಮಾನವಾಗಿದೆ. ಒಂದು ದೇಶವು ತನ್ನ ಅತಿಯಾದ ಆತ್ಮವಿಶ್ವಾಸದಿಂದ ಯುದ್ಧಕ್ಕೆ ಇಳಿದು, ಅಲ್ಲಿನ ಸ್ಥಳೀಯ ಪ್ರತಿರೋಧದ ಮುಂದೆ ಮಂಡಿಯೂರಿ, ತನ್ನ ಸ್ವಂತ ದೇಶದ ಒಳಗೇ ರಾಜಕೀಯ ಅಸ್ಥಿರತೆಯನ್ನು ಅನುಭವಿಸಿದರೆ ಅದನ್ನು 'ಸಿಂಡ್ರೋಮ್' ಎಂದು ಕರೆಯಲಾಗುತ್ತದೆ. ಅಮೆರಿಕಕ್ಕೆ 'ವಿಯೆಟ್ನಾಂ ಸಿಂಡ್ರೋಮ್' ಹೇಗೋ, ಫ್ರಾನ್ಸ್‌ಗೆ 'ಅಲ್ಜೀರಿಯಾ ಸಿಂಡ್ರೋಮ್' ಹಾಗೆ. ಇದು ಕೇವಲ ಒಂದು ಯುದ್ಧದ ಸೋಲಲ್ಲ, ಇದು ಒಂದು ಸಿದ್ಧಾಂತದ ಪತನ. 1830ರಿಂದಲೂ ಅಲ್ಜೀರಿಯಾ ಫ್ರಾನ್ಸ್‌ನ ವಸಾಹತಾಗಿತ್ತು. ಫ್ರಾನ್ಸ್ ಇದನ್ನು ಕೇವಲ ಒಂದು ಕಾಲೊನಿ ಎಂದು ನೋಡದೇ, ತನ್ನ ದೇಶದ ಒಂದು ಅವಿಭಾಜ್ಯ ಅಂಗ ಎಂದೇ ಪರಿಗಣಿಸಿತ್ತು. ಲಕ್ಷಾಂತರ ಫ್ರೆಂಚ್ ಜನರು ಅಲ್ಜೀರಿಯಾದಲ್ಲಿ ನೆಲೆಸಿದ್ದರು. ಆದರೆ, ಎರಡನೇ ಮಹಾಯುದ್ಧದ ನಂತರ ಜಗತ್ತಿನಾದ್ಯಂತ ವಸಾಹತುಶಾಹಿ ವಿರುದ್ಧ ಅಲೆ ಎದ್ದಾಗ, ಅಲ್ಜೀರಿಯನ್ನರು ಕೂಡ ತಮ್ಮ ಸ್ವಾತಂತ್ರ್ಯಕ್ಕಾಗಿ ಹಂಬಲಿಸಿದರು. 1954ರಲ್ಲಿ 'ನ್ಯಾಷನಲ್ ಲಿಬರೇಷನ್ ಫ್ರಂಟ್' ಎಂಬ ಸಂಘಟನೆ ಫ್ರಾನ್ಸ್ ವಿರುದ್ಧ ಸಶಸ್ತ್ರ ಬಂಡಾಯ ಸಾರಿತು. ಇಲ್ಲಿಂದ 'ಅಲ್ಜೀರಿಯಾ ಸಿಂಡ್ರೋಮ್' ಎಂಬ ಕರಾಳ ಅಧ್ಯಾಯ ಆರಂಭವಾಯಿತು. ಫ್ರಾನ್ಸ್ ಅಂದು ಜಗತ್ತಿನ ಅತ್ಯಂತ ಶಕ್ತಿಶಾಲಿ ಸೇನೆಗಳಲ್ಲಿ ಒಂದಾಗಿತ್ತು. ಅಲ್ಜೀರಿಯಾದ ಗೆರಿಲ್ಲಾ ಹೋರಾಟಗಾರರನ್ನು ಹತ್ತಿಕ್ಕಲು ಫ್ರಾನ್ಸ್ ಲಕ್ಷಾಂತರ ಸೈನಿಕರನ್ನು ಕಳುಹಿಸಿತು. ಆದರೆ, ಈ ಯುದ್ಧವು ಸಾಂಪ್ರದಾಯಿಕ ಯುದ್ಧವಾಗಿರಲಿಲ್ಲ. ಅದು 'ಅಸಿಮ್ಮೆಟ್ರಿಕ್ ವಾರ್‌ಫೇರ್' ಆಗಿತ್ತು. ಅಲ್ಜೀರಿಯಾದ ಬೆಟ್ಟಗುಡ್ಡಗಳಲ್ಲಿ ಅಡಗಿದ್ದ ಹೋರಾಟಗಾರರು ಫ್ರೆಂಚ್ ಸೈನಿಕರ ಮೇಲೆ ಹಠಾತ್ ದಾಳಿ ನಡೆಸಿ ಮಾಯವಾಗುತ್ತಿದ್ದರು. ಈ ಬಂಡಾಯವನ್ನು ಹತ್ತಿಕ್ಕಲು ಫ್ರೆಂಚ್ ಸೇನೆಯು ಚಿತ್ರಹಿಂಸೆ, ಸಾಮೂಹಿಕ ಹತ್ಯೆ ಮತ್ತು ಹಳ್ಳಿಗಳನ್ನು ಸುಡುವಂಥ ಕ್ರೂರ ಮಾರ್ಗಗಳನ್ನು ಅನುಸರಿಸಿತು. ಈ ಕ್ರೌರ್ಯವು ಅಂತಾರಾಷ್ಟ್ರೀಯ ಮಟ್ಟದಲ್ಲಿ ಫ್ರಾನ್ಸ್‌ನ ಘನತೆಗೆ ದೊಡ್ಡ ಪೆಟ್ಟು ನೀಡಿತು. ಅಷ್ಟಕ್ಕೂ 'ಅಲ್ಜೀರಿಯಾ ಸಿಂಡ್ರೋಮ್' ಅಂದರೇನು? ಈ ಪದವು ಪ್ರಮುಖವಾಗಿ ಮೂರು ಆಯಾಮಗಳನ್ನು ಒಳಗೊಂಡಿದೆ. ಮೊದಲನೆಯದು, ಮಿಲಿಟರಿ ಹತಾಶೆ. ಅತ್ಯಾಧುನಿಕ ಶಸ್ತ್ರಾಸ್ತ್ರಗಳಿದ್ದರೂ, ಜನರ ಬೆಂಬಲವಿರುವ ಸಣ್ಣ ಗುಂಪನ್ನು ಸೋಲಿಸಲು ಸಾಧ್ಯವಾಗದ ಸ್ಥಿತಿ. ಅಲ್ಜೀರಿಯಾದಲ್ಲಿ ಫ್ರಾನ್ಸ್ ಮಿಲಿಟರಿ ದೃಷ್ಟಿಯಿಂದ ಗೆದ್ದಂತೆ ಕಂಡರೂ, ರಾಜಕೀಯವಾಗಿ ಸೋಲುತ್ತಾ ಹೋಯಿತು. ಎರಡನೆಯದು, ಆಂತರಿಕ ವಿಭಜನೆ. ಈ ಯುದ್ಧವು ಫ್ರಾನ್ಸ್ ದೇಶವನ್ನು ಎರಡಾಗಿ ಸೀಳಿತು. ಒಂದು ವರ್ಗ ಅಲ್ಜೀರಿಯಾವನ್ನು ಯಾವುದೇ ಬೆಲೆ ತೆತ್ತಾದರೂ ಉಳಿಸಿಕೊಳ್ಳಬೇಕು ಎಂದರೆ, ಮತ್ತೊಂದು ವರ್ಗ 'ನಮ್ಮ ಯುವಕರು ಪರಕೀಯ ಭೂಮಿಯಲ್ಲಿ ಏಕಾಗಿ ಸಾಯಬೇಕು?' ಎಂದು ಪ್ರಶ್ನಿಸತೊಡಗಿತು. ಇದು ಫ್ರೆಂಚ್ ಸಮಾಜದಲ್ಲಿ ದೊಡ್ಡ ಕಂದಕವನ್ನು ಸೃಷ್ಟಿಸಿತು. ಮೂರನೆಯದು, ರಾಜಕೀಯ ಅಸ್ಥಿರತೆ. ಯುದ್ಧದ ವೆಚ್ಚ ಮತ್ತು ಸೈನಿಕರ ಸಾವು ಫ್ರಾನ್ಸ್‌ನ ಆರ್ಥಿಕತೆಯನ್ನು ಹೈರಾಣಾಗಿಸಿತು. ಫ್ರಾನ್ಸ್ ಪತನದ ಅಂಚಿಗೆ ತಲುಪಿತು. ಅಲ್ಲಿನ ಪ್ರಜಾಪ್ರಭುತ್ವವೇ ಅಪಾಯಕ್ಕೆ ಸಿಲುಕಿತು. ಸೈನ್ಯವು ಸರಕಾರದ ವಿರುದ್ಧವೇ ಬಂಡಾಯ ಏಳುವ ಸೂಚನೆ ನೀಡಿತು. ಪರಿಸ್ಥಿತಿ ಕೈಮೀರಿದಾಗ, ಫ್ರಾನ್ಸ್‌ನ ಮಹಾನ್ ನಾಯಕ ಚಾರ್ಲ್ಸ್ ಡಿ ಗಾಲ್ ಅಧಿಕಾರಕ್ಕೆ ಬಂದರು. ಅಲ್ಜೀರಿಯಾವನ್ನು ಉಳಿಸಿಕೊಳ್ಳುತ್ತಾರೆಂಬ ನಂಬಿಕೆಯಿಂದ ಅವರನ್ನು ಕರೆತರಲಾಗಿತ್ತು. ಆದರೆ, ಅಲ್ಜೀರಿಯಾವನ್ನು ಗೆಲ್ಲುವುದು ಅಸಾಧ್ಯ ಮತ್ತು ಅದು ಫ್ರಾನ್ಸ್‌ನ ವಿನಾಶಕ್ಕೆ ದಾರಿ ಎಂದು ಅರಿತ ಡಿ ಗಾಲ್, 1962ರಲ್ಲಿ 'ಎವಿಯನ್ ಒಪ್ಪಂದ'ದ ಮೂಲಕ ಅಲ್ಜೀರಿಯಾಕ್ಕೆ ಸ್ವಾತಂತ್ರ್ಯ ಘೋಷಿಸಿದರು. ಇದು ಫ್ರಾನ್ಸ್‌ನ ಬಲಪಂಥೀಯರಿಗೆ ಮತ್ತು ಸೈನ್ಯಕ್ಕೆ ಮಾಡಿದ ದೊಡ್ಡ ದ್ರೋಹದಂತೆ ಕಂಡಿತು. ಯುದ್ಧ ಮುಗಿದ ನಂತರವೂ 'ಅಲ್ಜೀರಿಯಾ ಸಿಂಡ್ರೋಮ್' ಫ್ರಾನ್ಸ್ ಅನ್ನು ಕಾಡುತ್ತಲೇ ಇತ್ತು. ಯುದ್ಧದಿಂದ ಮರಳಿದ ಸೈನಿಕರು ತೀವ್ರ ಮಾನಸಿಕ ಖಿನ್ನತೆಗೆ ಒಳಗಾದರು. ತಾವು ಮಾಡಿದ ಕ್ರೌರ್ಯ ಮತ್ತು ಅನುಭವಿಸಿದ ಸೋಲು ಅವರನ್ನು ಕಾಡಿತು. ಅಲ್ಜೀರಿಯಾದಲ್ಲಿದ್ದ ಲಕ್ಷಾಂತರ ಫ್ರೆಂಚ್ ನಾಗರಿಕರು (Pieds-Noirs) ಒಂದೇ ರಾತ್ರಿಯಲ್ಲಿ ಎಲ್ಲವನ್ನೂ ಕಳೆದುಕೊಂಡು ಫ್ರಾನ್ಸ್‌ಗೆ ಓಡಿಬರಬೇಕಾಯಿತು. ಅವರನ್ನು ಫ್ರಾನ್ಸ್‌ನ ಸ್ವಂತ ಜನರೇ ಅನ್ಯರಂತೆ ನೋಡಿದರು. ಡಿ ಗಾಲ್ ಮೇಲೆ ಹಲವಾರು ಬಾರಿ ಹತ್ಯೆಯ ಪ್ರಯತ್ನಗಳು ನಡೆದವು. ಸೈನ್ಯದ ಒಂದು ಭಾಗ ಸರಕಾರವನ್ನೇ ಉರುಳಿಸಲು ಸಂಚು ರೂಪಿಸಿತು. ಇಂದು 'ಅಲ್ಜೀರಿಯಾ ಸಿಂಡ್ರೋಮ್' ಎಂಬುದು ಕೇವಲ ಫ್ರಾನ್ಸ್‌ಗೆ ಸೀಮಿತವಾಗಿಲ್ಲ.

# ವಿವಿ ಚುನಾವಣೆ ವಿಷಯದಲ್ಲೇಕೆ ಗೊಂದಲ?

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
vveditoped@gmail.com

ಬೆಳೆಯುವ ಪೈರು ಮೊಳಕೆ'ಯಲ್ಲಿಯೇ ಎನ್ನುವಂತೆ, ರಾಜಕೀಯದ ಮೊದಲ ಹೆಜ್ಜೆ ಕಾಲೇಜುಗಳಲ್ಲಿಯೇ ಎನ್ನುವ ಮಾತೊಂದಿದೆ. ಅದರಲ್ಲಿಯೂ ವಿದ್ಯಾರ್ಥಿ ದೆಸೆಯಿಂದಲೇ ರಾಜಕೀಯ ಜೀವನಕ್ಕೆ ಕಾಲಿಟ್ಟ ಅನೇಕ ನಾಯಕರ ಸೈದ್ಧಾಂತಿಕ 'ಬದ್ಧತೆ'ಯಲ್ಲಿ ಸ್ಪಷ್ಟನೆ ಇರುತ್ತದೆ ಎನ್ನುವುದು ವಾಸ್ತವ. ಈ ಕಾರಣಕ್ಕೆ, ದೇಶದಲ್ಲಿ ವಿಶ್ವವಿದ್ಯಾಲಯಗಳ ಚುನಾವಣೆಗೆ ರಾಜಕೀಯವಾಗಿ ತನ್ನದೇ ಆದ ಮಹತ್ವ ಮತ್ತು ಪ್ರತಿಷ್ಠೆಯಿದೆ. ಈ ಕಾರಣಕ್ಕಾಗಿಯೇ 80ರ ದಶಕದ ಬಳಿಕ ಕರ್ನಾಟಕದಲ್ಲಿ ರದ್ದಾಗಿರುವ ಚುನಾವಣೆಗಳನ್ನು ಮರುಪರಿಚಯಿಸುವ ಕಾರ್ಯಕ್ಕೆ ಸರಕಾರ ಮುಂದಾಗಿದೆ.

ವಿಶ್ವವಿದ್ಯಾಲಯಗಳಲ್ಲಿ ಚುನಾವಣೆ ನಡೆಸುವ ಸಂಬಂಧ ಮೊದಲಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಘೋಷಿಸಿದ್ದು, ಆ ಬಳಿಕ ಚುನಾವಣೆ ನಡೆಸುವುದರಿಂದ ಆಗುವ ಸಾಧಕ-ಬಾಧಕದ ಬಗ್ಗೆ ಸಮಾಲೋಚನೆ ನಡೆಸಲು ಸಮಿತಿಯೊಂದನ್ನು ರಚಿಸಲಾಗಿತ್ತು. ಈ ಪ್ರಕ್ರಿಯೆ ಬಳಿಕ ಒಂದೆರಡು ಸಭೆಯನ್ನೂ ನಡೆಸಿಯಾಗಿದೆ. ಆದರೀಗ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮತ್ತೆ ವಿದ್ಯಾರ್ಥಿ ಚುನಾವಣೆಗಳನ್ನು ಪ್ರಸ್ತಾಪಿಸಿದ್ದಾರೆ. ಮುಖ್ಯಮಂತ್ರಿಗಳ ಪ್ರಸ್ತಾಪಕ್ಕೆ, ಆ ಕ್ಷಣದಲ್ಲಿಯೇ ವಿವಿಧ ವಿವಿಗಳ ಕುಲಪತಿಗಳಿಂದ ವಿರೋಧ ವ್ಯಕ್ತವಾಗಿದೆ. ವಿಶ್ವವಿದ್ಯಾಲಯದ ಚುನಾವಣೆಗಳಿಗೆ ಕುಲಪತಿಗಳು ವಿರೋಧಿಸುವುದಕ್ಕೆ, ಮುಖ್ಯಮಂತ್ರಿ ಹಾಗೂ ರಾಜಕಾರಣಿಗಳು ಬೆಂಬಲಿಸುತ್ತಿರುವುದಕ್ಕೆ ಅವರದ್ದೇ ಆದ ಕಾರಣಗಳಿವೆ.

ಮುಖ್ಯಮಂತ್ರಿಗಳು ವಿವಿ ಚುನಾವಣೆ ನಡೆಸಲು 'ಚಿಂತನೆ' ಎನ್ನುತ್ತಿದ್ದಂತೆ ವ್ಯಕ್ತವಾದ ಕುಲಪತಿಗಳ ವಿರೋಧಕ್ಕೆ ಹಲವು ಕಾರಣಗಳಿವೆ. ಪ್ರಮುಖವಾಗಿ, ಜೆಎನ್‌ಯು ಸೇರಿದಂತೆ ಹಲವು ವಿಶ್ವವಿದ್ಯಾಲಯಗಳಲ್ಲಿ ಚುನಾವಣೆಯ ಬಳಿಕ ಗಲಾಟೆ, ಅಶಾಂತಿ ಸೃಷ್ಟಿಯಾಗಿರುವ ಉದಾಹರಣೆಗಳಿವೆ. ಇದರೊಂದಿಗೆ ರಾಜಕೀಯ ಪಕ್ಷಗಳನ್ನು ಪೂರ್ಣ ಪ್ರಮಾಣದಲ್ಲಿ ಹೊರಗಿಟ್ಟು ಚುನಾವಣೆ ನಡೆಸುವುದು ಕರ್ನಾಟಕದಲ್ಲಿ ಸದ್ಯಕ್ಕೆ ತೀರಾ ಕಷ್ಟ. ಒಂದು ವೇಳೆ ನೇರ ಅಥವಾ ಪರೋಕ್ಷವಾಗಿ ರಾಜಕೀಯ ಪಕ್ಷಗಳ ಪ್ರಭಾವದೊಂದಿಗೆ ಚುನಾವಣೆ ನಡೆದರೆ, ಶೈಕ್ಷಣಿಕ ಕಾರ್ಯಕ್ಕೆ ಸಮಸ್ಯೆಯಾಗಲಿದೆ ಎನ್ನುವ ಆತಂಕವನ್ನು ಬಹುತೇಕ ವಿಶ್ವವಿದ್ಯಾಲಯಗಳ ಕುಲಪತಿಗಳು ವ್ಯಕ್ತಪಡಿಸಿದ್ದಾರೆ.

ಕುಲಪತಿಗಳ ಈ ಆತಂಕದ ಹೊರತಾಗಿಯೂ, ಸಿಎಂ ಸಿದ್ದರಾಮಯ್ಯ ಅವರು, 'ನಮ್ಮ ಕಾಲದಲ್ಲಿ ವಿದ್ಯಾರ್ಥಿ ಚುನಾವಣೆ ಇತ್ತು. ನಾವೂ ಅಲ್ಲಿಂದಲೇ ಬೆಳೆದು ಬಂದವರು. ಷರತ್ತುಬದ್ಧ ಚುನಾವಣೆ ನಡೆಸಲು ಅವಕಾಶ ನೀಡಬೇಕಿದೆ. ಚುನಾವಣೆ ಇಲ್ಲದೆ ವಿದ್ಯಾರ್ಥಿಗಳು ನಾಯಕರಾಗಿ ಹೇಗೆ ಬೆಳೆಯುತ್ತಾರೆ?' ಎನ್ನುವ ಪ್ರಶ್ನೆಯೊಂದಿಗೆ, ಭಾರತದಲ್ಲಿ ವಿದ್ಯಾರ್ಥಿ ನಾಯಕತ್ವವೇ ಕಾಣಿಸುತ್ತಿಲ್ಲ ಎನ್ನುವ ಮಾತನ್ನು ಆಡಿದ್ದಾರೆ. ಇದು ಸಿದ್ದರಾಮಯ್ಯ ಮಾತ್ರವಲ್ಲದೇ, ಬಹುತೇಕ ರಾಜಕೀಯ ನಾಯಕರ ಅಭಿಪ್ರಾಯವಾಗಿದೆ. ಇಂದು ರಾಜಕೀಯಕ್ಕೆ ಬರಲು ಅನೇಕರು ಉತ್ಸುಕರಾಗಿದ್ದರೂ, 'ಸಿದ್ಧಾಂತ'ದ ವಿಷಯದಲ್ಲಿ ಸ್ಪಷ್ಟತೆ ಇರುವವರು ಸಿಗುತ್ತಿಲ್ಲ. ಈ ರೀತಿಯ ಪರಿಸ್ಥಿತಿ ಮುಂದುವರಿದರೆ ಭವಿಷ್ಯದಲ್ಲಿ ಸೈದ್ಧಾಂತಿಕ ಬದ್ಧತೆ ಎನ್ನುವುದು ಕೇವಲ 'ಕಾಗದ'ಗಳಿಗೆ ಸೀಮಿತವಾಗಲಿದೆ ಎನ್ನುವ ಆತಂಕ ಅನೇಕರಲ್ಲಿದೆ.

ಹಾಗೆ ನೋಡಿದರೆ, ಕರ್ನಾಟಕದ ಹಲವು ನಾಯಕರು ವಿದ್ಯಾರ್ಥಿ ದೆಸೆಯಿಂದಲೇ ರಾಜಕೀಯ ಜೀವನಕ್ಕೆ ಕಾಲಿಟ್ಟವರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಬಿ.ಕೆ. ಹರಿಪ್ರಸಾದ್, ಭೋಸರಾಜು ಎನ್‌ಎಸ್‌ಯುಐನಲ್ಲಿ ಸಕ್ರಿಯವಾಗಿದ್ದರೆ, ಸಮಾಜವಾದದ ಮೂಲಕ ಸಿದ್ದರಾಮಯ್ಯ ಅವರು ಕಾನೂನು ವಿದ್ಯಾರ್ಥಿಯಾಗಿದ್ದಾಗಲೇ ಸಾರ್ವಜನಿಕ ಜೀವನದಲ್ಲಿ ಕಾಣಿಸಿಕೊಂಡರು. ಇನ್ನು ಬಿಜೆಪಿಯ ದಿ.ಅನಂತಕುಮಾರ್, ಅರವಿಂದ ಲಿಂಬಾವಳಿ, ರವಿಕುಮಾರ್ ಸೇರಿದಂತೆ ಅನೇಕರಿದ್ದಾರೆ. ರಾಜ್ಯ ರಾಜಕೀಯದ ಮೊದಲ ಸಾಲಿನಲ್ಲಿರುವ ಬಹುತೇಕ ನಾಯಕರು ವಿದ್ಯಾರ್ಥಿಗಳಾಗಿದ್ದ ಕಾಲದಲ್ಲಿ ಎನ್‌ಎಸ್‌ಯುಐ, ಎಬಿವಿಪಿ ಘಟಕಗಳ ಮೂಲಕವೇ ಸಾರ್ವಜನಿಕ ಜೀವನಕ್ಕೆ ಕಾಲಿಟ್ಟವರು. ಕರ್ನಾಟಕದಲ್ಲಿ 1980ರ ದಶಕದವರೆಗೂ ವಿವಿ ಚುನಾವಣೆಗಳು ಜೋರಾಗಿಯೇ ನಡೆಯುತ್ತಿದ್ದವು. ಆದರೆ, ಈ ಚುನಾವಣೆಗಳಿಂದ ವಿವಿಗಳಲ್ಲಿ ಗದ್ದಲ-ಗಲಾಟೆ, ಅಶಾಂತಿ ಹೆಚ್ಚಾಗಿದ್ದರಿಂದ ವೀರೇಂದ್ರ ಪಾಟೀಲರ ಸಮಯದಲ್ಲಿ ವಿಶ್ವವಿದ್ಯಾಲಯಗಳ ಚುನಾವಣೆಯನ್ನು ಸ್ಥಗಿತಗೊಳಿಸಲಾಯಿತು.

ಕರ್ನಾಟಕದ ಕಾಲೇಜು, ವಿವಿಗಳಲ್ಲಿ ಚುನಾವಣೆಗಳಿಗೆ ಅವಕಾಶವಿಲ್ಲವಾದರೂ, ಸಂಘಟನೆಗಳು ಈಗಲೂ ಸಕ್ರಿಯವಾಗಿವೆ. ಎಬಿವಿಪಿ, ಎನ್‌ಎಸ್‌ಯುಐ ಸೇರಿದಂತೆ ವಿವಿಧ ದಲಿತ ಸಂಘಟನೆಗಳು ಈಗಲೂ ಯುವ ನಾಯಕರನ್ನು ಗುರುತಿಸುವ ಕೆಲಸವನ್ನು ಮಾಡುತ್ತಿವೆ. ಆದರೆ ವಿದ್ಯಾರ್ಥಿ ದೆಸೆಯಲ್ಲಿಯೇ ಚುನಾವಣೆಗಳನ್ನು ಎದುರಿಸಬೇಕೆಂಬ ಕಾರಣಕ್ಕೆ ಹಾಗೂ ಮುಂದಿನ ಪೀಳಿಗೆಗೆ 'ಗಟ್ಟಿ' ನಾಯಕತ್ವವನ್ನು ಕೊಡಬೇಕು ಎನ್ನುವ ಉದ್ದೇಶದಿಂದ ಸರಕಾರ ಇದೀಗ ವಿವಿ ಚುನಾವಣೆಗಳ ಮರುಸ್ಥಾಪನೆಗೆ ಉತ್ಸುಕವಾಗಿದೆ. ಇದಿಷ್ಟೇ ಅಲ್ಲದೆ, ದೇಶದಲ್ಲಿ ದಿನದಿಂದ ದಿನಕ್ಕೆ ಕಳೆಗುಂದುತ್ತಿರುವ ಕಾಂಗ್ರೆಸ್‌ಗೆ, ಈಗಲೂ ಕರ್ನಾಟಕ 'ನೆಚ್ಚಿ'ನ ರಾಜ್ಯವಾಗಿದೆ. ಹಳೇ ತಲೆಮಾರು ಈಗಲೂ ಕಾಂಗ್ರೆಸ್‌ನೊಂದಿಗೆ ನಿಲ್ಲುತ್ತಿದೆ. ಆದರೆ ಭವಿಷ್ಯದ ಪೀಳಿಗೆಯನ್ನು ತಮ್ಮತ್ತ ಸೆಳೆಯುವ ಹಾಗೂ ಯುವ ನಾಯಕತ್ವವನ್ನು 'ಸಿದ್ಧ'ಪಡಿಸುವ ಉದ್ದೇಶದಿಂದ ಚುನಾವಣೆಗಳನ್ನು ನಡೆಸುವ ಲೆಕ್ಕಾಚಾರ ಕಾಂಗ್ರೆಸ್ ಇದೆ ಎಂದರೆ ತಪ್ಪಾಗುವುದಿಲ್ಲ. 80ರಲ್ಲಿ ಕರ್ನಾಟಕದ ವಿವಿಗಳಲ್ಲಿ ಚುನಾವಣೆಯನ್ನು ಸ್ಥಗಿತಗೊಳಿಸಿದರೂ, ಈಗಲೂ ದೇಶದ ವಿವಿಧ ಭಾಗಗಳಲ್ಲಿ ವಿವಿ ಚುನಾವಣೆಗಳಿಗೆ ತಮ್ಮದೇ ಆದ 'ಮಹತ್ವ'ವಿದೆ. ಅದರಲ್ಲಿಯೂ ದೆಹಲಿ ವಿಶ್ವವಿದ್ಯಾಲಯ, ಜೆಎನ್‌ಯು ವಿವಿ ಚುನಾವಣೆಗಳು ಈಗಲೂ ದೇಶದ ಗಮನವನ್ನು ಸೆಳೆಯುತ್ತವೆ. ಈ ಹಿಂದಿನ ಚುನಾವಣೆಗಳಿಗೆ ಹೋಲಿಸಿದರೆ, ವಿವಿ ಚುನಾವಣೆಗಳಲ್ಲಿ ರಾಜಕೀಯದ ಲೇಪ ಕಡಿಮೆಯಾಗಿದ್ದರೂ, ಎಲ್ಲ ಪಕ್ಷಗಳಿಗೂ 'ಯುವ' ನಾಯಕತ್ವವನ್ನು ಹುಡುಕಬೇಕೆಂದಾಗಲೆಲ್ಲ ಈ ವಿಶ್ವವಿದ್ಯಾಲಯಗಳ ಚುನಾವಣೆಯ ಫಲಿತಾಂಶದತ್ತ ಕಣ್ಣಾಡಿಸುತ್ತವೆ ಅಥವಾ ವಿದ್ಯಾರ್ಥಿಗಳೇ ಅಲ್ಲಿಂದ ಗೆದ್ದು 'ಪದವಿ' ಪಡೆದುಕೊಂಡು ತಮ್ಮಿಷ್ಟದ ರಾಜಕೀಯ ಪಕ್ಷಗಳತ್ತ ಬರುತ್ತಿದ್ದಾರೆ.

ಹಾಗೆ ನೋಡಿದರೆ, 90ರ ದಶಕದಲ್ಲಿ ನಡೆಯುತ್ತಿದ್ದ ವಿವಿ ಚುನಾವಣೆಗಳಿಗೆ ಹೋಲಿಸಿದಾಗ ಇಂದಿನ ಚುನಾವಣೆಗಳು 'ಸುಧಾರಿಸಿವೆ' ಎಂದರೆ ತಪ್ಪಾಗುವುದಿಲ್ಲ. ಚುನಾವಣೆಗಳಲ್ಲಿ ಆಗುತ್ತಿದ್ದ ರಾಜಕೀಯ ಹಸ್ತಕ್ಷೇಪ ಸೇರಿದಂತೆ ವಿವಿಧ ರೀತಿಯ ಸಮಸ್ಯೆಯನ್ನು ಗಮನಿಸಿ 2006ರಲ್ಲಿ ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಚುನಾವಣಾ ಆಯೋಗದ ನಿವೃತ್ತ ಮುಖ್ಯ ಚುನಾವಣಾ ಆಯುಕ್ತ ಜೆ.ಎಂ ಲಿಂಗ್ಡೋ ನೇತೃತ್ವದಲ್ಲಿ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿ ನೀಡಿದ ಶಿಫಾರಸುಗಳು ಜಾರಿಗೆ ಬಂದ ಬಳಿಕ, ಚುನಾವಣಾ ಪ್ರಕ್ರಿಯೆ ಕೊಂಚ ಸುಧಾರಿಸಿದೆ. ಪ್ರಮುಖವಾಗಿ, ಲಿಂಗ್ಡೋ ಸಮಿತಿಯೂ ವಿದ್ಯಾರ್ಥಿಗಳ ಚುನಾವಣೆಯಲ್ಲಿ ಅಭ್ಯರ್ಥಿಯ ಗರಿಷ್ಠ ಖರ್ಚನ್ನು ಐದು ಸಾವಿರ ರುಪಾಯಿಗೆ ಸೀಮಿತಗೊಳಿಸಿದೆ. ಇದರಿಂದಾಗಿ, ಹಣದಹೊಳೆ ಹರಿಯುವುದನ್ನು ಅಥವಾ ರಾಜಕೀಯ ಪಕ್ಷಗಳು ನೇರವಾಗಿ ಆರ್ಥಿಕ ನೆರವನ್ನು ನೀಡುವುದನ್ನು ನಿಯಂತ್ರಿಸಲಾಗಿದೆ. ಮಾತ್ರವಲ್ಲದೆ, ಚುನಾವಣೆ ಮುಗಿದ ಎರಡು ವಾರಗಳಲ್ಲಿ ಅಭ್ಯರ್ಥಿಯು ಚುನಾವಣಾ ಖರ್ಚಿನ ವಿವರವನ್ನು ಕಾಲೇಜು ಆಡಳಿತ ಮಂಡಳಿಗೆ ಸಲ್ಲಿಸುವುದು ಕಡ್ಡಾಯವಾಗಿದೆ, ಚುನಾವಣಾ ಪ್ರಚಾರದ ವೇಳೆ ಮುದ್ರಿತ ಪೋಸ್ಟರ್, ಪ್ಲಾಸ್ಟಿಕ್ ಬ್ಯಾನರ್, ಲೌಡ್ ಸ್ಪೀಕರ್‌ಗಳ ಬಳಕೆಗೆ ನಿರ್ಬಂಧ ಹೇರಲಾಗಿದೆ. ಇದರೊಂದಿಗೆ ಅಭ್ಯರ್ಥಿಗಳ ಕೈಬರಹದ ಪೋಸ್ಟರ್‌ಗಳಿಗೆ ಮಾತ್ರ ಅವಕಾಶ ನೀಡಲಾಗಿದೆ.

ಇದಿಷ್ಟೇ ಅಲ್ಲದೆ ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗೆ ಕೆಲವೊಂದಷ್ಟು ಮಾರ್ಗಸೂಚಿಯನ್ನು ರೂಪಿಸುವ ಮೂಲಕ ಕಾಲೇಜು ಸಮಯದಲ್ಲಿಯೇ ಫುಲ್‌ಟೈಂ ರಾಜಕೀಯ ಮಾಡಲು ಆಗದಂತೆ ಕ್ರಮವಹಿಸಲಾಗಿದೆ. ಪ್ರಮುಖವಾಗಿ, ಅಭ್ಯರ್ಥಿ ಯಾವುದೇ ವಿಷಯದಲ್ಲಿ ಬ್ಯಾಕ್‌ಲಾಗ್ ಹೊಂದಿರುವಂತಿಲ್ಲ, ಶೇ.75ರಷ್ಟು ಹಾಜರಾತಿ ಕಡ್ಡಾಯ, ಕ್ರಿಮಿನಲ್ ಪ್ರಕರಣ ಅಥವಾ ಕಾಲೇಜಿನಲ್ಲಿ ಶಿಸ್ತು ಕ್ರಮ ಎದುರಿಸುತ್ತಿದ್ದರೆ ಅಂಥವರಿಗೆ ಸ್ಪರ್ಧಿಸಲು ಅವಕಾಶ ನೀಡಿಲ್ಲ, ಇನ್ನು ವಿದ್ಯಾರ್ಥಿಗಳ ಚುನಾವಣೆಯಲ್ಲಿ ರಾಜಕಾರಣಿಗಳ ಹಸ್ತಕ್ಷೇಪವಿರುತ್ತಿದ್ದುದರಿಂದ ಅದನ್ನು ತಗ್ಗಿಸಲು ರಾಜಕೀಯ ಪಕ್ಷಗಳನ್ನು ದೂರವಿರುವಂತೆ ನೋಡಿಕೊಳ್ಳಬೇಕು ಎಂದು ಸ್ಪಷ್ಟಪಡಿಸಲಾಗಿದೆ. ಚುನಾವಣೆ ವಿಷಯದಲ್ಲಿಯೇ ಇಡೀ ಸೆಮಿಸ್ಟರ್ ಕಳೆಯುವಂತಿಲ್ಲ ಎನ್ನುವ ಕಾರಣಕ್ಕೆ, ಇಡೀ ಚುನಾವಣಾ ಪ್ರಕ್ರಿಯೆ ಆರಂಭವಾದ ಆರರಿಂದ ಎಂಟು ವಾರದೊಳಗೆ ಮುಗಿಸಬೇಕು. ಇದರಿಂದಾಗಿ, ವಿದ್ಯಾರ್ಥಿಗಳ ಓದಿಗೆ ಸಮಸ್ಯೆಯಾಗದಂತೆ ಕ್ರಮವಹಿಸಲಾಗಿದೆ. ಆದರೆ ಈ ಸಮಿತಿಯ ಬಹುಚರ್ಚಿತ ಹಾಗೂ ವಿವಾದಾತ್ಮಕ ಅಂಶವೆಂದರೆ, ಒಬ್ಬ ವಿದ್ಯಾರ್ಥಿ ತನ್ನ ಇಡೀ ಶೈಕ್ಷಣಿಕ ಜೀವನದಲ್ಲಿ ಒಂದೇ ಬಾರಿ ಪದಾಧಿಕಾರಿ ಹುದ್ದೆಗೆ ಸ್ಪರ್ಧಿಸಬಹುದು. ಈ ಮೂಲಕ ಅನೇಕ ಪ್ರತಿಭಾವಂತ ವಿದ್ಯಾರ್ಥಿ ನಾಯಕರನ್ನು ಎರಡನೇ ಬಾರಿ ಸ್ಪರ್ಧಿಸದಂತೆ ತಡೆಯುತ್ತಿರುವುದು ಹಲವರ ಆಕ್ಷೇಪಕ್ಕೆ ಕಾರಣವಾಗಿತ್ತು. ಈ ರೀತಿಯ ನಿರ್ಬಂಧದಿಂದ ಪ್ರಜಾಪ್ರಭುತ್ವದ ಮೂಲ ಹಕ್ಕಿನ ಉಲ್ಲಂಘನೆಯಾಗುತ್ತದೆ ಎನ್ನುವುದು ಕೆಲ ವಿದ್ಯಾರ್ಥಿ ಸಂಘಟನೆಗಳ ಆರೋಪವಾಗಿದೆ. ಇದೇ ವಿಷಯವನ್ನು ಮುಂದಿಟ್ಟುಕೊಂಡು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಯನ್ನು ಸಲ್ಲಿಸಲಾಗಿದೆ. ಇದರೊಂದಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ವಯೋಮಿತಿಯನ್ನು ಹೇರಿರುವುದು ಹಲವರ ಆಕ್ಷೇಪಕ್ಕೆ ಕಾರಣವಾಗಿದೆ.

ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿ ಸಂಘಟನೆಗಳ ಚುನಾವಣೆಯ ವಿಷಯದಲ್ಲಿ ರಾಜ್ಯ ಸರಕಾರ ಹಾಗೂ ವಿಶ್ವವಿದ್ಯಾಲಯಗಳ ಕುಲಪತಿಗಳ ಅಭಿಪ್ರಾಯಗಳು ಭಿನ್ನವಾಗಿದ್ದರೂ, ಅವರವರ 'ದೃಷ್ಟಿಕೋನ'ದಲ್ಲಿ ಅವರವರ ನಿಲುವುಗಳು ಸರಿಯಾಗಿಯೇ ಇದೆ. ದೆಹಲಿ, ಪಂಜಾಬ್ ರಾಜ್ಯಗಳಲ್ಲಿ ವಿಶ್ವವಿದ್ಯಾಲಯಗಳ ಚುನಾವಣೆಯಲ್ಲಿ ನಡೆಯುವ ಪೈಪೋಟಿ, ಗೆದ್ದ ಬಳಿಕವಾಗುವ ಗೋಜಲುಗಳನ್ನು ನೋಡಿದಾಗ ಕುಲಪತಿಗಳ ವಿರೋಧ ಸರಿ ಎನಿಸಿದರೂ, ಭವಿಷ್ಯದ ರಾಜಕಾರಣಿಗಳನ್ನು ರೂಪಿಸಲು ಮೊದಲ ಹೆಜ್ಜೆಯಾಗುತ್ತಿದ್ದ ಈ ಚುನಾವಣೆಗಳು ನಿಂತ ಬಳಿಕ ರಾಜಕೀಯಕ್ಕೆ ಬರುತ್ತಿರುವ ಅನೇಕ ರಾಜಕಾರಣಿಗಳ ಸೈದ್ಧಾಂತಿಕ ಬದ್ಧತೆಯ ವಿಷಯ ಬಂದಾಗ ಚುನಾವಣೆಗಳು ಅಗತ್ಯವೆನಿಸುವುದು ಸಹಜ. ಆದರೆ ಜ್ಞಾನಾರ್ಜನೆಯ ಕೇಂದ್ರಗಳಾಗಬೇಕಿದ್ದ ವಿಶ್ವವಿದ್ಯಾಲಯಗಳು ಜ್ಞಾನಾರ್ಜನೆಗಿಂತ ರಾಜಕೀಯ ಪಾಠಶಾಲೆಯಾಗದಿರಲಿ ಎನ್ನುವ ಕಾರಣಕ್ಕೆ ಸ್ಥಗಿತವಾಗಿದ್ದ ವಿವಿ ಚುನಾವಣೆಗಳನ್ನು ಪುನಾರಂಭಗೊಳಿಸುವ ಮೊದಲು 80ರ ದಶಕದಲ್ಲಿ ಚುನಾವಣೆ ಸ್ಥಗಿತವಾಗಲು ಇದ್ದ ಕಾರಣವೇನು ಎಂಬುದರ ಅವಲೋಕನ ಹಾಗೂ ಈಗ ಮತ್ತೆ ಚುನಾವಣೆ ನಡೆಸಿದರೆ, ಅಂಥ ಗದ್ದಲ-ಗಲಾಟೆ ನಿಯಂತ್ರಿಸುವುದು ಹೇಗೆ ಎನ್ನುವ ಸ್ಪಷ್ಟನೆಯೊಂದಿಗೆ ಆರಂಭಿಸುವುದು ಒಳಿತು. ಏಕೆಂದರೆ, ಜೆಎನ್‌ಯು, ದೆಹಲಿ ವಿಶ್ವವಿದ್ಯಾಲಯ, ಹೈದರಾಬಾದ್ ಕೇಂದ್ರೀಯ ವಿವಿಗಳು ಅಲ್ಲಿನ ಕಲಿಕಾ ಗುಣಮಟ್ಟ, ಸಂಶೋಧನೆಗಳನ್ನು ಮೀರಿ ವಿದ್ಯಾರ್ಥಿಗಳ ಚುನಾವಣೆಯ ವಿಷಯಕ್ಕೆ ಸುದ್ದಿಯಾಗುವಂತೆ ಕರ್ನಾಟಕದ ಕೆಲ ವಿಶ್ವವಿದ್ಯಾಲಯಗಳಿಗೆ ರಾಜಕೀಯ ವಾಸನೆ ಅಂಟುವ ಸಾಧ್ಯತೆಯೇ ಹೆಚ್ಚಿರುತ್ತದೆ ಎಂದರೆ ತಪ್ಪಾಗುವುದಿಲ್ಲ.

## ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

### ಮರಳುಗಾಡಿನ ಸಮೀಕರಣ

ಲಿಂಗಾಯತ ಪ್ರತ್ಯೇಕ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಹೈಜಾಕ್ ಪ್ರಯತ್ನಗಳಿಗೆ ಜನಮೇಜಯ ಉಮರ್ಜಿ ಅವರು 'ಯಕ್ಷಪ್ರಶ್ನೆ' ಅಂಕಣದಲ್ಲಿ ನೀಡಿರುವ ಮತ್ತೊಂದು ಪ್ರಬಲ ಪ್ರತಿಕ್ರಿಯೆ (ಫೆ.21) ಗಮನಾರ್ಹವಾಗಿದೆ. ಏಕಗ್ರಂಥಾಧಾರಿತ ಮತ್ತು ಪ್ರವಾದಿತ್ವಾಧಾರಿತ ಧರ್ಮಗಳಲ್ಲಿ ದೇವರನ್ನು ವರ್ಣಿಸುವುದು, ಪ್ರಶ್ನಿಸುವುದು, ತೆಗಳುವುದು ಅಥವಾ ಮನಬಂದಂತೆ ಕಲ್ಪಿಸುವ ಅಭಿವ್ಯಕ್ತಿ ಸ್ವಾತಂತ್ರ್ಯ ಎಷ್ಟರ ಮಟ್ಟಿಗೆ ಸಾಧ್ಯ? ಅಲ್ಪ ವ್ಯತ್ಯಾಸಕ್ಕೂ ಧರ್ಮನಿಂದನೆ ಎಂಬ ಮುದ್ರೆ, ಕಠಿಣ ಶಿಕ್ಷೆಗಳ ಭೀತಿ ಅಲ್ಲಿ ಸಾಮಾನ್ಯ. ಇದಕ್ಕೆ ವಿರುದ್ಧವಾಗಿ, ಸನಾತನ ಧರ್ಮವು ಚಿಂತನೆ ಮತ್ತು ಅಭಿವ್ಯಕ್ತಿಗೆ ವಿಶಾಲ ಅವಕಾಶ ಒದಗಿಸಿದೆ. ಅದನ್ನೇ ವಚನಕಾರರು ಸಮರ್ಥವಾಗಿ ಉಪಯೋಗಿಸಿದ್ದಾರೆ. 'ಅಕ್ಕಾ ಕೇಳವ್ವ ' ಎಂಬ ವಚನದಲ್ಲಿ ಕೊಟ್ಟಿರೋ ಉದಾಹರಣೆಯೇ ಸಾಕು! ಇಲ್ಲಿ ಶಿವನನ್ನೇ ಕೆಂಜಡೆಗಳ ಸುಲಿಪಲ್ಲ ಗೊರವ ಎಂದು ಅಕ್ಕರೆಯ ನಿಂದನೆ ಮಾಡುವ ಧೈರ್ಯ ಕಾಣಿಸುತ್ತದೆ. ಇಂಥ ಆತ್ಮೀಯತೆಯೊಡಗೂಡಿದ ವಿಮರ್ಶಾತ್ಮಕ ಭಾವ ವ್ಯಕ್ತಪಡಿಸುವ ಪರಂಪರೆಯನ್ನು ಮರುಭೂಮಿಯಲ್ಲಿ ಹುಟ್ಟಿದ ಧರ್ಮಗಳಲ್ಲಿ ಕಲ್ಪಿಸಿಕೊಳ್ಳುವುದೇ ಕಷ್ಟ.

ಆದ್ದರಿಂದ ವಚನಗಳ ಆಂತರಿಕ ತಾತ್ಪರ್ಯ ಮತ್ತು ಶರಣರ ಉದಾತ್ತ ಚಿಂತನೆಗಳನ್ನು ರಾಜಕೀಯ ಉದ್ದೇಶಗಳಿಗೆ ಬಲಿಕೊಡುವ ಯಾವುದೇ ಪ್ರಯತ್ನಕ್ಕೂ ಧಿಕ್ಕಾರವಿರಲಿ.

- ಶರದ್ ದೇಶಪಾಂಡೆ, ಹುಬ್ಬಳ್ಳಿ

### ದರ ಏರಿಕೆ ಶಾಕ್

ರಾಜ್ಯದ ಐದು ಎಸ್ಕಾಂಗಳು ಸುಮಾರು 4,500 ಕೋಟಿ ರುಪಾಯಿ ನಷ್ಟದ ನೆಪವೊಡ್ಡಿ ಪ್ರತಿ ಯೂನಿಟ್‌ಗೆ 91ರಿಂದ 99ಪೈಸೆವರೆಗೆ ದರ ಏರಿಕೆಗೆ ಪ್ರಸ್ತಾವನೆ ಸಲ್ಲಿಸಿರುವುದು ಆತಂಕಕಾರಿ ವಿಷಯ. ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸಿರುವ ಜನಸಾಮಾನ್ಯರಿಗೆ ಇದು ಗಾಯದ ಮೇಲೆ ಬರೆ ಎಳೆದಂತಿದೆ. ಸರಕಾರವು ಒಂದು ಕಡೆ ಉಚಿತ ವಿದ್ಯುತ್ ಯೋಜನೆ ನೀಡುತ್ತಿದ್ದರೆ ಮತ್ತೊಂದೆಡೆ ಇಂಧನ ಹೊಂದಾಣಿಕೆ ಹಾಗೂ ಸ್ಥಿರ ಶುಲ್ಕದ ಹೆಸರಿನಲ್ಲಿ ಮಧ್ಯಮ ವರ್ಗದವರ ಜೇಬಿಗೆ ಕತ್ತರಿ ಹಾಕುತ್ತಿದೆ. ಬೆಸ್ಕಾಂ ಒಂದೇ 2,800 ಕೋಟಿ ರು. ನಷ್ಟ ಅನುಭವಿಸಲು ಇಲಾಖೆಯ ನಿರ್ವಹಣಾ ವೈಫಲ್ಯ ಮತ್ತು ಅದಕ್ಷತೆ ಕಾರಣವೇ ಹೊರತು ಪ್ರಾಮಾಣಿಕ ಗ್ರಾಹಕರಲ್ಲ. ಬೇಸಗೆಯ ಗರಿಷ್ಠ ಬೇಡಿಕೆಯ ಸಮಯದಲ್ಲಿ 10ರಿಂದ 20 ರು.ನಷ್ಟು ಸ್ಥಿರ ಶುಲ್ಕ ಹೆಚ್ಚಳ ಮಾಡುವುದು ಜನವಿರೋಧಿ ನಡೆಯಾಗಿದೆ. ಕೈಗಾರಿಕಾ ಮತ್ತು ವಾಣಿಜ್ಯ ವಲಯದ ಮೇಲಿನ ಈ ಹೊರೆ ಅಂತಿಮವಾಗಿ ಬೆಲೆ ಏರಿಕೆಗೆ ದಾರಿಯಾಗುತ್ತದೆ. ಸಾರ್ವಜನಿಕ ಅಭಿಪ್ರಾಯ ಸಂಗ್ರಹದ ಹೆಸರಿನಲ್ಲಿ ಈ ಪ್ರಸ್ತಾವನೆಯನ್ನು ಅಂಗೀಕರಿಸಬಾರದು. ಸರಕಾರವು ಎಸ್ಕಾಂಗಳ ಸೋರಿಕೆ ತಡೆಗಟ್ಟಿ ನಷ್ಟವನ್ನು ಸರಿದೂಗಿಸುವ ಪರ್ಯಾಯ ಮಾರ್ಗಗಳನ್ನು ಹುಡುಕಬೇಕು.

- ಡಾ.ವಿಜಯಕುಮಾರ ಎಚ್.ಕೆ., ರಾಯಚೂರು

### ಆತಂಕಕಾರಿ ಸಂಗತಿ

ಕೃತಕ ಬುದ್ಧಿಮತ್ತೆಯ (ಎಐ) ಸಾಧಕ-ಬಾಧಕಗಳ ಕುರಿತಾದ ಚರ್ಚೆ ನಡೆಯುತ್ತಲೇ ಇದೆ. 'ಎಐ' ಸಂಪೂರ್ಣವಾಗಿ ಅನುಷ್ಠಾನಕ್ಕೆ ಬಂದಿದ್ದೇ ಆದಲ್ಲಿ, ಐಟಿ/ಬಿಟಿ ಸೇರಿದಂತೆ ಹಲವಾರು ಕ್ಷೇತ್ರಗಳಲ್ಲಿ ಗಣನೀಯ ಸಂಖ್ಯೆಯಲ್ಲಿ ಉದ್ಯೋಗಿಗಳು ಕೆಲಸವನ್ನು ಕಳೆದುಕೊಳ್ಳುತ್ತಾರೆ ಎಂಬ ಆತಂಕಗಳೂ ಭುಗಿಲೆದ್ದಿವೆ. ಮತ್ತೆ ಕೆಲವರು 'ಹಾಗೇನೂ ಆಗುವುದಿಲ್ಲ, ಬದಲಾಗಿ ಮತ್ತಷ್ಟು ಪೂರಕ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವೆ' ಎಂದು ಭರವಸೆ ನೀಡುತ್ತಿದ್ದಾರೆ. ಇದರಲ್ಲಿ ಯಾವುದು ಸತ್ಯ ಎಂಬುದನ್ನು ಕ್ಷೇತ್ರತಜ್ಞರು ಬಹಿರಂಗಪಡಿಸಬೇಕು ಮತ್ತು ಜನರಲ್ಲಿ ಮಡುಗಟ್ಟಿರುವ ಗೊಂದಲವನ್ನು ದೂರಮಾಡಬೇಕು.

- ಬೂಕನಕೆರೆ ವಿಜೇಂದ್ರ, ಮೈಸೂರು

# ರಾಜುಪತ್ರಿಕೆ ಎಂಬ ಸ್ನೇಹಿತನನ್ನು ನೆನಪಿಸಿದ ರಮಣ್ ಲಾಂಬಾ ಸಾವು!

ಪದಸಾಗರ
ನವೀನ್ ಸಾಗರ್
vveditoped@gmail.com

ಕನ್ನಡದಲ್ಲಿ ನೀನು ಅತಿಯಾಗಿ ಮಿಸ್ ಮಾಡಿಕೊಳ್ಳುವ ಮ್ಯಾಗಜಿನ್ ಯಾವುದು ಅಂತ ನನ್ನನ್ನು ಕೇಳಿದರೆ, ನಾನು ಹಿಂದೆ ಮುಂದೆ ಯೋಚಿಸದೆ ಹೇಳುವ ಉತ್ತರ 'ರಾಜುಪತ್ರಿಕೆ'.

ನಾನು ಅಂದಿನ ರೂಪತಾರಾ ಮಿಸ್ ಮಾಡಿಕೊಳ್ಳೇನೆ. ಅಂದಿನ ಪ್ರಜಾಮತ ಮಿಸ್ ಮಾಡಿಕೊಳ್ಳೇನೆ. ಚಂದಮಾಮ, ಬಾಲಮಿತ್ರಕ್ಕಿಂತ ಹೆಚ್ಚು ಆಪ್ತವೆನಿಸಿದ್ದ ಬೊಂಬೆಮನೆ ಮಿಸ್ ಮಾಡಿಕೊಳ್ಳೇನೆ. ಅಭಿಮಾನಿ ಪ್ರಕಾಶನದ ಅಂದಿನ ಅರಗಿಣಿ ಪತ್ರಿಕೆಯನ್ನು ಬಹಳವಾಗಿ ಮಿಸ್ ಮಾಡ್ಕೋತೇನೆ. ತುಷಾರಕ್ಕಿಂತ ಮಯೂರವನ್ನು ಹೆಚ್ಚು ಮಿಸ್ ಮಾಡ್ಕೋತಿದ್ದೆ. ಒಂದೊಂದು ಕಾರಣಕ್ಕೆ ಒಂದೊಂದು ಪತ್ರಿಕೆ ಇಷ್ಟವಾಗುತ್ತಿತ್ತು. ಆದರೆ ಯಾವುದೇ ಪತ್ರಿಕೆ ಇರಲಿ ಕಾಮನ್ ಫ್ಯಾಕ್ಟರ್ ಎಂಬಂತೆ ಕ್ರಿಕೆಟ್ ಮತ್ತು ಸಿನಿಮಾಗಳು ಪ್ರಥಮ ಆಕರ್ಷಣೆಯಾಗಿರುತ್ತಿದ್ದವು. ಆ ನಂತರ ಇನ್ನಿತರ ವಿಷಯಗಳತ್ತ ಹೊರಳುತ್ತಿದ್ದೆ. ಬಹುತೇಕ ಎಲ್ಲರ ಶುರುವಾತಿನ ಓದೂ ಹೀಗೆಯೇ ಇದ್ದಿರುತ್ತದೆ. ಮಯೂರ, ತುಷಾರ, ಕಸ್ತೂರಿ, ಸುಧಾ, ತರಂಗ, ಇವೆಲ್ಲ ಕೈಗೆ ಸಿಕ್ಕಾಗ ಮೊದಲು ಒಂದು ರೌಂಡ್ ಕೇವಲ ಕಾರ್ಟೂನ್ ಜೋಕ್‌ಗಳನ್ನು, ಚುಟುಕಗಳನ್ನು ಓದಿ ಮುಗಿಸಿ ನಂತರ ದೊಡ್ಡ ಬರಹಗಳ ಕಡೆ ಹೋಗುತ್ತಿದ್ದೆ. ಮಯೂರದ 'ಅಂಗೈಯಲ್ಲಿ ಅರಮನೆ' ಮತ್ತು 'ಬುತ್ತಿಚಿಗುರು' ಎಂಬ ಹಾಸ್ಯ ಬರಹದ ಅಂಕಣಗಳು ನನ್ನ ಅಚ್ಚುಮೆಚ್ಚಿನವು. ನಾನು ತೀರಾ ಎರಡನೇ ತರಗತಿಯಲ್ಲಿದ್ದಾಗಲೇನೋ 'ಅಂಗೈಯಲ್ಲಿ ಅರಮನೆ' ಅಂಕಣಕ್ಕೆ ಸ್ವಾನುಭವದ ಒಂದು ಹಾಸ್ಯ ಪ್ರಸಂಗವನ್ನು ಬಹಳ ಅಚ್ಚುಕಟ್ಟಾಗಿ ರಸವತ್ತಾಗಿ ಬರೆದು ಕಳಿಸಿದ್ದೆ. ಅದು ಪ್ರಕಟವೂ ಆಗಿಬಿಟ್ಟಿತ್ತು. ಅದು ನನ್ನ ಜೀವನದ ಪ್ರಥಮ ಪ್ರಕಟಿತ ಬರಹವಾಗಿ ಇಂದಿಗೂ ನೆನಪಲ್ಲುಳಿದಿದೆ. ವಿಶುಕುಮಾರ್, ನಾ. ಡಿಸೋಜರವರು ತರಂಗಕ್ಕೆ ಬರೆಯುತ್ತಿದ್ದ ಧಾರಾವಾಹಿಗಳು ನಾನು ಓದಿದ ಮೊದಲ ಧಾರಾವಾಹಿಗಳು. ಆ ನಂತರದಲ್ಲಿ ರಾಜಕೀಯದತ್ತ ಆಸಕ್ತಿ ಮೂಡಿಸಿದ ಬರಹಗಳೆಂದರೆ ಲಂಕೇಶ್ ಪತ್ರಿಕೆಯ ವರದಿಗಳು ಮತ್ತು ಟೀಕೆ-ಟಿಪ್ಪಣಿ. ಆದರೆ ಟ್ಯಾಬ್ಲಾಯ್ಡ್ ಮಾದರಿಯಲ್ಲದೆಯೂ ಒಂದು ಖಡಕ್ ತನದಿಂದ ಬಹಳ ಇಂಟರೆಸ್ಟಿಂಗ್ ಅನಿಸುವಂತೆ ಬರೆಯುತ್ತಿದ್ದ ಬಿ.ವಿ. ವೈಕುಂಠರಾಜು ಅವರ ಬರಹಗಳು ಪ್ರಭಾವ ಬೀರಿದ್ದವು. 'ಸಂಪಾದಕರ ಡೈರಿ' ಎಂಬ ನಡುಪುಟದ ದೀರ್ಘ ಅಂಕಣ ಪ್ರೈಮರಿ ಶಾಲೆಯಲ್ಲಿದ್ದ ನನ್ನಂಥವನಲ್ಲೂ ಓದುವ ಆಸಕ್ತಿ ಮೂಡಿಸುತ್ತಿತ್ತು. ವಯಸ್ಸಿಗೆ ಬರುತ್ತಿದ್ದ ಹಾಗೆ ಲಂಕೇಶ್ ಪತ್ರಿಕೆಯ ತುಂಟಾಟ, ನೀಲು ಕವನಗಳು ನಮ್ಮೊಳಗಿನ ಪೋಲಿತನವನ್ನು ಜಾಗೃತಗೊಳಿಸಲಾರಂಭಿಸಿದವು. ಗೃಹಶೋಭಾದಂಥ ಹೆಣ್ಮಕ್ಕಳ ಪುಸ್ತಕ ಬೇರೆಯದೇ ಕಾರಣಕ್ಕೆ ನಮ್ಮಂಥ ಹದಿಹರೆಯದವರನ್ನು ಆಕರ್ಷಿಸತೊಡಗಿತ್ತು. ಕಾಲೇಜ್ ಲೈಬ್ರರಿಯಲ್ಲಿ ಯಾವುದೋ ರತಿವಿಜ್ಞಾನದ ಪುಸ್ತಕ ಕೇಳುವಂತೆ ಗೃಹಶೋಭಾವನ್ನು ಕೇಳಿ ಕದ್ದು ಓದುತ್ತಿದ್ದೆವು. ಹುಡುಗರನ್ನು ಹುಡುಗಿಯರ ಮ್ಯಾಗಜಿನ್ ಮೂಲಕ ಸೆಳೆಯುವ ತಂತ್ರವೊಂದನ್ನು ಗೃಹಶೋಭಾದ ಸಂಪಾದಕರು ಬೇಕೆಂದೇ ಬಳಸಿದ್ದಿರಲೂ ಸಾಕು. ಹೀಗೆ ಭಿನ್ನ ಓದುಗಳ, ಭಿನ್ನ ಆಸಕ್ತಿಗಳ ಮಧ್ಯೆ ನಮ್ಮ ಆಯ್ಕೆಗಳು ಬದಲಾಗುತ್ತಾ ಸಾಗಿತ್ತು. ಆ ನಂತರ 'ಹಾಯ್ ಬೆಂಗಳೂರ್', 'ಓ ಮನಸೇ' ಪತ್ರಿಕೆಗಳಿಗೆ ಅಡಿಕ್ಟ್ ಆದ ನಂತರ ಮಾತ್ರ ಇನ್ಯಾವುದೂ ಬರಹವೇ ಅಲ್ಲ ಎಂಬಂತಾಗಿ ಹೋಗಿದ್ದು ಸುಳ್ಳಲ್ಲ. ಅದೊಂದು ಡೇಂಜರಸ್ ಅಡಿಕ್ಷನ್. ಓದಿನ ಮೇಲೆ, ಬರಹದ ಮೇಲೆ, ವ್ಯಕ್ತಿತ್ವ, ಗುಣಸ್ವಭಾವ, ಯೋಚನಾಶಕ್ತಿ ಎಲ್ಲದರ ಮೇಲೆ ಪ್ರಭಾವ ಬೀರಿದ ಎರಡು ಪತ್ರಿಕೆಗಳು ಅವು. ಕಾಲವೇ ನನ್ನನ್ನು ಆ ವ್ಯಸನದಿಂದ ಮತ್ತು ಪ್ರಭಾವದಿಂದ ಮುಕ್ತವಾಗಿಸಿತು. ಕಾಲಕ್ಕೊಂದು ಥ್ಯಾಂಕ್ಸ್. ಇಂದಿಗೆ ನಾನು ಆ ಪತ್ರಿಕೆಗಳನ್ನು ಮಿಸ್ ಮಾಡಿಕೊಳ್ಳಿಲ್ಲ.

ಈಗ ಈ ಅಂಕಣದ ಮೊದಲ ಸಾಲಿಗೆ ವಾಪಸ್ ಬರುತ್ತೇನೆ. ಹೌದು ನಾನು ಇಂದಿಗೂ ಅತಿ ಎನ್ನುವಷ್ಟು ಮಿಸ್ ಮಾಡಿಕೊಳ್ಳುವುದು ರಾಜುಪತ್ರಿಕೆ ಎಂಬ ಕ್ರೀಡಾಪತ್ರಿಕೆಯನ್ನು. 'ಸ್ಪೋರ್ಟ್ಸ್ ಸ್ಟಾರ್' ಓದಿ ಅರ್ಥ ಮಾಡಿಕೊಳ್ಳುವಷ್ಟು ಇಂಗ್ಲಿಷ್ ಗೊತ್ತಿರಲಿಲ್ಲ. ಫೋಟೋಗಳು, ಸ್ಕೋರ್ ಬೋರ್ಡ್‌ಗಳು, ಚಿಕ್ಕಪುಟ್ಟ ಸಾಲುಗಳು ಒಂದು ಮಟ್ಟಕ್ಕೆ ಅರ್ಥವಾಗುತ್ತಿದ್ದವು. ಆಗ 'ಇವೆಲ್ಲ ಕನ್ನಡದಲ್ಲಿದ್ದಿದ್ದರೆ!' ಎಂದು ಆಸೆಯಾಗುತ್ತಿತ್ತು. ಸ್ಪೋರ್ಟ್ಸ್ ಸ್ಟಾರ್ ಮತ್ತು ಸ್ಪೋರ್ಟ್ಸ್ ವೀಕ್ ಎಂಬ ಎರಡು ಪುಸ್ತಕಗಳನ್ನು ಕೊಂಡು ಓದುವ ಮಿನಿಮಮ್ ಸಿರಿವಂತಿಕೆಯೂ ನಮಗಿರಲಿಲ್ಲ. ಲೈಬ್ರರಿಯಲ್ಲೋ, ಕಟಿಂಗ್ ಶಾಪ್‌ನಲ್ಲೋ ಸಿಕ್ಕರೆ ಕಣ್ಣಾಡಿಸಿ ಖುಷಿಪಡುವುದು, ಶ್ರೀಮಂತರ ಮನೆಯಿಂದ ರದ್ದಿಯಾಗಿ ಬರುತ್ತಿದ್ದ ಅವುಗಳನ್ನು ಬೇಡಿ ಹೆಕ್ಕಿತಂದು ಸಂಗ್ರಹ ಮಾಡಿಟ್ಟುಕೊಳ್ಳುವುದು ಇಷ್ಟರಲ್ಲೇ ತೃಪ್ತಿ. ಇಂಥ ಸಮಯದಲ್ಲಿ ಬಂದದ್ದು ರಾಜುಪತ್ರಿಕೆ. ವೈಕುಂಠರಾಜು ಅವರ ಮಗ ಕ್ರಿಕೆಟ್ ಆಡ್ತಾನಂತೆ. ಸನತ್ ಕುಮಾರ್ ಅಂತ ಅವನ ಹೆಸರಂತೆ. ಅವನೇ ರಾಜುಪತ್ರಿಕೆಯ ಸಂಪಾದಕನಂತೆ ಅಂತೆಲ್ಲ ಸುದ್ದಿ ಕೇಳಿ ರೋಮಾಂಚನ. ಕನ್ನಡದಲ್ಲಿ ಅದೇ ಮೊದಲ ಕ್ರೀಡಾ ಪತ್ರಿಕೆಯಾ? ಗೊತ್ತಿಲ್ಲ. ನನ್ನ ಪಾಲಿಗೆ ಅದೇ ಮೊದಲಿನದ್ದು. ತಾರುಣ್ಯದಲ್ಲಿ ಹಾಯ್ ಬೆಂಗಳೂರ್‌ಗಾಗಿ ಚಡಪಡಿಸುತ್ತಾ ಇದ್ದ ಹಾಗೆ ಬಾಲ್ಯದಲ್ಲಿ ರಾಜುಪತ್ರಿಕೆಗಾಗಿ ಚಡಪಡಿಸುತ್ತಿದ್ದೆ. ಕಣ್ಣಿಗೆ ಕಟ್ಟುವ ಹಾಗೆ ರಣಜಿ ಪಂದ್ಯಗಳ ಮತ್ತು ಟೆಸ್ಟ್-ಏಕದಿನ ಪಂದ್ಯಗಳ ವಿವರಣೆ, ತಕ್ಷಣಕ್ಕೆ ಸೆಳೆದುಕೊಳ್ಳುವ ಹೆಡ್‌ಲೈನ್‌ಗಳು, ಬ್ಲ್ಯಾಕ್ ಆ್ಯಂಡ್ ವೈಟೇ ಆದರೂ ಕಟ್ ಮಾಡಿಟ್ಟುಕೊಳ್ಳಬೇಕು ಅನಿಸುವಂಥ ಫೋಟೋಗಳು, ಕ್ರಿಕೆಟಿನ ಆಸಕ್ತಿಕರ ಅಂಕಿ-ಅಂಶಗಳು, ಎಲ್ಲೂ ಕೇಳಿರದ ಸಂಗತಿಗಳು, ವಿಶಿಷ್ಟ ದಾಖಲೆಗಳು ಎಲ್ಲವೂ ತುಂಬಿರುತ್ತಿದ್ದವು. ಆರ್.ಜಿ. ವಿಜಯಸಾರಥಿ, ಪ್ರೇಮಾನಂದ ಕಾಮತ್ ಸೇರಿದಂತೆ ಹಲವರು ಬರೆಯುತ್ತಿದ್ದರು. ರಾಜುಪತ್ರಿಕೆ ಒಂದು ಸಮೃದ್ಧ ಕ್ರೀಡಾಪತ್ರಿಕೆಯಾಗಿತ್ತು. ಕ್ರಿಕೆಟ್ ಮಾತ್ರವಲ್ಲದೆ ಇತರ ಕ್ರೀಡೆಗಳಿಗೂ ಒಂದಷ್ಟು ಪುಟ ಮೀಸಲಿರುತ್ತಿದ್ದವು. ಅವು ಕೂಡ ರುಚಿಕಟ್ಟಾಗಿ ಓದಿಸಿಕೊಳ್ಳುತ್ತಿದ್ದವು. ವೈಕುಂಠರಾಜು ನಿಧನದ ನಂತರ ರಾಜುಪತ್ರಿಕೆ ನಿಂತು ಹೋಯ್ತಾ? ಸರಿಯಾಗಿ ನೆನಪಿಲ್ಲ. ಆ ನಂತರ ಸನತ್ ಕುಮಾರ್ ಮತ್ತೆ ಕಂಡದ್ದು 'ಎದ್ದೇಳು ಮಂಜುನಾಥ' ಚಿತ್ರದ ನಿರ್ಮಾಪಕರಾಗಿ. ಆ ನಂತರ ವಿಪರೀತ ದೈಹಿಕ ಸಮಸ್ಯೆಗಳಿಂದಾಗಿ, ಆರ್ಥಿಕವಾಗಿಯೂ ಬಸವಳಿದು ತೀರಿಕೊಂಡರೆಂಬ ಸುದ್ದಿ ಕೇಳಿದ್ದು ನೆನಪು. ರಾಜುಪತ್ರಿಕೆಗೆ ಸ್ಪರ್ಧಿಯಾಗಿ ಕ್ರಿಕೆಟ್ ಎಂಬ ಪತ್ರಿಕೆ ಬಂತು, ಇಂದ್ರಜಿತ್ ಲಂಕೇಶ್ ಅವರ ಆಲ್ ರೌಂಡರ್ ಬಂತು. ಆದರೆ ಯಾವುದಕ್ಕೂ ರಾಜುಪತ್ರಿಕೆಯ ಸ್ಥಾನ ತುಂಬಲಾಗಲಿಲ್ಲ. ಕ್ರಿಕೆಟ್ ಬಗ್ಗೆ ಉದ್ದುದ್ದವಾಗಿ, ಅತಿರಂಜಿತವಾಗಿ ಬರೆಯುವ ಹಲವರು ಇಂದಿಗೆ ಸೋಷಿಯಲ್ ಮೀಡಿಯಾದಲ್ಲಿ ಕಾಣಸಿಗುತ್ತಾರೆ. ಗೂಗಲ್ ಮೂಲಕ ಹೆಕ್ಕಿ ಕನ್ನಡಕ್ಕೆ ಅನುವಾದಿಸಿ ಕೊಡುವವರೂ ಸಿಗುತ್ತಾರೆ. ಆದರೆ ರಾಜುಪತ್ರಿಕೆಯ ಆ ಸ್ವಾದ ಸಿಗುವುದಿಲ್ಲ. ಅನಂತ್ ಚಿನಿವಾರ್ 'ಥರ್ಡ್ ಅಂಪೈರ್' ಅಂಕಣದಲ್ಲಿ ಆಗಾಗ ಕ್ರಿಕೆಟ್ ಕುರಿತಾಗಿ ಚೆಂದವಾಗಿ ಬರೆದಾಗ, ಮತ್ತೆ ನೆನಪಾಗುತ್ತಿದ್ದುದು ರಾಜು ಪತ್ರಿಕೆಯೇ. ಟಿವಿ-5ನ ಸುದ್ದಿನಿರೂಪಕ ರಮಾಕಾಂತ್ ಆಗಾಗ ಬರೆಯುವ ಕ್ರಿಕೆಟ್ ಬರಹಗಳು ರಾಜುಪತ್ರಿಕೆಯನ್ನು ಮತ್ತೆ ಮತ್ತೆ ನೆನಪಿಸುತ್ತದೆ. ಇಂಥ ಬರಹಗಾರರೆಲ್ಲ ಸೇರಿ ಒಂದು ರಾಜುಪತ್ರಿಕೆಯನ್ನು ತರಬಾರದೇ ಅಂತಲೂ ಅನಿಸುತ್ತದೆ. ಇಂಗ್ಲಿಷಲ್ಲಿ ಅದ್ಭುತ ಕ್ರಿಕೆಟ್ ಬರಹಗಳನ್ನು ಓದುವಾಗೆಲ್ಲ ಮನಸಿನಲ್ಲೊಮ್ಮೆ ಕನ್ನಡದ ರಾಜುಪತ್ರಿಕೆ ಹಾದುಹೋಗುತ್ತದೆ.

ಇಂದು ದಿಢೀರ್ ರಾಜುಪತ್ರಿಕೆ ನೆನಪಾಗಲು ಕಾರಣ, ರಮಣ್ ಲಾಂಬಾ ಎಂಬ ಕ್ರಿಕೆಟಿಗ. ದೆಹಲಿಯ ಆರಂಭಿಕ ದಾಂಡಿಗ ರಮಣ್ ಲಾಂಬಾ ಆ ದಿನಗಳಲ್ಲಿ ತನ್ನ ಆಕ್ರಮಣಕಾರಿ ಬ್ಯಾಟಿಂಗ್‌ಗೆ ಮತ್ತು ಸುರದ್ರೂಪಕ್ಕೆ ಖ್ಯಾತನಾಗಿದ್ದ. ಕನ್ನಡದ ಪತ್ರಿಕೆಗಳು 'ರಮಣ್ ಲಂಬ' ಅಂತ ಬರೆಯುತ್ತಿದ್ದವು. ರಾಜುಪತ್ರಿಕೆ ಇದ್ದ ಕಾಲದಲ್ಲಿ ರಮಣ್ ಲಾಂಬಾ

ದೇಶೀಯ ಕ್ರಿಕೆಟ್‌ನಲ್ಲಿ ಮಿಂಚುತ್ತಿದ್ದ. ಭಾರತ ತಂಡಕ್ಕೆ ಬಂದು ಮೊದಲ ಸರಣಿಯಲ್ಲೇ ಸೆಂಚುರಿ ಮತ್ತು ಎರಡು ಅರ್ಧಶತಕ ಗಳಿಸಿ ಸರಣಿಯ ಸರ್ವೋತ್ತಮನಾಗಿದ್ದ. ಕಪಿಲ್ ಹೊರತಾಗಿ ಇನ್ನೊಂದಷ್ಟು ಜನರನ್ನು ಇಷ್ಟಪಡಬೇಕು ಅಂತಾದಾಗ ಆತ ಮೊದಲಿಗನಾಗಿದ್ದ. ಅಂದಿನ ದಿನಗಳಲ್ಲಿ ಆಕ್ರಮಣಕಾರಿ ಮನೋಭಾವಕ್ಕಿಂತ ರಕ್ಷಣಾತ್ಮಕ ಆಟಕ್ಕೇ ಹೆಚ್ಚು ಬೆಲೆ ಇತ್ತು. ಹೀಗಾಗಿ ರಮಣ್ ಲಾಂಬಾನ ವೈಫಲ್ಯವು ಆತನ ಸ್ಥಾನವನ್ನು ಕಿತ್ತುಕೊಂಡಿತು. ಆದರೆ ಆತ ಸುಮ್ಮನೆ ಕೂರಲಿಲ್ಲ. ದೇಶೀಯ ಕ್ರಿಕೆಟ್‌ನಲ್ಲಿ ರನ್ ಮಳೆ ಸುರಿಸಿದ. ದೇಶ ಬಿಟ್ಟು ಹೋಗಿ ಬಾಂಗ್ಲಾ ಲೀಗ್‌ಗಳಲ್ಲಿ, ಐರ್ಲೆಂಡ್‌ನಲ್ಲಿ ಎಲ್ಲೆಂದರಲ್ಲಿ ಕ್ರಿಕೆಟ್ ಆಡಿದ. ಅಗ್ರೆಶನ್ ಮಾತ್ರ ಬಿಡಲಿಲ್ಲ, ಆದರೆ ಅದೊಂದು ದಿನ ಬಾಂಗ್ಲಾದಲ್ಲಿ ಲೀಗ್ ಪಂದ್ಯ ಆಡುವಾಗ ಫಾರ್ವರ್ಡ್ ಶಾರ್ಟ್ ಲೆಗ್‌ನಲ್ಲಿ ಫೀಲ್ಡಿಂಗ್ ಮಾಡಲು ನಿಲ್ಲುತ್ತಾನೆ. ಫಾರ್ವರ್ಡ್ ಶಾರ್ಟ್‌ಲೆಗ್ ಅಂದ್ರೆ ಬ್ಯಾಟರ್‌ನಿಂದ ಕೆಲವೇ ಅಡಿಗಳಷ್ಟು ದೂರ. ಬ್ಯಾಟರ್ ರಕ್ಷಣಾತ್ಮಕವಾಗಿ ಟಚ್ ಮಾಡುವ ಚೆಂಡೂ ಕ್ಯಾಚ್ ಆಗಿ ಸಿಗುವಷ್ಟು ಹತ್ತಿರ. ಹಾಗೆ ನಿಲ್ಲುವಾಗ ಇಡೀ ಮೈಗೆ ಕವಚ ಹಾಕಿಕೊಳ್ಳಬೇಕಾಗುತ್ತದೆ. ಅಷ್ಟೊಂದು ಅಪಾಯಕಾರಿ ಜಾಗ ಅದು. ಲಾಂಬಾ ಕನಿಷ್ಠ ಪಕ್ಷ ಹೆಲ್ಮೆಟ್ ಕೂಡ ಧರಿಸದೇ ನಿಂತುಬಿಡುತ್ತಾನೆ. ಹಾಗೆ ಆತ ನಿಂತಿದ್ದು ಅದೇ ಮೊದಲೇನಲ್ಲ, ಅದೇ ಜಾಗದಲ್ಲಿ ನಿಂತು ಕ್ಯಾಚ್ ಹಿಡಿದಿದ್ದೂ ಇದೆ. ಅಂಥದ್ದೇ ಒಂದು ಭಂಡಧೈರ್ಯದಲ್ಲಿ ಲಾಂಬಾ ಫೀಲ್ಡಿಂಗ್‌ಗೆ ನಿಲ್ಲುತ್ತಾನೆ. ಎಡಗೈ ಸ್ಪಿನ್ನರ್ ಸೈಫುಲ್ ಖಾನ್ ಎಸೆದ ಎಸೆತವನ್ನು ಬಿರುಸಾಗಿ ಬಾರಿಸಿಬಿಡುತ್ತಾನೆ, ಮೆಹ್ರಬ್ ಹುಸೇನ್ ಎಂಬ ಬ್ಯಾಟರ್, ಚೆಂಡು ಐನೂರು ಕಿಲೋಮೀಟರ್‌ಗೂ ಹೆಚ್ಚು ವೇಗದಲ್ಲಿ ರಮಣ್ ಲಾಂಬಾನ ಕಪಾಳಕ್ಕೆ ಬಂದು ಬಡಿಯುತ್ತದೆ. ಕಿವಿಯ ಮೇಲ್ಭಾಗ ತಲೆಯ ಚಿಪ್ಪು ಇರುವ ಜಾಗಕ್ಕೆ ಚೆಂಡು ಯಾವ ವೇಗದಲ್ಲಿ ಅಪ್ಪಳಿಸುತ್ತದೆ ಅಂದ್ರೆ, ಆ ಚೆಂಡು ವಾಪಸ್ ಕ್ಯಾಚ್ ಆಗಿ ತಲುಪಿದ್ದು ಕೀಪರ್ ಕೈಗೆ. ಲಾಂಬಾಗೆ ಒಂದು ಕ್ಷಣ ಏನಾಯ್ತು ಎಂದು ಗೊತ್ತಾಗದೆ ಕುಸಿದುಬೀಳುತ್ತಾನೆ. ಹೊರಗಣ್ಣಿಗೆ ಏನೂ ಗಾಯ ಕಾಣಿಸೋದಿಲ್ಲ. ಆಗಷ್ಟೇ ಅಂಗಳಕ್ಕೆ ಬಂದಿದ್ದ ಅಮಿನುಲ್ ಇಸ್ಲಾಂ 'ಆರ್ ಯೂ ಓಕೆ?' ಅಂತ ಕೇಳಿದ್ದಕ್ಕೆ, ಆ ನೋವಿನಲ್ಲೇ 'ಬುಲ್ಲಿ.. ಮೈ ತೋ ಮರ್ ಗಯಾ' ಅಂತ ಹೇಳಿದ್ದೇ ಕೊನೆ. ಲಾಂಬಾ ಕೋಮಾಗೆ ಜಾರುತ್ತಾನೆ. ಮೂರು ದಿನ ಕೋಮಾದಲ್ಲಿದ್ದು ಫೆಬ್ರವರಿ 23ಕ್ಕೆ ಕೊನೆಯುಸಿರೆಳೆಯುತ್ತಾನೆ. ಇಂದಿಗೆ ಸರಿಯಾಗಿ ಇಪ್ಪತ್ತೆಂಟು ವರ್ಷ. ಬದುಕಿದ್ದಿದ್ದರೆ ರಮಣ್ ಲಾಂಬಾಗೆ ಕಳೆದ ತಿಂಗಳಿಗೆ ಅರವತ್ತಾರು ತುಂಬಿರುತ್ತಿತ್ತು. ರಮಣ್ ಲಾಂಬಾ ಸಾವಿನ ಘಟನೆಯನ್ನು ಇತ್ತೀಚೆಗೆ ಸೋಷಿಯಲ್ ಮೀಡಿಯಾ ಪೇಜೊಂದರಲ್ಲಿ ಓದಿದಾಗ ಒಂದು ಕ್ಷಣ 'ರಾಜುಪತ್ರಿಕೆಯನ್ನು ಮಿಸ್ ಮಾಡಿಕೊಂಡೆ; ರಾಜುಪತ್ರಿಕೆ ಇದ್ದಿದ್ದರೆ ಭಾವುಕ ದುರ್ಘಟನೆಯನ್ನು ಹೇಗೆ ಬರೆದಿರುತ್ತಿತ್ತು' ಅಂತೆಲ್ಲ ಯೋಚನೆಗಳು ಬಂದವು. ಯಾಕಂದ್ರೆ, ಇದೇ ರಾಜುಪತ್ರಿಕೆಯಲ್ಲಿ ನಾನು ಬಾಡಿಲೈನ್ ಸರಣಿಯ ಬರಹ ಓದಿದ್ದು. ನಾನು ಡಾನ್ ಬ್ರಾಡ್‌ಮನ್ ಆಟವನ್ನು ನೋಡಿರಲಿಲ್ಲ, ಹೆರಾಲ್ಡ್ ಲಾರ್‌ವುಡ್ ಬಗ್ಗೆ ಏನಂದ್ರೆ ಏನೂ ಗೊತ್ತಿರಲಿಲ್ಲ. ಡಗ್ಲಾಸ್ ಜಾರ್ಡಿನ್ ಹೆಸರೂ ಕೇಳಿರಲಿಲ್ಲ. ಆದರೆ ರಾಜುಪತ್ರಿಕೆ ಬಾಡಿಲೈನ್ ಸರಣಿಯ ಬಗ್ಗೆ ಅದೆಷ್ಟು ಸೊಗಸಾಗಿ ಬರೆದಿತ್ತು ಅಂದರೆ, ನನಗದು ಆಟ ಅನಿಸಿರಲಿಲ್ಲ, ಅದ್ಯಾವುದೋ ಎಮೋಷನಲ್ ಸಿನಿಮಾ ಎಂಬ ಭಾವ ಉಕ್ಕಿಸಿತ್ತು. ಜಾರ್ಡಿನ್ ಯಾವ ಅನಿವಾರ್ಯತೆಯಲ್ಲಿ ಬಾಡಿಲೈನ್ ಎಂಬ ತಂತ್ರ ಹೊಸೆದ, ಲಾರ್‌ವುಡ್ ಒಂದೊಂದು ಚೆಂಡು ಎಸೆದು ಬ್ಯಾಟರ್‌ನನ್ನು ಗಾಯಗೊಳಿಸಿ ನೆಲಕ್ಕೆ ಉರುಳಿಸಿದಾಗ ಹೇಗೆ ದುಃಖಿಸುತ್ತಿದ್ದ, 'ದೇವರೇ ಆ ಬ್ಯಾಟರ್‌ನ ನೋವನ್ನು ನನಗೆ ಕೊಡು' ಎಂದು ಮನಸಲ್ಲೇ ಗೋಗರೆಯುತ್ತಿದ್ದ, ಜಾರ್ಡಿನ್ ಅಂದೆಂಥ ಕಟುಕ ಕಪ್ತಾನನಾಗಿದ್ದ, ಇಂಥ ಡೆಡ್ಲೀ ಬೌಲಿಂಗನ್ನೂ ಹೆಲ್ಮೆಟ್ಟೇ ಇಲ್ಲದ ಡಾನ್ ಬ್ರಾಡ್‌ಮನ್ ಹೇಗೆ ಎದುರಿಸಿ ರನ್ ಗಳಿಸಿದ, ಎಲ್ಲವನ್ನೂ ನಾನು ಎದುರು ಕೂತು ನೋಡುತ್ತಿದ್ದೇನೇನೋ ಎಂಬಂತೆ ಪತ್ರಿಕೆ ಬರೆಯುತ್ತಿತ್ತು. ಮನಸು ಮಹಾಭಾರತದ ಘಟನೆ ಮತ್ತು ಪಾತ್ರಗಳನ್ನೆಲ್ಲ ನೆನಪಿಸುತ್ತಿತ್ತು. ಇದಾದ ನಂತರ ದೂರದರ್ಶನದಲ್ಲಿ ಬಾಡಿಲೈನ್ ಸರಣಿಯ ಸೀರಿಯಲ್ ಪ್ರಸಾರವಾಯಿತು. ಆ ಸರಣಿಯ ಮರುಸೃಷ್ಟಿ ಅದು. ಆದರೆ ರಾಜುಪತ್ರಿಕೆಯ ಬರಹ ಕೊಟ್ಟ ರೋಚಕತೆ, ಭಾವುಕತೆ ಯಾವುದನ್ನೂ ಆ ದೃಶ್ಯಗಳು ಕೊಡಲು ಸಾಧ್ಯವಾಗಲೇ ಇಲ್ಲ. ಅದೆಲ್ಲೆಲ್ಲಿಂದ ಮಾಹಿತಿ ಹೆಕ್ಕಿ ತರುತ್ತಿದ್ದರೋ! ಅಂದಿನ ಪತ್ರಕರ್ತರ ಓದು, ಅಧ್ಯಯನ, ಬರವಣಿಗೆಯ ಶೈಲಿ ಮತ್ತು ತಾಕತ್ತುಗಳೇ ಬೇರೆ. ಭಾರತಕ್ಕೆ ಕ್ರಿಕೆಟ್ ಎಂಬುದು ಎಮೋಷನ್ ಅಂತ ಈಗ ಹೇಳುತ್ತಾರೆ. ಆದರೆ ಅದನ್ನು ಎಮೋಷನ್ ಆಗಿಸುವಲ್ಲಿ ಅಂದಿನ ಪತ್ರಿಕೆಗಳ, ಬರಹಗಳ ಪಾತ್ರ ದೊಡ್ಡದಿದೆ.

ಮತ್ತೆ ಹೇಳುತ್ತೇನೆ: I miss ರಾಜುಪತ್ರಿಕೆ. ತುಂಬ ಅಂದ್ರೆ ತುಂಬ....

## ಭಟ್ಟರ್ ಸ್ಕಾಚ್

- **ಸಂಚಾರಿ ಪ್ರಾಣೇಶ, ಕೃಷ್ಣಮೂರ್ತಿಪುರಂ**
ಭಟ್ರೇ, ಮದುವೆ ಎಂಬುದು ಜನುಮದ ಬಂಧನ ಅಂತ ಲೋಕಕ್ಕೆ ಸಾರಿ ಹೇಳುವ ತವಕ. ನಾನು ಏನು ಮಾಡಬಹುದು?
– **ಸಾಧ್ಯವಾದರೆ ಪೊಲೀಸ್ ಭವನದಲ್ಲಿ ಮದುವೆಯಾಗಿ!**

- **ಶ್ರುತಿ , ಡಾಲರ್ಸ್ ಕಾಲೋನಿ**
ಭಟ್ರೇ, ನನ್ನ ಮದುವೆ ಆಮಂತ್ರಿತರು ಯಾವ ವಿಷಯವನ್ನು ಈ ಹಂತದಲ್ಲೇ ಚರ್ಚಿಸುವುದು ಇಷ್ಟವಾಗಲ್ಲ?
– **ಫಲಶೃತಿ!**

- **ಅಮಾಸೆ ಸುಬ್ಬು, ಮೈಸೂರು**
ಭಟ್ರೇ, ಸಫಾರಿಯೇನೋ ಪ್ರಾರಂಭವಾಯ್ತು. ಮುಂದೇನು?
– **ಸವಾರಿ ಆರಂಭವಾಗಬೇಕಷ್ಟೇ!**

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಇಲ್ಲೊಬ್ಬ ಉಪನ್ಯಾಸಕರು ಮನೆಗಿಂತ ಕಾಲೇಜ್ ಬೆಟರ್ ಅಂತ ಹೇಳ್ತಿದ್ದರಲ್ಲಾ?
– **ಪಾಪ, ಅವರ ಸಂಕಟ ಏನೋ?!**

- **ಮಲ್ಲಿಕಾರ್ಜುನ ಪಾಟೀಲ, ಕುಷ್ಟಗಿ**
ಭಟ್ರೇ, ಅವಳು ಹೇಳಿದಂತೆ ಕೇಳಲಾ, ಬೇಡವಾ?
– **ಎಲ್ಲದಕ್ಕೂ ನನ್ನನ್ನೇ ಕೇಳಿ ಮಾಡೋ ಥರ ಪೋಸು ಕೊಡಬೇಡ!**

- **ಮೋಹನ ಸಂಜೀವ, ಹುಬ್ಬಳ್ಳಿ**
ಭಟ್ರೇ, ಒಂದರಲ್ಲಿ ಎರಡು ಇರಬೇಕು, ನನ್ನ ಹುಡುಗಿಗೆ ಏನನ್ನು ಪಾರ್ಸೆಲ್ ಮಾಡಲಿ?
– **ಕಳ್ಳೇಕಾಯಿ!**

- **ರಮೇಶ ಗೌಡ, ಮಳವಳ್ಳಿ**
ಭಟ್ರೇ, ಮೊಬೈಲ್‌ಗೂ, ಹೆಂಡತಿಗೂ ಏನು ವ್ಯತ್ಯಾಸ?
– **ಮೊಬೈಲ್ ಹ್ಯಾಂಗ್ ಆದರೆ ಸ್ವಿಚ್ ಆಫ್ ಆಗುತ್ತೆ, ಹೆಂಡತಿ ಹ್ಯಾಂಗ್ ಆದರೆ ಗಂಡ ಸ್ವಿಚ್ ಆಫ್ ಆಗ್ತಾನೆ!**

- **ನಿರಂಜನ, (ಇಮೇಲ್ ಮೂಲಕ)**
ಭಟ್ರೇ, ಹೆಂಡತಿಯನ್ನು ಗೆಲ್ಲುವುದು ಹೇಗೆ?
– **ಉತ್ತರ ಲಭ್ಯವಿಲ್ಲ... ಈ ವಿಷಯದಲ್ಲಿ ಗೂಗಲ್ ಕೂಡ ಕೈ ಎತ್ತಿಬಿಟ್ಟಿದೆ!**

- **ಕೆ.ಕೃಷ್ಣಯ್ಯ, ಮಂಡ್ಯ**
ಭಟ್ರೇ, ಕೆಲಸ ಮಾಡುವಾಗ ನಿದ್ದೆ ಬಂದರೆ ಏನು ಮಾಡಬೇಕು?
– **ಕಣ್ಣು ಮುಚ್ಚಿ ಸುಮ್ಮನೆ ಕುಳಿತುಕೊಳ್ಳಿ, ಬಾಸ್ ಬಂದರೆ 'ಧ್ಯಾನ ಮಾಡುತ್ತಿದ್ದೇನೆ' ಎಂದು ಹೇಳಿಬಿಡಿ!**

- **ಪ್ರದೀಪ ನಾಯಕ, ಬೆಂಗಳೂರು**
ಭಟ್ರೇ, ಜೀವನದಲ್ಲಿ ಅತಿ ವೇಗವಾಗಿ ಓಡುವುದು ಯಾವುದು?
– **ಭಾನುವಾರ... ಬೆಳಗ್ಗೆ ಕಣ್ಣು ಬಿಡುವಷ್ಟರಲ್ಲಿ ಸೋಮವಾರದ ಆಫೀಸ್ ಟೈಮ್ ಆಗಿಬಿಡುತ್ತದೆ!**

- **ಸಿ.ಚಂದ್ರಶೇಖರ, (ಇಮೇಲ್ ಮೂಲಕ)**
ಭಟ್ರೇ, ಸಂಬಳ ಅಂದರೇನು?
– **ತಿಂಗಳ ಮೊದಲ ವಾರ 'ಮಹಾರಾಜ'ನಂತೆ ಬಂದು, ಎರಡನೇ ವಾರಕ್ಕೆ 'ಸನ್ಯಾಸಿ'ಯನ್ನಾಗಿ ಮಾಡಿ ಮಾಯವಾಗುವ ಮಾಯೆ!**

# ಹೊಸ ಅವಕಾಶಗಳ ಭಂಡಾರ ತೆರೆಯಲಿದೆ 'ಎಐ'!

**ಬದುಕಿನಲ್ಲಿ ಆಶಾಭಾವ ಬೇಕು, ಆದರೆ ಅದರ ಜತೆಗೆ ಜಗತ್ತಿನಲ್ಲಿ ಆಗುತ್ತಿರುವ ಬದಲಾವಣೆಗಳಿಗೂ ನಮ್ಮನ್ನು ನಾವು ಒಡ್ಡಿಕೊಳ್ಳಬೇಕು. 'ಆಲ್ ಈಸ್ ವೆಲ್' ಎನ್ನುವ ಟೊಳ್ಳು ಆಶಾಭಾವ ಚಲನಚಿತ್ರದಲ್ಲಷ್ಟೇ ಕೆಲಸ ಮಾಡಬಹುದೇ ವಿನಾ, ನಿಜಜೀವನದಲ್ಲಲ್ಲ.**

ವಿಶ್ವರಂಗ

ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಸಮಯದ ಜತೆಗೆ ಹೆಜ್ಜೆ ಹಾಕುವುದನ್ನು ನಾವೆಲ್ಲರೂ ಕಲಿಯಬೇಕು, ಈ ಅವಶ್ಯಕತೆ ಹಿಂದಿಗಿಂತ ಇಂದು ಹೆಚ್ಚಾಗಿದೆ. ಇದರರ್ಥ ಹಿಂದೆ ಇರಲಿಲ್ಲ ಎಂದಲ್ಲ. ಸಮಯದ ಜತೆಜತೆಗೆ ಹೆಜ್ಜೆ ಹಾಕುವವರು ಮಾತ್ರ ಸಮಾಜದಲ್ಲಿ ಉತ್ತಮ ಬದುಕು ಕಟ್ಟಿಕೊಳ್ಳಲು ಸಾಧ್ಯ. ಸಮಯಕ್ಕೆ ತಕ್ಕಂತೆ ಬದಲಾವಣೆಗಳು ಅವಶ್ಯಕ. ಸಮಯದ ಒಂದು ಹಂತದಲ್ಲಿ ಗೆದ್ದಿದ್ದ ವಿಚಾರಗಳು ಸೋಲುವುದು, ಸಮಯಕ್ಕೆ ತಕ್ಕಂತೆ ಬದಲಾಗಲಿಲ್ಲ, ಹೆಜ್ಜೆ ಹಾಕಲಿಲ್ಲ ಎನ್ನುವ ಕಾರಣಕ್ಕೆ ಎನ್ನುವುದಕ್ಕೆ ನೂರಾರು ಉದಾಹರಣೆಗಳು ನಮ್ಮ ಕಣ್ಣ ಮುಂದೆ ಸಿಗುತ್ತವೆ. ಕೆಲವೊಂದು ಉದಾಹರಣೆಗಳ ವ್ಯಾಪ್ತಿ ಸೀಮಿತವಾಗಿದ್ದರೆ, ಕೆಲವೊಂದು ಉದಾಹರಣೆಗಳು ಜಗವ್ಯಾಪಿ.

ನಮ್ಮೂರಲ್ಲಿ ಶೆಟ್ಟರ ದಿನಸಿ ಅಂಗಡಿ ಬಹಳ ಪ್ರಸಿದ್ಧವಾಗಿತ್ತು. ಅವರ ಅಂಗಡಿಯಲ್ಲಿ ಸಿಗದೆ ಇರುವ ವಸ್ತುವೇ ಇಲ್ಲ ಎಂದು ಊರಿನ ಜನ ಮಾತಾಡಿಕೊಳ್ಳುತ್ತಿದ್ದರು. ಅವತ್ತಿಗೆ ಊರಿನ ಜನರ ಅವಶ್ಯಕತೆಯ ಎಲ್ಲಾ ವಸ್ತುಗಳನ್ನು ಶೆಟ್ಟರು ತಮ್ಮ ಅಂಗಡಿಯಲ್ಲಿ ಮಾರಲು ಇಟ್ಟಿದ್ದರು. ಬೇರೆ ಅಂಗಡಿಗಳಲ್ಲಿ ಒಂದಿದ್ದರೆ ಇನ್ನೊಂದಿಲ್ಲ ಎನ್ನುವಂಥ ಪರಿಸ್ಥಿತಿ. ಹೀಗಾಗಿ ಊರಿನ ಜನರೆಲ್ಲಾ ಶೆಟ್ಟರ ಅಂಗಡಿಯಲ್ಲಿ ದಿನಬಳಕೆಯ ಎಲ್ಲಾ ವಸ್ತುಗಳನ್ನೂ ಕೊಳ್ಳುತ್ತಿದ್ದರು. ಕೇವಲ ಎರಡರಿಂದ ಮೂರು ದಶಕದಲ್ಲಿ ಇಂಥ ಅಂಗಡಿಗಳು ಇಲ್ಲ ಎನ್ನುವಷ್ಟು ಕಡಿಮೆಯಾಗಿವೆ. ಸಣ್ಣಪುಟ್ಟ ಊರುಗಳಲ್ಲಿ ಕೂಡ ಪುಟಾಣಿ ಸೂಪರ್ ಮಾರ್ಕೆಟ್‌ಗಳು ತಲೆಯೆತ್ತಿ ನಿಂತಿವೆ. ಒಂದು ಸಮಯದಲ್ಲಿ ಇತರರಿಗಿಂತ ಮುಂದಿದ್ದ, ಯಶಸ್ವಿಯಾಗಿದ್ದ ಶೆಟ್ಟರ ಅಂಗಡಿಗಳು, ಕಾಲಕ್ಕೆ ತಕ್ಕಂತೆ ಅಪ್‌ಗ್ರೇಡ್ ಆಗದ ಕಾರಣ ಇವತ್ತಿಗೆ ಇಲ್ಲವಾಗಿವೆ. ನಮ್ಮೂರ ಶೆಟ್ಟರ ಅಂಗಡಿ ಕಥೆ ನಿಮ್ಮೂರಲ್ಲಿ ಕೂಡ ಇನ್ನೊಂದು ಹೆಸರಿನಲ್ಲಿ ಇದ್ದೇ ಇರುತ್ತೆ. ಹೀಗಾಗಿ ಇಂಥ ಉದಾಹರಣೆಗಳ ವ್ಯಾಪ್ತಿ ಸೀಮಿತ.

ಜಗತ್ ಪ್ರಸಿದ್ಧವಾಗಿದ್ದ ನೋಕಿಯಾ ಎನ್ನುವ ಸಂಸ್ಥೆ ಮೊಬೈಲ್ ಮಾರುಕಟ್ಟೆಯ 40ರಿಂದ 50 ಪ್ರತಿಶತ ಆಕ್ರಮಿಸಿಕೊಂಡಿತ್ತು. ಹೌದು, ನೋಕಿಯಾ ಜಾಗತಿಕವಾಗಿ 50 ಪ್ರತಿಶತ ಮಾರುಕಟ್ಟೆಯ ಮೇಲೆ ಅಧಿಪತ್ಯ ಸಾಧಿಸಿತ್ತು. 2007ರವರೆಗೂ ಇದು ತನ್ನ ಹಿಡಿತವನ್ನು ಕಾಪಾಡಿಕೊಂಡಿತ್ತು. ಆ ನಂತರದ ದಿನಗಳಲ್ಲಿ ಸ್ಮಾರ್ಟ್ ಫೋನ್‌ಗಳಲ್ಲಿ ಆದ ಶೀಘ್ರ ಬದಲಾವಣೆಯನ್ನು ಅದು ಗುರುತಿಸಲು ಮತ್ತು ಅದಕ್ಕೆ ತಕ್ಕಂತೆ ಹೊಂದಿಕೊಳ್ಳಲು ಆಗದ ಕಾರಣ 2013ರ ವೇಳೆಗೆ ಮಾರುಕಟ್ಟೆಯಲ್ಲಿ ನೇಪಥ್ಯವನ್ನು ಸೇರುವಂತಾಯಿತು. ಇದರ ಲೆಕ್ಕಾಚಾರದಲ್ಲಿ ಬರುವ ಇನ್ನೊಂದು ಜಗತ್ ಪ್ರಸಿದ್ಧ ಸಂಸ್ಥೆ ಕೊಡಾಕ್. 1976ರ ಸಮಯದಲ್ಲಿ ಅಮೆರಿಕದ ಕ್ಯಾಮರಾ ಮಾರುಕಟ್ಟೆಯ 90 ಪ್ರತಿಶತ ಅಧಿಪತ್ಯವನ್ನು ಇದು ಹೊಂದಿತ್ತು. 30 ವರ್ಷಗಳ ಕಾಲ ಜಗತ್ತಿನ ಈ ವಲಯದ ಅನಭಿಷಿಕ್ತ ರಾಜನಂತೆ ಈ ಸಂಸ್ಥೆ ರೂಲ್ ಮಾಡಿತು. ಜಗತ್ತು ಸದ್ದಿಲ್ಲದೇ ಡಿಜಿಟಲ್ ಕಡೆಗೆ ಮುಖಮಾಡಿತು. ಸ್ಮಾರ್ಟ್ ಫೋನ್‌ಗಳಲ್ಲಿ 'ಇನ್-ಬಿಲ್ಟ್' ಕ್ಯಾಮರಾ ಬರುವುದು ಶುರುವಾಯ್ತು. ಅದು ಜಗತ್ತು ಫೋಟೋ ತೆಗೆಯುವ ರೀತಿಯನ್ನೇ ಬದಲಿಸಿಬಿಟ್ಟಿತು. ಈ ರೀತಿಯ ಬದಲಾವಣೆಗೆ ಹೊಂದಿಕೊಳ್ಳಲಾಗದ ಕೊಡಾಕ್ 2012ರಲ್ಲಿ ದಿವಾಳಿ ಘೋಷಿಸಿಕೊಳ್ಳುವಂತಾಯ್ತು. 2013ರಲ್ಲಿ ಮರುಜೀವ ಪಡೆದುಕೊಂಡರೂ ಮರಳಿ ತನ್ನ ಹಿಂದಿನ ಗತ್ತು ಪಡೆದುಕೊಳ್ಳಲು ಅದು ವಿಫಲವಾದದ್ದು ಇಂದು ಎಲ್ಲರಿಗೂ ಗೊತ್ತಿರುವ ವಿಷಯ. ಜಗವ್ಯಾಪಿ.

ಇದಕ್ಕೆ ಪೂರಕವಾದಂತೆ ಇನ್ನೊಂದು ಉದಾಹರಣೆ ಹೇಳಿ, ಪೀಠಿಕೆಯನ್ನು ಕೊನೆ ಮಾಡುವೆ. ಇವತ್ತಿನ ಮುಖ್ಯ ವಿಷಯಕ್ಕೆ ಆ ನಂತರ ಬರುವೆ.

ಒಂದೂರಲ್ಲಿ ಮೂರು ಹೆಗ್ಗಣಗಳು ಇದ್ದವಂತೆ. ಊರ ಹೊರಗೆ, ಊರವರು ಹಾಕುವ ಉಳಿದ ಊಟ, ತ್ಯಾಜ್ಯ ವಸ್ತುಗಳನ್ನು ತಿಂದುಂಡು ಚೆನ್ನಾಗಿ ಕೊಬ್ಬಿ ಜೀವನ ಸಾಗಿಸುತ್ತಿದ್ದವು. ಊರಿಗೆ ಕ್ಷಾಮ ಬಂದ ಕಾರಣ ಊರಿನಿಂದ ಬಹುತೇಕರು ಗುಳೆ ಹೋಗುತ್ತಾರೆ. ಸಹಜವಾಗೇ, ಹೆಗ್ಗಣಗಳಿಗೆ ಸಿಗುತ್ತಿದ್ದ ಆಹಾರದಲ್ಲಿ ಭಾರಿ ಪ್ರಮಾಣದಲ್ಲಿ ಕಡಿತವಾಗುತ್ತದೆ. ಇದನ್ನು ಕಂಡ ಹೆಗ್ಗಣವೊಂದು ಬೇರೆ ಕಡೆಗೆ ಹೋಗೋಣ ಎಂದು ಹೇಳುತ್ತದೆ. ಉಳಿದೆರಡು ಹೆಗ್ಗಣಗಳು, ''ಬೇರೆಡೆಗೆ ಹೋಗುವ ಅವಶ್ಯಕತೆಯಿಲ್ಲ. ಇಲ್ಲೇ ಎಲ್ಲವೂ ಸರಿಹೋಗುತ್ತದೆ'' ಎಂದವಂತೆ. 'ಸರಿ ನಿಮ್ಮಿಷ್ಟ' ಎಂದ ಆ ಹೆಗ್ಗಣ ಬೇರೆ ಕಡೆಗೆ ಆಹಾರ ಅರಸಿ ಹೊರಟುಹೋಗುತ್ತದೆ. ವಾರ ಕಳೆದ ನಂತರ ಉಳಿದ ಎರಡು ಹೆಗ್ಗಣದಲ್ಲಿ ಒಂದು, ''ನಾವು ಬೇರೆ ಕಡೆಗೆ ಹೋಗೋಣ'' ಎನ್ನುತ್ತದೆ. ''ಎಲ್ಲಿಗೂ ಹೋಗುವುದು ಬೇಕಿಲ್ಲ, ಇಲ್ಲೇ ಎಲ್ಲವೂ ಸರಿ ಹೋಗುತ್ತದೆ'' ಎನ್ನುತ್ತದೆ ಇನ್ನೊಂದು ಹೆಗ್ಗಣ. ''ಸರಿ ನಿನ್ನಿಷ್ಟ, ನಾನು ಬೇರೆಡೆಗೆ ಹೋಗುವೆ'' ಎಂದು ಆ ಹೆಗ್ಗಣವೂ ಆಹಾರ ಅರಸಿಕೊಂಡು ಹೋಗುತ್ತದೆ. ಉಳಿದ ಒಂದು ಹೆಗ್ಗಣ, ಇಂದು-ನಾಳೆ ಎಂದು ಕಾಯುತ್ತಾ ದಿನೇದಿನೆ ಕೃಶವಾಗುತ್ತಾ ಹೋಗುತ್ತದೆ. ಬೇರೆ ಕಡೆ ಹೋಗೋಣ ಎಂದು ಅದು ಮನಸ್ಸು ಮಾಡಿಕೊಳ್ಳುತ್ತದೆ. ಆದರೆ ದೇಹದಲ್ಲಿ ಶಕ್ತಿಯಿಲ್ಲದ ಕಾರಣ ಅದು ಹೋಗಲಾಗದೆ ಮರಣಿಸುತ್ತದೆ. ಮೇಲಿನ ಎಲ್ಲಾ ಉದಾಹರಣೆಗಳ ಸಾರಾಂಶ ಮಾತ್ರ ಸೇಮ್! ಸಮಯ ಮೀರುವುದಕ್ಕೆ ಮುಂಚೆ ನಾವು ಬದಲಾಗಬೇಕು. ಸಮಯಕ್ಕೆ ತಕ್ಕಂತೆ ಹೊಂದಿಕೊಳ್ಳಬೇಕು. ಸಮಯದ ಜತೆಗೆ ಹೆಜ್ಜೆ ಹಾಕಬೇಕು. ಇಲ್ಲವಾದಲ್ಲಿ ನಾವೆಷ್ಟೇ ದೊಡ್ಡವರು ಎಂದುಕೊಂಡರೂ ಅವನತಿಯನ್ನು ತಪ್ಪಿಸಲು ಸಾಧ್ಯವಿಲ್ಲ.

ಈಗ ಮುಖ್ಯ ವಿಚಾರಕ್ಕೆ ಬರೋಣ. ದೆಹಲಿಯಲ್ಲಿ ಜಾಗತಿಕ ಮಟ್ಟದ 'ಎಐ ಇಂಪ್ಯಾಕ್ಟ್ ಸಮ್ಮಿಟ್' ನಡೆಯಿತು. 'ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ (ಎಐ) ನಮ್ಮೆಲ್ಲರ ಕೆಲಸ ಕದಿಯುತ್ತದೆ, ಜಗತ್ತು ಪೂರ್ಣವಾಗಿ ಬದಲಾಗುತ್ತದೆ' ಎನ್ನುವ ಮಾತುಗಳು ಎಲ್ಲಾ ವರ್ಗದಲ್ಲೂ ಚರ್ಚೆಗೆ ಗುರಿಯಾಗಿವೆ. ಇಂಥ ಸಮಯದಲ್ಲಿ ಕೂಡ ಕೆಲವು ಸಾಫ್ಟ್‌ವೇರ್ ಉದ್ಯೋಗಿಗಳು, ಎಂಜಿನಿಯರ್‌ಗಳು 'ಆರ್ಟಿಫಿಷಿಯಲ್ ಇಂಟೆಲಿಜೆನ್ಸ್‌ನಿಂದ ಕೆಲಸ ಹೋಗುವುದಿಲ್ಲ' ಎನ್ನುವ ವಿಚಾರ ಬರೆಯುತ್ತಿದ್ದಾರೆ. ಎಲ್ಲವೂ ಸರಿಹೋಗುತ್ತೆ ಎಂದು ಕಾಯುತ್ತ ಕುಳಿತ ಮೂರನೇ ಹೆಗ್ಗಣದ ಕಥೆ ಇವರದು. ಬದುಕಿನಲ್ಲಿ ಆಶಾಭಾವ ಬೇಕು, ಆದರೆ ಅದರ ಜತೆಗೆ ಜಗತ್ತಿನಲ್ಲಿ ಆಗುತ್ತಿರುವ ಬದಲಾವಣೆಗಳಿಗೂ ನಮ್ಮನ್ನು ನಾವು ಒಡ್ಡಿಕೊಳ್ಳಬೇಕು. 'ಎಲ್ಲವೂ ಸರಿ ಹೋಗುತ್ತೆ', 'ಆಲ್ ಇಸ್ ವೆಲ್' ಎನ್ನುವ ಟೊಳ್ಳು ಆಶಾಭಾವ ಚಲನಚಿತ್ರದಲ್ಲಿ ಮಾತ್ರ ಕೆಲಸ ಮಾಡಬಹುದು. ನಿಜಜೀವನದಲ್ಲಿ ಅದು ಸಾಧ್ಯವಿಲ್ಲ. ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಇವತ್ತಿನ ಬಹುತೇಕ ಕೆಲಸಗಳನ್ನು ಇಲ್ಲವಾಗಿಸುವುದು ಸತ್ಯ. ಅದರಲ್ಲೂ ಕ್ಲರಿಕಲ್ ಮತ್ತು ಪುನರಾವರ್ತನೆ ಆಗುವ ಕೆಲಸಗಳನ್ನು, ಹೆಚ್ಚು ಸಮಯ ತಿನ್ನುವ ಕೆಲಸಗಳನ್ನು ಕ್ಷಣದಲ್ಲಿ ಮಾಡಿಮುಗಿಸುತ್ತದೆ. ಹೀಗಾಗಿ ಅಂಥ ಕೆಲಸಗಳನ್ನು ಮಾಡುತ್ತಿದ್ದವರಿಗೆ ಮೊದಲು ಪೆಟ್ಟು ಬೀಳುತ್ತದೆ. ಅದೇ ಸಮಯದಲ್ಲಿ ಇದೇ 'ಎಐ' ಹೊಸ ಕೆಲಸಗಳನ್ನು ಕೂಡ ಸೃಷ್ಟಿಸುತ್ತದೆ. ನಾವು ಅದಕ್ಕೆ ಸಿದ್ಧರಿರಬೇಕು. ನಾವು ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಅನ್ನು ಒಪ್ಪಿಕೊಳ್ಳಲಿ ಅಥವಾ ಬಿಡಲಿ, ಅದು ನಮ್ಮ ಬದುಕಿನಲ್ಲಿ ಈಗಾಗಲೇ ಬಂದಿದೆ. ಅದು ನಮ್ಮ ಬದುಕಿನಲ್ಲಿ ಇನ್ನಷ್ಟು ಸೇರಿಕೊಳ್ಳಲಿದೆ. ನಾವು ದುಡಿಯುವ, ಬದುಕುವ ರೀತಿಯನ್ನು ಅದು ಬದಲಾಯಿಸಲಿದೆ. ಇದನ್ನು ಒಪ್ಪಿಕೊಂಡು ಅಗತ್ಯವಿರುವ ಸೂಕ್ತ ಹೊಂದಾಣಿಕೆ ಮಾಡಿಕೊಂಡವರಿಗೆ ಯಶಸ್ಸು ಸಿಗುತ್ತದೆ. 'ಇದೇನೂ ಮಾಡುವುದಿಲ್ಲ, ಕೆಲಸಗಳು ಹೋಗುವುದಿಲ್ಲ' ಎನ್ನುವ ಮಾತುಗಳನ್ನು ಆಡುತ್ತಾ, ಬರೆಯುತ್ತಾ, ಯಾವುದೇ ಕೌಶಲ ವೃದ್ಧಿಮಾಡಿಕೊಳ್ಳದೆ ಹೋದರೆ ನಷ್ಟವಾಗುವುದು 'ಎಐ'ಗಲ್ಲ, ನಮಗೆ ಎನ್ನುವ ಪರಿಜ್ಞಾನ ಬೆಳೆಸಿಕೊಳ್ಳುವುದು ಇಂದಿನ ತುರ್ತು ಅಗತ್ಯ.

ಇಲ್ಲಿ ನಿಮಗೊಂದು ವಿಚಾರವನ್ನು ಹೇಳುತ್ತೇನೆ. 'ಯುಪಿಐ'ನಲ್ಲಿ ಬಳಸುವ ತಂತ್ರಜ್ಞಾನವನ್ನು ಪ್ರಥಮವಾಗಿ ಕಂಡುಹಿಡಿದದ್ದು ಭಾರತೀಯರೇನೂ ಅಲ್ಲ. ಅಮೆರಿಕ ಮತ್ತು ಚೀನಾ ಮ್ಯಾಗ್ನೆಟಿಕ್ ಸ್ಟ್ರಿಪ್ಸ್ ಮತ್ತು ಕ್ಯೂಆರ್ ಕೋಡ್‌ಗಳನ್ನು ಆಗಲೇ ಬಳಸುತ್ತಿದ್ದವು. ಯುಪಿಐನಲ್ಲಿ ನಾವು ಅದನ್ನು ಸಶಕ್ತವಾಗಿ ಬಳಸಿಕೊಂಡೆವು. ಇವತ್ತಿಗೆ ಡಿಜಿಟಲ್ ಪೇಮೆಂಟ್ ಸಿಸ್ಟಮ್ ಅನ್ನು ಭಾರತದಷ್ಟು ಉತ್ತಮವಾಗಿ ಅಪ್ಪಿಕೊಂಡಿರುವ ದೇಶ ಜಗತ್ತಿನಲ್ಲಿ ಯಾವುದೂ ಇಲ್ಲ ಎನ್ನುವ ಮಟ್ಟಕ್ಕೆ ನಾವು ಅದನ್ನು ಬಳಸಿಕೊಂಡಿದ್ದೇವೆ. ಈಗಾಗಲೇ ಲಭ್ಯವಿದ್ದ ತಂತ್ರಜ್ಞಾನವನ್ನು ಸರಳಗೊಳಿಸಿ, ಸಾಮಾನ್ಯರಲ್ಲಿ ಸಾಮಾನ್ಯರು ಕೂಡ ಬಳಸುವ ಮಟ್ಟಕ್ಕೆ ಅದನ್ನು ತಂದದ್ದು ಮಾತ್ರ ಭಾರತೀಯರು. 'ಎಐ'ನಲ್ಲಿ ಕೂಡ ಇದೆ ಕಥೆ ರಿಪೀಟ್ ಆಗುವ ಎಲ್ಲಾ ಸಾಧ್ಯತೆಗಳನ್ನೂ ನಾವು ಈಗಾಗಲೇ ನೋಡುತ್ತಿದ್ದೇವೆ. ನಾವು ಆರ್ಟಿಫಿಷಿಯಲ್ ಇಂಟೆಲಿಜೆನ್ಸ್‌ನ ಜನಕರೇನೂ ಅಲ್ಲ. ಅಮೆರಿಕ, ಚೀನಾ ಸೇರಿದಂತೆ ಬಹಳಷ್ಟು ದೇಶಗಳು ಈ ರೇಸಿನಲ್ಲಿ ನಮಗಿಂತ ಮುಂದಿವೆ ಎನ್ನುವುದು ಕೂಡ ನಿರ್ವಿವಾದ. ಆದರೆ ಇವತ್ತಿನ ಸಮಯದಲ್ಲಿ ಕೇವಲ ತಂತ್ರಜ್ಞಾನವಿದ್ದರೆ ಸಾಲದು, ರೇಸಿನಲ್ಲಿ ಮುಂದಿದ್ದರೂ ಸಾಲದು. ಅವುಗಳನ್ನು ಸರಿಯಾಗಿ ಬಳಸಿಕೊಳ್ಳುವ, ಅದರಲ್ಲೂ ಜನರ ಅವಶ್ಯಕತೆಗೆ ತಕ್ಕಂತೆ ಬಳಸಿಕೊಳ್ಳುವ ಕ್ಷಮತೆ ಇರಬೇಕು. ಅಂಥ ಒಂದು ಅವಕಾಶ, ಕ್ಷಮತೆ ಎರಡೂ ಇರುವುದು ಭಾರತದಲ್ಲಿ ಎನ್ನುವುದು ಇವತ್ತಿಗೆ ಜಗತ್ತಿನ ಎಲ್ಲಾ ದೇಶಗಳಿಗೂ ತಿಳಿದುಹೋಗಿದೆ. ಈ ಕಾರಣಕ್ಕೆ, ದೆಹಲಿಯಲ್ಲಿ ನಡೆದ 'ಎಐ' ಶೃಂಗಸಭೆಗೆ ವಿಶ್ವದ ಎಲ್ಲಾ ಪ್ರಮುಖ ದೇಶಗಳೂ ಬಂದಿವೆ. ಭಾರತವನ್ನು ಉದಾಸೀನ ಮಾಡಿ ಇವತ್ತಿನ ಸಮಯದಲ್ಲಿ ಜಗತ್ತು ನಡೆಯಲು ಸಾಧ್ಯವಿಲ್ಲ. ಫ್ರಾನ್ಸ್ ದೇಶದ ಅಧ್ಯಕ್ಷರು ಭಾರತದ ಬಗ್ಗೆ ಅದೆಷ್ಟು ವಿಶ್ವಾಸ ಹೊಂದಿದ್ದಾರೆ ಎನ್ನುವುದನ್ನು ಅವರ ಮಾತುಗಳಲ್ಲಿ ಕೇಳುವುದೇ ಖುಷಿ. ವಿತ್ತ ಜಗತ್ತಿನ ಪ್ರಮುಖ ಹೆಸರು ಬ್ಲಾಕ್ ರಾಕ್ ಸಂಸ್ಥೆಯು 'ಮುಂದಿನ ಇಪ್ಪತ್ತೈದು ವರ್ಷ ಭಾರತಕ್ಕೆ ಸೇರಿದ್ದು' ಎನ್ನುವ ಮಾತುಗಳನ್ನು ಯಾವುದೇ ಸಂಕೋಚವಿಲ್ಲದೆ ಹೇಳುತ್ತದೆ.

ಟ್ರಂಪ್ ಭಾರತವನ್ನು 'ಡೆಡ್ ಇಕಾನಮಿ' ಎಂದ ಆಸುಪಾಸಿನ ದಿನಗಳಲ್ಲಿ ಗೂಗಲ್ ಸಂಸ್ಥೆಯು ಭಾರತದಲ್ಲಿ ಮುಂದಿನ ಐದು ವರ್ಷದಲ್ಲಿ 15 ಬಿಲಿಯನ್ ಅಮೆರಿಕನ್ ಡಾಲರ್ ಹಣವನ್ನು ಹೂಡಿಕೆ ಮಾಡುವುದಾಗಿ ಹೇಳಿಕೆ ನೀಡುತ್ತದೆ. ಜಗತ್ತಿನ ಎಲ್ಲಾ ಪ್ರಮುಖ ಆರ್ಥಿಕತೆಗಳು ಕೂಡ ಭಾರತದೊಂದಿಗೆ ವಾಣಿಜ್ಯ ಒಪ್ಪಂದವನ್ನು ಮಾಡಿಕೊಂಡಿವೆ. 2030ರ ವೇಳೆಗೆ ಜಗತ್ತು ಆರ್ಥಿಕವಾಗಿ, ರಾಜಕೀಯವಾಗಿ, ತಂತ್ರಜ್ಞಾನದಲ್ಲಿ, ಎಲ್ಲಾ ಮಜಲುಗಳಲ್ಲೂ ಹೊಸ ನಾಯಕತ್ವವನ್ನು ಹುಡುಕಿಕೊಂಡಿರುತ್ತದೆ. ಜಗತ್ತು ಹಿಂದಿನಂತೆ ಅಮೆರಿಕ-ಕೇಂದ್ರಿತವಾಗಿ ಉಳಿದುಕೊಳ್ಳುವುದಿಲ್ಲ. ಬದಲಿಗೆ ಐದಾರು ದೇಶಗಳು ಜಗತ್ತಿನ ಹೊಸ ಶಕ್ತಿಕೇಂದ್ರಗಳಾಗಿ ಹೊರಹೊಮ್ಮಿರುತ್ತವೆ. ಭಾರತವು ನಿಸ್ಸಂದೇಹವಾಗಿ ಅವುಗಳಲ್ಲಿ ಒಂದಾಗಿರುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಕ್ಷೇತ್ರವನ್ನು ಆಳುವ ನಿಜವಾದ ರಾಜನಾಗಿ ಹೊರಹೊಮ್ಮುತ್ತದೆ.

ಇವತ್ತಿಗೆ ಭಾರತ ಎಂದರೆ ಸ್ವಚ್ಛತೆಯಿಲ್ಲದ ನಗರಗಳು ಎನ್ನುವಂತಾಗಿದೆ. ಹೊಸ 'ಎಐ' ತಂತ್ರಜ್ಞಾನದ ಮೂಲಕ ಆ ಕಳಂಕವನ್ನು ನಾವು ತೊಡೆದುಕೊಳ್ಳಲಿದ್ದೇವೆ. ದೆಹಲಿಯ 'ಎಐ ಸಮ್ಮಿಟ್'ನಲ್ಲಿ ಈ ಬಗ್ಗೆ ಆಶಾಭಾವನೆ ಉಂಟುಮಾಡುವ ಪ್ರೋಟೋಟೈಪ್ ಅನಾವರಣವಾಗಿದೆ. ಅದಕ್ಕೆ ಸರಕಾರದ ಅನುಮೋದನೆ ಸಿಕ್ಕರೆ ಭಾರತವು ಸ್ವಚ್ಛ ಭಾರತ ಮಾತ್ರವಲ್ಲ, ಸ್ವಚ್ಛತೆಯಲ್ಲಿ ಜಪಾನ್ ದೇಶವನ್ನು ಕೂಡ ಹಿಂದಿಕ್ಕಬಲ್ಲದು. ಇಂಥ ಹಲವಾರು ಸಾಧ್ಯತೆಗಳನ್ನು ಜಾಗತಿಕ 'ಎಐ' ಸಮ್ಮಿಟ್ ತೆರೆದಿಟ್ಟಿದೆ. ನಾಳಿನ ಬದುಕು ಹೇಗಿರಬಹುದು? ಏನೆಲ್ಲಾ ಬದಲಾವಣೆಯಾಗಬಹುದು? ಎನ್ನುವುದನ್ನು ಪುಟಾಣಿ ಕಿಂಡಿಯ ಮೂಲಕ ತೋರಿಸುವ ಪ್ರಯತ್ನವನ್ನು ಮಾಡಲಾಗಿದೆ.

ಒಂದಷ್ಟು ಜನ ಮಾತ್ರ ತಮ್ಮ ಹಳೆಯ ಚಾಳಿಯನ್ನು ಮುಂದುವರಿಸಿದ್ದಾರೆ. ಎಐ ಸಮ್ಮಿಟ್ ಅನ್ನು ವಿಫಲಗೊಳಿಸಲು ಹೋಗಿ, ಸಾರ್ವಜನಿಕರಿಂದ ಛೀಮಾರಿ ಹಾಕಿಸಿಕೊಂಡು ಹೊರಹೋಗಿದ್ದಾರೆ. ಇನ್ನೊಂದಷ್ಟು ಜನರು ಬದಲಾಗುತ್ತಿರುವ ಭಾರತ, ಬದಲಾಗುತ್ತಿರುವ ಸಮಯದ ಅರಿವಿಲ್ಲದೆ, 'ಭಾರತ ಕೇವಲ ಎಐ ಕನ್ಸೂಮ್ ಮಾಡುವ ದೇಶವಾಗಿ ಉಳಿದುಕೊಳ್ಳುತ್ತದೆ' ಎನ್ನುವ ಬಡಬಡಿಕೆಯಲ್ಲಿ ಸಮಯವನ್ನು ಕಳೆಯುತ್ತಿದ್ದಾರೆ. ತಂತ್ರಜ್ಞಾನದ ವಿಚಾರಗಳಲ್ಲಿ ಪರಿಣತರು ಎನ್ನಿಸಿಕೊಂಡವರು 'ಆಲ್ ಇಸ್ ವೆಲ್' ಮಂತ್ರಪಠನೆಯಲ್ಲಿ ಕುಳಿತಿದ್ದಾರೆ. ಆದರೆ ವಾಸ್ತವ ಬೇರೆಯೇ ಇದೆ. ಭಾರತ 'ಎಐ' ಕ್ಷೇತ್ರವನ್ನು ಮುಂದೆ ನಿಂತು ನಡೆಸಲಿದೆ. ಸಮಯದ ಜತೆಗೆ ಹೊಸ ಸವಾಲು, ಅವಕಾಶ ಎರಡನ್ನೂ ಹೊತ್ತುತರಲಿದೆ. 'ಸಮಸ್ಯೆ, ಸವಾಲು' ಎಂದುಕೊಂಡವರಿಗೆ ಅದು ಎದುರಾಗುತ್ತದೆ. ಅವಕಾಶ ಎಂದುಕೊಂಡವರಿಗೆ ಹೊಸ ಅವಕಾಶಗಳ ಜಗತ್ತು ತೆರೆದುಕೊಳ್ಳಲಿದೆ. ಆಯ್ಕೆ ನಮಗೆ ಬಿಟ್ಟದ್ದು.

## ಅಭಿಮತ

ಪ್ರೊ.ಆರ್.ಜಿ.ಹೆಗಡೆ

# ದೇಹಭಾಷೆ ನಮ್ಮ ಮನಸ್ಸಿನ ಕನ್ನಡಿ

ಸಂವಹನ ಎಂಬುದು ಮಹತ್ತರ ಸಂಗತಿ. ಹಾಗೆಂದ ಮಾತ್ರಕ್ಕೆ ಅದು ಕೇವಲ ಅಥವಾ ಮೂಲತಃ ಭಾಷಾತ್ಮಕವಾದುದಲ್ಲ, ಚಂದದ ಮಾತುಗಳನ್ನಾಡುವ ಕೌಶಲವಲ್ಲ ಅಥವಾ ಅದು ಅಷ್ಟಕ್ಕೇ ಮುಗಿಯುವುದಿಲ್ಲ.

ಮಾನವ ಪೀಳಿಗೆಯು ಭಾಷೆಯನ್ನು ಬೆಳೆಸಿಕೊಳ್ಳುವ ಮೊದಲು ಕೂಡ ಸಂವಹನ ಇತ್ತು. ಮಾತೇ ಬರದಿದ್ದವರಲ್ಲೂ ಸಂವಹನ ನಡೆಯುತ್ತದೆ. ಏಕೆಂದರೆ, ಸಂವಹನದಲ್ಲಿ ಭಾಷೆಗಿಂತಲೂ ಪ್ರಬಲವಾದ ಮಾಧ್ಯಮಗಳಿವೆ. ಅಂಥದೊಂದು ಮಾಧ್ಯಮ 'ದೇಹಭಾಷೆ' ಅಥವಾ 'ಬಾಡಿ ಲ್ಯಾಂಗ್ವೇಜ್'.

ಪ್ರತಿಯೊಂದು ಜನಾಂಗ ಅಥವಾ ಸಂಸ್ಕೃತಿಯು ತನ್ನದೇ ಆದ ದೇಹಭಾಷೆಯ ಸಂಕೇತಗಳನ್ನು ಹೊಂದಿರುತ್ತದೆ. ಇದು ನಮಗೆಲ್ಲರಿಗೂ ಗೊತ್ತಿರುವಂಥದ್ದೇ. ಉದಾಹರಣೆಗೆ, ಹಸ್ತಗಳನ್ನು ಎದೆಯ ಸಮ್ಮುಖದಲ್ಲಿ ಜೋಡಿಸುವುದಕ್ಕೆ 'ನಮಸ್ಕಾರ' ಎನ್ನುವ ಅರ್ಥವಿದೆ. ಇಂಥ ನೂರಾರು ಶಾರೀರಿಕ ಸಂಕೇತಗಳಿವೆ. ಆಕಳಿಸಿದರೆ 'ಬೇಸರ ಬಂತು' ಅಂತ ಹೇಳಿದ ಹಾಗೆ; ಹಿರಿಯರೆದುರು ಕಾಲಮೇಲೆ ಕಾಲು ಹಾಕಿ ಕುಳಿತುಕೊಳ್ಳುವುದು 'ಉದ್ಧಟತನ' ಎನಿಸಿಕೊಳ್ಳುತ್ತದೆ. ಜಪಾನ್, ಚೀನಾ, ಇಂಗ್ಲೆಂಡ್ ಹೀಗೆ ಪ್ರತಿಯೊಂದು ದೇಶದವರಿಗೂ ಅವರದೇ ಸಂಸ್ಕೃತಿಯ ದೇಹಭಾಷೆಗಳಿವೆ.

ನಾವಾಡುವ ಮಾತಿಗಿಂತಲೂ ಹೆಚ್ಚಿನದನ್ನು ದೇಹಭಾಷೆ ಆಡುತ್ತದೆ. ನಾವಾಡುವ ಮಾತುಗಳಿಗೆ ಪೂರಕವಾಗಿ, ಕೆಲವೊಮ್ಮೆ ವಿರುದ್ಧವಾಗಿಯೂ ಅದು ಮಾತನಾಡುತ್ತದೆ. ನಾವು ಮೌನವಾಗಿದ್ದರೂ ಅದು ಗುಪ್ತವಾಗಿ, ಹೆಚ್ಚು ಆತ್ಮೀಯವಾಗಿ, ತೀರಾ ವೈಯಕ್ತಿಕವಾದ 'ಕೋಡ್'ಗಳನ್ನಿಟ್ಟುಕೊಂಡು ಮಾತನಾಡುತ್ತದೆ. ಪುಟ್ಟಮಗು ಅಮ್ಮನೊಂದಿಗೆ ಮಾತನಾಡುವುದು ದೇಹಭಾಷೆಯಲ್ಲೇ. ಸಂಗಾತಿಗಳಲ್ಲಿ ಪ್ರೇಮಾಂಕುರವಾಗುವುದಕ್ಕೆ ಕಾರಣವಾಗುವ 'ಮೊದಲ ನೋಟ'ವೂ ದೇಹಭಾಷೆಯೇ ಅಲ್ಲವೇ?!

ಹಾಗೆಯೇ, ಕೆಲವು ವ್ಯಕ್ತಿಗಳಲ್ಲಿ 'ಮಾಂತ್ರಿಕ ಆಕರ್ಷಣೆ' ಅಥವಾ 'ಚರಿಷ್ಮಾ' ಇರುತ್ತದೆ. ಸ್ವಾಮಿ ವಿವೇಕಾನಂದರು ಇದಕ್ಕೊಂದು ಉದಾಹರಣೆ. ಸಂತರು, ಋಷಿ-ಮುನಿಗಳು, ಕಲಾವಿದರಿಗೆ ಇಂಥ ಮಾಂತ್ರಿಕ ಶಕ್ತಿಯುದ್ದು, ಅವರನ್ನು ನೋಡಿದಾಕ್ಷಣ ಏನೋ ಒಂದು ಶಕ್ತಿಯ ಅಲೆ ನಮ್ಮ ಶರೀರವನ್ನು ಸೇರಿಕೊಳ್ಳುತ್ತದೆ. ಇದು ಸಾಕಷ್ಟು ಮಂದಿಯ ಅನುಭವಕ್ಕೆ ಬಂದಿರಲಿಕ್ಕೂ ಸಾಕು (ಮಹಾತ್ಮ ಗಾಂಧೀಜಿ, ಅಟಲ್ ಬಿಹಾರಿ ವಾಜಪೇಯಿ, ಡಾ. ರಾಜ್‌ಕುಮಾರ್, ಅಮಿತಾಭ್ ಬಚ್ಚನ್ ಇದಕ್ಕೆ ಒಂದಿಷ್ಟು ಉದಾಹರಣೆಗಳು). ಹಾಗೆಂದ ಮಾತ್ರಕ್ಕೆ, ಇಂಥ ವ್ಯಕ್ತಿಗಳು ಸುಂದರವಾಗಿರಬೇಕು ಎಂದೇನಿಲ್ಲ; ದೈಹಿಕವಾಗಿ ಹೇಗೇ ಇದ್ದರೂ ಇಂಥವರೊಳಗೆ ಒಂದು ವಿಶೇಷ ಶಕ್ತಿ ಅಡಗಿರುತ್ತದೆ. ಇಂಥ ಶಕ್ತಿಯನ್ನು ಪಡೆದುಕೊಳ್ಳುವುದು ಹೇಗೆ? ಇಂಥವರು ಮೌನವಾಗಿದ್ದರೂ ಹಾಗೊಂದು ಆಕರ್ಷಣೆ ಅವರಲ್ಲಿ ಸೇರಿಕೊಳ್ಳುವುದು ಹೇಗೆ? ಎನ್ನುವುದು ಪ್ರಶ್ನೆ. ಉದಾಹರಣೆಗೆ, ಗಾಂಧಿಯವರ ಮೌನ ಕೂಡ ಮಾತಾಗಿ ಲಕ್ಷಾಂತರ ಜನರನ್ನು ತಲುಪುತ್ತಿತ್ತು; ಜರ್ಮನಿಯ ಹಿಟ್ಲರ್ ಬೆರಳು ಎತ್ತಿದರೆ ಸಾಕು, ಹೋರಾಡಲು ಜನರು ಸಿದ್ಧವಿದ್ದರು. ಇದಕ್ಕೆಲ್ಲ ಕಾರಣ, ಇಂಥವರ ದೇಹವು ಹೊರಸೂಸುವ ತೇಜಸ್ಸು. ಆ ತೇಜಸ್ಸೇ ಸಂವಹನವಾಗುತ್ತದೆ. ಆ ತೇಜಸ್ಸನ್ನು ಬೆಳೆಸಿಕೊಳ್ಳುವುದು ಹೇಗೆ- ನಂಬಿದ ಮೌಲ್ಯಗಳಿಗೆ ಬದ್ಧರಾಗಿ ಬದುಕುವುದರಿಂದ. ನಮ್ಮೊಳಗಿನ ಆಳವಾದ ಬದ್ಧತೆಯೇ ವ್ಯಕ್ತಿತ್ವಕ್ಕೆ ಅಂಥ ಶಕ್ತಿಯನ್ನು ನೀಡುತ್ತದೆ.

ಸಂವಹನಕಾರ ಅರಿತಿರಬೇಕಾದ ದೇಹಭಾಷೆಯ ಅಪಾಯದ ಕುರಿತೂ ಇಲ್ಲಿ ಹೇಳಬೇಕು. ಅದೇನೆಂದರೆ, ಭಾಷೆಯನ್ನು ಬಳಸಿ ಸುಳ್ಳು ಹೇಳಲು ಸಾಧ್ಯವಿದೆ; ಆದರೆ ದೇಹಭಾಷೆ ಸುಳ್ಳು ಹೇಳುವುದಿಲ್ಲ. ಸುಳ್ಳು ಹೇಳುವ ಕ್ರಿಯೆಯಲ್ಲಿ ನಾಲಗೆ ನಿರತವಾಗಿದ್ದರೂ, ಶರೀರದ ಯಾವುದೋ ಒಂದು ಅಂಗವು 'ಈಗ ಹೇಳಲಾಗುತ್ತಿರುವುದೆಲ್ಲ ಸುಳ್ಳು' ಎಂದುಬಿಡುತ್ತದೆ, ಆಡಲಾಗುತ್ತಿರುವ ಮಾತಿಗೆ ತದ್ವಿರುದ್ಧವಾಗಿರುವ ಸಂಕೇತಗಳನ್ನು ಹೊರಸೂಸಿ, ಸತ್ಯವನ್ನು ಹೇಳಿಬಿಡುತ್ತದೆ. ಅಂದರೆ, ದೇಹಭಾಷೆಯೆಂಬುದು ಒಳಮನಸ್ಸಿನ ಕನ್ನಡಿ, ಮನದೊಳಗೆ ಏನಿದೆಯೋ ಅದರ ಪ್ರತಿಬಿಂಬವನ್ನು ಯಾವುದಾದರೊಂದು ಅಂಗ ಅಥವಾ ಇಡೀ ಶರೀರವೇ ತೋರಿಸಿಬಿಡುತ್ತದೆ. ಉದಾಹರಣೆಗೆ, ಸುಳ್ಳು ಹೇಳುತ್ತಿರುವ ವ್ಯಕ್ತಿ ತುಸು ತಡವರಿಸುತ್ತಾನೆ, ಎದುರಿನಲ್ಲಿರುವವರ ಕಣ್ಣಲ್ಲಿ ಕಣ್ಣಿಟ್ಟು ಮಾತನಾಡುವುದಿಲ್ಲ, ತುಟಿಗಳನ್ನು ಮುಚ್ಚಿಕೊಳ್ಳಲು ಯತ್ನಿಸುತ್ತಾನೆ ಅಥವಾ ಸ್ವರವು ಕೊಂಚ ಬದಲಾಗುತ್ತದೆ, ಮಾತಿಗೆ ಶಕ್ತಿಯಿರುವುದಿಲ್ಲ, ಕಣ್ಣರೆಪ್ಪೆಗಳು ಅಲುಗಾಡುತ್ತವೆ, ತುಟಿಯು ಚೂರೇ ಎಳೆದುಕೊಳ್ಳುತ್ತದೆ. ದೇಹಭಾಷೆಯನ್ನು ನಾವು ಅರಿಯಲೇಬೇಕಾದ ಕಾರಣವೇನೆಂದರೆ- ಸತ್ಯ ಮತ್ತು ಸುಳ್ಳಿನ ನಡುವಿನ ಬೃಹತ್ ವ್ಯತ್ಯಾಸವನ್ನು ಅದು ನಮಗೆ ಕಲಿಸಿಕೊಡುತ್ತದೆ.

ಹಾಗಾದರೆ, ನಮ್ಮೆದುರು ಕೂತು ಮಾತಾಡುತ್ತಿರುವಾತನ ದೇಹದ ಯಾವ ಭಾಗವನ್ನು ಗಮನಿಸಬೇಕು? ಕಣ್ಣುಗಳನ್ನು ಸಹಜವಾಗಿ ಗಮನಿಸಿದರೆ ಸಾಕು, ಅವು ಸತ್ಯವನ್ನು ಹೇಳಿಬಿಡುತ್ತವೆ. ಆ ವ್ಯಕ್ತಿಯು ಕೂತಿರುವ ಭಂಗಿಯನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅಲ್ಲಿರುವುದು ಸಕಾರಾತ್ಮಕತೆಯೋ ಅಥವಾ ನಕಾರಾತ್ಮಕತೆಯೋ ಎಂಬುದು ಅರಿವಾಗುತ್ತದೆ. ಇದೇ ರೀತಿಯಲ್ಲಿ ಆ ವ್ಯಕ್ತಿಯ ತುಟಿಯ ಅಂಚುಗಳು, ಹಣೆಯಲ್ಲಿ ಮೂಡುವ ಗೆರೆಗಳು, ಮುಖಭಾವಗಳನ್ನು (ಅವರಿಗೆ ಇರಿಟೇಟ್ ಆಗದಂತೆ) ಅವಲೋಕಿಸಬೇಕು. ಹಲವೊಮ್ಮೆ, ಎದುರಿಗಿರುವ ವ್ಯಕ್ತಿಯೂ ಜಾಣರಾಗಿದ್ದು ತಮ್ಮ ಮನದಿಂಗಿತವು ನಮಗೆ ತಿಳಿಯದಂತೆ ದೇಹಭಾಷೆಯನ್ನು ಅಡಗಿಸಲು ಯತ್ನಿಸುವುದಿದೆ. ಅಂಥ ವೇಳೆ ಅವರು ಸೂಸುವ ಸಂಕೇತಗಳು ನೇರವಾಗಿರದೆ ಮಸುಕು ಮಸುಕಾಗಿರುತ್ತವೆ. ಅಂದರೆ, ಆ ವ್ಯಕ್ತಿ ಪ್ರಾಮಾಣಿಕನಾಗಿರುವುದಿಲ್ಲ. ಆಗ ನಾವು ಆ ಮಸುಕು ಸಂಕೇತಗಳನ್ನೇ ಅರ್ಥೈಸಬೇಕಾಗುತ್ತದೆ, ಇನ್ನೂ ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ. ಆಗ ಆತನ ಮನಸ್ಸು ಅರ್ಥವಾಗುತ್ತದೆ, ನಂತರ ನಮ್ಮ ಸವಾಲು ಆರಂಭವಾಗುತ್ತದೆ. ಆತನ ಆಲೋಚನೆಗಳು ಸಕಾರಾತ್ಮಕವಾಗಿದ್ದರೆ ಪರವಾಗಿಲ್ಲ, ಒಂದೊಮ್ಮೆ ನಕಾರಾತ್ಮಕವಾಗಿದ್ದರೆ ಆತನನ್ನು ದಾರಿಗೆ ತರಬಹುದಾದ ತಂತ್ರಗಳನ್ನು ಹುಡುಕಬೇಕಾಗುತ್ತದೆ. ನಾವು ಮಾತನ್ನು ಕಡಿಮೆ ಮಾಡಿ ಆತನ ಮಾತಿಗೇ ಕಿವಿಯಾಗುವುದು, ಆತನನ್ನು ಸೂಕ್ಷ್ಮವಾಗಿ ಹೊಗಳುವುದು, ನಮ್ಮ 'ಇಗೋ'ವನ್ನು ಸಂಪೂರ್ಣ ತ್ಯಜಿಸಿ ಅವನಿಗೆ ಕೃತಜ್ಞತೆ ಹೇಳಿ ''ಮತ್ತೊಮ್ಮೆ ತಮ್ಮ ಸಮಯವನ್ನು ತೆಗೆದುಕೊಂಡು ಭೇಟಿಯಾಗುವೆ, ತೊಂದರೆ ಕೊಟ್ಟಿದ್ದಕ್ಕೆ ಕ್ಷಮೆಯಿರಲಿ'' ಎಂದು ಹೇಳಿ ಹೊರಬರುವುದು ಇಂಥ ತಂತ್ರಗಳಲ್ಲಿ ಸೇರಿವೆ.

ಪರರ ದೇಹಭಾಷೆಯು ಅವರ ಒಳಮಾತುಗಳನ್ನು ನಮಗೆ ಹೇಳಿಬಿಡುವಂತೆಯೇ ನಮ್ಮ ಶರೀರವೂ ಅವರಿಗೆ ನಮ್ಮೊಳಗಿನ ಮಾತುಗಳನ್ನು ಹೇಳಿಬಿಡುತ್ತದೆ. ಜನರು ಬಹುತೇಕವಾಗಿ ಇನ್ನೊಬ್ಬರನ್ನು ಅರ್ಥಮಾಡಿಕೊಳ್ಳುವುದು ದೇಹಭಾಷೆಯ ಮೂಲಕವೇ. ಸಾಧಾರಣವಾಗಿ ಜನರು ನಮ್ಮನ್ನು ಮೆಚ್ಚುವುದು ಅಥವಾ ಮೆಚ್ಚದಿರುವುದು ದೇಹಭಾಷೆಯ ಕಾರಣದಿಂದಾಗಿಯೇ. 'ನಾಯಕ' ಆಗಬಯಸುವವನಿಗೆ ಪ್ರಾಥಮಿಕವಾಗಿ ಇರಬೇಕಾದ ಅರ್ಹತೆಯೆಂದರೆ 'ಸಮರ್ಥ ದೇಹಭಾಷೆ'. ಆದರೆ ದೇಹಭಾಷೆಯನ್ನು ಮ್ಯಾನೇಜ್ ಮಾಡುವಲ್ಲಿಯೇ ಬಹಳ ಜನರು ಸೋಲುತ್ತಾರೆ. ಏಕೆಂದರೆ, ಅವರು ಕೃತಕವಾದ ದೇಹಭಾಷೆಯನ್ನು ಆಯ್ದುಕೊಂಡಿರುತ್ತಾರೆ- ಟಿವಿಯಲ್ಲಿ ಕಾಣಿಸಿಕೊಳ್ಳುವ 'ಮಾರಾಟಗಾರಿಕೆ ಕ್ಷೇತ್ರ'ದ ಜನರ ಹಾಗೆ. ಅವರ ನಗು, ಅಳು ಎಲ್ಲವೂ ಕೃತಕ ಎಂಬುದು ಮೊದಲ ನೋಟಕ್ಕೇ ನಮಗೆ ತಿಳಿದುಬಿಡುತ್ತದೆ. ಆದ್ದರಿಂದ, ದೇಹಭಾಷೆಯನ್ನು ಮ್ಯಾನೇಜ್ ಮಾಡುವುದಕ್ಕಿರುವ ಸರಳ ತಂತ್ರವೆಂದರೆ, ನಾವು ನಿಜವಾಗಿ ಇರುವ ಹಾಗೆ ಸಂವಹಿಸುವುದು, ಮೌಲ್ಯಗಳಿಗೆ ಬದ್ಧರಾಗಿರುವುದು, ಜವಾಬ್ದಾರಿಯುತರಾಗಿರುವುದು ಮತ್ತು ಮನಸ್ಸನ್ನು ನಿಯಂತ್ರಿಸಿ ಸಕಾರಾತ್ಮಕವಾಗಿರುವುದು, ಆದಷ್ಟು ನೇರವಾಗಿ ಆದರೆ ಮನನೋಯಿಸದಂತೆ ಮಾತನಾಡುವುದು, ಬೇರೆಯವರ ಕುರಿತು ಸಹಾನುಭೂತಿ ಮತ್ತು ಸದ್ಭಾವನೆಯನ್ನು ಹೊಂದಿರುವುದು. ಅಂಥ ವ್ಯಕ್ತಿತ್ವ ನಮ್ಮದಾದರೆ, ಅದೇ ಮಾತನಾಡಲಾರಂಭಿಸುತ್ತದೆ. ಏಕೆಂದರೆ, ದೇಹಭಾಷೆ ಎಂಬುದು ನಮ್ಮ ಮನಸ್ಸಿನ ಕನ್ನಡಿ.

**(ಲೇಖಕರು ಸಂವಹನಾ ಸಲಹೆಗಾರರು)**

# ನಕಲಿ ತೂಕಗಳು: ಸಕ್ಕರೆ ಕಾರ್ಖಾನೆಗಳಿಗೆ ಮತ್ತೊಂದು ಮಹಾಸಂಕಟ

**ಕಬ್ಬು ವಿವರ ದಾಖಲಿಸುವಿಕೆ ಮತ್ತು ಕಟಾವು ಆದೇಶ ಕೊಡುವಿಕೆ ಪ್ರಕ್ರಿಯೆಗಳು ಆನ್‌ಲೈನ್ ಮುಖಾಂತರ ನಡೆಯಬೇಕು. ಇದರಿಂದ ವಾಹನಗಳು ಕೆಲಸ ನಿರ್ವಹಿಸುತ್ತಿರುವ ನೈಜ ಸ್ಥಳಗಳನ್ನು ಮತ್ತು ತಪ್ಪು ಮಾಡಿದ ಸಿಬ್ಬಂದಿಯನ್ನು ಪಾಸ್‌ವರ್ಡ್ ಮುಖಾಂತರ ಗುರುತಿಸಲು ಸಾಧ್ಯವಿದೆ. ವಾಹನಗಳಿಗೆ ಜಿಪಿಎಸ್ ಅಳವಡಿಸುವುದರಿಂದ ನೈಜ ವಾಹನ, ಸ್ಥಳ, ಸಮಯ ಮತ್ತು ಅಂತರವನ್ನು ಗುರುತಿಸಬಹುದು.**

ಕೃಷಿರಂಗ

ಬಸವರಾಜ ಶಿವಪ್ಪ ಗಿರಗಾಂವಿ
vveditoped@gmail.com

ಪ್ರಸಕ್ತ ದಿನಮಾನದಲ್ಲಿ ಸಕ್ಕರೆ ಕಾರ್ಖಾನೆಗಳ 'ವೇ-ಬ್ರಿಜ್'ನಲ್ಲಿ (Weighbridge) ಕಬ್ಬು ತುಂಬಿದ ವಾಹನಗಳಿಲ್ಲದೆಯೇ ತೂಕವು ದಾಖಲಾಗಿ ಕೋಟ್ಯಂತರ ರುಪಾಯಿ ಹಣವು ಮೋಸವಾಗುತ್ತಿದೆ. ಗುಣಮಟ್ಟದ ಕಬ್ಬಿನ ಕೊರತೆಯಿಂದಾಗಿ ಮೊದಲೇ ಸಕ್ಕರೆ ಕಾರ್ಖಾನೆಗಳು ಹಾನಿಯಲ್ಲಿರುವಾಗ ಈ ನಕಲಿ ತೂಕಗಳಿಂದಾಗಿ ಮತ್ತಷ್ಟು ಹಾನಿಗೀಡಾಗುತ್ತಿವೆ. ಕಾರ್ಖಾನೆಗಳ ಸಾಮರ್ಥ್ಯಕ್ಕನುಗುಣವಾಗಿ 'ಗಾಡಿ-ಗ್ಯಾಂಗ್ ಕರಾರು' ಹಾಗೂ ಕಬ್ಬು ಪೂರೈಕೆಯಲ್ಲಿನ ಅನಾರೋಗ್ಯ ಪೈಪೋಟಿಯು ಹೆಚ್ಚಾಗುತ್ತಿರುವುದರಿಂದ ಈ ನಕಲಿ ತೂಕಗಳು ಸಂಭವಿಸುತ್ತಿವೆ ಎಂದರೆ ತಪ್ಪಾಗಲಿಕ್ಕಿಲ್ಲ. ಈ ನಿಟ್ಟಿನಲ್ಲಿ ಈಗಾಗಲೇ ಮೋಸವನ್ನು ಅನುಭವಿಸಿದ ಕಾರ್ಖಾನೆಗಳ ಮಾಹಿತಿಯನ್ನು ಆಧರಿಸಿ ಈ ಕೆಳಗಿನ ಸಂದರ್ಭಗಳಲ್ಲಿ ನಕಲಿ ತೂಕವಾಗುವ ಅವಕಾಶಗಳು ಹೆಚ್ಚಾಗಿರುತ್ತವೆ.

- ಜಾಮಿಂಗ್ ಸಮಯದಲ್ಲಿ ಪ್ರತಿದಿನ ಒಂದೇ ಹೆಸರಿನಲ್ಲಿ, ಒಂದೇ ಕೋಡ್ ನಂಬರ್‌ನಲ್ಲಿ ಡಬಲ್ ಟ್ರಿಪ್ ಸಾಗಣೆ ಮಾಡಿರುವ, ಡಬಲ್ ಕಟಾವು ಆದೇಶವಿರುವ, ಬಹುಬೇಗನೆ ಖಾಲಿಯಾಗಿರುವ ಹಾಗೂ ಡಬಲ್ ಟೋಕನ್ ಪಡೆದಿರುವ ವಾಹನಗಳಿಂದ ಮೋಸವಾಗಿರುವ ಸಾಧ್ಯತೆ ಹೆಚ್ಚಾಗಿರುತ್ತದೆ;
- ಮುಂಗಡ ಹಣ ಪಡೆದು ಗ್ಯಾಂಗ್ ರದ್ದಾಗಿ ಕೆಲಸ ನಿರ್ವಹಿಸುತ್ತಿರುವ ವಾಹನಗಳು ವಾರದಲ್ಲಿ ಒಂದೆರಡು ಟ್ರಿಪ್ ಮಾತ್ರ ಕೆಲಸ ನಿರ್ವಹಿಸುವ ಸಂದರ್ಭದಲ್ಲಿ;
- ಟೋಕನ್‌ಗಳ ಸರತಿ ನಂಬರ್‌ಗಳಂತೆ ಖಾಲಿಯಾಗದೆ ಕಡಿಮೆ ಸಮಯದ (ಸೆಕೆಂಡುಗಳ) ಅಂತರದಲ್ಲಿ Gross Weight ಹಾಗೂ Tare Weight ಆಗಿರುವ ವಾಹನಗಳಿಂದ;
- ಒಂದು ವಾಹನದ ತೂಕವನ್ನು ಎರಡು ಸಲ ಸೇವ್ ಮಾಡುವುದು, ಅಂದರೆ ಮೊದಲು ವಾಹನವನ್ನು ವೇ-ಬ್ರಿಜ್ ಮೇಲೆ ಸ್ವಲ್ಪ ವೇಗವಾಗಿ ಅಲ್ಲಾಡಿಸುವಾಗ ತೂಕವನ್ನು ಸೇವ್ ಮಾಡುವುದು, ಮತ್ತೊಮ್ಮೆ ಅದೇ ವಾಹನವನ್ನು ಅದೇ ಸಮಯದಲ್ಲಿ ಅಲ್ಲಾಡಿಸದೆ ನಿಲ್ಲಿಸಿ ತೂಕವನ್ನು ಸೇವ್ ಮಾಡುವುದು. ಒಂದೇ ವಾಹನದಿಂದಾಗುವ ಎರಡು ತೂಕಗಳಲ್ಲಿ ಸ್ವಲ್ಪ ವ್ಯತ್ಯಾಸವಿರಲೆಂದು ಹೀಗೆ ಮಾಡಲಾಗುತ್ತದೆ;
- ಹೆಚ್ಚು ತೂಕವಿರುವ ಕಬ್ಬು ವಾಹನಗಳು ಬಂದು ಪದ್ಧತಿಯಂತೆ ತೂಕವಾಗಿ ವೇ-ಬ್ರಿಜ್‌ನಿಂದ ಹೊರ ಹೋಗುವಾಗ ತಕ್ಷಣವೇ ಹಿಂದಿನಿಂದ ಬರುವ, ಕಡಿಮೆ ಕಬ್ಬು ತೂಕವಿರುವ ವಾಹನಕ್ಕೆ ಮೊದಲಿನ ವಾಹನದ ಹೆಚ್ಚು ತೂಕವನ್ನು ಸೇವ್ ಮಾಡುವುದು;
- ವೇ-ಬ್ರಿಜ್ ಮೇಲೆ ಚಾಲಕ ಸಮೇತ Gross Weight ಮಾಡುವುದು, ನಂತರ Tare Weight ಮಾಡುವಾಗ ಚಾಲಕ, ಟ್ರಾಕ್ಟರ್ ಎಂಜಿನ್ ಅಥವಾ ಮುಂದಿನ ಚಕ್ರಗಳನ್ನು ವೇ-ಬ್ರಿಜ್‌ನಿಂದ ಹೊರಗಿಟ್ಟು ತೂಕ ಮಾಡುವುದರಿಂದ;
- ವೇ-ಬ್ರಿಜ್‌ನಲ್ಲಿರುವ ಸಿಬ್ಬಂದಿಯು ತೂಕವನ್ನು ಮನಸೋ ಇಚ್ಛೆ ಟೈಪ್ ಮಾಡುವುದರಿಂದ;
- ಪಾಳಿಯ (ಶಿಫ್ಟ್) ಬದಲಾವಣೆಯಾಗುವ ಮೊದಲು ಒಂದು ಆದೇಶವಿರುವ ಕಬ್ಬು ವಾಹನವನ್ನು ತೂಕ ಮಾಡಿ ಹತ್ತಿರದಲ್ಲಿ ನಿಲ್ಲಿಸುವುದು, ಪಾಳಿ ಬದಲಾವಣೆಯ ನಂತರ ಬರುವ ಬೇರೆ ಸಿಬ್ಬಂದಿಗೆ ಏನೋ ಕಾರಣಗಳನ್ನು ಹೇಳಿ ಮತ್ತೊಂದು ಆದೇಶದ ಮೇಲೆ ಅದೇ ವಾಹನವನ್ನು ತೂಕ ಮಾಡಿಸುವುದು;

- ವೇ-ಬ್ರಿಜ್‌ನಲ್ಲಿ ಕೇವಲ ಒಬ್ಬರಿಂದ ವಂಚನೆಯಾಗುವುದು ಅಸಾಧ್ಯ; ಕ್ಷೇತ್ರ ಸಿಬ್ಬಂದಿ, ಸೆಕ್ಯೂರಿಟಿ, ಟೋಕನ್ ಕ್ಲರ್ಕ್, ವೇಮೆಂಟ್ ಕ್ಲರ್ಕ್, ರೈತರು, ಕಟಾವುದಾರರು ಮತ್ತು ವಾಹನಗಳ ಮಾಲೀಕರು ಈ ವಂಚನೆಯಲ್ಲಿ ಸೇರಿರಬಹುದಾಗಿದೆ;
- ಶೀಘ್ರದಲ್ಲಿ ಇನ್ನೊಂದು ಹೊಸ ಮೋಸವು ಸಂಭವಿಸುವ ದಿನಗಳು ದೂರವಿಲ್ಲ- ಅಂದರೆ ನೈಜ ಅಂತರಕ್ಕಿಂತ ಹೆಚ್ಚಿನ ಅಂತರದಿಂದ ಕಬ್ಬು ಸಾಗಾಣೆ ಮಾಡುವುದು.

ಈ ಮೇಲಿನ ಸಂದರ್ಭಗಳೆಲ್ಲವೂ ವಂಚನೆಗಳಾಗದಿದ್ದರೂ ಮೋಸವು ಹೆಚ್ಚಾಗಿ ಈ ಸಂದರ್ಭಗಳಲ್ಲಿಯೇ ಸಂಭವಿಸಬಹುದಾಗಿದೆ. ಆದ್ದರಿಂದ ಕಾರ್ಖಾನೆಗಳು ಈ ಮೇಲಿನ ಪ್ರಕ್ರಿಯೆಗಳ ಮೇಲೆ ನಿಗಾವಹಿಸಬೇಕು.

ಮೋಸವನ್ನು ತಡೆಗಟ್ಟುವ ಪರಿಹಾರೋಪಾಯಗಳು ಹೀಗಿವೆ:

- ಕಬ್ಬು ವಿವರ ದಾಖಲಿಸುವಿಕೆ ಮತ್ತು ಕಟಾವು ಆದೇಶ ಕೊಡುವಿಕೆ ಪ್ರಕ್ರಿಯೆಗಳು ಕ್ಷೇತ್ರ ಸಿಬ್ಬಂದಿಯ ಮೊಬೈಲ್ (ಆನ್‌ಲೈನ್) ಮುಖಾಂತರ ನಡೆಯಬೇಕು. ಇದರಿಂದ ವಾಹನಗಳು ಕೆಲಸ ನಿರ್ವಹಿಸುತ್ತಿರುವ ನೈಜ ಸ್ಥಳಗಳನ್ನು ಮತ್ತು ತಪ್ಪು ಮಾಡಿದ ಸಿಬ್ಬಂದಿಯನ್ನು ಪಾಸ್‌ವರ್ಡ್ ಮುಖಾಂತರ ಗುರುತಿಸಬಹುದು.
- ವಾಹನದ ಎಂಟ್ರಿ ಗೇಟ್, ವೇ-ಬ್ರಿಜ್ ಗೇಟ್, ಕೇನ್ ಯಾರ್ಡ್ ಹಾಗೂ ವೇ-ಬ್ರಿಜ್‌ನ ಸಂಪೂರ್ಣ ಕ್ಷೇತ್ರವು ಒಳಗೊಳ್ಳುವಂತೆ ಸಿಸಿ ಟಿವಿಯನ್ನು ಅಳವಡಿಸಬೇಕು.
- ವಾಹನಗಳಿಗೆ ಜಿಪಿಎಸ್ ವ್ಯವಸ್ಥೆಯನ್ನು ಅಳವಡಿಸಬೇಕು. ಇದರಿಂದ ನೈಜ ವಾಹನ, ಸ್ಥಳ, ಸಮಯ ಮತ್ತು ಅಂತರವನ್ನು ಗುರುತಿಸಬಹುದಾಗಿದೆ.
- ವಾಹನಗಳಿಗೆ ಫಾಸ್ಟ್ಯಾಗ್ ಮುಖಾಂತರ ಟೋಕನ್, ವೇ-ಬ್ರಿಜ್‌ನಲ್ಲಿ ಮಾನವರಹಿತ ಪ್ರಕ್ರಿಯೆಗಳು, ಆಟೋಮೇಷನ್ ಹಾಗೂ ಸ್ವಯಂಚಾಲಿತವಾಗಿ ತೂಕವಾಗುವ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬೇಕು.
- ಪ್ರತಿ ಪಾಳಿಯಲ್ಲಿ ರಿಜಿಸ್ಟರ್‌ನಲ್ಲಿ ದಾಖಲಾಗುವ ವಾಹನಗಳನ್ನು, ವಾಹನದ ನಂಬರ್‌ಗಳನ್ನು ಮತ್ತು ಸರದಿ ಸಾಲಿನಲ್ಲಿ ನಿಂತಿರುವ ವಾಹನಗಳನ್ನು ಭೌತಿಕವಾಗಿ ಪರಿಶೀಲಿಸಬೇಕು.
- ಪ್ರತಿವಾಹನದ ಸೆಕ್ಯೂರಿಟಿ ಟೋಕನ್ ಮತ್ತು ಸಮಯ, ರಜಿಸ್ಟರ್ನಲ್ಲಿ ದಾಖಲಾದ ನಂಬರ ಮತ್ತು ಸಮಯ ಹಾಗೂ ಟೋಕನ್ ನಂಬರ ಮತ್ತು ಸಮಯಗಳನ್ನು ಪರಿಶೀಲಿಸಿ ತೂಕ ಮಾಡಬೇಕು.
- ಪ್ರತಿ ಪಾಳಿಯಲ್ಲಿ ತೂಕವಾಗಿರುವ, ರಿಜಿಸ್ಟರ್‌ನಲ್ಲಿ ನಮೂದಾಗಿರುವ ಮತ್ತು ಕಾರ್ಖಾನೆಗೆ ಬಂದಿರುವ ವಾಹನಗಳ ಸಂಖ್ಯೆಗಳು ಸರಿಯಾಗಿವೆ ಎಂಬುದನ್ನು ಸಿಸಿ ಟಿವಿ ಮುಖಾಂತರ ಭೌತಿಕವಾಗಿ ಖಚಿತಪಡಿಸಿಕೊಳ್ಳಬೇಕು.
- ಒಂದೇ ವಾಹನದಲ್ಲಿ ಇಬ್ಬರು ರೈತರ ಡಬಲ್ ವೇಮೆಂಟ್ ಇದ್ದಲ್ಲಿ ಅದನ್ನು ಸಹ ಸಂಬಂಧಿಸಿದ ಸಿಬ್ಬಂದಿಯ ಪತ್ರ ಹಾಗೂ ಸಿಸಿ ಟಿವಿ ಮುಖಾಂತರ ಭೌತಿಕವಾಗಿ ಖಚಿತಪಡಿಸಿಕೊಳ್ಳಬೇಕು.
- ವೇ-ಬ್ರಿಜ್ ಮೇಲೆ Gross Weight ಅಥವಾ Tare Weight ಸಲುವಾಗಿ ಬಂದ ವಾಹನವು ಒಮ್ಮೆ ಮಾತ್ರ ಸೇವ್ ಆಗಬೇಕು. ವೇ-ಬ್ರಿಜ್ ಮೇಲಿರುವಾಗಲೇ ಮತ್ತೊಮ್ಮೆ ಸೇವ್ ಆಗಬಾರದು. ಒಮ್ಮೆ ತೂಕವಾದ ವಾಹನವು ವೇ-ಬ್ರಿಜ್‌ನಿಂದ ಹೊರ ಹೋಗಿ ವೇ-ಬ್ರಿಜ್ 'ಝೀರೋ' ಆಗಬೇಕು; ನಂತರದಲ್ಲಿ ಮತ್ತೊಂದು ವಾಹನವು ವೇ-ಬ್ರಿಜ್ ಮೇಲೆ ಬಂದು ಹೊಸ ತೂಕ ಸೇವ್ ಆಗಬೇಕು.
- ಒಂದೇ ಶಿಫ್ಟ್‌ನಲ್ಲಿ ಒಂದೇ ಪಾಸ್‌ವರ್ಡ್‌ನಲ್ಲಿ Gross Weight ಮತ್ತು Tare Weight ಆಗಿರುವ ವಾಹನಗಳನ್ನು ಪರಿಶೀಲಿಸಬೇಕು.
- ಒಂದರ ನಂತರ ಒಂದು ತೂಕವಾಗುವ ವಾಹನಗಳ ವೇಟಿಂಗ್ ಸಮಯ ಮತ್ತು ಟೋಕನ್ ನಂಬರ್‌ಗಳನ್ನು ಪರಿಶೀಲಿಸಬೇಕು. ವಾಹನಗಳ ವೇಟಿಂಗ್ ಸಮಯ ಮತ್ತು ಟೋಕನ್ ನಂಬರ್ ಹೆಚ್ಚು-ಕಡಿಮೆಯಾದಲ್ಲಿ ಅಂಥ ವಾಹನಗಳನ್ನು ಪರಿಶೀಲಿಸಬೇಕು.
- ವಾಹನಗಳು ಖಾಲಿಯಾದ ತಕ್ಷಣ ಸಂಬಂಧಿಸಿದ ಕ್ಷೇತ್ರ ಸಿಬ್ಬಂದಿಗೆ ಮೆಸೇಜ್ ಬರುವಂತಾಗಬೇಕು. ಇದರಿಂದ ಮೋಸದಿಂದ ಖಾಲಿಯಾಗುತ್ತಿರುವ ವಾಹನಗಳ ಮಾಹಿತಿ ದೊರೆಯುತ್ತದೆ.
- ಪ್ರತಿದಿನ ಡೀಸೆಲ್ ತೆಗೆದುಕೊಳ್ಳದಿರುವ ವಾಹನಗಳನ್ನು ಪರಿಶೀಲಿಸಬೇಕು.
- ವೇ-ಬ್ರಿಜ್‌ಗೆ ಸಂಬಂಧಿಸಿರುವ ಸಿಬ್ಬಂದಿಯು ಪ್ರತಿದಿನ ಕೆಲಸ ನಿರ್ವಹಿಸುವ ಕಾಂಬಿನೇಷನ್ ಪಾಳಿಯನ್ನು ಬದಲಿಸುತ್ತಿರಬೇಕು. ಅಂದರೆ, ಇಂದು ಸೆಕ್ಯೂರಿಟಿಯಲ್ಲಿ, ತೂಕದಲ್ಲಿ, ಟೋಕನ್‌ನಲ್ಲಿ ಕೆಲಸ ಮಾಡಿದ ಸಿಬ್ಬಂದಿಯನ್ನು ಮರುದಿನವೂ ಅದೇ ಕೆಲಸಗಳಿಗೆ ಮತ್ತು ಅದೇ ಸಮಯದಲ್ಲಿ ನಿಯುಕ್ತಿಗೊಳಿಸಬಾರದು.
- ಪ್ರತಿದಿನ ಸಮಪ್ರಮಾಣದಲ್ಲಿ ಅಥವಾ ಸ್ವಲ್ಪ ವ್ಯತ್ಯಾಸದಲ್ಲಿ ತೂಕವಾಗಿರುವ ವಾಹನಗಳನ್ನು ಪರಿಶೀಲಿಸಬೇಕು.
- ಒಂದು ವಾಹನದ ಮೇಲೆ ಒಂದು ಕಬ್ಬು ಕಟಾವು ಆದೇಶ ಚಾಲ್ತಿಯಲ್ಲಿರಬೇಕು, ಹೊಸ ಕಟಾವು ಆದೇಶ ತಯಾರಿಸುವಾಗ ಹಿಂದಿನ ಕಟಾವು ಆದೇಶಗಳು ಸ್ವಯಂಚಾಲಿತವಾಗಿ ರದ್ದಾಗಬೇಕು.
- ಒಂದೇ ವಾಹನದಲ್ಲಿ ಡಬಲ್ ವೇಮೆಂಟ್ ಇದ್ದಲ್ಲಿ ಡಬಲ್ ಟೋಕನ್ ತೆಗೆಯುವಾಗ ಅದೊಂದು ಟ್ರಿಪ್‌ಗೆ ಆ ಕ್ಷಣದಲ್ಲಿ ಮಾತ್ರ ಅನುಮತಿ ಪಡೆಯಬೇಕು.
- 'ನಕಲಿ ತೂಕಗಳ ಕುರಿತು ಖಚಿತ ಮಾಹಿತಿ ಕೊಟ್ಟವರ ಹೆಸರನ್ನು ಗುಪ್ತವಾಗಿಡಲಾಗುವುದು ಮತ್ತು ಅಂಥವರಿಗೆ ಸೂಕ್ತ ಬಹುಮಾನವನ್ನು ಕೊಡಲಾಗುವುದು; ನಕಲಿ ತೂಕಗಳಿಗೆ ಕಾರಣವಾದವರ ಮೇಲೆ ಪೊಲೀಸ್ ಕಂಪ್ಲೇಂಟ್ ಕೊಟ್ಟು ಜೈಲಿಗೆ ಹಾಕಲಾಗುವುದು' ಎಂದು ವೇ-ಬ್ರಿಜ್ ಹತ್ತಿರ ದೊಡ್ಡ ಫಲಕ ಹಾಕಬೇಕು.

ಈ ರೀತಿಯಾಗಿ ವೇ-ಬ್ರಿಜ್ ಆಡಳಿತ ವ್ಯವಸ್ಥೆಯಲ್ಲಿ ಬದಲಾವಣೆಯಾಗಬೇಕು. ಇವುಗಳ ಪರಿಶೀಲನೆಯನ್ನು ವಿಶೇಷ ಸಿಬ್ಬಂದಿಯು ನಿರ್ವಹಿಸಬೇಕು. ಅಂದಾಗ ಮಾತ್ರ ವೇ-ಬ್ರಿಜ್‌ನಲ್ಲಿ ಸಂಭವಿಸುವ ವಂಚನೆಯನ್ನು ಗುರುತಿಸಬಹುದಾಗಿದೆ ಮತ್ತು ತಡೆಗಟ್ಟಬಹುದಾಗಿದೆ.

**(ಲೇಖಕರು ಸಹಾಯಕ ಮಹಾಪ್ರಬಂಧಕರು, ಕೃಷಿ ಇಲಾಖೆ)**

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed @ manipal media network limited Sy no7/2,plot no CA-3/1,28 (p)&29 (p),Kapnoor,2nd stage industrial area,kapnoor village, Gulbarga-585104
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 292

## ಸಮಾಚಾರ ಸಣ್ಣದಲ್ಲ

### ಅನಿಲ್ ಅಂಬಾನಿಗೆ ಮತ್ತೆ ದೊಡ್ಡ ಸಂಕಷ್ಟ

**ಮುಂಬೈ:** ರಿಲಯನ್ಸ್ ಇನ್‌ಫೋಕಾಮ್ ಸೇರಿದಂತೆ ರಿಲಯನ್ಸ್ ಸಮೂಹದ ಅಧ್ಯಕ್ಷ ಅನಿಲ್ ಅಂಬಾನಿಗೆ ಮತ್ತಷ್ಟು ಕಷ್ಟಗಳು ಎದುರಾಗಿವೆ. ಅನಿಲ್ ಮತ್ತು ಅವರ ಕಂಪನಿಯ ಬ್ಯಾಂಕ್‌ಗಳ ಖಾತೆಗಳಲ್ಲಿನ ವಂಚನೆ ಆರೋಪದ ತನಿಖೆಗೆ ನೀಡಲಾಗಿದ್ದ ತಾತ್ಕಾಲಿಕ ತಡೆಯಾಜ್ಞೆಯನು ಮುಂಬೈ ಹೈಕೋರ್ಟ್ ಸೋಮವಾರ ರದ್ದುಗೊಳಿಸಿದೆ. ಹಾಗಾಗಿ ರಿಲಯನ್ಸ್ ಕಂಪನಿ ಮತ್ತು ಅನಿಲ್ ವೈಯಕ್ತಿಕ ಬ್ಯಾಂಕ್ ಖಾತೆಗಳ ತನಿಖೆಗೆ ಅವಕಾಶವಾಗಿದೆ. ಎಸ್‌ಬಿಐ, ಐಡಿಬಿಐ ಮತ್ತು ಬ್ಯಾಂಕ್ ಆಫ್ ಬರೋಡಾದಲ್ಲಿನ ಹಲವಾರು ಖಾತೆಗಳಲ್ಲಿನ ವಹಿವಾಟುಗಳ ಬಗ್ಗೆ ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ಕೇಂದ್ರದ ತನಿಖಾ ಸಂಸ್ಥೆ ಸಿಬಿಐ ತನಿಖೆ ಮುಂದುವರಿಸಲು ಅವಕಾಶವಾಗಿದೆ. ರಿಲಯನ್ಸ್ ಕಮ್ಯುನಿಕೇಷನ್ಸ್(ಆರ್‌ಕಾಂ) ಹೆಸರಲ್ಲಿ ಮತ್ತು ಅದರ ಅಧೀನ ಸಂಸ್ಥೆಗಳ ಹೆಸರಲ್ಲಿ ಸಾವಿರಾರು ಕೋಟಿ ರು. ಸಾಲ ಪಡೆದು, ಆ ಹಣವನು ಸೂಚಿತ ಉದ್ದೇಶಕ್ಕೆ ಬಳಸದೇ ಅನ್ಯ ಉದ್ದೇಶಗಳಿಗೆ ಬಳಸಲಾಗಿದೆ, ಅಕ್ರಮ ವರ್ಗಾವಣೆ ಮಾಡಿಕೊಂಡು ವಂಚಿಸಲಾಗಿದೆ. ಅಲ್ಲದೇ, ಸಾಲದ ಹಣವನ್ನು ಮರುಪಾವತಿಸದೇ ವಂಚನೆ ಮಾಡಲಾಗಿದೆ ಎಂದು ಆರೋಪಿಸಲಾಗಿದೆ.

### ಮೆಕ್ಸಿಕೊ: ಮ್ಯಾಂಚೊಗೆ ಗುಂಡಿಕ್ಕಿ ಕೊಂದ ಸೇನೆ

**ಮೆಕ್ಸಿಕೊ:** ಮೆಕ್ಸಿಕೊ ದೇಶದ ಕುಖ್ಯಾತ ಮಾದಕವಸ್ತು ಕಳ್ಳಸಾಗಣೆದಾರ ನೆಮೆಸಿಯೊ ರುಬೆನ್ ಎಲ್ ಮ್ಯಾಂಚೊ ಒಸೆಗುರಾ ಸೆರ್ವಾಂಟೆಸ್‌ನನ್ನು ದೇಶದ ಸೇನಾಪಡೆ ಭಾನುವಾರ ಗುಂಡಿಕ್ಕಿ ಸಾಯಿಸಿದೆ. ಜಲಿಸ್ಕೊ ರಾಜ್ಯದ ಟಪಲ್ಪಾ ಪಟ್ಟಣದಲ್ಲಿ ಮೆಕ್ಸಿಕೊ ಸೇನಾಪಡೆ ಭಾನುವಾರ ಕಾರ್ಯಾಚರಣೆ ನಡೆಸಿದ್ದು, ಮಾದಕ ಲೋಕದ ಮಾಫಿಯಾ ಕಿಂಗ್ 59 ವರ್ಷದ ಮ್ಯಾಂಚೊ ಗುಂಡೇಟಿನಿಂದ ಸಾವನ್ನಪ್ಪಿದ. ಮ್ಯಾಂಚೊ ಸೆರೆಗೆ ನೆರವಾದವರಿಗೆ 1.50 ಕೋಟಿ ಡಾಲರ್ ಬಹುಮಾನ ನೀಡುವುದಾಗಿ ಮೆಕ್ಸಿಕೊ ಸರಕಾರ ಈ ಮೊದಲೇ ಘೋಷಿಸಿತ್ತು. ದೇಶದ ಆರ್ಥಿಕತೆಯಲ್ಲಿ ಏರಿಳಿತ ಮಾಡಬಲ್ಲಷ್ಟು ಬಲಿಷ್ಠವಾಗಿರುವ ಮೆಕ್ಸಿಕೊ ಡ್ರಗ್ಸ್ ಮಾಫಿಯಾ, ತಮ್ಮ ನಾಯಕನ ಹತ್ಯೆಯಾಗಿದ್ದಕ್ಕೆ ಸಿಡಿದೆದ್ದು, ದೇಶದ ವಿವಿಧೆಡೆ ಹಿಂಸಾಚಾರ ನಡೆಸಲಾರಂಭಿಸಿದೆ. ಪ್ರತೀಕಾರ ಕ್ರಮವಾಗಿ ಮಾದಕದ್ರವ್ಯ ಮಾಫಿಯಾದ ಸದಸ್ಯರು ಬಂದೂಕು ಹಿಡಿದು ಪಶ್ಚಿಮ ಜಲಿಸ್ಕೊ ರಾಜ್ಯದಲ್ಲಿ 20ಕ್ಕೂ ಹೆಚ್ಚು ಕಡೆ ರಸ್ತೆ ತಡೆ ನಡೆಸಿದ್ದಾರೆ. ಹಲವು ಕಾರು ಮತ್ತು ಟ್ರಕ್‌ಗಳಿಗೆ ಬೆಂಕಿ ಇಟ್ಟು ಸುಟ್ಟುಹಾಕಿದ್ದಾರೆ. ಮೆಕ್ಸಿಕೊ ಅಧ್ಯಕ್ಷೆ ಕ್ಲೌಡಿಯಾ ಶೀನ್ಬಾಮ್, ನಾಗರಿಕರು ಶಾಂತವಾಗಿರಲು ಮನವಿ ಮಾಡಿದ್ದಾರೆ.

### ಭಾರತ್‌ಟ್ಯಾಕ್ಸಿ: ಶೇ.80 ಆದಾಯ ಚಾಲಕರಿಗೇ

**ದೆಹಲಿ:** ಕಷ್ಟಪಟ್ಟು ದುಡಿವವನಿಗೇ ಲಾಭ ಸಿಗಬೇಕು. ಆ್ಯಪ್ ಅಭಿವೃದ್ಧಿ ಪಡಿಸಿ ಸೇವೆ ಒದಗಿಸಿದ ಶ್ರೀಮಂತರಿಗಲ್ಲ ಎಂಬುದೇ 'ಭಾರತ್ ಟ್ಯಾಕ್ಸಿ' ಸೇವೆಯ ಪರಿಕಲ್ಪನೆ. ಇಲ್ಲಿ ಚಾಲಕರೇ ಮಾಲೀಕರು. ಅವರ ದುಡಿಮೆಯ ಶೇ.80 ಹಣ ಅವರಿಗೇ ಸಂದಾಯವಾಗಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಭಾರತ್ ಟ್ಯಾಕ್ಸಿ ಚಾಲಕರ ಜತೆ ದೆಹಲಿಯಲ್ಲಿ ಸಂವಾದ ನಡೆಸಿದ ಶಾ, ಸಹಕಾರಿ ತತ್ವ ಆಧಾರಿತ 'ರೈಡ್-ಹೇಯ್‌ಲಿಂಗ್ ಪ್ಲಾಟ್‌ಫಾರ್ಮ್' ಮೂಲಕ ಚಾಲಕರ ಯೋಗಕ್ಷೇಮಕ್ಕೆ ಆದ್ಯತೆ ನೀಡಲಾಗುತ್ತದೆ ಎಂದರು. ಫೆ.5ರಂದು ಸೇವೆ ಆರಂಭಿಸಿದ 'ಭಾರತ್ ಟ್ಯಾಕ್ಸಿ' ಆಪ್, ಭಾರತದ ಮೊದಲ ಸಹಕಾರಿ ವಲಯದ ರೈಡ್-ಹೇಯ್‌ಲಿಂಗ್ ಸೇವೆಯಾಗಿದೆ. ಸರಕಾರದ ಬೆಂಬಲದೊಂದಿಗೆ ಅಮೂಲ್, ಐಎಫ್‌ಸಿಒ ಮತ್ತು ನಬಾರ್ಡ್ ಸಂಸ್ಥೆಗಳ ಸಹಯೋಗದಲ್ಲಿ ಕಾರ್ಯನಿರ್ವಹಿಸುತ್ತದೆ. ಚಾಲಕರೇ ಮಾಲೀಕರು ಎಂಬ ಮಾದರಿ ಅಳವಡಿಸಿಕೊಂಡಿರುವುದರಿಂದ ಚಾಲಕರಿಗೇ ಹೆಚ್ಚಿನ ಲಾಭ ಸೇರುತ್ತದೆ ಎಂದಿದ್ದಾರೆ. ಯಾವುದೇ ಕಮಿಷನ್ ಇರುವುದಿಲ್ಲ, ಕೇವಲ ಕನಿಷ್ಠ ಸದಸ್ಯತ್ವ ಶುಲ್ಕ ಮಾತ್ರ. ಸರ್ಜ್ ಪ್ರೈಸಿಂಗ್ ಇಲ್ಲ, ದರಗಳು ಸ್ಪಷ್ಟ. ಚಾಲಕರು ಕೇವಲ 500 ರು. ಪಾವತಿಸಿ ಈ ಸಹಕಾರಿ ಯೋಜನೆಯ ಭಾಗವಾಗಬಹುದು ಎಂದು ವಿವರಿಸಿದರು. ಭಾರತ್ ಟ್ಯಾಕ್ಸಿ ಸಹಕಾರಿ ತತ್ವ ಆಧರಿಸಿರುವುದರಿಂದ ಚಾಲಕರ ಶೋಷಣೆ ಇರುವುದಿಲ್ಲ. 'ಅಮೂಲ್' ಮಾದರಿಯಂತೇ ಚಾಲಕರನ್ನು ಬಲಪಡಿಸುವ ಉದ್ದೇಶ ಹೊಂದಿದೆ ಎಂದರು.




### ವಿದ್ಯಾರ್ಥಿ ಸಂಘರ್ಷ: ಜೆಎನ್‌ಯು ಉದ್ವಿಗ್ನ

**ದೆಹಲಿ:** ಜವಾಹರಲಾಲ್ ನೆಹರು ವಿಶ್ವವಿದ್ಯಾಲಯ (ಜೆಎನ್‌ಯು) ಆವರಣ ಮತ್ತೆ ಉದ್ವಿಗ್ನ ಪರಿಸ್ಥಿತಿಗೆ ಸಾಕ್ಷಿಯಾಗಿದೆ. ಎಡಪಂಥ ಮತ್ತು ಬಲಪಂಥದ ವಿದ್ಯಾರ್ಥಿಗಳ ನಡುವೆ ಭಾನುವಾರ ತಡರಾತ್ರಿ ಸಂಘರ್ಷ ಏರ್ಪಟ್ಟಿದ್ದು, ಕಲ್ಲು ತೂರಾಟವಾಗಿದೆ. ಹಲವು ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ. ಎಡಪಂಥೀಯ ವಿದ್ಯಾರ್ಥಿಗಳು ಉಪ ಕುಲಪತಿ ಶಾಂತಿಶ್ರೀ ಧುಲಿಪುಡಿ ಪಂಡಿತ್ ರಾಜೀನಾಮೆಗೆ ಆಗ್ರಹಿಸಿದ್ದಾರೆ. ಕ್ಯಾಂಪಸ್‌ನ ಪೂರ್ವದ ಗೇಟ್ ಬಳಿ ಸಮಾನತೆ ಮೆರವಣಿಗೆಗೆ ಕರೆ ನೀಡಿದ್ದಾರೆ. ಎಡಪಂಥೀಯ ಗುಂಪುಗಳಾದ 'ಆಲ್ ಇಂಡಿಯ ಸ್ಟುಡೆಂಟ್ಸ್ ಅಸೋಸಿಯೇಷನ್' ಸದಸ್ಯರು ಹಾಗೂ ಬಲಪಂಥೀಯ 'ಎಬಿವಿಪಿ'ಯ ಸಕ್ರಿಯ ಸದಸ್ಯರು ಸಂಘರ್ಷಕ್ಕೆ ಕಾರಣವಾಗಿದ್ದಾರೆ ಎಂದು ಆರೋಪಿಸಲಾಗಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

## ಜಿತೇಂದ್ರ ಯಾದವ್, ರಾಜಾ ಗುರ್ಜರ್, ಬಿಮಲ್, ಪ್ರದ್ಯುಮ್ನ ಸೆರೆ
## ಗ್ವಾಲಿಯರ್‌ಗೆ ಭಾನುವಾರ ರಾತ್ರಿ ತೆರಳಿ ಬಂಧಿಸಿದ ದೆಹಲಿ ಪೊಲೀಸ್

# ಅರೆಬೆತ್ತಲೆ ಪ್ರತಿಭಟನೆ: ಐವರು ಯುವ ಕಾಂಗ್ರೆಸ್ಸಿಗರ ಬಂಧನ

**ದೆಹಲಿ/ಗ್ವಾಲಿಯರ್:** ದೆಹಲಿಯ ಭಾರತ್ ಮಂಟಪಂನಲ್ಲಿ ಆಯೋಜಿತವಾಗಿದ್ದ 'ಎಐ ಇಂಪ್ಯಾಕ್ಟ್ ಸಮ್ಮಿಟ್'ನ 5ನೇ ದಿನ(ಫೆ.20) ಸಮಾರೋಪ ವೇಳೆ ಹಠಾತ್ತನೆ ವೇದಿಕೆಗೆ ನುಗ್ಗಿ ಅಂಗಿ ಬಿಚ್ಚಿ ಅರೆಬೆತ್ತಲೆಯಾಗಿ ಪ್ರತಿಭಟನೆ ನಡೆಸಿದ್ದ ಯುವ ಕಾಂಗ್ರೆಸ್‌ನ 10 ಮಂದಿಯಲ್ಲಿ ಮೊದಲಿಗೆ ನಾಲ್ವರಷ್ಟೇ ಸೆರೆ ಸಿಕ್ಕಿದ್ದರು. ಈಗ ಐವರು ಆರೋಪಿಗಳನ್ನು ಮಧ್ಯಪ್ರದೇಶದ ಗ್ವಾಲಿಯರ್ ಮತ್ತಿತರೆಡೆ ಬಂಧಿಸಲಾಗಿದೆ.

ಜಿತೇಂದ್ರ ಯಾದವ್

ಬಂಧಿತ ಆರೋಪಿಗಳಲ್ಲಿ ಒಬ್ಬನ ಹೆಸರು ಜಿತೇಂದ್ರ ಯಾದವ್. ಈತ ಯುವ ಕಾಂಗ್ರೆಸ್‌ನ ಮಧ್ಯಪ್ರದೇಶ ಘಟಕದ ಮಾಜಿ ಕಾರ್ಯದರ್ಶಿ. ರಾಹುಲ್ ಗಾಂಧಿ ಅವರಿಗೆ ಬಲು ಆಪ್ತ. ರಾಹುಲ್ ಗಾಂಧಿ ಅವರ ಭಾರತ್ ಜೋಡೊ ಯಾತ್ರೆಯಲ್ಲಿಯೂ ಭಾಗಿಯಾಗಿದ್ದ ಎಂದು ತಿಳಿದುಬಂದಿದೆ.

ಖಚಿತ ಮಾಹಿತಿ ಮೇರೆಗೆ ಭಾನುವಾರ ರಾತ್ರಿಯೇ ಗ್ವಾಲಿಯರ್‌ಗೆ ಸ್ಕಾರ್ಪಿಯೋ ಕಾರಿನಲ್ಲಿಯೇ ತೆರಳಿದ ದೆಹಲಿ ಪೊಲೀಸರ ವಿಶೇಷ ತಂಡ, ಆರೋಪಿ ಜಿತೇಂದ್ರ ಯಾದವ್‌ನನ್ನು ಗ್ವಾಲಿಯರ್‌ನ ವಿಶ್ವವಿದ್ಯಾಲಯ ಪೊಲೀಸ್ ಠಾಣೆ ಬಳಿ ಇರುವ ಆತನ ಮನೆಯಿಂದಲೇ ಬಂಧಿಸಿದೆ.

ಮತ್ತೊಬ್ಬ ಆರೋಪಿ ರಾಜಾ ಗುರ್ಜರ್ ಮಧ್ಯಪ್ರದೇಶ ಯುವ ಕಾಂಗ್ರೆಸ್ ಘಟಕಕ್ಕೆ ಈ ಹಿಂದೆ ಅಧ್ಯಕ್ಷನಾಗಿದ್ದ. ಪಿಪ್ರೌಲಿ ಗ್ರಾಮದ ನಿವಾಸಿಯಾಗಿರುವ ರಾಜಾ ಗುರ್ಜರ್, ಝೂನ್ಸಿ ರಸ್ತೆ ಪೊಲೀಸ್ ಠಾಣೆಗೆ ಬಂದು ಭಾನುವಾರ ಶರಣಾಗಿದ್ದಾನೆ. ಆತನನ್ನು ದೆಹಲಿ ಪೊಲೀಸರ ವಿಶೇಷ ತಂಡ ತಮ್ಮ ವಶಕ್ಕೆ ತೆಗೆದುಕೊಂಡು ಬಂಧಿಸಿದೆ.

ಉಳಿದಂತೆ ದೆಹಲಿ ಪೊಲೀಸರ ವಿಶೇಷ ತಂಡ, ಮಧ್ಯಪ್ರದೇಶದ ಭಿಂಡ್ ನಗರದಿಂದ ಬಿಮಲ್ ಎಂಬಾತನನ್ನು, ಝೂನ್ಸಿ ನಗರದಿಂದ ಪ್ರದ್ಯುಮ್ನ ಎಂಬವನನ್ನು ಹಾಗೂ ಉತ್ತರ ಪ್ರದೇಶದ ಲಲಿತ್‌ಪುರದಿಂದ ಬಂಟಿ ಶುಕ್ಲಾ ಎಂಬಾತನನ್ನು ಬಂಧಿಸಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ದೆಹಲಿಯಲ್ಲಿನ ಅರೆಬೆತ್ತಲೆ ಪ್ರತಿಭಟನೆ ವೇಳೆಯ ವಿಡಿಯೊ ದೃಶ್ಯಾವಳಿಗಳನ್ನು ಆಧರಿಸಿ ನಾಲ್ವರೂ ಆರೋಪಿಗಳನ್ನು ಬಂಧಿಸಲಾಗಿದೆ ಎಂಬ ಮಾಹಿತಿ ಲಭ್ಯವಾಗಿದೆ. ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶದಲ್ಲಿ ಬಂಧಿಸಲಾದ ನಾಲ್ವರನ್ನೂ ದೆಹಲಿಗೆ ಕರೆತರಲಾಗಿದೆ.

ಈ ಮೊದಲೇ ಬಂಧಿತರಾಗಿರುವ ನಾಲ್ವರು ಆರೋಪಿಗಳನ್ನು(ಕೃಷ್ಣಹರಿ, ಕುಂದನ್ ಯಾದವ್, ಅಜಯ್ ಕುಮಾರ್, ನರಸಿಂಹ ಯಾದವ್) ದೆಹಲಿಯ ರೌಸ್ ಅವೆನ್ಯೂ ನ್ಯಾಯಾಲಯ 5 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಒಪ್ಪಿಸಿದೆ. ಈಗ ಸೆರೆ ಸಿಕ್ಕಿರುವ ನಾಲ್ವರು ಆರೋಪಿಗಳನ್ನೂ ಪೊಲೀಸರು ವಿಚಾರಣೆಗಾಗಿ ವಶಕ್ಕೆ ಕೇಳಿದಾಗ ನ್ಯಾಯಾಲಯ 2 ದಿನಗಳ ಅವಧಿಗೆ ಪೊಲೀಸ್ ವಶಕ್ಕೆ ನೀಡಿದೆ ಎಂದು ವರದಿಯಾಗಿದೆ.

ಅರೆಬೆತ್ತಲೆ ಪ್ರತಿಭಟನೆಯಲ್ಲಿ ವೀರಾವೇಶದಿಂದ ಭಾಗಿಯಾಗಿದ್ದ 10 ಯುವ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಸದ್ಯ ತಲೆಮರೆಸಿಕೊಂಡಿರುವ ಉಳಿದ ಒಬ್ಬನಿಗಾಗಿ (ಆತನ ಹೆಸರು ಮುಕೇಶ್ ಶರ್ಮಾ ಎಂದು ತಿಳಿದುಬಂದಿದೆ) ದೆಹಲಿ ಪೊಲೀಸರ ವಿಶೇಷ ತಂಡ ಮಧ್ಯಪ್ರದೇಶದ ವಿವಿಧೆಡೆ ಶೋಧ ಕಾರ್ಯ ನಡೆಸುತ್ತಿದೆ ಎಂದು ತಿಳಿದುಬಂದಿದೆ.

### ಯುವ ಕಾಂಗ್ರೆಸ್ಸಿಗನ ಕಾರಿಂದ ಟಿ ಶರ್ಟ್ ವಶ

ಈ ಮಧ್ಯೆ, ದೆಹಲಿ ಎಐ ಇಂಪ್ಯಾಕ್ಟ್ ಸಮ್ಮಿಟ್‌ನಲ್ಲಿ ಅರೆಬೆತ್ತಲೆ ಪ್ರತಿಭಟನೆಗೆ ಬಳಸಲಾಗಿದ್ದ, ಪ್ರಧಾನಿ ಮೋದಿ ಚಿತ್ರ ಮುದ್ರಿಸಲಾಗಿದ್ದ ಟಿ ಶರ್ಟ್‌ಗಳು ಮತ್ತು ಪೋಸ್ಟರ್‌ಗಳನ್ನು ಭಾರತೀಯ ಯುವ ಕಾಂಗ್ರೆಸ್ ನಾಯಕ ಕೃಷ್ಣಹರಿ ಎಂಬಾತನ ಕಾರಿನಿಂದ ದೆಹಲಿ ಪೊಲೀಸರು ವಶಪಡಿಸಿಕೊಂಡಿದ್ದಾರೆ. ಕೃಷ್ಣಹರಿಗೆ ಸೇರಿದ ಕಾರನ್ನು ಪಹಾರ್‌ಗಂಜ್ ಪ್ರದೇಶದಲ್ಲಿನ ಹಿಮಾಚಲ್ ಸದನ್ ಹೋಟೆಲ್ ಬಳಿ ಪತ್ತೆ ಮಾಡಿ ವಶಕ್ಕೆ ತೆಗೆದುಕೊಳ್ಳಲಾಗಿದೆ. ಕಾರು ಬಿಹಾರದಲ್ಲಿ ನೋಂದಣಿಯಾಗಿದೆ. ಕಾರಿನಿಂದ ಟಿ ಶರ್ಟ್ ಮತ್ತು ಬ್ಯಾನರ್ ವಶಪಡಿಸಿಕೊಳ್ಳಲಾಗಿದೆ. ಪ್ರತಿಭಟನಾಕಾರರು ನೇಪಾಳದಲ್ಲಿ ಕಳೆದ ವರ್ಷ ನಡೆದಿದ್ದ ಜೆನ್ ಝಡ್ ಮಾದರಿ ಪ್ರತಿಭಟನೆಯಿಂದ ಪ್ರೇರಿತರಾಗಿದ್ದರು. ವಿದೇಶಿ ಪ್ರಮುಖರ ಎದುರು ಭಾರತ ದೇಶದ ಮಾನ ಹರಾಜು ಹಾಕುವುದು, ಆ ಮೂಲಕ ದಂಗೆಗೆ ಕರೆ ನೀಡುವುದು ಆರೋಪಿಗಳ ಉದ್ದೇಶವಾಗಿತ್ತು ಎಂದು ಪೊಲೀಸರು ನ್ಯಾಯಾಲಯಕ್ಕೆ ತಿಳಿಸಿದ್ದಾರೆ.

## ಸರಕಾರ ಸೂಕ್ಷ್ಮವಾಗಿ ಗಮನಿಸುತ್ತಿದೆ: ಸಚಿವೆ ನಿರ್ಮಲಾ

# ಚಿನ್ನದ ಬೆಲೆ ಏರಿದೆ, ಆದರೆ ಮಿತಿ ಮೀರಿಲ್ಲ

**ದೆಹಲಿ:** ಚಿನ್ನ-ಬೆಳ್ಳಿ ಲೋಹಗಳ ಮಾರುಕಟ್ಟೆ ಧಾರಣೆಗಳ ಏರಿಳಿತವನ್ನು ಭಾರತ ಸರಕಾರ ಸೂಕ್ಷ್ಮವಾಗಿ ಗಮನಿಸುತ್ತಿದೆ. 'ಚಿನ್ನ ಸಾಮಾನ್ಯ ಜನರಿಗೆ ಆಭರಣ ಮತ್ತು ಹೂಡಿಕೆಯ ಮಾರ್ಗವಾಗಿದೆ. ಹಬ್ಬ-ಮದುವೆ ಸಂದರ್ಭ ಧಾರಣೆ ಏರಿಕೆ ಆಗುತ್ತದೆ. ಆದರೆ, 'ನಿರ್ದಿಷ್ಟ ಮಿತಿ'ಯನ್ನು ಮೀರಿಲ್ಲ ಎಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ)ನ ಕೇಂದ್ರೀಯ ನಿರ್ದೇಶಕರ ಮಂಡಳಿ ಜತೆ ಸೋಮವಾರ ಸಭೆ ನಡೆಸಿದ ಸಚಿವೆ, ನಂತರ ಸುದ್ದಿಗೋಷ್ಠಿ ನಡೆಸಿದರು. ದೇಶೀಯ ಉತ್ಪಾದನೆಯಿಂದ ದೇಶೀ ಚಿನ್ನದ ಬೇಡಿಕೆ ಪೂರೈಸಲು ಸಾಕಾಗದು. ಆದ ಕಾರಣ ಆಮದು ಮಾಡಿಕೊಳ್ಳುತ್ತಿದ್ದೇವೆ. ಚಿನ್ನದ ಬೆಲೆ ನಿರ್ದಿಷ್ಟ ಮಿತಿ ಮೀರಿಲ್ಲ ಎಂದು ಭಾವಿಸುತ್ತೇನೆ. ಹೆಚ್ಚಿನ ದೇಶಗಳು, ವಿಶೇಷವಾಗಿ ಅಲ್ಲಿನ ಕೇಂದ್ರೀಯ ಬ್ಯಾಂಕುಗಳು ಚಿನ್ನ-ಬೆಳ್ಳಿಯನ್ನು ಖರೀದಿಸಿ ಸಂಗ್ರಹಿಸುತ್ತಿರುವುದರಿಂದ ಧಾರಣೆ ಏರಿಕೆ ಆಗುತ್ತಿದೆ ಎಂದರು.

ಭಾರತೀಯ ರಿಸರ್ವ್ ಬ್ಯಾಂಕ್(ಆರ್‌ಬಿಐ) ಬಳಿ ಸಾಕಷ್ಟು ಲಿಕ್ವಿಡಿಟಿ (ಹಣ) ಲಭ್ಯವಿದೆ. ಮುಂದಿನ 5 ವರ್ಷಗಳವರೆಗೆ ಸಾಲ ಪಡೆಯಬಹುದಾದಷ್ಟು ಆರ್ಥಿಕತೆ ಸ್ಥಿರವಾಗಿದೆ. ಸರಕಾರ ದೇಶದ ಆರ್ಥಿಕ ಅಗತ್ಯಗಳನ್ನು ಪೂರೈಸಲು ಸಿದ್ಧವಿದೆ ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಸಚಿವೆ ಉತ್ತರಿಸಿದರು.

ಅಮೆರಿಕದ ಸುಂಕ ವಿಷಯಕ್ಕೆ ಈಗ ಪ್ರತಿಕ್ರಿಯಿಸುವುದು ಬಹಳ ಬೇಗ ಅನ್ನಿಸುತ್ತದೆ. ಆ ವಿಚಾರವನ್ನು ವಾಣಿಜ್ಯ ಮತ್ತು ಕೈಗಾರಿಕಾ ಸಚಿವರು ಗಮನಿಸುತ್ತಿದ್ದಾರೆ ಎಂದು ಮತ್ತೊಂದು ಪ್ರಶ್ನೆಗೆ ಪ್ರತಿಕ್ರಿಯಿಸಿದರು.

### ಆರ್‌ಬಿಐ ಪ್ರತಿಕ್ರಿಯೆ

ಚಿನ್ನದ ಧಾರಣೆ ಏರಿಕೆ ಆಗಿದ್ದರೂ ಚಿನ್ನದ ಆಮದು ಆರ್ಡರ್ ಮೌಲ್ಯವೇನೂ ಹೆಚ್ಚಾಗಿಲ್ಲ ಎಂದು ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಸ್ಪಷ್ಟಪಡಿಸಿದರು. 'ವಿದೇಶಿ ನೇರ ಹೂಡಿಕೆ(ಎಫ್‌ಡಿಐ) 2025 ಮತ್ತು 2026ರಲ್ಲಿ ಪ್ರಬಲವಾಗಿದೆ-ಸ್ಥಿರವಾಗಿ ಬೆಳೆಯುತ್ತಿದೆ. ಆರ್ಥಿಕ ಸ್ಥಿರತೆ ಬೆಂಬಲಿಸಲು ಭಾರತದಲ್ಲಿ ಸಾಕಷ್ಟು ವಿದೇಶಿ ನಗದು ಮೀಸಲಿದೆ' ಎಂದರು.

## ಮೃತರಲ್ಲಿ ಇಂಗ್ಲೆಂಡ್ ಪ್ರವಾಸಿಗ | ಜಪಾನ್ ಪ್ರಜೆಗೆ ಗಾಯ

ವಿದೇಶದ ಪ್ರವಾಸಿಗರಿದ್ದ ನೇಪಾಳದ ಬಸ್ 200 ಮೀ. ಆಳದ ನದಿಗೆ ಬಿದ್ದಿದೆ.

# ನೇಪಾಳದ ತ್ರಿಶೂಲಿ ನದಿಗೆ ಉರುಳಿದ ಬಸ್: 19 ಸಾವು

**ಕಠ್ಮಂಡು:** ನೇಪಾಳದ ರಾಜಧಾನಿ ನಗರ ಕಠ್ಮಂಡುವಿನಿಂದ 90 ಕಿ.ಮೀ ದೂರದಲ್ಲಿ, ಧಾಡಿಂಗ್ ಜಿಲ್ಲೆಯಲ್ಲಿ 45 ಪ್ರಯಾಣಿಕರಿದ್ದ ಬಸ್ ಸೋಮವಾರ ನಸುಕಿನ 1.30ರಲ್ಲಿ ಪೃಥ್ವಿ ಹೆದ್ದಾರಿಯಲ್ಲಿ ಸಾಗುತ್ತಿದ್ದಾಗ 200 ಮೀ. ಆಳದ ತ್ರಿಶೂಲಿ ನದಿಗೆ ಉರುಳಿದೆ. ಪರಿಣಾಮ ಬಸ್‌ನಲ್ಲಿದ್ದ ವಿದೇಶಿ ಪ್ರವಾಸಿಗರೂ ಸೇರಿದಂತೆ ಒಟ್ಟು 19 ಮಂದಿ ಸಾವಿಗೀಡಾಗಿದ್ದಾರೆ. ವಿದೇಶಿ ಪ್ರವಾಸಿಗರೂ ಸೇರಿ 26 ಮಂದಿ ಗಾಯಗೊಂಡಿದ್ದಾರೆ.

ಪೋಖರಾದಿಂದ ಕಠ್ಮಂಡುವಿಗೆ ಹೋಗುತ್ತಿದ್ದ ಬಸ್ ತ್ರಿಶೂಲಿ ನದಿಗೆ ಉರುಳಿದೆ. ರಕ್ಷಣಾ ಕಾರ್ಯಾಚರಣೆ ನಡೆಸಿ ಗಾಯಾಳುಗಳನ್ನು ಸಮೀಪದ ವಿವಿಧ ಆಸ್ಪತ್ರೆಗಳಿಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಮೃತರಲ್ಲಿ ಮತ್ತು ಗಾಯಾಳುಗಳಲ್ಲಿ ವಿವಿಧ ದೇಶಗಳ ಪ್ರಜೆಗಳೂ ಸೇರಿದ್ದಾರೆ.

ನದಿಗೆ ಬಿದ್ದು ಅಪ್ಪಚ್ಚಿಯಾಗಿದ್ದ ಬಸ್‌ನಿಂದ 19 ಪ್ರಯಾಣಿಕರ ಮೃತದೇಹಗಳನ್ನು ಹೊರತೆಗೆಯಲಾಗಿದೆ. 26 ಗಾಯಾಳುಗಳನ್ನು ರಕ್ಷಿಸಲಾಗಿದೆ. ನೇಪಾಳ ಸೇನೆ, ಸಶಸ್ತ್ರ ಪೊಲೀಸ್ ಪಡೆ ಮತ್ತು ಜಿಲ್ಲಾ ಪೊಲೀಸ್ ಸಿಬ್ಬಂದಿಯನ್ನು ರಕ್ಷಣಾ ಕಾರ್ಯಾಚರಣೆಗಾಗಿ ಬಳಸಿಕೊಳ್ಳಲಾಗಿದೆ ಎಂದು ನೇಪಾಳ ಸಶಸ್ತ್ರ ಪೊಲೀಸ್ ಪಡೆ ವಕ್ತಾರ ಬಿಷ್ಣು ಪ್ರಸಾದ್ ಭಟ್ಟ ತಿಳಿಸಿದ್ದಾರೆ.

ಮೃತರಲ್ಲಿ ಯುನೈಟೆಡ್ ಕಿಂಗ್ಡಂನ ಪ್ರವಾಸಿಗರೂ ಸೇರಿದ್ದಾರೆ. ಗಾಯಾಳುಗಳಲ್ಲಿ ನ್ಯೂಜಿಲೆಂಡ್ ಪ್ರವಾಸಿಗ, ಜಪಾನ್ ಮಹಿಳೆ ಮತ್ತು ಡಚ್ ಪ್ರಜೆಯೂ ಸೇರಿದ್ದಾರೆ. ಅಪಘಾತಕ್ಕೆ ನಿಖರವಾದ ಕಾರಣ ತಿಳಿದುಬಂದಿಲ್ಲ. ಅತಿ ವೇಗದ ಚಾಲನೆ ಮತ್ತು ಕಳಪೆ ರಸ್ತೆ ಅಪಘಾತಕ್ಕೆ ಕಾರಣವಾಗಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

## 326 ದಿನಗಳ ಸುದೀರ್ಘ ಕಾರ್ಯಾಚರಣೆ | 7 ಉಗ್ರರನ್ನು ಹುಡುಕಿ ಕೊಂದ ಸೇನಾಪಡೆ

# ಆಪರೇಷನ್ ತ್ರಾಸಿ-ಐ ಪೂರ್ಣ ಯಶಸ್ವಿ

**ಶ್ರೀನಗರ:** ಜಮ್ಮು-ಕಾಶ್ಮೀರದ ಕಿಶ್ತ್ವಾರ್‌ನ ಛತ್ರೂ ಅರಣ್ಯ ಪ್ರದೇಶದಲ್ಲಿ ಅಡಗುತಾಣ ನಿರ್ಮಿಸಿಕೊಂಡು, ಎಕೆ-47 ಬಂದೂಕುಗಳು ಸೇರಿದಂತೆ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿಟ್ಟುಕೊಂಡು ಭಾರತದ ಮೇಲೆ ಭಯೋತ್ಪಾದಕ ದಾಳಿ ನಡೆಸಲು ಹೊಂಚು ಹಾಕುತ್ತಿದ್ದ ಜೈಶ್ ಎ ಮೊಹಮ್ಮದ್ ಉಗ್ರ ಸಂಘಟನೆಯ ಉನ್ನತ ಕಮಾಂಡರ್ ಸೈಫುಲ್ಲಾ ಸೇರಿದಂತೆ ಮೂವರು ಉಗ್ರರನ್ನು ಜಂಟಿ ಭದ್ರತಾ ಪಡೆಗಳು ಭಾನುವಾರ ಹೊಡೆದುರುಳಿಸಿದ್ದು, ಅದರೊಂದಿಗೆ 326 ದಿನಗಳ ಸುದೀರ್ಘ ಅವಧಿಯ 'ಆಪರೇಷನ್ ತ್ರಾಸಿ-ಐ' ಕಾರ್ಯಾಚರಣೆ ಯಶಸ್ವಿಯಾಗಿ ಪೂರ್ಣಗೊಂಡಿದೆ.

ಭಾರತದ ಹಲವೆಡೆ ಭಯೋತ್ಪಾದಕ ದಾಳಿಗಳನ್ನು ನಡೆಸಿದ್ದು, ಭದ್ರತಾ ಪಡೆಗಳನ್ನು ಗುರಿಯಾಗಿಸಿ ದಾಳಿಗಳನ್ನು ಸಂಘಟಿಸಿದ್ದ ಜೈಶ್ ಎ ಮೊಹಮ್ಮದ್ ಉಗ್ರ ಸಂಘಟನೆಯ 7 ಭಯೋತ್ಪಾದಕರನ್ನು ಗುರಿಯಾಗಿಸಿಕೊಂಡು ಭಾರತೀಯ ಸೇನೆ, ಸಿಆರ್‌ಪಿಎಫ್, ಜಮ್ಮು-ಕಾಶ್ಮೀರ ಪೊಲೀಸ್ ವಿಶೇಷ ಪಡೆಯ ಜಂಟಿ ಕಾರ್ಯಾಚರಣೆ ತಂಡ 326 ದಿನ ಗಳಿಂದ ಹಗಲೂ-ರಾತ್ರಿ ಎನ್ನದೇ, ಬೆಟ್ಟು ಗುಡ್ಡ, ಕಾಡು-ಮೇಡು ಎನ್ನದೇ ಸತತವಾಗಿ ಹುಡುಕಾಟ ನಡೆಸಿ ಕೊಲ್ಲುತ್ತಾ ಬಂದಿತ್ತು. ಆದರೆ, ಸೈಫುಲ್ಲಾ ಮಾತ್ರ ಈವರೆಗೂ ತಪ್ಪಿಸಿಕೊಳ್ಳುತ್ತಲೇ ಇದ್ದ. 326 ದಿನಗಳ ಕಾರ್ಯಾಚರಣೆಯಲ್ಲಿ ಒಟ್ಟು 17 ಬಾರಿ ಸ್ವಲ್ಪದರಲ್ಲೇ ಸೈಫುಲ್ಲಾ ತಪ್ಪಿಸಿಕೊಂಡಿದ್ದ. ಕಡೆಗೆ ಸೋಮವಾರ ನೆಲಕಚ್ಚಿದ ಎಂದು ಜಂಟಿ ಭದ್ರತಾ ಪಡೆಗಳ ಅಧಿಕಾರಿ ಹೇಳಿಕೊಂಡಿದ್ದಾರೆ. ಸೈಫುಲ್ಲಾ 5 ವರ್ಷಗಳ ಹಿಂದೆ ಜಮ್ಮು-ಕಾಶ್ಮೀರಕ್ಕೆ ನುಸುಳಿ ಬಂದಿದ್ದ. ಆಗಿನಿಂದಲೂ ಜಮ್ಮು-ಕಾಶ್ಮೀರದಲ್ಲಿ ಭಯೋತ್ಪಾದಕ ಚಟುವಟಿಕೆ ಗಳಲ್ಲಿ ಸಕ್ರಿಯವಾಗಿದ್ದ. ವಿವಿಧೆಡೆ ಉಗ್ರ ಕೃತ್ಯಗಳನ್ನು ನಡೆಸುತ್ತಿದ್ದ ಸೈಫುಲ್ಲಾ, ಭದ್ರತಾ ಪಡೆಗಳ ಮೇಲೆಯೂ ಹಲವು ದಾಳಿಗಳನ್ನು ನಡೆಸಿದ್ದ. 2024ರ ಜುಲೈನಲ್ಲಿ ನಾಲ್ವರು ಸೈನಿಕರನ್ನು ಹುತಾತ್ಮರನ್ನಾಗಿಸಿದ ಉಗ್ರ ದಾಳಿಯಲ್ಲೂ ಈತ ಭಾಗಿಯಾಗಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಭಾನುವಾರದ ಕಾರ್ಯಾಚರಣೆಯಲ್ಲಿ ಎಫ್‌ಪಿವಿ ಡ್ರೋನ್‌ಗಳು, ಉಪಗ್ರಹ ಚಿತ್ರಣ, ಆರ್‌ಪಿಎ/ಯುಎವಿ ವ್ಯವಸ್ಥೆ ಹಾಗೂ ಉನ್ನತ ಸಂವಹನ ಸಾಧನಗಳನ್ನು ಬಳಸಲಾಗಿದೆ. ಪೊಲೀಸ್ ಹಾಗೂ ಸೇನೆಯ ಗುಪ್ತಚರ ವಿಭಾಗಗಳ ಮೂಲಕ ಉಗ್ರರ ಚಲನವಲನವನ್ನು ಪತ್ತೆ ಹಚ್ಚಿ ದಾಳಿ ಸಂಘಟಿಸಲಾಗಿತ್ತು ಎಂದು ಸೇನೆಯ ಅಧಿಕಾರಿಗಳು ಸುದ್ದಿಗಾರರಿಗೆ ವಿವರಿಸಿದ್ದಾರೆ.

### ಆಪರೇಷನ್ ತ್ರಾಸಿ-ಐ

- 2026 ಫೆಬ್ರವರಿ 4ರಂದು ಉಧಂಪುರದಲ್ಲಿನ ರಾಮ್‌ನಗರ್ ಅರಣ್ಯದಲ್ಲಿ ಇಬ್ಬರು ಜೈಶ್ ಉಗ್ರರನ್ನು 'ಆಪರೇಷನ್ ತ್ರಾಸಿ-ಐ' ಕಾರ್ಯಾಚರಣೆ ತಂಡ ಕೊಂದು ಹಾಕಿದೆ.
- 2026 ಜ.23ರಂದು ಕಥುವಾದ ಪರ್‌ಹೆತಾರ್ ಗ್ರಾಮದಲ್ಲಿ ಜೈಶ್ ಸಂಘಟನೆಯ ಒಬ್ಬ ಉಗ್ರನನ್ನು ಹೊಡೆದುರುಳಿಸಲಾಗಿದೆ. ಉಳಿದ 3 ಜೈಶ್ ಉಗ್ರರನ್ನು ವಿವಿಧೆಡೆ ಮುಗಿಸಲಾಗಿದೆ.

### ಸೇನಾಪಡೆಯ ಮುಖ್ಯಸ್ಥ ಜನರಲ್ ದ್ವಿವೇದಿ ಪ್ರಶಂಸೆ

326 ದಿನಗಳ ಕಾಲ 7 ಉಗ್ರರ ಬೆನ್ನಟ್ಟುತ್ತಾ ಹೋಗಿ ಏಳೂ ಮಂದಿಯನ್ನು ಬಿಡದೆ ಕೊಂದು ಹಾಕಿದ ಜಂಟಿ ಭದ್ರತಾ ಪಡೆಗಳ ವೃತ್ತಿಪರತೆ ಮತ್ತು ದೃಢಸಂಕಲ್ಪ ಶ್ಲಾಘನಾರ್ಹ. ಭಯೋತ್ಪಾದನೆ ವಿಚಾರದಲ್ಲಿ ಸಹಿಷ್ಣುತೆ ಎಂಬುದೇ ಇಲ್ಲ. ಭಾರತೀಯ ಸೇನೆ ಜಮ್ಮು-ಕಾಶ್ಮೀರದಲ್ಲಿ ಶಾಂತಿ ಸ್ಥಾಪನೆಗೆ ಬದ್ಧವಾಗಿದೆ ಎಂದು ಭಾರತೀಯ ಸೇನಾಪಡೆಯ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರು ಹೇಳಿದ್ದಾರೆ.

## ಸಂಸದಗೆ ಥಳಿತ: ಬಿಹಾರ ಐಜಿಪಿ ಬಂಧನ

**ಅಮರಾವತಿ:** ಪ್ರಕರಣವೊಂದರಲ್ಲಿ ಪೊಲೀಸ್ ಕಸ್ಟಡಿಯಲ್ಲಿದ್ದ ಸಂಸದರೊಬ್ಬರಿಗೆ ಥರ್ಡ್ ಡಿಗ್ರಿ ಹಲ್ಲೆ ಮಾಡಿದ ಆರೋಪ ಹೊತ್ತ ಹಿರಿಯ ಐಪಿಎಸ್ ಅಧಿಕಾರಿ ಸುನಿಲ್ ನಾಯಕ್ ರನ್ನು ಆಂಧ್ರಪ್ರದೇಶ ಪೊಲೀಸರು ಸೋಮವಾರ ಬಿಹಾರದ ಪಟನಾದಲ್ಲಿ ಬಂಧಿಸಿ, ಬಾಡಿ ವಾರಂಟ್ ಪಡೆದು ಗುಂಟೂರಿಗೆ ಕರೆತಂದಿದ್ದಾರೆ ಎಂದು ವರದಿಯಾಗಿದೆ.

ಆಂಧ್ರದಲ್ಲಿ ಸಿಎಂ ಜಗನ್‌ಮೋಹನ್ ರೆಡ್ಡಿ ನೇತೃತ್ವದ ವೈಎಸ್‌ಆರ್‌ಸಿಪಿ ಸರಕಾರವಿದ್ದಾಗ ನರಸಾಪುರಂ ಕ್ಷೇತ್ರದ ಸಂಸದರಾಗಿದ್ದ (ಸದ್ಯ ಆಂಧ್ರ ವಿಧಾನಸಭೆ ಉಪ ಸ್ಪೀಕರ್) ರಘುರಾಮ ಕೃಷ್ಣಂರಾಜು ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಲಾಗಿತ್ತು. ಹೈದರಾಬಾದ್ ಪೊಲೀಸರು ಸಂಸದರನ್ನು ಬಂಧಿಸಿದ್ದರು. ಈ ಸಂದರ್ಭ ಐಪಿಎಸ್ ಅಧಿಕಾರಿ ಸುನಿಲ್ ನಾಯಕ್, ಸಂಸದರನ್ನು ಥಳಿಸಿ ಹಲ್ಲೆ ಮಾಡಿದ್ದರು. ನನ್ನ ಕೈಕಾಲುಗಳಿಗೆ ಹೊಡೆದು ತೀವ್ರ ನೋವುಂಟು ಮಾಡಿದ್ದರು. ಬಹಳ ಕ್ರೂರವಾಗಿ ಹಲ್ಲೆ ಮಾಡಿದ್ದರು ಎಂದು ರಘುರಾಮ್ ದೂರು ದಾಖಲಿಸಿದ್ದಾರೆ.

ಸುನಿಲ್ ನಾಯಕ್ ಮಾತ್ರವಲ್ಲದೇ ಅಂದು ಸಿಐಡಿ ಐಜಿಪಿಯಾಗಿದ್ದ ಪಿ.ವಿ.ಸುನಿಲ್ ಕುಮಾರ್ ಮತ್ತು ಪಿಎಸ್‌ಐ ವಿರುದ್ಧವೂ ದೂರು ನೀಡಿದ್ದಾರೆ.

## ರಾಹುಲ್ ಇಂಡಿಯ ನಾಯಕ ಸ್ಥಾನ ಬಿಡಲಿ: ಅಯ್ಯರ್

**ದೆಹಲಿ:** ಕಾಂಗ್ರೆಸ್ ವರಿಷ್ಠರಿಗೆ ಪಕ್ಷದಲ್ಲಿರುವ, ಪಕ್ಷದಿಂದ ಹೊರಹೋಗಿರುವ, ಈಗಿನ ಮತ್ತು ಹಳೆಯ ಕಾಲದ ಕಾಂಗ್ರೆಸ್ ನಾಯಕರೇ ಮಗ್ಗುಲ ಮುಳ್ಳಾಗಿದ್ದಾರೆ. ತಿರುವನಂತಪುರಂ ಸಂಸದ, ಕಾಂಗ್ರೆಸ್‌ನ ಹಿರಿಯ ನಾಯಕ ಶಶಿ ತರೂರ್, ಕೇಂದ್ರ ಮಾಜಿ ಸಚಿವ ಮಣಿಶಂಕರ್ ಅಯ್ಯರ್, ಕಾಂಗ್ರೆಸ್‌ನ ಮಾಜಿ ನಾಯಕ ಗುಲಾಂನಬಿ ಆಜಾದ್ ಮೊದಲಾದವರು ಈಗಿನ ಕಾಂಗ್ರೆಸ್ ಹೈಕಮಾಂಡ್ ಬಗ್ಗೆ ಬಹಿರಂಗವಾಗಿಯೇ ಅಸಮಾಧಾನ ಹೊರಹಾಕುತ್ತಿರುತ್ತಾರೆ. ಆ ಮೂಲಕ ಪಕ್ಷಕ್ಕೆ ಮುಜುಗರ ತರುತ್ತಲೇ ಇರುತ್ತಾರೆ.

ಈಗಿನ ಸರದಿ ಮಣಿಶಂಕರ್ ಅಯ್ಯರ್ ಅವರದ್ದಾಗಿದೆ. ಅವರು ಸಂದರ್ಶನವೊಂದರಲ್ಲಿ ನೇರವಾಗಿಯೇ ರಾಹುಲ್ ಗಾಂಧಿ ವಿರುದ್ಧ ಅಸಮಾಧಾನ ಹೊರಹಾಕುತ್ತಿದ್ದಾರೆ. 'ರಾಹುಲ್ ಗಾಂಧಿ 26 ಪ್ರತಿಪಕ್ಷಗಳನ್ನು ಒಳಗೊಂಡಿರುವ 'ಇಂಡಿಯ' ಒಕ್ಕೂಟದ ನಾಯಕತ್ವವನ್ನು ತ್ಯಜಿಸಬೇಕು. ಬೇರೊಬ್ಬ ಅರ್ಹರಿಗೆ ಅವಕಾಶ ಮಾಡಿಕೊಡಬೇಕು. ಆವಾಗ ಮಾತ್ರವೇ ಇಂಡಿಯ ಒಕ್ಕೂಟಕ್ಕೆ ರಾಜಕೀಯವಾಗಿ ಏನಾದರೂ ಸಾಧಿಸಲು ಸಾಧ್ಯ ಎಂದಿದ್ದಾರೆ.

ರಾಹುಲ್ 'ಇಂಡಿಯ' ಒಕ್ಕೂಟದ ನಾಯಕ ಸ್ಥಾನದಿಂದ ಕೆಳಗಿಳಿದು ತೃಣಮೂಲ ಕಾಂಗ್ರೆಸ್ ಪಕ್ಷದ ನಾಯಕಿ-ಪಶ್ಚಿಮ ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ಅಥವಾ ಡಿಎಂಕೆ ಪಕ್ಷದ ಪ್ರಮುಖ-ತಮಿಳುನಾಡು ಸಿಎಂ ಎಂ.ಕೆ.ಸ್ಟಾಲಿನ್ ಅಥವಾ ಸಮಾಜವಾದಿ ಪಕ್ಷದ ಮುಖಂಡ-ಉತ್ತರ ಪ್ರದೇಶ ಮಾಜಿ ಸಿಎಂ ಅಖಿಲೇಶ್ ಯಾದವ್ ಅಥವಾ ಆರ್‌ಜೆಡಿ ನಾಯಕ-ಬಿಹಾರದ ಮಾಜಿ ಡಿಸಿಎಂ ತೇಜಸ್ವಿ ಯಾದವ್ ಅವರಲ್ಲಿ ಯಾರಿಗಾದರೂ ಅವಕಾಶ ಮಾಡಿಕೊಡಬೇಕು. ಪ್ರತಿಪಕ್ಷಗಳ ಈ ಪ್ರಮುಖ ನಾಯಕರು ರಾಹುಲ್ ಗಾಂಧಿ ಬದಲಾಗಿ ಇಂಡಿ ಒಕ್ಕೂಟದ ನಾಯಕರಾಗಲು ಅರ್ಹರಾಗಿದ್ದಾರೆ ಎಂದು ಅಯ್ಯರ್ ಅಭಿಪ್ರಾಯಪಟ್ಟಿದ್ದಾರೆ.

## ಪಶ್ಚಿಮ ಬಂಗಾಳ ರಾಜಕೀಯ ಚಾಣಕ್ಯ

# ಮುಕುಲ್ ರಾಯ್ ನಿಧನ

**ಕೋಲ್ಕತ್ತ:** ಪಶ್ಚಿಮ ಬಂಗಾಳ ರಾಜಕೀಯದ ಚಾಣಕ್ಯ ಎಂದೇ ಖ್ಯಾತರಾಗಿದ್ದ ಮಾಜಿ ರೈಲ್ವೆ ಸಚಿವ ಮುಕುಲ್ ರಾಯ್ (71) ಕೋಲ್ಕತ್ತದಲ್ಲಿ ನಿಧನರಾ ದರು. ರಾಯ್ ಅವರಿಗೆ ಕೋಲ್ಕತ್ತದ ಆಸ್ಪತ್ರೆಯಲ್ಲಿ ಸೋಮವಾರ ನಸುಕಿನ 1.30ರಲ್ಲಿ ಹೃದಯಾಘಾತವಾಗಿದೆ.

ರಾಯ್ ಬಹುಬಗೆ ಕಾಯಿಲೆಗಳಿಂದ ಬಳಲುತ್ತಿದ್ದರು. ಕೆಲವು ದಿನಗಳ ಹಿಂದೆ ಕೋಮಾಕ್ಕೆ ಹೋಗಿದ್ದರು. 2 ವರ್ಷದಿಂದ ಮುಕುಲ್ ರಾಯ್ ಅವರನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿತ್ತು. ಅವರ ಆರೋಗ್ಯ ದಿನೇ ದಿನೇ ಕ್ಷೀಣಿಸುತ್ತಿತ್ತು. ನೆನಪಿನ ಶಕ್ತಿ ಕುಂದಿತ್ತು. ಪರಿಚಿತರನ್ನು ಗುರುತಿಸುವ ಸಾಮರ್ಥ್ಯವನ್ನೇ ಕಳೆದುಕೊಂಡಿದ್ದರು. ಟ್ಯೂಬ್ ಮೂಲಕ ದ್ರವ ಆಹಾರ ನೀಡಲಾಗುತ್ತಿತ್ತು.

1998ರಲ್ಲಿ ಮಮತಾ ಬ್ಯಾನರ್ಜಿ ಜತೆಗೂಡಿ ತೃಣಮೂಲ ಕಾಂಗ್ರೆಸ್ ಪಕ್ಷ ಸ್ಥಾಪನೆಗೆ ಶ್ರಮಿಸಿದ್ದ ರಾಯ್, ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾದರು. ಮಮತಾಗೆ ಬಲು ಆಪ್ತರಾಗಿದ್ದ ರಾಯ್, ನಂತರ ಬಿಜೆಪಿ ಸೇರಿದ್ದರು. ಮತ್ತೆ ಟಿಎಂಸಿಗೆ ಮರಳಿದ್ದರು.

ಒಂದು ಕಾಲದಲ್ಲಿ ಮಮತಾ ಬ್ಯಾನರ್ಜಿಗೆ ಬಲು ಆಪ್ತರಾಗಿದ್ದ ಮತ್ತು ಪಕ್ಷದ ಎರಡನೇ ನಾಯಕ ಎಂದು ಪರಿಗಣಿಸಲ್ಪಟ್ಟಿದ್ದ ಮುಕುಲ್ ರಾಯ್, 2019ರ ಲೋಕಸಭಾ ಚುನಾವಣೆಗೆ 2 ವರ್ಷ ಮೊದಲು, ಅಂದರೆ 2017ರಲ್ಲಿ ಬಿಜೆಪಿ ಸೇರಿ ಅಚ್ಚರಿಗೊಳಿಸಿದ್ದರು. ರಾಜ್ಯದಲ್ಲಿ ಬಿಜೆಪಿ ಕಾರ್ಯತಂತ್ರದ ಪ್ರಮುಖರಾಗಿದ್ದ ರಾಯ್, 2019ರ ಲೋಕಸಭಾ ಚುನಾವಣೆಯಲ್ಲಿ 42 ಕ್ಷೇತ್ರ ಸ್ಥಾನಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ 18 ಸ್ಥಾನಗಳನ್ನು ಗೆಲ್ಲುವುದಕ್ಕೆ ಕಾರಣವಾಗಿದ್ದರು.

ರಾಯ್ 2021ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್‌ನಲ್ಲಿ ಕೃಷ್ಣನಗರದಿಂದ ಸ್ಪರ್ಧಿಸಿ ಗೆದ್ದರು. ನಂತರದ ದಿನಗಳಲ್ಲಿ ರಾಜ್ಯದಲ್ಲಿ ಪಕ್ಷದಲ್ಲಿ ಅವರ ಪ್ರಭಾವ ಕ್ಷೀಣಿಸಲಾರಂಭಿಸಿತು. ಸುವೇಂದು ಅಧಿಕಾರಿ ಪ್ರತಿಪಕ್ಷ ನಾಯಕರಾದ ಒಂದು ತಿಂಗಳ ನಂತರ ರಾಯ್ ಬಿಜೆಪಿಯನ್ನು ತೊರೆದರು. ಮತ್ತೆ ತೃಣಮೂಲ ಕಾಂಗ್ರೆಸ್ ಸೇರಿದರು. ಅವರು ಟಿಎಂಸಿಗೆ ಮರಳಿರುವುದು ಪಕ್ಷಾಂತರ ವಿರೋಧಿ ಕಾನೂನಿನ ಉಲ್ಲಂಘನೆ ಎಂದು 2025ರಲ್ಲಿ ತೀರ್ಪು ನೀಡಿದ ಕೋಲ್ಕತ್ತಾ ಹೈಕೋರ್ಟ್ ರಾಯ್ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಿತು.

ರಾಯ್ ಅವರ ರಾಜಕೀಯ ಜೀವನ ಹಲವು ತಿರುವುಗಳಿಂದ ಕೂಡಿತ್ತು. ಅವರ ನಿಧನ ಪಶ್ಚಿಮ ಬಂಗಾಳದ ರಾಜಕೀಯಕ್ಕೆ ದೊಡ್ಡ ನಷ್ಟ ಎಂದೇ ವ್ಯಾಖ್ಯಾನಿಸಲಾಗಿದೆ.

## ಮತದಾರರ ಸಂಖ್ಯೆ 5.67 ಕೋಟಿಗೆ ಇಳಿಕೆ

# ತ.ನಾ 74 ಲಕ್ಷ ಹೆಸರು ರದ್ದು

**ಚೆನ್ನೈ:** ತಮಿಳುನಾಡು ರಾಜ್ಯ ಮತದಾರರ ಪಟ್ಟಿಯ 'ವಿಶೇಷ ತೀವ್ರ ಪರಿಷ್ಕರಣೆ'(ಎಸ್‌ಐಆರ್) ಪ್ರಕ್ರಿಯೆ ಪೂರ್ಣಗೊಂಡಿದ್ದು, ಅಂತಿಮ ಮತದಾರರ ಪಟ್ಟಿಯನ್ನು ಸೋಮವಾರ ಪ್ರಕಟಿಸಲಾಗಿದೆ. 2025ರ ಅ.27ರಂದು ಎಸ್‌ಐಆರ್ ಆರಂಭಿಸಿದಾಗ ಒಟ್ಟು 6.41 ಕೋಟಿ ಮತದಾರರಿದ್ದರು. ದಾಖಲೆಗಳು, ಮನೆಗಳ ಬಳಿ ಪರಿಶೀಲನೆ ಬಳಿಕ 74 ಲಕ್ಷ ಮತದಾರರ ಹೆಸರನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ. ಪರಿಣಾಮ ರಾಜ್ಯದಲ್ಲಿನ ಒಟ್ಟು ಮತದಾರರ ಸಂಖ್ಯೆ 5.67 ಕೋಟಿಗೆ ಇಳಿಕೆಯಾಗಿದೆ.

ಮುಖ್ಯ ಚುನಾವಣಾಧಿಕಾರಿ ಅರ್ಚನಾ ಪಟ್ನಾಯಕ್.



ಮತದಾರರ ಪಟ್ಟಿ.

ಇದಕ್ಕೂ ಮುನ್ನ ಎಸ್‌ಐಆರ್‌ನ ಒಂದು ಹಂತ ಪೂರ್ಣಗೊಂಡಾಗ (ಡಿ.19) ಪರಿಷ್ಕೃತ ಮತದಾರರ ಕರಡು ಪಟ್ಟಿ ಪ್ರಕಟಿಸಲಾಗಿತ್ತು. ಆಗ, 97.34 ಲಕ್ಷ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲಾಗಿತ್ತು. ಅರ್ಹರು ಮತ್ತೆ ಮತದಾರರ ಪಟ್ಟಿ ಸೇರಲು ದಾಖಲೆ ಹಾಜರುಪಡಿಸಲು 30 ದಿನಗಳ ಕಾಲಾವಕಾಶ ನೀಡಲಾಗಿತ್ತು. 2026ರ ಜ.30ರಂದು ಹಕ್ಕು ಮತ್ತು ಆಕ್ಷೇಪಣೆಗಳ ಅವಧಿ ಮುಗಿದ ನಂತರ 27.53 ಲಕ್ಷ ಮತದಾರರ ಹೆಸರುಗಳನ್ನು ಮತ್ತೆ ಪಟ್ಟಿಗೆ ಸೇರಿಸಲಾಗಿದೆ ಎಂದು ಮುಖ್ಯ ಚುನಾವಣಾಧಿಕಾರಿ ಅರ್ಚನಾ ಪಟ್ನಾಯಕ್ ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದರು.

ರಾಜ್ಯದ ಪರಿಷ್ಕೃತ ಮತದಾರರ ಅಂತಿಮ ಪಟ್ಟಿಯಲ್ಲಿ ಒಟ್ಟು 5.67 ಕೋಟಿ ಮತದಾರರಿದ್ದು, ಅವರಲ್ಲಿ 2.77 ಕೋಟಿ ಪುರುಷರು ಮತ್ತು 2.89 ಕೋಟಿ ಮಹಿಳೆಯರು ಇದ್ದಾರೆ. ಇವರಲ್ಲಿ 18-19 ವಯೋಮಿತಿಯವರೇ(ಮೊದಲ ಬಾರಿ ಮತದಾರರು) 12.51 ಲಕ್ಷದಷ್ಟಿದ್ದಾರೆ. 4.63 ಲಕ್ಷ ವಿಶೇಷ ಚೇತನರು, 85 ವರ್ಷ ಮೇಲ್ಪಟ್ಟ 3.99 ಲಕ್ಷ ಮತದಾರರು ಇದ್ದಾರೆ ಎಂದು ಮಾಹಿತಿ ನೀಡಿದರು.

## ಸ್ಟಾಲಿನ್ ಸ್ನೇಹಿತರೆಲ್ಲರೂ ಭ್ರಷ್ಟರು: ನಟ ವಿಜಯ್

**ಚೆನ್ನೈ:** ತಮಿಳುನಾಡು ವಿಧಾನಸಭೆ ಚುನಾವಣೆ ಸಮೀಪಿಸುತ್ತಿದ್ದು, ರಾಜಕೀಯ ಪಕ್ಷಗಳ ನಾಯಕರ ವಾಗ್ದಾಳಿ ಜೋರಾಗುತ್ತಿದೆ. 'ಟಿವಿಕೆ' ಪಕ್ಷದ ಸಂಸ್ಥಾಪಕ- ನಟ ವಿಜಯ್ ಜೋಸೆಫ್, ತಮಿಳುನಾಡು ಸಿಎಂ ಎಂ.ಕೆ.ಸ್ಟಾಲಿನ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ. ದ್ರಾವಿಡ ಮುನ್ನೇತ್ರ ಕಳಗಂ(ಡಿಎಂಕೆ) ಪಕ್ಷದ ಅಧ್ಯಕ್ಷರ ನಿಜವಾದ ಸ್ನೇಹಿತರು ಭ್ರಷ್ಟರೇ ಆಗಿದ್ದಾರೆ. ಅವರೆಲ್ಲರೂ, ರಾಜಕೀಯ ಲಾಭದ ಮೇಲೆ ಕಣ್ಣಿಟ್ಟವರಾಗಿದ್ದಾರೆ ಎಂದು ಕುಟುಕಿದ್ದಾರೆ.

ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಸೋಮವಾರ ಮಾತನಾಡಿದ ವಿಜಯ್, ರಾಜಕೀಯ ಪ್ರವೇಶಕ್ಕೆ ಮುನ್ನ ಸ್ಟಾಲಿನ್ ಹೊಂದಿದ್ದ ಆಸ್ತಿಗಳು ಮತ್ತು ಈಗ ಅವರಲ್ಲಿರುವ ಆಸ್ತಿಗಳ ಪಟ್ಟಿಯನ್ನು ಸಾರ್ವಜನಿಕವಾಗಿ ಪ್ರಕಟಿಸಲಿ. ಅವರ ಆರ್ಥಿಕ ಸ್ಥಿತಿ ಬಹಿರಂಗವಾಗಲಿ. ರಾಜ್ಯದ ಜನರಿಗೂ ಸತ್ಯ ತಿಳಿಯಲಿ ಎಂದು ಆಗ್ರಹಿಸಿದರು. ಸ್ಟಾಲಿನ್ ಸಂಪತ್ತಿನ ಮೂಲ ಯಾವುದು? ಅದು ಕಠಿಣ ಪರಿಶ್ರಮದಿಂದ ಗಳಿಸಿದ್ದಾ? ಅಥವಾ ಅಧಿಕಾರ ವಹಿಸಿಕೊಂಡ ನಂತರ ಗಳಿಸಿದ್ದಾ? ಎಂದು ಪ್ರಶ್ನಿಸಿದ ವಿಜಯ್, ಮಿ. ಸ್ಟಾಲಿನ್ ನೀವು ಬಹಿರಂಗಪಡಿಸಬಹುದೇ? ಎಂದು ಸವಾಲೆಸೆದರು. ಕಾಮರಾಜ್ ಸಿ.ಎನ್.ಅಣ್ಣಾದೊರೈ ಮತ್ತು ಎಂ.ಜಿ.ರಾಮಚಂದ್ರನ್ ಅವರಂತಹ ದಿಗ್ಗಜ ನಾಯಕರ ಕಾಲದಲ್ಲಿ ರಾಜ್ಯ ನಿಜವಾಗಿಯೂ ಅದ್ಭುತವಾಗಿತ್ತು. ನಿಮ್ಮ ಕಾಲದಲ್ಲಿ ಅಲ್ಲ ಎಂದು ಸಿಎಂ ಸ್ಟಾಲಿನ್ ಅವರಿಗೆ ತಿರುಗೇಟು ನೀಡಿದರು.

## ಸಮಾಚಾರ ಸಣ್ಣದಲ್ಲ

### ಪುರಸಭೆಗೆ ಮೂಲ ದಾಖಲೆ ಸಲ್ಲಿಸಿ

**ಮಸ್ಕಿ:** ಗ್ರಾಮ ಪಂಚಾಯಿತಿ ಅವಧಿಯಲ್ಲಿ ಲಿಂಗಸುಗೂರ ರಸ್ತೆ ಬಳಿ ಆಶ್ರಯ ಯೋಜನೆಯಡಿ ನವಗ್ರಾಮ ಯೋಜನೆ ಯಡಿ ಫಲಾನುಭವಿಗಳನ್ನು ಆಯ್ಕೆ ಮಾಡಿ ಹಕ್ಕು ಪತ್ರ ಗಳನ್ನು ವಿತರಿಸಲಾಗಿತ್ತು. ಆ ಅವಧಿಯಲ್ಲಿ ಮನೆ ನಿರ್ಮಿಸಿದ್ದು, ಸದರಿ ಮನೆಗಳಲ್ಲಿ, ಫಲಾನುಭವಿಗಳು ವಾಸವಾಗಿರದ ಕಾರಣ ಸದರಿ ಮನೆಗಳನ್ನು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಶಿಥಿಲಾವಸ್ಥೆಯಲ್ಲಿರುವ ಮನೆಗಳನ್ನು ನೆಲಸಮ ಮಾಡಿ ಈ ಹಿಂದಿನ ಗ್ರಾಮ ಪಂಚಾಯಿತಿಯ ಅವಧಿಯಲ್ಲಿ ನೀಡಿರುವ ಅಳತೆಯಂತೆ ಹೊಸದಾಗಿ ವಿನ್ಯಾಸ ರಚಿಸಿ ಹೊಸದಾಗಿ ಹಕ್ಕು ಪತ್ರಗಳನ್ನು ನೀಡಬೇಕಾಗಿರುವುದರಿಂದ ಈಗಾಗಲೇ ತಮಗೆ ನೀಡಿರುವ ಮೂಲ ಹಕ್ಕು ಪತ್ರ, ಹಾಗೂ ಮಸ್ಕಿ ಪುರಸಭೆಯಲ್ಲಿ ವಾಸಿಸುವ ಬಗ್ಗೆ ವಾಸ ಸ್ಥಳ ಪ್ರಮಾಣ ಪತ್ರ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ರೇಷನ್ ಕಾರ್ಡ್ ಆಧಾರ ಕಾರ್ಡ್, ಪುರಸಭೆ ಕಾರ್ಯಾಲಯಕ್ಕೆ ದಿನಾಂಕ:18/03/2026 ರೊಳಗಾಗಿ ಕಚೇರಿಯ ಸಮಯದಲ್ಲಿ ಮಲ್ಲೇಶ ಪ್ರ.ದ.ಸ ಇವರಿಗೆ ಸಲ್ಲಿಸಲು ಪುರಸಭೆ ಮುಖ್ಯಾಧಿಕಾರಿ ನರಸರಡ್ಡಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

### ಫೆ.26 ರಿಂದ 28 ರವರೆಗೆ ರಸ್ತೆ ಸಂಚಾರ ಸಮೀಕ್ಷೆ

**ಬಳ್ಳಾರಿ:** ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ರಾಜ್ಯ ಹೆದ್ದಾರಿಗಳು ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಮೇಲೆ ವಾಹನ ಸಂಚಾರ ಸಮೀಕ್ಷಾ ಕಾರ್ಯ ಕೈಗೊಳ್ಳಲಾಗುತ್ತಿದ್ದು, ಎಲ್ಲಾ ವಾಹನ ಚಾಲಕರು ತಮ್ಮ ವಾಹನಗಳ ಮೂಲಕ ನಿಧಾನವಾಗಿ ಸಾಗಬೇಕು ಎಂದು ಬಳ್ಳಾರಿಯ ಲೋಕೋಪಯೋಗಿ ಇಲಾಖೆಯ ಕಾರ್ಯನಿರ್ವಾಹಕ ಇಂಜಿನೀಯರರು ತಿಳಿಸಿದ್ದಾರೆ.2026 ನೇ ಸಾಲಿನ ರಸ್ತೆ ಸಂಚಾರ ಸಮೀಕ್ಷೆಯು ಫೆ.26 ರ ಬೆಳಗ್ಗೆ 6 ರಿಂದ ಫೆ.28 ರ ಬೆಳಗ್ಗೆ 6 ಗಂಟೆಯವರೆಗೆ ಸತತವಾಗಿ 3 ದಿನಗಳ ಕಾಲ ನಡೆಯಲಿದೆ. ಇದಕ್ಕಾಗಿ ರಸ್ತೆಗಳ ಮೇಲೆ ಕ್ಯಾಮೆರಾ ಸಮೇತ ಸಮೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ. ಸಮೀಕ್ಷಾ ಕೇಂದ್ರಗಳಿದ್ದಲ್ಲಿ 'ವಾಹನ ರಸ್ತೆ ಸಂಚಾರ ಸಮೀಕ್ಷೆ ಕೇಂದ್ರವಿದೆ, ತಮ್ಮ ವಾಹನಗಳನ್ನು ನಿಧಾನವಾಗಿ ಚಲಿಸಿ' ಎಂದು ಸೂಚನಾ ಫಲಕಗಳನ್ನು ಅಳವಡಿಸಲಾಗಿರುತ್ತದೆ. ಈ ಸಮೀಕ್ಷೆಯಿಂದ ಸಂಗ್ರಹಿಸಿದ ಮಾಹಿತಿಯಿಂದ ಸರ್ಕಾರಕ್ಕೆ ರಸ್ತೆಗಳ ಸಂಚಾರ ತೀವ್ರತೆ ಕಂಡುಹಿಡಿಯುವುದಕ್ಕೆ ರಸ್ತೆಗಳ ಅಗಲ ಅಳತೆ ನಿರ್ಧರಿಸಲು, ರಸ್ತೆಗಳ ಮೇಲ್ದರ್ಜೆಗೇರಿಸಲು ಹಾಗೂ ರಸ್ತೆಗಳ ಸ್ಥಿತಿಗತಿ ಸುಧಾರಿಸಲು ಅನುಕೂಲವಾಗುತ್ತದೆ.ರಸ್ತೆ ಸಂಚಾರ ಸಮೀಕ್ಷೆಯನ್ನು ಯಶಸ್ವಿಯಾಗಿಸಲು ವಾಹನ ಚಾಲಕರು ಮತ್ತು ಸಾರ್ವಜನಿಕರು ತಮ್ಮ ವಾಹನಗಳನ್ನು ನಿಧಾನವಾಗಿ ಚಲಿಸಿ ಸಹಕರಿಸುವಂತೆ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

### ಸಿಡಿಬಂಡಿ ರಥೋತ್ಸವ: ಪಾರ್ಕಿಂಗ್ ವ್ಯವಸ್ಥೆ

**ಬಳ್ಳಾರಿ:** ಇದೇ ಫೆ.24 ರಂದು ಬಳ್ಳಾರಿ ನಗರದ ಶ್ರೀ ಕನಕ ದುರ್ಗಮ್ಮ ಸಿಡಿಬಂಡಿ ರಥೋತ್ಸವ ಜರುಗಲಿದ್ದು, ರಥೋತ್ಸವ ವೀಕ್ಷಿಸಲು ಆಗಮಿಸುವ ಸಾರ್ವಜನಿಕರಿಗೆ ನಗರದ ವಿವಿಧೆಡೆ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್ ಡಿ.ಪನ್ನೇಕರ್ ತಿಳಿಸಿದ್ದಾರೆ.ಮೋಕ ಭಾಗದಿಂದ ರಥೋತ್ಸವಕ್ಕೆ ಆಗಮಿಸುವ ಸಾರ್ವಜನಿಕ ವಾಹನಗಳಿಗೆ ಗಾಂಧಿನಗರ 1ನೇ ಕ್ರಾಸ್ ಹತ್ತಿರವಿರುವ ಅಲ್ಲಂ ಸುಮಂಗಳಮ್ಮ ಕಾಲೇಜು ಆವರಣದಲ್ಲಿ, ಕಪ್ಪಗಲ್ ಕಡೆಯಿಂದ ರಥೋತ್ಸವಕ್ಕೆ ಆಗಮಿಸುವ ಸಾರ್ವಜನಿಕ ವಾಹನಗಳಿಗೆ ಕಪ್ಪಗಲ್ ರಸ್ತೆಯಲ್ಲಿರುವ ಕಿತ್ತೂರುರಾಣಿ ಚೆನ್ನಮ್ಮ ಶಾಲೆಯ ಆವರಣದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಸಿರುಗುಪ್ಪ ಹಾಗೂ ಹೊಸಪೇಟೆ ಭಾಗದಿಂದ ರಥೋತ್ಸವಕ್ಕೆ ಆಗಮಿಸುವ ಸಾರ್ವಜನಿಕ ವಾಹನಗಳಿಗೆ ಬಸವ ಭವನ ಹಾಗೂ ಜಿಲ್ಲಾ ಕೇಂದ್ರ ಕಾರಾಗೃಹದ ಮುಂದಿನ ಖಾಲಿ ಜಾಗದಲ್ಲಿ, ಬೆಂಗಳೂರು ರಸ್ತೆ ಹಾಗೂ ಅನಂತಪುರ ಕಡೆಯಿಂದ ರಥೋತ್ಸವಕ್ಕೆ ಆಗಮಿಸುವ ಸಾರ್ವಜನಿಕ ವಾಹನಗಳಿಗೆ ಕಮ್ಮಾ ಭವನದ ಮುಂದಿನ ಖಾಲಿ ಜಾಗ ಹಾಗೂ ಮುನಿಸಿಪಲ್ ಕಾಲೇಜು ಆವರಣದಲ್ಲಿ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಬಳ್ಳಾರಿ ನಗರದ ಯು.ಬಿ ಸರ್ಕಲ್, ಜಿಲ್ಲಾ ಕೇಂದ್ರ ಕಾರಾಗೃಹದ ಗೇಟ್, ಜಿಮ್ಖಾನ ಕ್ರಾಸ್, ತಾಳೂರು ರಸ್ತೆಯ ಬಾಲಾಜಿ ನರ್ಸಿಂಗ್ ಹೋಂ ಕ್ರಾಸ್, ಕಪ್ಪಗಲ್ ರಸ್ತೆಯ ಸಂಜೀವಿನಿ ಅಸ್ಪತ್ರೆಯ ಕ್ರಾಸ್ ಹಾಗೂ ಮೋಕಾ ರಸ್ತೆಯ ಗಾಂಧಿನಗರ 1ನೇ ಕ್ರಾಸ್ ಗಳ ಮೂಲಕ ದುರ್ಗಮ್ಮ ಗುಡಿ ಸರ್ಕಲ್ಗೆ ಬರುವ ಎಲ್ಲಾ ರೀತಿಯ ವಾಹನಗಳ ಸಂಚಾರವನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

{ಪರಮೇಶ್ವರ್ } ಗೃಹ ಸಚಿವ

**ಮುಖ್ಯಮಂತ್ರಿ ಸಿದ್ದರಾಮಯ್ಯರ ರಾಜಕೀಯದ ಅಡಿಪಾಯವೇ ಸಾಮಾಜಿಕ ನ್ಯಾಯ. ಆ ಸಿದ್ಧಾಂತದ ಮೇಲೆ ರಾಜಕೀಯ ಮಾಡಿಕೊಂಡು ಬಂದಿದ್ದಾರೆ. ಇದರಲ್ಲಿ ಹೊಸದೇನೂ ಇಲ್ಲ. ಸಾಮಾಜಿಕ ನ್ಯಾಯದ ಮೇಲೆ ಬದ್ಧರಾಗಿದ್ದಾರೆ. ಹಿಂದಿನಿಂದಲೂ ಕೂಡ ಸಾಮಾಜಿಕ ನ್ಯಾಯದ ಪರವಾಗಿದ್ದಾರೆ. ಹೊಸದಾಗಿ ಇವತ್ತು ಮಾಡುತ್ತಿಲ್ಲ.**

ಡಾ.ರಾಮಕೃಷ್ಣ, ಪ್ರೊ.ಸಿ. ಮಹಾದೇವಪ್ಪ, ಡಾ. ಸತ್ಯನ್‌ಗೆ ರಾಜ್ಯಪಾಲರಿಂದ ನಾಡೋಜ ಪ್ರದಾನ: ಕುಲಪತಿ ಡಾ. ಪರಮ ಶಿವಮೂರ್ತಿ

# ಹಂಪಿ ಕನ್ನಡ ವಿವಿಯ ಘಟಿಕೋತ್ಸವ ಇಂದು

**ಹೊಸಪೇಟೆ:** ಹಂಪಿ ಕನ್ನಡ ವಿಶ್ವವಿದ್ಯಾಲಯ 34 ನೇ ನುಡಿಹಬ್ಬ-ಘಟಿಕೋತ್ಸವ ಫೆ. 24 ರಂದು ವಿಶ್ವವಿದ್ಯಾಲಯದ ನವರಂಗ ಬಯಲು ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದ್ದು ಈ ಸಮಾರಂಭದಲ್ಲಿ ನಾಡಿನ ಡಾ.ರಾಮಕೃಷ್ಣ, 104 ವರ್ಷದ ಪ್ರೊ.ಸಿ. ಮಹಾದೇವಪ್ಪ, ಡಾ. ಸತ್ಯನ್ ಅವರಿಗೆ ರಾಜ್ಯಪಾಲರಿಂದ ನಾಡೋಜ ಪ್ರದಾನ ಮಾಡಲಾಗುತ್ತಿದೆ ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ತಿಳಿಸಿದರು.

ಹಂಪಿ ವಿಶ್ವವಿದ್ಯಾಲಯದ ಮಂಟಪ ಸಭಾಂಗಣದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಂದು ಸಂಜೆ 5.30 ಕ್ಕೆ ನಡೆಯುವ ಸಮಾರಂಭದಲ್ಲಿ ವಿವಿ ಕುಲಾಧಿಪತಿಗಳು ಹಾಗೂ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಪ್ರದಾನ ಮಾಡಲಿದ್ದಾರೆ ಎಂದು ಹೇಳಿದರು.

ಉನ್ನತ ಶಿಕ್ಷಣ ಸಚಿವರೂ ಹಾಗೂ ಸಮಕುಲಾಧಿಪತಿಗಳಾದ ಡಾ. ಎಂ.ಸಿ. ಸುಧಾಕರ್‌ಡಿ.ಲಿಟ್ ಮತ್ತು ಪಿಎಚ್.ಡಿ ಪದವಿಗಳನ್ನು ಪ್ರದಾನ ಮಾಡಲಿದ್ದಾರೆ. ಘಟಿಕೋತ್ಸವ ಭಾಷಣವನ್ನು ವಿಶ್ರಾಂತ ಪ್ರಾಧ್ಯಾಪಕ ಮತ್ತು ಸಂಸ್ಕೃತಿ ಚಿಂತಕರಾದ ಡಾ.ಕೆ. ಮರುಳಸಿದ್ಧಪ್ಪ ಮಾಡಲಿದ್ದಾರೆ ಎಂದು ತಿಳಿಸಿದರು.

ಸ್ನಾತಕೋತ್ತರ ಕಾರ್ಯಕ್ರಮಗಳ ನಾಲ್ಕು ಸೆಮಿಸ್ಟರ್‌ಗಳಲ್ಲಿ ಒಟ್ಟು 133 ವಿದ್ಯಾರ್ಥಿಗಳು ಉತ್ತೀರ್ಣಗೊಂಡಿದ್ದಾರೆ. ಈ ಪೈಕಿ ಎಂ.ಎ.ಪಿಎಚ್.ಡಿ(ಕನ್ನಡ ಸಾಹಿತ್ಯ), ಎಂ.ಎ. ಕನ್ನಡ ಸಾಹಿತ್ಯ, ಎಂ.ಎ.ಮಹಿಳಾ ಅಧ್ಯಯನ, ಎಂ.ಎ. ಗ್ರಾಮೀಣಾಭಿವೃದ್ಧಿ, ಎಂ.ಎ. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ, ಎಂ.ಎಸ್ಸಿ. ಯೋಗ, ಎಂ.ಪಿ.ಎ(ಹಿಂದೂಸ್ತಾನಿ ಗಾಯನ), ಎಂ.ವಿ.(ಚಿತ್ರಕಲೆ) ವಿದ್ಯಾರ್ಥಿಗಳಿದ್ದಾರೆ ಎಂದು ತಿಳಿಸಿದರು.

ಘಟಿಕೋತ್ಸವದಲ್ಲಿ ಈ ಬಾರಿ ಭಾಷಾ ನಿಕಾಯದಲ್ಲಿ 62, ಸಮಾಜ ವಿಜ್ಞಾನಗಳ ನಿಕಾಯದ 43, ಲಲಿತಕಲೆಗಳ ನಿಕಾಯದ 2 ಸೇರಿದಂತೆ ಒಟ್ಟು 107 ವಿದ್ಯಾರ್ಥಿಗಳು ಪಿ.ಎಚ್.ಡಿ. ಪಡೆಯಲಿದ್ದಾರೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಕುಲಸಚಿವ ಡಾ.ವಿರೂಪಾಕ್ಷಿ ಪೂಜಾರಹಳ್ಳಿ, ಅಧಿಕಾರಿಗಳಾದ ಡಾ.ಎ. ಶ್ರೀಧರ್,ಡಾ. ಅಮರೇಶ ಯತಗಲ್, ಡಾ.ಮಾಧವ ಪೆರಾಜೆ, ಡಾ.ಎಚ್.ಡಿ. ಪ್ರಶಾಂತ್, ಡಾ.ಶಿವಾನಂದ, ಡಾ. ಶೈಲಜ, ಡಾ.ಅಶೋಕುಮಾರ ರಂಜೇರೆ, ಡಾ. ಚನ್ನವೀರಪ್ಪ, ಡಾ.ಯರ್ರಿಸ್ವಾಮಿ, ಡಾ. ಸೋಮಶೇಖರ್,ವಿಜಯೇಂದ್ರ, ಶ್ರೀನಿವಾಸಲು, ಮಾಧ್ಯಮ ಸಂಚಾಲಕಿ ಶಕುಂತಲಾ ಚೌಡ ನಾಯ್ಕ್ ಇದ್ದರು.

ಸುದ್ದಿಗೋಷ್ಠಿಯಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ಮಾತನಾಡಿದರು.

### ಶತಾಯುಷಿ ಪ್ರೊ.ಸಿ.ಮಹಾದೇವಪ್ಪ

**ಪ್ರೊ.ಸಿ.ಮಹಾದೇವಪ್ಪನವರು ಶತಾಯುಷಿಗಳು. ಅವರಿಗೆ ಈಗ 104 ವರ್ಷ. ಕನ್ನಡದ ಪ್ರಖಾಂಡ ಪಂಡಿತರು. ಪ್ರೊ. ಮಹಾದೇವಪ್ಪನವರು 8 ಜುಲೈ 1922ರಲ್ಲಿ ಸೋಸಲೆ ಬಸಪ್ಪ ಮತ್ತು ವೀರಾಜಮ್ಮನವರ ಪುತ್ರರಾಗಿ ಸೋಸಲೆಯಲ್ಲಿ ಜನಿಸಿದರು. ಇವರ ಮೂಲ ಹೆಸರು ಎಸ್.ಬಿ.ಚನ್ನಬಸಪ್ಪ, ಇವರು ತಮ್ಮ ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣವನ್ನು ಸೋಸಲೆ ಗ್ರಾಮದಲ್ಲಿ ಮುಗಿಸಿದರು. ಪ್ರೌಢಶಾಲೆಯನ್ನು ಮೈಸೂರಿನ ಸರಕಾರಿ ಮರಿಮಲ್ಲಪ್ಪ ಹೈಸ್ಕೂಲಿನಲ್ಲಿ, ಇಂಟರ್‌ಮೀಡಿಯಟ್‌ನ್ನು ಮೈಸೂರಿನ ಯುವರಾಜ ಕಾಲೇಜಿನಲ್ಲಿ ಪೂರೈಸಿದರು. ಕನ್ನಡ ಅಧ್ಯಾಪಕರಾಗಿ ಸೇವೆ ಮಾಡಿದ್ದಾರೆ. ಹಸ್ತಪ್ರತಿ, ಗ್ರಂಥ ಸಂಪಾದನೆ, ಸಂಶೋಧನೆ, ಅಧ್ಯಯನ, ಅಧ್ಯಾಪನ ಇವು ಇವರ ಮುಖ್ಯ ಕಾರ್ಯಕ್ಷೇತ್ರಗಳು. ಕನ್ನಡ, ತಮಿಳು, ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಅಪಾರ ಪಾಂಡಿತ್ಯವುಳ್ಳವರು. ಬಹುಭಾಷೆ ಮತ್ತು ಬಹುಜ್ಞಾನ ಶಿಸ್ತುಗಳನ್ನು ಬಲ್ಲಿದ್ದಾರೆ.**

### ಕನ್ನಡದ ಪ್ರಮುಖ ವಿದ್ವಾಂಸ ಡಾ.ರಾಮಕೃಷ್ಣ



**ಡಾ.ರಾಮಕೃಷ್ಣ ಅವರು ಕನ್ನಡದ ಪ್ರಮುಖ ವಿದ್ವಾಂಸರು ಮತ್ತು ಲೇಖಕರು. ಮಾರ್ಕ್ಸ್‌ವಾದಿ ಚಿಂತಕರು. ಶಿಕ್ಷಣತಜ್ಞರು. ಕನ್ನಡ ಸಾಹಿತ್ಯ, ವೈಚಾರಿಕ ಹಾಗೂ ವೈಜ್ಞಾನಿಕ ಕ್ಷೇತ್ರಗಳಿಗೆ ಅಪಾರ ಕೊಡುಗೆ ನೀಡಿದ್ದಾರೆ. ಇಂಗ್ಲಿಷ್, ಸಂಸ್ಕೃತ, ಕನ್ನಡದಲ್ಲಿ ಪಾಂಡಿತ್ಯವುಳ್ಳವರು. ಡಾ. ಜಿ. ರಾಮಕೃಷ್ಣ ಅವರು 1939 ಜೂನ್ 17 ರಂದು ತುಮಕೂರು ಜಿಲ್ಲೆ ಸಿರಾ ತಾಲ್ಲೂಕಿನ ಹಾಲೇನಹಳ್ಳಿ ಜನಿಸುತ್ತಾರೆ. ತಂದೆ ಜಿ.ಸುಬ್ರಹ್ಮಣ್ಯಂ ತಾಯಿ ನರಸಮ್ಮ. ಬಾಲ್ಯದಿಂದಲೂ ಕಷ್ಟಪಟ್ಟು ಓದಿದ ಜಿ. ರಾಮಕೃಷ್ಣ ಅವರು ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಸ್ಕೃತದಲ್ಲಿ ಬಿ.ಎ. ಆನರ್ಸ್,ಎಂ.ಎ. ಮತ್ತು ಪಿಹೆಚ್.ಡಿ., ಪೂನಾ ವಿಶ್ವವಿದ್ಯಾಲಯದಿಂದ ಎಂ.ಎ. ಇಂಗ್ಲಿಷ್, ವೇಲ್ಸ್ ವಿಶ್ವವಿದ್ಯಾಲಯದಿಂದ ಎಂ.ಎ. ಇಂಗ್ಲಿಷ್ ಪದವಿಗಳನ್ನು ಪಡೆದಿದ್ದಾರೆ. ಚಾರಣ ಇವರ ಪ್ರೀತಿಯ ಹವ್ಯಾಸ. ವಿಜ್ಞಾನ, ತಂತ್ರಜ್ಞಾನ, ಕನ್ನಡ ಸಾಹಿತ್ಯ ಮತ್ತು ಭಾರತೀಯ ಸಾಹಿತ್ಯ, ಸಾಂಸ್ಕೃತಿಕ ವಿಮರ್ಶೆ,ಸಾಮಾಜಿಕ ಚಳುವಳಿಗಳಲ್ಲಿ ಡಾ. ಜಿ ರಾಮಕೃಷ್ಣ ಅವರು ಸಲ್ಲಿಸಿದ ಮೌಲಿಕ ಸೇವೆಯನ್ನು ಗುರುತಿಸಿ, ಕನ್ನಡ ವಿಶ್ವವಿದ್ಯಾಲಯವು 34 ನೇ ನುಡಿಹಬ್ಬದಲ್ಲಿ ನಾಡೋಜ ಗೌರವ ಪ್ರಶಸ್ತಿ ನೀಡಿ ಗೌರವಿಸುತ್ತದೆ.**

### ದಕ್ಷ ಆಡಳಿತಗಾರರು ಡಾ.ಎಚ್.ಸಿ.ಸತ್ಯನ್

**ಡಾ.ಎಚ್.ಸಿ.ಸತ್ಯನ್ ಅವರು ದಕ್ಷ ಆಡಳಿತಗಾರರು. ಸಾಮಾಜಿಕ ಕಳಕಳಿಯುಳ್ಳ ವರು. ಪ್ರಾಮಾಣಿಕ ಹಾಗೂ ಪಾರದರ್ಶಕ ವ್ಯಕ್ತಿತ್ವವುಳ್ಳವರು. ನ್ಯಾಯ ನಿಷ್ಠುರರು. 1960 ರಲ್ಲಿ ತಂದೆ ಹೆಚ್.ವಿ. ಚನ್ನಕೇಶವಯ್ಯ ಹಾಗೂ ತಾಯಿ ಸುಶೀಲಮ್ಮ ಅವರ ಮಗನಾಗಿ ಹಾಸನದಲ್ಲಿ ಜನಿಸಿದರು. ಮಾಹಿತಿ ಹಕ್ಕು ಕಾಯ್ದೆ ಆಯೋಗದ ರಾಜ್ಯ ಮಾಹಿತಿ ಆಯುಕ್ತರಾಗಿ ಹಾಗೂ ಮಾಹಿತಿ ಹಕ್ಕು ಆಯುಕ್ತರಾಗಿ ಸಮರ್ಥವಾಗಿ ಕಾರ್ಯ ನಿರ್ವಹಿಸಿದ್ದಾರೆ. ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರಬುದ್ಧತೆ ಹೊಂದಿದ್ದಾರೆ. ಆಡಳಿತಾನುಭವದಲ್ಲಿ ಪಳಗಿದ ಡಾ. ಎಚ್.ಸಿ.ಸತ್ಯನ್ ಅವರು ತಮ್ಮ ಸೇವಾ ಅವಧಿಯಲ್ಲಿ ಗ್ರಾಮ ಪಂಚಾಯತಿಯಿಂದ ಉಚ್ಚ ನ್ಯಾಯಾಲಯದವರೆಗೆ ಅನೇಕ ವ್ಯಾಜ್ಯಗಳನ್ನು ಸಂವಿಧಾನಾತ್ಮಕವಾಗಿ ಬಗೆಹರಿಸಿದವರು. ಆಡಳಿತಾತ್ಮಕ ಸಾಮಾಜಿಕ ಹಾಗೂ ಸಾರ್ವಜನಿಕ ಕ್ಷೇತ್ರಗಳಲ್ಲಿ ಸಲ್ಲಿಸಿದ ಮೌಲಿಕ ಸೇವೆಯನ್ನು ಗುರುತಿಸಿ ಕನ್ನಡ ವಿಶ್ವವಿದ್ಯಾಲಯವು ತನ್ನ 34 ನೇ ನುಡಿಹಬ್ಬದಲ್ಲಿ ಪ್ರತಿಷ್ಠಿತ ನಾಡೋಜ ಗೌರವ ಪದವಿಯನ್ನು ನೀಡಿ ಗೌರವಿಸುತ್ತದೆ.**

## ಆಕಾಶ ವೀಕ್ಷಣೆ ವಿದ್ಯಾರ್ಥಿಗಳಲ್ಲಿ ವಿಜ್ಞಾನಾಸಕ್ತಿಗೆ ಹೊಸ ದಿಕ್ಕು

**ಹೂವಿನಹಡಗಲಿ :** ಆಕಾಶ ವೀಕ್ಷಣೆ ವಿದ್ಯಾರ್ಥಿಗಳಲ್ಲಿ ವಿಜ್ಞಾನಾಸಕ್ತಿಗೆ ಹೊಸ ದಿಕ್ಕು ನೀಡಲಿದೆ ತುಮಕೂರಿನ ವಿಜ್ಞಾನ ಕೇಂದ್ರದ ಖಗೋಳ ತಜ್ಞ ರವಿಶಂಕರ್ ಎಸ್ ಹೇಳಿದರು.

ಹೊಳಗುಂದಿ ಗ್ರಾಮದ ಪರಿವರ್ತನಾ ಸಂಸ್ಥೆಯ ನೇತೃತ್ವದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಅಂಗವಾಗಿ ಸಿದ್ದೇಶ್ವರ ಗುಡ್ಡದಲ್ಲಿ ಸ್ಥಳೀಯ ಶಾಲಾ ಮಕ್ಕಳಿಗಾಗಿ ಆಯೋಜಿಸಲಾದ ಆಕಾಶ ವೀಕ್ಷಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಮಕ್ಕಳಿಗೆ ಆಕಾಶ ಕಾಯಗಳು, ಗ್ರಹಗಳು, ನಕ್ಷತ್ರಗಳು ಹಾಗೂ ನಕ್ಷತ್ರಮಂಡಲಗಳ ಕುರಿತು ಸರಳ ಮತ್ತು ಸುಗಮವಾಗಿ ಮಾಹಿತಿ ನೀಡಿದರು. ಚಂದ್ರನ ಮೇಲ್ಮೈ ವೈಶಿಷ್ಟ್ಯಗಳು, ಗುರು ಗ್ರಹದ ಉಪಗ್ರಹಗಳು ಹಾಗೂ ರಾತ್ರಿ ಆಕಾಶದಲ್ಲಿ ಕಾಣಿಸುವ ಪ್ರಮುಖ ನಕ್ಷತ್ರಗಳ ಕುರಿತು ಅವರು ಚಿತ್ರಸಹಿತವಾಗಿ ವಿವರಿಸಿದರು.

ಕಾರ್ಯಕ್ರಮವು ಸಂಜೆ 6 ಗಂಟೆಗೆ ಪ್ರಾರಂಭವಾಗಿ ರಾತ್ರಿ 9 ಗಂಟೆಯವರೆಗೆ ನಡೆಯಿತು. ನಾಲ್ಕು ದೂರದರ್ಶಕಗಳ ಸಹಾಯದಿಂದ ವಿದ್ಯಾರ್ಥಿಗಳಿಗೆ ಚಂದ್ರ ಹಾಗೂ ಕೆಲವು ಗ್ರಹಗಳನ್ನು ನೇರವಾಗಿ ವೀಕ್ಷಿಸುವ ಅವಕಾಶ ಕಲ್ಪಿಸಲಾಯಿತು. ವಿಶೇಷ ಟೆಲಿಸ್ಕೋಪ್ಗಳ ಸಹಾಯದಿಂದ ಚಂದ್ರನ ಮೇಲ್ಮೈಯ ಕುಳಿಗಳು, ಗುರು ಗ್ರಹ ಮತ್ತು ಅದರ ಉಪಗ್ರಹಗಳು, ಶುಕ್ರ ಗ್ರಹದ ಪ್ರಕಾಶಮಾನತೆ ಹಾಗೂ ಕೆಲವು ಪ್ರಸಿದ್ಧ ನಕ್ಷತ್ರಮಂಡಲಗಳನ್ನು 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ 100ಕ್ಕೂ ಹೆಚ್ಚು ಪಾಲಕರು ನೇರವಾಗಿ ವೀಕ್ಷಿಸಿದರು.

ಹಡಗಲಿ ಹಾಗೂ ಹಗರಿಬೊಮ್ಮನಹಳ್ಳಿಯಿಂದಲೂ ಆಸಕ್ತ ಪಾಲಕರು ತಮ್ಮ ಮಕ್ಕಳನ್ನು ಕರೆದುಕೊಂಡು ಬಂದಿದ್ದರು. ಶಿಕ್ಷಕ ಪ್ರಶಾಂತ್ ಎಂಎಸ್ಕೆ ನಕ್ಷತ್ರ ಪುಂಜಗಳ ಬಗ್ಗೆ ಮಾಹಿತಿ ನೀಡಿದರು. ಪರಿವರ್ತನಾ ಸಂಸ್ಥೆಯ ಪದಾಧಿಕಾರಿ ಲೋಕೇಶ್.ಎಂ ಮಾತನಾಡಿ ಗ್ರಾಮೀಣ ಮಕ್ಕಳಿಗೆ ವಿಜ್ಞಾನ ತಲುಪಿಸುವ ಉದ್ದೇಶದಿಂದ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು..

ಶಿಕ್ಷಕ ಆರ್‌ಬಿ ಗುರುಬಸವರಾಜ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ಕರಿಬಸಪ್ಪ ಹೊಳೆಯಾಚಿ. ನವೀನ ಕೃಷ್ಣ. ಕೊಟ್ರೇಶ ಬಿ ರಾಜನಗೌಡ ಪಾಟೀಲ್. ಹನುಮಂತಪ್ಪ ಟಿ.ಸಿದ್ಲಿಂಗಪ್ಪ ದೊಡ್ಡಮನಿ. ಡಾ.ನೆಪೋಲಿಯನ್. ಕೊಟ್ರೇಶ್ ಹಾವನೂರು. ಗುರುಬಸವರಾಜ ಎಚ್.ಕೊಟ್ರೇಶ್. ಎಚ್‌ಎಂ. ಶಾಂತಪ್ಪ ಉಪಸ್ಥಿತರಿದ್ದರು.

ಹೂವಿನಹಡಗಲಿ ತಾಲೂಕಿನ ಹೊಳಗುಂದಿ ಗ್ರಾಮದ ಪರಿವರ್ತನಾ ಸಂಸ್ಥೆಯ ನೇತೃತ್ವದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಅಂಗವಾಗಿ ಸಿದ್ದೇಶ್ವರ ಗುಡ್ಡದಲ್ಲಿ ಶಾಲಾ ಮಕ್ಕಳಿಗಾಗಿ ಆಯೋಜಿಸಲಾದ ಆಕಾಶ ವೀಕ್ಷಣೆ ಕಾರ್ಯಕ್ರಮದಲ್ಲಿ ಖಗೋಳ ತಜ್ಞರವಿಶಂಕರ್.ಎಸ್ ಮಾತನಾಡಿದರು.

## ಸುಸ್ಥಿರ ಆರೋಗ್ಯಕ್ಕೆ ಯೋಗ, ಪ್ರಕೃತಿ ಚಿಕಿತ್ಸೆ ಪೂರಕ

**ಕೂಡ್ಲಿಗಿ:** ಯೋಗಾಭ್ಯಾಸ ಮತ್ತು ಪ್ರಕೃತಿ ಚಿಕಿತ್ಸೆಯಿಂದ ಸುಸ್ಥಿರ ಆರೋಗ್ಯ ಸಾಧ್ಯ, ಪ್ರತಿಯೊಬ್ಬರೂ ಈ ಸಹಜ- ಸರಳ ಚಿಕಿತ್ಸಾ ವಿಧಾನವನ್ನು ಜೀವನಕ್ರಮವಾಗಿ ರೂಢಿಸಿಕೊಂಡಲ್ಲಿ ಆರೋಗ್ಯವಂತ ಸಮಾಜ ನಿರ್ಮಾಣವಾಗುತ್ತದೆ ಎಂದು ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷ ಮತ್ತು ಜ್ಞಾನಮಂಟಪ ಎಜುಕೇಶನಲ್ ಟ್ರಸ್ಟ್ ಸಂಸ್ಥಾಪಕ ಉಮೇಶ್ ಅಭಿಪ್ರಾಯಪಟ್ಟರು.

ಪಟ್ಟಣದ ಜೆಎನ್‌ಎಂ ಮೌಂಟೇನ್ ವ್ಯೂ ಶಾಲೆ ಆವರಣದಲ್ಲಿ ಜನನಿ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ ಮತ್ತು ಸೃಷ್ಟಿ ಯೋಗ ಸೇವಾ ಚಾರಿಟೇಬಲ್ ಟ್ರಸ್ಟ್ ಸಹಯೋಗದಲ್ಲಿ ಏರ್ಪಡಿಸಿದ್ದ ಉಚಿತ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಯೋಗ ಸಾಧಕರಿಗೆ ರೋಗವಿಲ್ಲ, ಪ್ರಕೃತಿ ಚಿಕಿತ್ಸೆ ಅತ್ಯುತ್ತಮ ಪದ್ಧತಿ ಎನ್ನುವುದು ನಮಗೆಲ್ಲರಿಗೂ ಗೊತ್ತಿದೆ. ಆದರೂ ಅಲೋಪಥಿಗೆ ನೀಡುವ ಮಹತ್ವವನ್ನು ಸಮಾಜ ಇದಕ್ಕೆ ನೀಡದಿರುವುದು ವಿಷಾದನೀಯ ಎಂದರು.

ಯೋಗ, ಧ್ಯಾನ, ಪ್ರಾಣಾಯಾಮಗಳು ನಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಅತ್ಯುತ್ತಮ ಮಾರ್ಗ. ನಮ್ಮ ಸನಾತನ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿರುವ ಈ ಚಿಕಿತ್ಸಾ ವಿಧಾನದ ಬಗ್ಗೆ ಅರಿವು ಮೂಡಿಸುವುದು ಅಗತ್ಯ ಎಂದು ಹೇಳಿದರು.

ನಮ್ಮ ಹಿರಿಯರು ಹೇಳಿಕೊಟ್ಟ ಜೀವನಪದ್ಧತಿಗಳನ್ನು ಅನುಸರಿಸುವುದು, ಸಿರಿಧಾನ್ಯಗಳ ಬಳಕೆ ಮತ್ತು ದುಶ್ಚಟಗಳಿಂದ ದೂರ ಇರುವ ಮೂಲಕ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಜನನಿ ಸಂಸ್ಥೆಯ ನಿರ್ದೇಶಕ ಹಾಗೂ ಮುಖ್ಯವೈದ್ಯಾಧಿಕಾರಿ ಡಾ.ರಾಜೇಶ್ ಪಾದೇಕಲ್ ಮಾತನಾಡಿ, ಯೋಗ ಮತ್ತು ಪ್ರಕೃತಿ ಚಿಕಿತ್ಸೆ ನಮ್ಮ ಜೀವನ ಕ್ರಮವಾಗಬೇಕು. ಉತ್ತಮ ಆರೋಗ್ಯಕ್ಕೆ ಸಮತೋಲಿತ ಆಹಾರ ಅಗತ್ಯ. ಆಹಾರವೇ ದಿವ್ಯೌಷಧ. ಸರಿಯಾದ ಆಹಾರ ಕ್ರಮ ಮತ್ತು ಜೀವನಶೈಲಿಯೇ ಆರೋಗ್ಯದ ಗುಟ್ಟು ಎಂದು ವಿಶ್ಲೇಷಿಸಿದರು.

ಜನನಿ ಸಂಸ್ಥೆಯ ಸಾರ್ವಜನಿಕ ಸಂಪರ್ಕ ವಿಭಾಗದ ಮುಖ್ಯಸ್ಥ ಉದಯ ಶಂಕರ ಭಟ್ ಮಾತನಾಡಿ, ಪಾಶ್ಚಾತ್ಯ ಜೀವನಶೈಲಿಯಿಂದಾಗಿ ಇಂದು ವಿಶೇಷವಾಗಿ ಯುವಜನಾಂಗವನ್ನು ಜೀವನಶೈಲಿ ರೋಗಗಳು ಬಾಧಿಸುತ್ತಿವೆ. ಔಷಧ ರಹಿತವಾಗಿ ನಮ್ಮ ಜೀವನಶೈಲಿ ಮಾರ್ಪಡಿಸಿಕೊಳ್ಳುವ ಮೂಲಕ ಮರೆತ ಅಂಶಗಳನ್ನು ನಮಗೆ ಪ್ರಕೃತಿ ಚಿಕಿತ್ಸಾ ಪದ್ಧತಿ ನೆನಪಿಸುತ್ತಿದೆ. ಈ ಬಗ್ಗೆ ಸಮಾಜದಲ್ಲಿ ಹೆಚ್ಚಿನ ಜಾಗೃತಿ ಮೂಡಿದಾಗ ಮಾತ್ರ ಆರೋಗ್ಯವಂತ ಸಮಾಜ ನಿರ್ಮಾಣ ಸಾಧ್ಯ ಎಂದು ಹೇಳಿದರು.

ಸೃಷ್ಟಿ ಯೋಗ ಸೇವಾ ಚಾರಿಟೇಬಲ್ ಟ್ರಸ್ಟ್‌ಸುಮಲತಾ, ಗಣ್ಯರಾದ ಚಂದ್ರಪ್ಪ, ಶಾಲೆಯ ಸಂಯೋಜಕ ಪ್ರಶಾಂತ್ ಉಪಸ್ಥಿತರಿದ್ದರು.

ಪಟ್ಟಣದ ಜೆಎನ್‌ಎಂ ಮೌಂಟೇನ್‌ವ್ಯೂ ಶಾಲೆ ಆವರಣದಲ್ಲಿ ಜನನಿ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ ಮತ್ತು ಸೃಷ್ಟಿ ಯೋಗ ಸೇವಾ ಚಾರಿಟೇಬಲ್ ಟ್ರಸ್ಟ್ ಸಹಯೋಗದಲ್ಲಿ ಏರ್ಪಡಿಸಿದ್ದ ಉಚಿತ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಶಿಬಿರವನ್ನು ಜ್ಞಾನಮಂಟಪ ಎಜುಕೇಶನಲ್ ಟ್ರಸ್ಟ್ ಸಂಸ್ಥಾಪಕ ಉಮೇಶ್ ಉದ್ಘಾಟಿಸಿದರು.

ಮೇಲಾಧಿಕಾರಿಗಳ ಆದೇಶ ಪಾಲಿಸದ ಕೆಳ ಅಧಿಕಾರಿಗಳು

## ರಾಯಚೂರು ಜಿಪಂ ಸಿಇಓ ಆದೇಶಕ್ಕೆ ಕಿಮ್ಮತ್ತಿಲ್ಲ

**ಮುದಗಲ್ :** ರಾಯಚೂರು ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ(ಸಿಇಓ) ಈಶ್ವರ ಕಾಂದೂ ಅವರು ತಲೇಖಾನ ಗ್ರಾಪಂ ಪಿಡಿಓ ರನ್ನು ಕೋಳಬಾಳ ಗ್ರಾಪಂಗೆ ಬದಲಾವಣೆ ಮಾಡಿ, ಮಸ್ಕಿ ತಾಲೂಕಿನ ಬಪ್ಪೂರ ಗ್ರಾಪಂ ಪಿಡಿಓರನ್ನು ತಲೇಖಾನ ಗ್ರಾಪಂಗೆ ಹೆಚ್ಚುವರಿಯಾಗಿ ಪ್ರಭಾರ ವಹಿಸುವಂತೆ ಫೆ.10 ರಂದು ಕೂಡಲೇ ಜಾರಿಗೆ ಬರುವಂತೆ ಆದೇಶಿಸಿದ್ದಾರೆ. ಆದರೆ ಸದರಿ ಆದೇಶಕ್ಕೆ 12 ದಿನ ಕಳೆದರೂ, ಕವಡೆ ಕಾಸಿನ ಕಿಮ್ಮತ್ತಿಲ್ಲದಂತಾಗಿದೆ.

ಮೇಲಾಧಿಕಾರಿಗಳ ಆದೇಶ ಕೆಳ ಅಧಿಕಾರಿಗಳು ಪಾಲನೆ ಮಾಡಬೇಕು. ಆದರೆ ಮಸ್ಕಿ ತಾಲೂಕಿನಲ್ಲಿ ಇದು ಉಲ್ಟಾ ಹೊಡೆದಿದೆ. ವರ್ಗಾವಾದ ಪಿಡಿಓ ಜ್ಯೋತಿಬಾಯಿ ಪುನಃ ಗ್ರಾಮ ಪಂಚಾಯಿತಿಗೆ ಆಗಮಿಸಿ ಮಹಾತ್ಮರ ಜಯಂತಿಗಳನ್ನು ಆಚರಿಸುವ ಮೂಲಕ ಕರ್ತವ್ಯಕ್ಕೆ ಹಾಜರಾಗುತ್ತಿದ್ದಾರೆ. ಇಲ್ಲಿಗೆ ನೇಮಕಗೊಂಡ ಪಿಡಿಓ ನಾಗೇಶ ಕರ್ತವ್ಯಕ್ಕೆ ಹಾಜರಾಗದಿರುವುದು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕುಡಿಯುವ ನೀರು, ಸ್ವಚ್ಛತೆ ಸೇರಿದಂತೆ ಜಾತ್ರಾ, ಹಬ್ಬ ಹರಿದಿನಗಳಿಗೆ ನೈರ್ಮಲ್ಯ ಕಾಪಾಡುವುದು ಸೇರಿದಂತೆ ಸರಕಾರದ ಯೋಜನೆಗಳ ಅನುಷ್ಠಾನ, ಅನುಷ್ಠಾನಗೊಂಡ ಕಾಮಗಾರಿಗಳಿಗೆ ಬಿಲ್ ಪಾವತಿಸುವುದು ತೊಂದರೆ ಆಗಿದ್ದು, ಮಾರ್ಚಗೆ ಆರ್ಥಿಕ ವರ್ಷ ಮುಕ್ತಾಯವಾಗುತ್ತಿರುವುದರಿಂದ ಗ್ರಾಪಂ ಆಡಳಿತ ಸ್ಥಗಿತಗೊಂಡಿದಂತಾಗಿದೆ ಕೂಡಲೇ ಗ್ರಾಪಂಗೆ ಪಿಡಿಓ ನೇಮಿಸಬೇಕು ಇಲ್ಲವಾದಲ್ಲಿ ಗ್ರಾಪಂ ಎದುರಿಗೆ ಧರಣಿ ನಡೆಸುವುದಾಗಿ ಮಾನಸಿಂಗ್, ದುರುಗಪ್ಪ, ಮಾನಪ್ಪ, ಮೌನೇಶ, ಅಮರೇಶ,ಸಂತೋಷ, ಭೀಮಶಪ್ಪ, ಕನಕಪ್ಪ, ಹನುಮಂತಪ್ಪ,ಈರಪ್ಪ ಎಚ್ಚರಿಸಿದ್ದಾರೆ.

> **ತಲೇಖಾನ ಗ್ರಾಪಂಗೆ ನೇಮಕಗೊಂಡ ಪಿಡಿಓ ನಾಗೇಶ ಕರ್ತವ್ಯಕ್ಕೆ ಹಾಜರಾಗಿ ಚಾಜ್ ರ್ತೆಗೆದುಕೊಳ್ಳದ ಕಾರಣ ಹಳೆ ಪಿಡಿಓ ಜ್ಯೋತಿಬಾಯಿ ಗ್ರಾಪಂಗೆ ಆಗಮಿಸುತ್ತಿದ್ದಾರೆ.**
> **-ಅಮರೇಶ ಯಾದವ್ ಇಒ ತಾಪಂ ಮಸ್ಕಿ**

> **ಗ್ರಾಮೀಣಾಭಿವೃದ್ಧಿ ಪಂಚಾಯತ ರಾಜ್ಯ ಹಿರಿಯ ಅಧಿಕಾರಿಗಳ ಆದೇಶ ಪಾಲಿಸಬೇಕಾದದ್ದು ಪಿಡಿಓಗಳ ಕರ್ತವ್ಯ ಆದರೇ ಕೆಲಸಕ್ಕೆ ಹಾಜರಾಗದಿರುವುದು ತಪ್ಪು.**
> **-ಹಾಲಸಿದ್ದಪ್ಪ ಉಪಕಾರ್ಯದರ್ಶಿ ಜಿಪಂ ರಾಯಚೂರ**



ಪಿಡಿಓ ಜ್ಯೋತಿಬಾಯಿ ಪುನಃ ತಲೇಖಾನ ಗ್ರಾಪಂಗೆ ಆಗಮಿಸಿ ಮಹಾತ್ಮರ ಜಯಂತಿ ಆಚರಿಸಿರುವುದು.

## ಕೆರೆಯಲ್ಲಿ ಯುವಕನ ಶವ ಪತ್ತೆ

**ಮುದಗಲ್ :** ಪಟ್ಟಣ ಸಮೀಪದ ಖೈರವಾಡಗಿ ಗ್ರಾಮದ ಕೆರೆಯಲ್ಲಿ ಈಜಲು ಹೋಗಿ ನೀರು ಪಾಲಾಗಿದ್ದ ಯುವಕನ ಶವ ಸೋಮವಾರ ಬೆಳಗ್ಗೆ ಪತ್ತೆಯಾಗಿದೆ. ಖೈರವಾಡಗಿ ಗ್ರಾಮದಲ್ಲಿ ಫೆಬ್ರವರಿ 21ರಂದು ಸ್ನೇಹಿತರೊಂದಿಗೆ ಕೆರೆಯಲ್ಲಿ ಈಜಾಡುವ ಸಂದರ್ಭದಲ್ಲಿ ಈ ದುರ್ಘಟನೆ ಸಂಭವಿಸಿದ್ದು, ಈಜಿ ದಡ ಸೇರಲಾಗದೆ ಪರಶುರಾಮ ಗುಂಡಪ್ಪ ಅಕ್ಕಿ(22) ಯುವಕ ಕೆರೆಯಲ್ಲಿ ನಾಪತ್ತೆಯಾಗಿದ್ದ. ಕಳೆದ ಮೂರು ದಿನಗಳಿಂದ ಅಗ್ನಿಶಾಮಕದಳ ಮತ್ತು ಮುದಗಲ್ ಪೊಲೀಸರು ಶೋಧ ಕಾರ್ಯ ನಡೆಸಿದ್ದರು. ಸೋಮವಾರ ಬೆಳಗಿನ ಜಾವ ಪರಶುರಾಮ ಗುಂಡಪ್ಪ ಅಕ್ಕಿ ಅವರ ಮೃತದೇಹ ದೊರಕಿದ್ದು, ಮುದಗಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಿಲ್ಲಾಧಿಕಾರಿಗೆ ಎಂಎಲ್‌ಸಿ ಹೇಮಲತಾ ನಾಯಕ ನೇತೃತ್ವದಲ್ಲಿ ಮನವಿ ಸಲ್ಲಿಕೆ | ಒತ್ತುವರಿ ಮಾಡಿದವರ ವಿರುದ್ಧ ಕ್ರಮಕ್ಕೆ ಆಗ್ರಹ

## ಕೊಪ್ಪಳದ ಹುಲಿಕೆರೆ ಸಂರಕ್ಷಣೆಗೆ ಬಿಜೆಪಿ ಕಾರ್ಯಕರ್ತರು ಆಗ್ರಹ

**ಕೊಪ್ಪಳ:** ಐತಿಹಾಸಿಕ ಮತ್ತು ಧಾರ್ಮಿಕ ಹಿನ್ನೆಲೆ ಇರುವ ಕೊಪ್ಪಳದ ಹುಲಿಕೆರೆ ಸಂರಕ್ಷಣೆಗೆ ಆಗ್ರಹಿಸಿ, ಬಿಜೆಪಿ ಕಾರ್ಯಕರ್ತರು ಎಂಎಲ್ಸಿ ಹೇಮಲತಾ ನಾಯಕ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳಿಗೆ ಸೋಮವಾರ ಮನವಿ ಸಲ್ಲಿಸಿದರು.

ಕಳೆದ ಎರಡು ದಿನಗಳ ಹಿಂದೆ ಬಿಜೆಪಿ ನಿಯೋಗ ಒತ್ತುವರಿ ಸ್ಥಳದಲ್ಲಿ ಹೋರಾಟ ಮಾಡಿದ್ದನ್ನು ಉಲ್ಲೇಖಿಸಿ ಕೂಡಲೇ ಕೆರೆ ಸಂರಕ್ಷಣೆಗೆ ಜಿಲ್ಲಾಡಳಿತ ಮುಂದಾಗಬೇಕು ಎಂದು ಮನವಿಯಲ್ಲಿ ಒತ್ತಾಯಿಸಿದ್ದಾರೆ. ಕೊಪ್ಪಳದ ಸರ್ವೆ ನಂ: 621, 622 ಮತ್ತು 623ರಲ್ಲಿ ಸುಮಾರು 80 ರಿಂದ 100 ಎಕರೆ ವಿಸ್ತೀರ್ಣದಲ್ಲಿ ಕೆರೆ ನಿರ್ಮಾಣ ಆಗಿದೆ. ಸದ್ಯ ಕೆರೆ ಬಲ ಭಾಗದಲ್ಲಿ ಸುಮಾರಹ 30 ಅಡಿ ಅಗಲ ಹಾಗೂ ಕನಿಷ್ಠ 700 ರಿಂದ 800 ಮೀಟರ್ ಉದ್ದದ ರಸ್ತೆ ನಿರ್ಮಾಣ ಮಾಡಲಾಗುತ್ತಿದೆ. ಸಾರ್ವಜನಿಕ ಹಿತ ದೃಷ್ಟಿಯಿಂದ ಕೂಡಲೇ ಈ ರಸ್ತೆ ತೆರವು ಮಾಡಬೇಕು ಎಂದು ಮನವಿಯಲ್ಲಿ ಆಗ್ರಹಿಸಿದ್ದಾರೆ.

ಸಂರಕ್ಷಿಸಬೇಕಾದ ಮಹತ್ವದ ಜಲಾಶಯವಾಗಿದೆ. ಈ ಕೆರೆಯು ಮಳೆಗಾಲದಲ್ಲಿ ನಗರ ಪ್ರದೇಶದ ನೀರು ಸಂಗ್ರಹಣೆ, ಜಾನುವಾರುಗಳಿಗೆ ಕುಡಿಯುವ ನೀರು ಪೂರೈಸಲು ಮತ್ತು ಭೂಗರ್ಭ ಜಲಮಟ್ಟ ಹೆಚ್ಚಿಸಲು ಪ್ರಮುಖ ಪಾತ್ರ ವಹಿಸುತ್ತದೆ. ಹುಲಿಕೆರೆಯ ಮೂಲ ಜಾಗ ಹಾಗೂ ಅದರ ಸುತ್ತಲಿನ ಬಫರ್‌ಜೋನ್ ಪ್ರದೇಶವನ್ನು ಕೆಲವರು ಅತಿಕ್ರಮಣ ಮಾಡಿದ್ದಾರೆ ಎಂದು ದೂರಿದ್ದಾರೆ.

ಕೆರೆಯ ಕೆಲ ಭಾಗದ ಸ್ವರೂಪ ಬದಲಾವಣೆ ಮಾಡಿ ವೈಯಕ್ತಿಕ ಉಪಯೋಗಕ್ಕೆ ಬಳಕೆ ಮಾಡಲಾಗುತ್ತಿದೆ. ಇದರಿಂದ ಮಳೆಗಾಲ ಹಾಗೂ ಅತಿವೃಷ್ಟಿ ಉಂಟಾದರೆ ನೀರು ಹರಿವು ಹೆಚ್ಚಾಗಿ ಕೆರೆ ಸುತ್ತಲಿನ ಪ್ರದೇಶಕ್ಕೆ ನೀರು ನುಗ್ಗುವ ಸಾಧ್ಯತೆ ಹೆಚ್ಚಿದೆ. ಇದರಿಂದ ಒತ್ತುವರಿ ಮಾಡಿದವರ ವಿರುದ್ಧ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು, ತಕ್ಷಣವೇ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಕರ್ತವ್ಯ ಲೋಪ ಎಸಗಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಶಾಸಕ ದೊಡ್ಡಮಗೌಡ ಪಾಟೀಲ್, ಮುಖಂಡರಾದ ಡಾ.ಬಸವರಾಜ ಕ್ಯಾವಟರ್,ಮಹಾಂತೇಶ ಪಾಟೀಲ್ ಮೈನಳ್ಳಿ, ಆರ್.ಬಿ.ಪಾನಘಂಟಿ, ನೀಲಕಂಠಯ್ಯ, ಅಮರೇಶ ಮರಳಿ, ಅಮಿತ್ ಕುಮಾರ, ಮಹಾಂತೇಶ ಎಸ್.ಗಡಗಿ, ಸಂಗಯ್ಯ, ಬಸವರಾಜ ಬನ್ನಿಕೊಪ್ಪ, ವಿ.ಸುಂದರ್,ಮಹೇಶ ಕರಡೇಕರ್,ಆನಂದ ಅಗಡಿ, ಈಶಪ್ಪ ಹುಬ್ಬಳ್ಳಿ, ಫಕೀರಪ್ಪ ಆರೇರ, ಶೋಭಾ ನಗರಿ, ಕೀರ್ತಿ ಪಾಟೀಲ್, ಮಹಾಲಕ್ಷ್ಮಿ ಕಂದಾರಿ ಸೇರಿ ಇತರರು ಇದ್ದರು.



ಕೊಪ್ಪಳದ ಐತಿಹಾಸಿಕ ಮತ್ತು ಧಾರ್ಮಿಕ ಹಿನ್ನೆಲೆ ಇರುವ ಕೊಪ್ಪಳದ ಹುಲಿಕೆರೆ ಸಂರಕ್ಷಣೆಗೆ ಆಗ್ರಹಿಸಿ, ಬಿಜೆಪಿ ಕಾರ್ಯಕರ್ತರು ಎಂಎಲ್ಸಿ ಹೇಮಲತಾ ನಾಯಕ ನೇತೃತ್ವದಲ್ಲಿ ಕೊಪ್ಪಳ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿಗೆ ಸೋಮವಾರ ಮನವಿ ಸಲ್ಲಿಸಿದರು.

> **ಕೆರೆ ಒಳಗೆ ನಿರ್ಮಾಣ ಮಾಡುತ್ತಿರುವ ಸುಮಾರು 30 ಅಡಿ ಅಗಲ, 800 ಮೀಟರ್‌ಉದ್ದದ ರಸ್ತೆ ಕೂಡಲೇ ತೆರವು ಮಾಡಬೇಕು. ಕೆರೆ ಅಳತೆ ಹಾಗೂ ಪರಿಶೀಲನೆ ಪ್ರಕ್ರಿಯೆ ಮುಗಿವ ವರೆಗೆ ಕಾಮಗಾರಿ ನಡೆಸದಂತೆ ಸ್ಥಗಿತ ಮಾಡಲು ಸಂಬಂಧಿತ ಪ್ರಾಧಿಕಾರಕ್ಕೆ ನಿರ್ದೇಶನ ನೀಡಬೇಕು. ಕೆರೆ ಮೂಲ ಸ್ವರೂಪ ಮತ್ತು ನೀರು ಹರಿಯುವ ಮಾರ್ಗ ಸಂರಕ್ಷಿಸುವ ಶಾಶ್ವತ ಸಂರಕ್ಷಣಾ ಯೋಜನೆ ರೂಪಿಸಬೇಕು.**
> **- ಡಾ.ಬಸವರಾಜ ಕ್ಯಾವಟರ್,ಬಿಜೆಪಿ ಮುಖಂಡ**

> **ಹುಲಿಕೆರೆ ಸುತ್ತ ಅವೈಜ್ಞಾನಿಕವಾಗಿ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಕೂಡಲೇ ಅತಿಕ್ರಮಣ ತೆರವು ಮಾಡಿ, ನಿಖರ ಗಡಿ ಗುರುತು ಮಾಡಬೇಕು. ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವುದರಿಂದ ಭವಿಷ್ಯದಲ್ಲಿ ಕಾನೂನು ಹಾಗೂ ಆಡಳಿತಾತ್ಮಕ ಗೊಂದಲ ಉಂಟಾಗುವ ಸಾಧ್ಯತೆ ಇವೆ. ಇದರಿಂದ ಸಾರ್ವಜನಿಕ ಹಿತ ದೃಷ್ಟಿಯಿಂದ ಕೂಡಲೇ ಹುಲಿಕೆರೆ ಸಂಪೂರ್ಣ ಪ್ರದೇಶ ಅಳತೆ ಮಾಡಿಸಿ ನಿಖರ ಗಡಿ ಗುರುತಿಸಬೇಕು.**
> **- ಹೇಮಲತಾ ನಾಯಕ, ಎಂಎಲ್ಸಿ**

## ಸಮಾಚಾರ ಸಣ್ಣದಲ್ಲ

### ಸರಕಾರಿ ನೌಕರಿ ನೆಪದಲ್ಲಿ 23 ಲಕ್ಷ ಮೋಸ

**ಕಲಬುರಗಿ:** ಸರಕಾರಿ ನೌಕರಿ ಕೊಡಿಸುತ್ತೇನೆ ಎಂದು ಹಂತ ಹಂತವಾಗಿ 23.75 ಲಕ್ಷ ರು. ಮೋಸ ಮಾಡಿದ ಘಟನೆ ನಡೆದಿದೆ.ಹನುಮಾನ ನಗರ ತಾಂಡಾದ ಪ್ರಿಯಾಂಕಾ ರಾಠೋಡ್ ಕುಟುಂಬ ಮೋಸಕ್ಕೆ ಒಳಗಾದವರು. ಪ್ರಿಯಾಂಕಾ ಅವರ ತಂದೆ ಧಾಮು ರಾಠೋಡ್ ತಮ್ಮ ಕೆರೂರ ಗ್ರಾಮದಲ್ಲಿದ್ದ ಜಮೀನು ಮಾರಿ, ಹಣ ಇಟ್ಟುಕೊಂಡಿದ್ದರು. ಸ್ನೇಹಿತ ವಿಜಯಪುರ ಜಿಲ್ಲೆ ಸಿಂಧಗಿ ತಾಲೂಕಿನ ಜೋಗೂರದ ಲೋಹಿತ್ ಮೇತ್ರಿ ಸರಕಾರಿ ನೌಕರಿ ಕೊಡಿಸುವ ನೆಪದಲ್ಲಿ ಹಂತ ಹಂತವಾಗಿ ಧಾಮು ರಾಠೋಡ, ಪ್ರಿಯಾಂಕಾ ತಾಯಿಯಿಂದಲೂ ಹಣ ಪಡೆದಿದ್ದಾನೆ. ಈ ಮಧ್ಯೆ ಧಾಮು ರಾಠೋಡ ನಿಧನವಾಗಿದ್ದು, ನಂತರ ನೌಕರಿ ಕೊಡಿಸಿಲ್ಲ. ಹಣವೂ ನೀಡುತ್ತಿಲ್ಲ ಎಂದು ಸ್ಟೇಷನ್ ಬಜಾರ್‌ಠಾಣೆಗೆ ದೂರು ನೀಡಿದ್ದಾರೆ.

### 1.45 ಲಕ್ಷ ರು. ಮೌಲ್ಯದ ಚಿನ್ನಾಭರಣ ಕಳ್ಳತನ

**ಕಲಬುರಗಿ:** ಮನೆಯಲ್ಲಿ ಯಾರೂ ಇಲ್ಲದ ವೇಳೆ ಕೀಲಿ ಮುರಿದು ಅಲಮಾರಾದಲ್ಲಿದ್ದ 1.45 ಲಕ್ಷ ರು. ಮೌಲ್ಯದ ಚಿನ್ನಾಭರಣ ಕಳ್ಳತನ ಮಾಡಿದ ಘಟನೆ ರಾಮತೀರ್ಥ ದೇವಸ್ಥಾನ ಹತ್ತಿರದ ಅಯೋಧ್ಯೆ ನಗರದಲ್ಲಿ ನಡೆದಿದೆ. ಸೂರ್ಯಕಾಂತ ಪಾಟೀಲ್ ಅವರ ಮನೆಯಲ್ಲಿ ಕಳ್ಳತನ ನಡೆದಿದೆ. ಸಂಬಂಧಿಕರ ನಿಶ್ಚಿತಾರ್ಥಕ್ಕೆ ಮನೆಗೆ ಕೀಲಿ ಹಾಕಿಕೊಂಡುಹೋಗಿದ್ದು, ಎರಡು ದಿನದ ನಂತರ ಬಂದು ನೋಡಿದಾಗ ಕಳ್ಳತನ ನಡೆದಿದ್ದು, ತಿಳಿದಿದೆ. ಮನೆಯಲ್ಲಿದ್ದ ಬಂಗಾರ, ಬೆಳ್ಳಿಯ ಆಭರಣ, ನಗದು ಸೇರಿ 1.45 ಲಕ್ಷ ರು. ಮೌಲ್ಯದ ಕಳ್ಳತನ ನಡೆದಿದೆ. ಈ ಕುರಿತು ಸಬ್ ಅರ್ಬನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಫೆ.27ಕ್ಕೆ ಜಿಲ್ಲಾ ಅಭಿವೃದ್ಧಿ ಸಮನ್ವಯ ಸಭೆ

**ಕಲಬುರಗಿ:** ಕಲಬುರಗಿ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಮೇಲ್ವಿಚಾರಣೆ ಸಮಿತಿ (ದಿಶಾ) ವಿಶೇಷ ಸಭೆಯು ಫೆ.27 ರಂದು ಬೆಳಗ್ಗೆ 10 ಗಂಟೆಗೆ ಕಲಬುರಗಿ ಲೋಕಸಭಾ ಸದಸ್ಯರಾದ ಡಾ. ರಾಧಾಕೃಷ್ಣ ದೊಡ್ಡಮನಿ ಇವರ ಅಧ್ಯಕ್ಷತೆಯಲ್ಲಿ ಕಲಬುರಗಿ ಜಿಲ್ಲಾ ಪಂಚಾಯಿತಿ ಹೊಸ ಸಭಾಂಗಣದಲ್ಲಿ ಜರುಗಲಿದೆ. ಈ ವಿಶೇಷ ಸಭೆಗೆ ಆಯಾ ಇಲಾಖೆಯ ಅಧಿಕಾರಿಗಳು ತಮ್ಮ ಇಲಾಖೆಗೆ ಸಂಬಂಧಿಸಿದ ಕೇಂದ್ರ ಪುರಸ್ಕೃತ ಹಾಗೂ ಇತರೆ ಎಲ್ಲಾ ಯೋಜನೆಗಳ ಪ್ರಗತಿ ಮಾಹಿತಿಯೊಂದಿಗೆ ಖುದ್ದಾಗಿ ಹಾಜರಾಗಬೇಕೆಂದು ಕಲಬುರಗಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದ್ದಾರೆ.

### ಬಹಿರಂಗ ಹರಾಜು: ವಾಹನಗಳ ವಿಲೇವಾರಿ

**ಕಲಬುರಗಿ:** ಸೇಡಂ ಹಾಗೂ ಚಿತ್ತಾಪುರ ಅಬಕಾರಿ ನಿರೀಕ್ಷಕರ ವಲಯ ಕಚೇರಿಗಳಲ್ಲಿರುವ ವಿವಿಧ ಮಾದರಿಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಒಟ್ಟು 30 ವಿವಿಧ ಮಾದರಿಯ ವಾಹನಗಳನ್ನು ಆಯಾ ವಲಯಗಳ ಅಬಕಾರಿ ನಿರೀಕ್ಷಕರ ಕಚೇರಿಗಳಲ್ಲಿ ಕೆಳಕಂಡ ದಿನಾಂಕಗಳಂದು ಅಂದು ಬೆಳಗ್ಗೆ 11.30 ರಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಬಹಿರಂಗ ಹರಾಜಿನ ಮೂಲಕ ವಿಲೇವಾರಿ ಮಾಡಲಾಗುತ್ತದೆ ಎಂದು ಕಲಬುರಗಿ ಅಬಕಾರಿ ಉಪ ಆಯುಕ್ತರು ತಿಳಿಸಿದ್ದಾರೆ. ಬಹಿರಂಗ ಹರಾಜು ಮಾಡುವ ದಿನಾಂಕ ಹಾಗೂ ಸ್ಥಳದ ವಿವರ ಇಂತಿದೆ. ಫೆ.26ರಂದು: ಸೇಡಂ ಅಬಕಾರಿ ನಿರೀಕ್ಷಕರ ವಲಯ ಕಚೇರಿಯಲ್ಲಿ 11 ವಾಹನಗಳು. ಮಾರ್ಚ್ 6: ಚಿತ್ತಾಪುರ ಅಬಕಾರಿ ನಿರೀಕ್ಷಕರ ವಲಯ ಕಚೇರಿಯಲ್ಲಿ 19 ವಾಹನಗಳು. ಮುಂಗಡ ಠೇವಣಿ ಮೊತ್ತ, ಹರಾಜಿನ ಷರತ್ತು ಮತ್ತು ನಿಬಂಧನೆಗಳು ಸೇರಿದಂತೆ ವಾಹನದ ಮಾದರಿ ಮತ್ತಿತರ ಹೆಚ್ಚಿನ ಮಾಹಿತಿಗಾಗಿ ವಾಹನವಿರುವ ಆಯಾ ಅಬಕಾರಿ ನಿರೀಕ್ಷಕರ ಕಚೇರಿಗೆ ಬೆಳಗ್ಗೆ 10 ರಿಂದ ಸಾಯಂಕಾಲ 5.30 ಗಂಟೆಯವರೆಗೆ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

### ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

**ಕಲಬುರಗಿ:** ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ವಿಭಾಗ-2ರ ವತಿಯಿಂದ ಪ್ರಸ್ತುತ 110/33/11 ಕೆ.ವಿ. ನಾಲವಾರ ವಿದ್ಯುತ್ ಉಪ-ಕೇಂದ್ರದಲ್ಲಿ ಮೆಂಟೇನನ್ಸ್ ಕಾರ್ಯಕೈಗೊಳ್ಳಬೇಕಿರುವ ಹಿನ್ನೆಲೆಯಲ್ಲಿ ಫೆ.25 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುತ್ತಿದ್ದು, ಸಾರ್ವಜನಿಕರು ಇದಕ್ಕೆ ಸಹಕರಿಸಬೇಕೆಂದು ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ವಿಭಾಗ-2ರ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ. ಶಹಾಬಾದ್ ಉಪ ವಿಭಾಗದ ನಾಲವಾರ ವಿದ್ಯುತ್ ವಿತರಣಾ ಕೇಂದ್ರ: ಚಿತ್ತಾಪುರ ತಾಲೂಕಿನ ನಾಲವಾರ (ಐ.ಪಿ), ತರಕಸ ಪೇಟ, ಸನ್ನತಿ, ಯರಗೋಲ (ಐ.ಪಿ), ಕೋಂಚುರ್, ಕುಂಬಾರಹಳ್ಳಿ, ರಾಂಪುರಳ್ಳಿ (ಐ.ಪಿ) ಹಾಗೂ ಕೆಲ್ಲೂರ (ಐ.ಪಿ) ಗ್ರಾಮ ಪಂಚಾಯಿತಿಯ ಎಲ್ಲಾ ಗ್ರಾಮಗಳು.

{ಪ್ರಿಯಾಂಕ್ ಖರ್ಗೆ} ಜಿಲ್ಲಾ ಉಸ್ತುವಾರಿ

ನನ್ನ ಬಗ್ಗೆ ಮಾತನಾಡುವುದೇ ನಾರಾಯಣಸ್ವಾಮಿಯವರ ರಾಜಕೀಯ ಅಸ್ತಿತ್ವ. ಸಂಘದ ಸಿದ್ಧಾಂತ ಹೊರುವುದಕ್ಕಿಂತ ತಂದೆಯವರ ಸೈದ್ಧಾಂತಿಕ ಹಾದಿ ಗೌರವಯುತ. ವಂಶಪಾರಂಪರ್ಯ ರಾಜಕಾರಣದ ಬಗ್ಗೆ ಮಾತನಾಡುವುದಿದ್ದರೆ ಮೊದಲು ವಿಜಯೇಂದ್ರ, ಅರವಿಂದ್ ಬೆಲ್ಲದ್ ಬಗ್ಗೆ ಧೈರ್ಯವಾಗಿ ಮಾತನಾಡಲಿ.

ಸಾರ್ವಜನಿಕ ವಿಚಾರಣಾ ಸಭೆ | ರೈತರ ನೋವು, ಅಧಿಕಾರಿಗಳ ನಿರ್ಲಕ್ಷ್ಯ, ಸರಕಾರದ ನೀತಿಗಳ ವಿರುದ್ಧ ಆಕ್ರೋಶ

# ನಮಗೊಂದು ನೇಣು ಹಗ್ಗ ಕೊಡಿ: ಕಲಶಟ್ಟಿ

ವಿಶ್ವವಾಣಿ ಸುದ್ದಿಮನೆ

**ಕಲಬುರಗಿ:** 'ಐದು ಎಚ್.ಪಿ ಮೋಟಾರ್ ಸಂಪರ್ಕಕ್ಕೆ ಎಷ್ಟು ರೊಕ್ಕ ಕೊಡಬೇಕು ಸರ್? ಟಿಸಿ ಸುಟ್ಟು ಒಂದು ವರ್ಷವಾದರೂ ಯಾರೂ ಬರಲ್ಲ. ಸಾಲ ಮಾಡಿ ಬೆಳೆ ಬೆಳೆದಿದ್ದೇವೆ ಒಂದು ಹಗ್ಗ ಕೊಡ್ರಿ, ಇಲ್ಲೇ ನೇಣು ಹಾಕಿಕೊಳ್ಳುತ್ತೇನೆ' ಎಂದು ರೈತ ಸಿದ್ದಣ್ಣ ಕಲಶಟ್ಟಿ ಅವರ ಆಕ್ರೋಶ ಭರಿತ ಮಾತುಗಳು ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಸಾರ್ವಜನಿಕ ವಿಚಾರಣೆಯಲ್ಲಿ ಪ್ರತಿಧ್ವನಿಸಿತು. ರೈತರ ನೋವು, ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಸರಕಾರದ ನೀತಿಗಳ ವಿರುದ್ಧದ ಆಕ್ರೋಶ ಹೊರಹೊಮ್ಮಿದವು.

ಇದು ಸೋಮವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ಕೆಇಆರ್‌ಸಿ) ಅಧ್ಯಕ್ಷ ಪಿ. ರವಿಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ವಿಚಾರಣಾ ಸಭೆಯಲ್ಲಿ ಕಾಳಗಿಯ ಸಿದ್ದಣ್ಣ ಕಲಶಟ್ಟಿ ಎನ್ನುವ ರೈತ ಹೊರಹಾಕಿದ ಆಕ್ರೋಶದ ಪರಿಯಿದು.

ಹಿಂದಿನ ಸರಕಾರದಲ್ಲಿ ರೈತರ ಸಮಸ್ಯೆ ಆಲಿಸಲಾಗುತ್ತಿತ್ತು. ಆದರೆ, ಈಗಿನ ಸರಕಾರ ಚೆನ್ನಾಗಿಲ್ಲ. ಒಬ್ಬ ರೈತ ಪಂಪ್ ಸೆಟ್ ಸಂಪರ್ಕ ಪಡೆಯಲು ಲಕ್ಷಾಂತರ ರುಪಾಯಿ ಲಂಚ ಕೊಡಬೇಕಾ? ಒಂದು ಟಿಸಿ ಸಂಪರ್ಕಕ್ಕೆ ಅಧಿಕಾರಿಗಳು ಒಂದು ಲಕ್ಷದಿಂದ ಎರಡು ಲಕ್ಷ ರುಪಾಯಿ ವಸೂಲಿ ಮಾಡುತ್ತಿದ್ದಾರೆ. ಟಿಸಿ ಸುಟ್ಟು ವರ್ಷ ಕಳೆದರೂ ಯಾರೂ ಬರುವುದಿಲ್ಲ. ನಮ್ಮ ಬೆಳೆಗಳು ಕಣ್ಣೆದುರೇ ಒಣಗುತ್ತಿವೆ. ಅಧಿಕಾರಿಗಳು ನಮ್ಮ ಬದುಕನ್ನು ಸತ್ಯನಾಶ ಮಾಡುತ್ತಿದ್ದಾರೆ. ಸಾಲ ಮಾಡಿ ಹೈರಾಣಾಗಿದ್ದೇವೆ, ನಾವು ಬದುಕಬೇಕೋ ಅಥವಾ ಸಾಯಬೇಕೋ ನೀವೇ ಹೇಳಿ ಎಂದು ಅಳಲು ತೋಡಿಕೊಂಡರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ (ಕೆಇಆರ್‌ಸಿ) ಅಧ್ಯಕ್ಷ ಪಿ. ರವಿಕುಮಾರ್ ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ವಿಚಾರಣಾ ಸಭೆ ನಡೆಯಿತು.

ಇದಕ್ಕೆ ತಕ್ಷಣ ಪ್ರತಿಕ್ರಿಯಿಸಿದ ಕೆಇಆರ್‌ಸಿ ಅಧ್ಯಕ್ಷ ಪಿ. ರವಿಕುಮಾರ್, ರೈತರಿಗೆ ತೊಂದರೆ ನೀಡುತ್ತಿರುವುದು ಸರಿಯಲ್ಲ. ಒಂದು ತಿಂಗಳು ಸಂಬಳ ಆಗದಿದ್ದರೆ ರಸ್ತೆಗೆ ಬಂದು ಪ್ರತಿಭಟನೆ ಮಾಡುತ್ತೀರಿ, ಒಂದು ವರ್ಷ ವಿದ್ಯುತ್ ಸಂಪರ್ಕ ಇಲ್ಲದಿದ್ದರೆ ರೈತರು ಬೆಳೆಯುವುದಾದರೆ ಹೇಗೆ.? ರೈತರು ಬೆಳೆದ ಬೆಳೆ ಹಾನಿಯಾಗುತ್ತದೆ. ಟಿಸಿ ಸುಟ್ಟ ತಕ್ಷಣವೇ ರೈತರ ಜಮೀನಿಗೆ ತೆರಳಿ ವಿದ್ಯುತ್ ಸಂಪರ್ಕ ಕಲ್ಪಿಸುವ ವ್ಯವಸ್ಥೆ ಮಾಡಬೇಕು ಎಂದು ಸೂಚಿಸಿದರು.

ಇದಲ್ಲದೇ, ಪ್ರತಿ ಗ್ರಾಮ ಪಂಚಾಯತಿಯಲ್ಲಿ ಟಿಸಿ ಮತ್ತು ಕಂಬದ ಸಂಪರ್ಕದ ದರಪಟ್ಟಿಯನ್ನು ಕನ್ನಡದಲ್ಲಿ ಪ್ರಕಟಿಸಿ. ಪಾರದರ್ಶಕತೆ ಕಾಪಾಡಿ ಎಂದು ಜೆಸ್ಕಾಂ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದರು.

**21 ಪೈಸೆ ಹೆಚ್ಚಳಕ್ಕೆ ಪ್ರಸ್ತಾವನೆ:** ಜೆಸ್ಕಾಂನ 465 ಕೋಟಿ ರು. ಆದಾಯದ ಕೊರತೆ ಸರಿದೂಗಿಸಲು ಪ್ರತಿ ಯೂನಿಟ್‌ಗೆ 21 ಪೈಸೆ ಹೆಚ್ಚಳ ಮಾಡುವಂತೆ ವ್ಯವಸ್ಥಾಪಕ ನಿರ್ದೇಶಕ ಕೃಷ್ಣ ಭಾಜಪೇಯಿ ಮನವಿ ಮಾಡಿದರು. ಆದರೆ, ವಿದ್ಯುತ್ ಖರೀದಿ ವೆಚ್ಚದಲ್ಲಿನ 114 ಕೋಟಿ ರು. ವ್ಯತ್ಯಾಸಕ್ಕೆ ಆಯೋಗದ ಅಧ್ಯಕ್ಷ ಪಿ. ರವಿಕುಮಾರ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. 'ಮೈಸೂರು, ಬೆಂಗಳೂರು ಎಸ್ಕಾಂಗಳಲ್ಲಿ ಇಲ್ಲದ ವ್ಯತ್ಯಾಸ ಜೆಸ್ಕಾಂನಲ್ಲಿ ಮಾತ್ರ ಏಕೆ? ಈ ಹೊರೆಯನ್ನು ಗ್ರಾಹಕರ ಮೇಲೆ ಹಾಕುವುದು ಹೇಗೆ?' ಎಂದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಅವರು, ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸುವುದಾಗಿ ತಿಳಿಸಿದರು.

**ಸಾರ್ವಜನಿಕರ ದೂರುಗಳ ಸುರಿಮಳೆ:** ಸಭೆಯಲ್ಲಿ ಭಾಗವಹಿಸಿದ್ದ ದೀಪಪಾಲ್, ಹೆಚ್ಚುವರಿ ಖರ್ಚು ಗ್ರಾಹಕರ ಮೇಲೆ ಹಾಕುತ್ತಿದ್ದಾರೆ. ಜನರೇಟರ್ ಖರೀದಿಯಲ್ಲಿ ಪರಿಶೀಲನೆ ಕೊರತೆ ಇದೆ, ಥರ್ಡ್ ಪಾರ್ಟಿ ಪರಿಶೀಲನೆ ಬೇಕು ಎಂದರು. ರೈತ ಹನುಮಂತ, ಹಳ್ಳಿಗಳಲ್ಲಿ ಲೈನ್‌ಮ್ಯಾನ್‌ಗಳು ಕರೆ ಸ್ವೀಕರಿಸುವುದಿಲ್ಲ ಎಂದು ದೂರಿದರು. ಶಾಂತಗೌಡ ಜಾಗಿರದಾರ್ ಅವರು ವಾಣಿಜ್ಯ ಉದ್ದೇಶದ ವಿದ್ಯುತ್ ದರ ಇಳಿಕೆಗೆ ಒತ್ತಾಯಿಸಿದರು. ಹಗಲು ಹೊತ್ತಿನಲ್ಲಿ ಬೀದಿ ದೀಪಗಳು ಉರಿಯುತ್ತಿರುವ ಬಗ್ಗೆ ನಾಗೇಂದ್ರಪ್ಪ ಅಸಮಾಧಾನ ವ್ಯಕ್ತಪಡಿಸಿದರು.

ಆಯೋಗದ ಸದಸ್ಯ ಎಚ್.ಕೆ. ಜಗದೀಶ್, ಜೆಸ್ಕಾಂ ಅಧ್ಯಕ್ಷ ಪ್ರವೀಣ್ ಪಾಟೀಲ್ ಹರವಾಳ್, ವ್ಯವಸ್ಥಾಪಕ ನಿರ್ದೇಶಕ ಕೃಷ್ ಭಾಜಪೇಯಿ, ಕೆಇಆರ್‌ಸಿ ಸದಸ್ಯರಾದ ಜಾವೇದ್ ಅಖ್ತರ್(ವಿಡಿಯೋ ಕಾಲ್ ಮೂಲಕ), ನಿರ್ದೇಶಕ (ತಾಂತ್ರಿಕ) ಚಂದ್ರಕಾಂತ್ ಪಾಟೀಲ್ ಹಾಗೂ ಮುಖ್ಯ ಹಣಕಾಸು ಅಧಿಕಾರಿ ಬಿ.ಎಚ್. ಶಿವಶಂಕರ್ ಸೇರಿ ಹಿರಿಯ ಅಧಿಕಾರಿಗಳು ಹಾಗೂ ಗ್ರಾಹಕರು ಇದ್ದರು.

### ಜೆಸ್ಕಾಂ ಜನರ ಜೀವ ಹಿಂಡುತ್ತಿದೆ

ನಗರದ ವಿದ್ಯುತ್ ಕಂಬಗಳಲ್ಲಿನ ಅನಧಿಕೃತ ವೈರ್‌ಗಳಿಂದ ಮಹಿಳೆಯೊಬ್ಬರ ಕೈ ಕಟ್ ಆಗಿದ್ದರೂ ಜೆಸ್ಕಾಂ ಪರಿಹಾರ ನೀಡಿಲ್ಲ. ಜೆಸ್ಕಾಂ ಜನ ಸ್ನೇಹಿಯಾಗುವ ಬದಲು ಜನರ ಜೀವ ಹಿಂಡುತ್ತಿದೆ ಎಂದು ಸಿದ್ದರಾಮಯ್ಯ ಹಿರೇಮಠ್ ಆಕ್ರೋಶ ವ್ಯಕ್ತಪಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಜೆಸ್ಕಾಂ ಅಧ್ಯಕ್ಷ ಪ್ರವೀಣ್ ಪಾಟೀಲ್ ಹರವಾಳ್, ವಿದ್ಯುತ್ ಕಳ್ಳತನ ತಡೆಗೆ ಹಾಗೂ ಅನಧಿಕೃತ ವೈರ್ ತೆರವುಗೊಳಿಸಲು ಕಠಿಣ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಬಿಹಾರವು ಕಲ್ಯಾಣ ಕರ್ನಾಟಕಕ್ಕಿಂತ ಹಿಂದುಳಿದ ಪ್ರದೇಶವಾಗಿದೆ. ಆದರೆ ಅಲ್ಲಿನ ಪ್ರತಿ ಗುಡಿಸಿಲಲ್ಲೂ ಸ್ಮಾರ್ಟ್ ಮೀಟರ್ ಅಳವಡಿಸಲಾಗಿದೆ. ಅವರಿಗಿಂತ ನಾವೇನು ಹಿಂದೆ ಉಳಿದಿಲ್ಲ. ಶೀಘ್ರದಲ್ಲೇ ನಮ್ಮ ರಾಜ್ಯದಲ್ಲೂ ಸ್ಮಾರ್ಟ್ ಮೀಟರ್ ಅಳವಡಿಕೆ ಕಾರ್ಯ ನಡೆಯಲಿದೆ.
- ಪಿ. ರವಿಕುಮಾರ್,ಅಧ್ಯಕ್ಷ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ.

ರೈತರು ಹೇಳಿದ್ದು ನೂರಕ್ಕೆ ನೂರು ಸರಿ ಇದೆ. ಟಿಸಿ ಸಂಪರ್ಕಕ್ಕೆ ಅಧಿಕಾರಿಗಳು ಹಣ ಕೇಳುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಅಂತಹ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ ಮತ್ತು ಮಾರ್ಚ್‌ನಲ್ಲಿ ಪ್ರತಿಯೊಂದು ಗ್ರಾಮಗಳಲ್ಲಿ ಜನಸಂಪರ್ಕ ಸಭೆ ನಡೆಸುತ್ತೇವೆ. ತಪ್ಪು ಮಾಡಿದವರ ವಿರುದ್ಧ ತಕ್ಷಣ ಚುರುಕು ಮುಟ್ಟಿಸುತ್ತೇವೆ.
- ಪ್ರವೀಣ್ ಪಾಟೀಲ್ ಹರವಾಳ್, ಅಧ್ಯಕ್ಷ, ಜೆಸ್ಕಾಂ.

## ಗ್ರಾ.ಪಂ. ಮಟ್ಟದಲ್ಲಿ 'ಪಂಚ ಗ್ಯಾರಂಟಿ' ಸಮಾವೇಶ

**ಆಳಂದ:** ರಾಜ್ಯ ಸರಕಾರದ ಮಹತ್ವಾಕಾಂಕ್ಷಿ ಪಂಚ ಗ್ಯಾರಂಟಿ ಯೋಜನೆಗಳ ಪ್ರಚಾರ ಹಾಗೂ ಜನಜಾಗೃತಿಗಾಗಿ ಮಾರ್ಚ್ ಮೊದಲ ವಾರದಿಂದ ಹೋಬಳಿ ಮತ್ತು ಗ್ರಾಮ ಪಂಚಾಯತಿ ಮಟ್ಟದಲ್ಲಿ ಸಮಾವೇಶಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರು ಹಾಗೂ ಶಾಸಕ ಬಿ.ಆರ್. ಪಾಟೀಲ್ ತಿಳಿಸಿದರು.

ಪಟ್ಟಣದ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಆಯೋಜಿಸಿದ್ದ 'ತಾಲೂಕು ಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ'ಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಚುನಾವಣೆ ಪೂರ್ವದಲ್ಲಿ ನೀಡಿದ ಭರವಸೆಯಂತೆ ಐದೂ ಗ್ಯಾರಂಟಿಗಳನ್ನು ಸರಕಾರ ಸಮರ್ಪಕವಾಗಿ ಜಾರಿಗೆ ತಂದಿದೆ. ದೇಶದ ಯಾವುದೇ ರಾಜ್ಯದಲ್ಲಿ ಇಂತಹ ಜನಪರ ಯೋಜನೆಗಳು ಜಾರಿಯಾಗಿಲ್ಲ. ಈ ಯೋಜನೆಗಳು ಆರ್ಥಿಕವಾಗಿ ಹಿಂದುಳಿದವರಿಗೆ ಶಕ್ತಿ ತುಂಬಿದ್ದು, ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕೆ ಹೊಸ ಆಯಾಮ ನೀಡಿದೆ ಎಂದು ಶಾಸಕರು ಶ್ಲಾಘಿಸಿದರು.

**ಗೈರಾದ ಅಧಿಕಾರಿಗೆ ನೋಟಿಸ್:** ಸಭೆಗೆ ಪದೇ ಪದೇ ಗೈರಾಗುತ್ತಿರುವ ಆಹಾರ ಇಲಾಖೆಯ ಶಿರಸ್ತೇದಾರರಿಗೆ ಕಾರಣ ಕೇಳಿ ನೋಟಿಸ್ (ಶೋಕಾಸ್ ನೋಟಿಸ್) ನೀಡುವಂತೆ ತಾ.ಪಂ. ಇಒ ಮಾನಪ್ಪ ಕಟ್ಟಿಮನಿ ಅವರಿಗೆ ಶಾಸಕರು ಇದೇ ಸಂದರ್ಭದಲ್ಲಿ ಕಟ್ಟುನಿಟ್ಟಿನ ಸೂಚನೆ ನೀಡಿದರು.

'ತಾಲೂಕು ಮಟ್ಟದ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ'ಯ ಅಧ್ಯಕ್ಷತೆ ವಹಿಸಿ ಶಾಸಕ ಬಿ.ಆರ್. ಪಾಟೀಲ್ ಮಾತನಾಡಿದರು.

**ಅಧಿಕಾರಿಗಳ ಸ್ಪಂದನೆ ಅಗತ್ಯ:** ಪಂಚ ಗ್ಯಾರಂಟಿ ಸಮಿತಿ ಅಧ್ಯಕ್ಷ ಶಿವಪುತ್ರಪ್ಪ ಪಾಟೀಲ್ ಮಾತನಾಡಿ, ಯೋಜನೆಗಳ ಅನುಷ್ಠಾನದಲ್ಲಿ ಅಧಿಕಾರಿಗಳು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು. ಹಲವು ಬಾರಿ ಅಧಿಕಾರಿಗಳು ಕರೆಗಳಿಗೂ ಸರಿಯಾಗಿ ಸ್ಪಂದಿಸುತ್ತಿಲ್ಲ. ಜವಾಬ್ದಾರಿಯುತ ಸ್ಥಾನದಲ್ಲಿರುವ ನಮಗೇ ಈ ಪರಿಸ್ಥಿತಿಯಾದರೆ ಸಾಮಾನ್ಯ ಜನರ ಕಥೆಯೇನು? ಎಂದು ಕಳವಳ ವ್ಯಕ್ತಪಡಿಸಿದರು. ಮಾರ್ಚ್ ಮೊದಲ ವಾರ ಮುನ್ನಹಳ್ಳಿಯಲ್ಲಿ ನಡೆಯುವ ಮೊದಲ ಸಮಾವೇಶಕ್ಕೆ ಅಧಿಕಾರಿಗಳು ಕಡ್ಡಾಯವಾಗಿ ಹಾಜರಿರಬೇಕು ಎಂದು ತಿಳಿಸಿದರು.

ತಾ.ಪಂ. ಇಒ ಮಾನಪ್ಪ ಕಟ್ಟಿಮನಿ ಸ್ವಾಗತಿಸಿದರು. ಸಭೆಯಲ್ಲಿ ಉಪಾಧ್ಯಕ್ಷ ಗುರುನಾಥ ಪಾಟೀಲ್, ಪ್ರಮುಖರಾದ ಮಹೇಶ ಹಿರೋಳ್ಳಿ, ರಮೇಶ ರಾಠೋಡ, ಲಕ್ಷ್ಮಣ ತಳಕೇರಿ, ಪ್ರಕಾಶ ಕಾಂಬಳೆ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಗ್ಯಾರಂಟಿ ಯೋಜನೆಗಳು ಪ್ರತಿಯೊಬ್ಬರೂ ಸಮಾಜದಲ್ಲಿ ಘನತೆಯಿಂದ ಬದುಕಲು ದಾರಿ ಮಾಡಿಕೊಟ್ಟಿವೆ. ಇನ್ನೂ ಈ ಯೋಜನೆಯಿಂದ ಹೊರಗುಳಿದಿರುವ ಅರ್ಹರನ್ನು ಗುರುತಿಸುವ ಕಾರ್ಯವನ್ನು ಅಧಿಕಾರಿಗಳು ಪ್ರಾಮಾಣಿಕವಾಗಿ ಮಾಡಬೇಕು.
- ಬಿ.ಆರ್. ಪಾಟೀಲ್, ಶಾಸಕ, ಆಳಂದ.

## ಶಾಲೆಗಳು ಕಣ್ಣು ತೆರೆಸುತ್ತವೆ: ಜ್ಞಾನಪ್ರಕಾಶ ಸ್ವಾಮೀಜಿ

**ಚಿಂಚೋಳಿ:** ದೇಗುಲಗಳಿಗೆ ಹೋದರೆ ಅಲ್ಲಿ ಕಣ್ಣು ಮುಚ್ಚುತ್ತೇವೆ, ಆದರೆ ಶಾಲೆಗಳಿಗೆ ಹೋದರೆ ಕಣ್ಣು ತೆರೆಯುತ್ತೇವೆ. ಹೀಗಾಗಿ ಶಾಲೆಗಳೇ ನಿಜವಾದ ದೇವಾಲಯ, ಶಿಕ್ಷಕರೇ ದೇವರು ಹಾಗೂ ವಿದ್ಯಾರ್ಥಿಗಳೇ ಭಕ್ತರು ಎಂದು ಮೈಸೂರಿನ ಉರಲಿಂಗ ಪೆದ್ದೇಶ್ವರ ಸಂಸ್ಥಾನದ ಜ್ಞಾನಪ್ರಕಾಶ ಸ್ವಾಮೀಜಿ ಮಾರ್ಮಿಕವಾಗಿ ನುಡಿದರು.

ಗಡಿಕೇಶ್ವರದ ಸರಕಾರಿ ಪ್ರೌಢಶಾಲೆಯಲ್ಲಿ 'ಬುದ್ಧ ಬಸವ ಅಂಬೇಡ್ಕರ್‌ಚಾರಿಟೇಬಲ್ ಟ್ರಸ್ಟ್' ವತಿಯಿಂದ ಹಮ್ಮಿಕೊಂಡಿದ್ದ 10ನೇ ತರಗತಿ ಪೂರ್ವಸಿದ್ಧತಾ ಪರೀಕ್ಷೆಯ ವಿಜೇತರಿಗೆ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಸರಕಾರಿ ಶಾಲೆಗಳ ಬಗ್ಗೆ ತಾತ್ಸಾರ ಬೇಡ. ಈ ಶಾಲೆಗಳಲ್ಲಿ ಓದಿದವರೇ ಇಂದು ಐಎಎಸ್, ಐಪಿಎಸ್ ಅಂತಹ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಪಾಲಕರು ಆಸ್ತಿ ಮಾಡುವ ಬದಲು ಪುಸ್ತಕಗಳನ್ನೇ ಮಕ್ಕಳಿಗೆ ಆಸ್ತಿಯನ್ನಾಗಿಸಬೇಕು. ಅಂಬೇಡ್ಕರ್ ಹೇಳಿದಂತೆ ಶಿಕ್ಷಣವೆಂಬುದು ಹುಲಿಯ ಹಾಲಿದ್ದಂತೆ, ಅದನ್ನು ಕುಡಿದವರು ಘರ್ಜಿಸಲೇಬೇಕು. ಜೇಬಿನಲ್ಲಿ ಹಣವಿಲ್ಲದಿದ್ದರೂ ಪರವಾಗಿಲ್ಲ, ಕೈಯಲ್ಲಿ ಪೆನ್ನು ಎಂಬ ಅಸ್ತ್ರವಿರಲಿ' ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಮಾಜಿ ಜಿ.ಪಂ ಸದಸ್ಯ ಭೀಮರಾವ್ ಟಿ.ಟಿ, ಎಸ್ಬಿಐ ವ್ಯವಸ್ಥಾಪಕ ಸದಾಶಿವ ರಾತ್ರೀಕರ್ ಮಾತನಾಡಿದರು. ಟ್ರಸ್ಟ್ ಅಧ್ಯಕ್ಷೆ ಸುಮಲತಾ ಅಶೋಕ ರಂಗನೂರ ಸೇರಿದಂತೆ ಗ್ರಾಮದ ಪ್ರಮುಖರು ಉಪಸ್ಥಿತರಿದ್ದರು.

**ಗೌರವಾರ್ಪಣೆ:** ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದ ಭಾಗೇಶ, ದ್ವಿತೀಯ ಸ್ಥಾನಿ ಲಕ್ಷ್ಮೀ ಹಾಗೂ ತೃತೀಯ ಸ್ಥಾನ ಗಳಿಸಿದ ಸಾಗರ ಮತ್ತು ಕುಶಾಲ ಅವರಿಗೆ ಪ್ರಶಸ್ತಿ ನೀಡಲಾಯಿತು. ಇದೇ ವೇಳೆ ಶಾಲೆಗೆ ಭೂದಾನ ಮಾಡಿದ ದಾನಿಗಳನ್ನು ವಿಶೇಷವಾಗಿ ಸನ್ಮಾನಿಸಲಾಯಿತು.



10ನೇ ತರಗತಿ ಪೂರ್ವಸಿದ್ಧತಾ ಪರೀಕ್ಷೆಯ ವಿಜೇತರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

## ಛಲವಿದ್ದರೆ ಸಾಧನೆ ಅಸಾಧ್ಯವಲ್ಲ

**ಸೇಡಂ:** ಭಕ್ತಿಗೆ ವಯಸ್ಸಿನ ಅಡ್ಡಿಯಿಲ್ಲ ಎಂಬುದನ್ನು ಬಾಲಕ ಧ್ರುವರಾಜ ತನ್ನ ಅಚಲ ಭಕ್ತಿಯ ಮೂಲಕ ಸಾಬೀತುಪಡಿಸಿದ್ದಾನೆ. ಮನುಷ್ಯನಲ್ಲಿ ಸಾಧಿಸುವ ಛಲವಿದ್ದರೆ ಜಗತ್ತಿನಲ್ಲಿ ಯಾವುದೂ ಅಸಾಧ್ಯವಲ್ಲ ಎಂದು ವಿದ್ವಾಂಸರಾದ ಪಂ. ವೆಂಕಣ್ಣಾಚಾರ್ಯ ಪೂಜಾರ ಹೇಳಿದರು.

ಇಲ್ಲಿನ ವೆಂಕಟೇಶಾಚಾರ್ಯ ಕಡಿವಾಳ ಅವರ ನಿವಾಸದಲ್ಲಿ ಆಯೋಜಿಸಲಾಗಿದ್ದ ಭಾಗವತ ಸಪ್ತಾಹ ಕಾರ್ಯಕ್ರಮದಲ್ಲಿ ಭಾಗವತ ಪುರಾಣದ ಕುರಿತು ಅವರು ಪ್ರವಚನ ನೀಡಿದರು.

ರಾಜ ಉತ್ತಾನಪಾದನ ಮಗ ಧ್ರುವ, ಮಲತಾಯಿ ಸುರುಚಿಯಿಂದ ಅವಮಾನಕ್ಕೊಳಗಾದಾಗ ಧೃತಿಗೆಡದೆ ತಾಯಿಯ ಮಾರ್ಗದರ್ಶನದಂತೆ ಕಾಡಿಗೆ ತೆರಳಿದನು. ನಾರದ ಮಹರ್ಷಿಗಳ ಉಪದೇಶದಂತೆ ಕೇವಲ ಐದು ವರ್ಷದ ಪ್ರಾಯದಲ್ಲಿ ಕಠಿಣ ತಪಸ್ಸು ಆಚರಿಸಿ ಭಗವಂತನ ಸಾಕ್ಷಾತ್ಕಾರ ಮಾಡಿಕೊಂಡನು. ಭಗವಂತನು ಅವನ ಭಕ್ತಿಗೆ ಮೆಚ್ಚಿ ನಕ್ಷತ್ರ ಮಂಡಲದಲ್ಲಿ ಶಾಶ್ವತವಾದ ಉನ್ನತ ಸ್ಥಾನವನ್ನು ಕರುಣಿಸಿದನು ಎಂದು ವಿವರಿಸಿದರು.

ಧ್ರುವರಾಜ ದೇವರಿಂದ ವರ ಪಡೆದು ಮರಳಿ ಅರಮನೆಗೆ ಬಂದಾಗ, ತನ್ನನ್ನು ಕಾಡಿಗೆ ಅಟ್ಟಿದ ಮಲತಾಯಿ ಸುರುಚಿಗೆ ಮೊದಲು ನಮಸ್ಕರಿಸಿದನು.

ಭಾಗವತ ಸಪ್ತಾಹ ಕಾರ್ಯಕ್ರಮದಲ್ಲಿ ಭಾಗವತ ಪುರಾಣದ ಕುರಿತು ವಿದ್ವಾಂಸರಾದ ಪಂ. ವೆಂಕಣ್ಣಾಚಾರ್ಯ ಪೂಜಾರ ಪ್ರವಚನ ನೀಡಿದರು.

ಅವಳ ನಿರ್ಧಾರದಿಂದಲೇ ನನಗೆ ದೇವ ದರ್ಶನವಾಯಿತು ಎಂಬ ಕೃತಜ್ಞತಾ ಭಾವ ಅವನಲ್ಲಿತ್ತು. ಇಂದಿನ ಸಮಾಜಕ್ಕೆ ಇಂತಹ ಕ್ಷಮಾ ಗುಣ ಮತ್ತು ಸಕಾರಾತ್ಮಕ ಚಿಂತನೆ ಅತ್ಯಗತ್ಯ ಎಂದು ಪೂಜಾರ ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ವೆಂಕಟೇಶಾಚಾರ್ಯ ಕಡಿವಾಳ, ಕಮಲಾಕರ ಕುಲಕರ್ಣಿ, ಅನಂತಭಟ್ಟ, ವೆಂಕಟರಾವ ಮುಸರೀಫ್, ರಘುನಾಥ ದೇಶಪಾಂಡೆ, ಶ್ರೀಧರ ದೇಸಾಯಿ, ವೆಂಕಟೇಶ ದಂಡೋತಿ, ದೀಪಕ ದಂಡೋತಿ, ರಾಘವೇಂದ್ರ ಕುಲಕರ್ಣಿ ನರೋಣಾ ಹಾಗೂ ಗ್ರಾಮದ ಪ್ರಮುಖರು ಉಪಸ್ಥಿತರಿದ್ದರು.

## ಮಾ.1ರಿಂದ ಅಂತಾರಾಷ್ಟ್ರೀಯ ಮಹಿಳಾ ಐಟಿಎಫ್ ಟೆನ್ನಿಸ್

**ಕಲಬುರಗಿ:** ನಗರದ ಕ್ರೀಡಾ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಅಂತಾರಾಷ್ಟ್ರೀಯ ಮಟ್ಟದ ಮಹಿಳಾ ಟೆನ್ನಿಸ್ ಪಂದ್ಯಾವಳಿ ಆಯೋಜನೆಯಾಗುತ್ತಿದೆ. ನಗರದ ಚಂದ್ರಶೇಖರ್ ಪಾಟೀಲ್ ಜಿಲ್ಲಾ ಕ್ರೀಡಾಂಗಣದಲ್ಲಿ ಮಾ.1ರಿಂದ 8 ರವರೆಗೆ 'ಇಂಟರ್ ನ್ಯಾಷನಲ್ ಮಹಿಳಾ ಐ.ಟಿ.ಎಫ್ 2026' ಪಂದ್ಯಾವಳಿ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ತಿಳಿಸಿದರು.

ಸೋಮವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಪಂದ್ಯಾವಳಿಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಜಿಲ್ಲೆಯಲ್ಲಿ ಪ್ರಪ್ರಥಮ ಬಾರಿಗೆ ಇಂತಹ ಬೃಹತ್ ಕ್ರೀಡಾಕೂಟ ಆಯೋಜಿಸುತ್ತಿರುವುದರಿಂದ, ಇದರ ಯಶಸ್ವಿ ನಿರ್ವಹಣೆಗಾಗಿ ವಿವಿಧ ಉಪ ಸಮಿತಿಗಳನ್ನು ರಚಿಸಲಾಗಿದೆ ಎಂದು ಮಾಹಿತಿ ನೀಡಿದರು.

**ಸುರಕ್ಷತೆ ಮತ್ತು ಸೌಲಭ್ಯಕ್ಕೆ ಆದ್ಯತೆ:** ಮಹಿಳಾ ಕ್ರೀಡಾಪಟುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿರುವುದರಿಂದ ಪಂದ್ಯಾವಳಿ ನಡೆಯುವ ಸ್ಥಳ ಹಾಗೂ ವಸತಿ ನಿಲಯಗಳಲ್ಲಿ ಬಿಗಿ ಭದ್ರತೆ ಕೈಗೊಳ್ಳಬೇಕು. ಆಟಗಾರರಿಗೆ ಯಾವುದೇ ತೊಂದರೆಯಾಗದಂತೆ ಕುಡಿಯುವ ನೀರು ಮತ್ತು ಗುಣಮಟ್ಟದ ವಸತಿ ವ್ಯವಸ್ಥೆಯನ್ನು ಕಲ್ಪಿಸಬೇಕು ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

**ವೈದ್ಯಕೀಯ ಮತ್ತು ಆಹಾರ ವ್ಯವಸ್ಥೆ:** ದೇಶಿ ಹಾಗೂ ವಿದೇಶಿ ಆಟಗಾರರು ಭಾಗವಹಿಸುತ್ತಿರುವುದರಿಂದ ಅವರ ಅಗತ್ಯಕ್ಕೆ ತಕ್ಕಂತೆ ಆಹಾರದ ಮೆನು ಸಿದ್ಧಪಡಿಸಬೇಕು. ಕ್ರೀಡಾಪಟುಗಳ ಆರೋಗ್ಯದ ದೃಷ್ಟಿಯಿಂದ ಕ್ರೀಡಾಂಗಣದಲ್ಲಿ ಸದಾ ವೈದ್ಯಕೀಯ ತಂಡ ಮತ್ತು ಆಂಬುಲೆನ್ಸ್ ಸನ್ನದ್ಧ ಸ್ಥಿತಿಯಲ್ಲಿರಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

**ಸ್ಥಳೀಯ ಪ್ರತಿಭೆಗಳಿಗೆ ವೇದಿಕೆ:** ಕಲಬುರಗಿಯಲ್ಲಿ ಇಂತಹ ಅಂತಾರಾಷ್ಟ್ರೀಯ ಕೂಟ ಆಯೋಜಿಸುತ್ತಿರುವುದರ ಹಿಂದೆ ಸ್ಥಳೀಯ ಮಹಿಳಾ ಕ್ರೀಡಾಪಟುಗಳಿಗೆ ಉತ್ತೇಜನ ನೀಡುವ ಉದ್ದೇಶವಿದೆ. ಈ ಬಾರಿ 'ಕಲಬುರಗಿ ನೆಕ್ಸ್ಟ್' ಅಡಿಯಲ್ಲಿ ಈ ಕ್ರೀಡಾಕೂಟ ನಡೆಯಲಿದ್ದು, ಪ್ರಾಯೋಜಕತ್ವ ಮತ್ತು ಸ್ಥಳೀಯ ದಾನಿಗಳ ಸಹಕಾರವನ್ನೂ ಪಡೆಯಲಾಗುವುದು. ಪಂದ್ಯಾವಳಿಯ ಸುಗಮ ನಿರ್ವಹಣೆಗೆ ಪ್ರತಿದಿನ ಒಬ್ಬೊಬ್ಬ ಅಧಿಕಾರಿಯನ್ನು ಉಸ್ತುವಾರಿಯಾಗಿ ನೇಮಕ ಮಾಡಲಾಗುವುದು ಎಂದು ಅವರು ವಿವರಿಸಿದರು.

ಸಭೆಯಲ್ಲಿ ಮಹಾನಗರ ಪಾಲಿಕೆ ಆಯುಕ್ತ ಅವಿನಾಶ್ ಶಿಂಧೆ, ಸಹಾಯಕ ಆಯುಕ್ತ ಸಾಹಿತ್ಯ ಆಲದಕಟ್ಟೆ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಸೇರಿ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಪಂದ್ಯಾವಳಿಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಮಾತನಾಡಿದರು.

ಫಲಪುಷ್ಪ ಮೇಳ | ಮನ ಸೆಳೆಯುತ್ತಿರುವ 1.50 ಲಕ್ಷ ಹೂವುಗಳಿಂದ ನಿರ್ಮಿಸಲಾದ ಸಂವಿಧಾನದ ಕಲಾಕೃತಿ | ಕಲ್ಲಂಗಡಿಯಲ್ಲಿ ಅರಳಿದ ರಾಷ್ಟ್ರ ನಾಯಕರು

# ಶರಣಬಸವೇಶ್ವರ ಕೆರೆ ಉದ್ಯಾನವನದಲ್ಲಿ ಹೂವುಗಳ ಲೋಕ ಅನಾವರಣ

ವಿಶ್ವವಾಣಿ ಸುದ್ದಿಮನೆ

**ಕಲಬುರಗಿ:** ಬಿಸಿಲ ನಗರಿ ಕಲಬುರಗಿಯ ಶರಣಬಸವೇಶ್ವರ ಕೆರೆ ಉದ್ಯಾನವನ ಈಗ ಬಣ್ಣ ಬಣ್ಣದ ಹೂವುಗಳ ಕಾಶಿಯಾಗಿ ಮಾರ್ಪಟ್ಟಿದೆ. ಮೂರು ವರ್ಷಗಳ ದೀರ್ಘ ಬಿಡುವಿನ ನಂತರ ಜಿಲ್ಲಾಡಳಿತ ಹಾಗೂ ತೋಟಗಾರಿಕೆ ಇಲಾಖೆ ಆಯೋಜಿಸಿರುವ ಎರಡು ದಿನಗಳ 'ಫಲಪುಷ್ಪ ಪ್ರದರ್ಶನ ಮತ್ತು ಮಾರಾಟ ಮೇಳ'ವು ಜಿಲ್ಲೆಯ ಜನರ ಕಣ್ಮನ ಸೆಳೆಯಿತು.

ಈ ಬಾರಿಯ ಮೇಳದ ಕೇಂದ್ರ ಬಿಂದು ಎಂದರೆ ಸುಮಾರು 1.50 ಲಕ್ಷ ಹೂವುಗಳಿಂದ ನಿರ್ಮಿಸಲಾದ ಭಾರತದ ಸಂವಿಧಾನದ ಪ್ರತಿಕೃತಿ. ಜೈ ಶ್ರೀಕೃಷ್ಣ ಇವೆಂಟ್ಸ್‌ನ ಕೆ. ಜಗದೀಶ್ ಅವರ ಕಲಾತ್ಮಕ ವಿನ್ಯಾಸದಲ್ಲಿ ಮೂಡಿಬಂದಿರುವ ಈ ಕಲಾಕೃತಿಯನ್ನು ಚೆಂಡು ಹೂವು, ಸೇವಂತಿಗೆ ಮತ್ತು ಚೈನಾ ಆಸ್ಟರ್‌ಗಳಿಂದ ಅಲಂಕರಿಸಲಾಗಿದೆ. ಇದರ ಸುತ್ತಲೂ ವಿವಿಧ ತರಕಾರಿಗಳಲ್ಲಿ ಅರಳಿದ ಶರಣಬಸವೇಶ್ವರ ದೇವಸ್ಥಾನ, ದರ್ಗಾ ಹಾಗೂ ಬುದ್ಧ ವಿಹಾರದ ಕೆತ್ತನೆಗಳು ನೋಡುಗರನ್ನು ಮಂತ್ರಮುಗ್ಧಗೊಳಿಸುತ್ತಿವೆ.

**ಕಲ್ಲಂಗಡಿಯಲ್ಲಿ ಅರಳಿದ ರಾಷ್ಟ್ರನಾಯಕರು:** ಕೇವಲ ಹೂವುಗಳಷ್ಟೇ ಅಲ್ಲದೆ, ಹಣ್ಣು- ತರಕಾರಿಗಳ ಮೇಲಿನ ಕುಸುರಿ ಕೆಲಸ ಪ್ರದರ್ಶನದ ಮೆರುಗು ಹೆಚ್ಚಿಸಿದೆ. ಕಲ್ಲಂಗಡಿ ಹಣ್ಣಿನ ಮೇಲೆ ಮಹಾತ್ಮ ಗಾಂಧಿ, ಅಂಬೇಡ್ಕರ್, ಕಿತ್ತೂರು ಚೆನ್ನಮ್ಮ, ಮತ್ತು ಸಂಗೊಳ್ಳಿ ರಾಯಣ್ಣ ಸೇರಿದಂತೆ ಹಲವು ಮಹನೀಯರ ಚಿತ್ರಗಳನ್ನು ಅದ್ಭುತವಾಗಿ ಕೆತ್ತಲಾಗಿದೆ. ಇನ್ನು ತೋಟಗಾರಿಕೆ ಇಲಾಖೆಯ ಮಹಿಳಾ ಸಿಬ್ಬಂದಿ ಸಿದ್ಧಪಡಿಸಿದ 'ತರಕಾರಿ ರಂಗೋಲಿ' ಮತ್ತು ಸೆಲ್ಫಿ ಪಾಯಿಂಟ್‌ಗಳು ಪ್ರಾದೇಶಿಕ ಆಯುಕ್ತೆ ಜಹೀರಾ ನಸೀಮ್ ಹಾಗೂ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಅವರ ವಿಶೇಷ ಪ್ರಶಂಸೆಗೆ ಪಾತ್ರವಾದವು.

**ರೈತ ಮತ್ತು ಗ್ರಾಹಕರ ನೇರ ಸಂಪರ್ಕ:** ಜಿಲ್ಲೆಯ ವಿವಿಧ ತಾಲೂಕುಗಳ ರೈತರು ಬೆಳೆದ ಕ್ಯಾಲಿಫೋರ್ನಿಯಾ ಕ್ವೀನ್ ಬೆರ್ರಿ,ದ್ರಾಕ್ಷಿ, ಸಾವಯವ ಉತ್ಪನ್ನಗಳು ಇಲ್ಲಿ ಮಾರಾಟಕ್ಕಿವೆ. ದ್ರಾಕ್ಷಿ ಬೆಳೆಗಾರರಾದ ಜಯಪ್ಪ ಎಂ. ಕೊರಬು ಹಾಗೂ ಸಾವಯವ ಅರಿಶಿನ ಬೆಳೆಗಾರ ಲಕ್ಷ್ಮೀಕಾಂತ ಹಿಬಾರೆ ಅವರ ಮಳಿಗೆಗಳಲ್ಲಿ ಗ್ರಾಹಕರು ಮುಗಿಬಿದ್ದು ಖರೀದಿಸಿದರು.

ಕಲಬುರಗಿ ಫಲಪುಷ್ಪ ಮೇಳದಲ್ಲಿ ಹಲವಾರು ಹೂಗಳಲ್ಲಿ ಅರಳಿದ ಭಾರತ ಸಂವಿಧಾನ ಕಲಾಕೃತಿಯನ್ನು ಎಂಎಲ್‌ಸಿ ಜಗದೇವ್ ಗುತ್ತೇದಾರ್ ವೀಕ್ಷಿಸಿದರು. ಈ ವೇಳೆ ಡಿಸಿ ಫೌಜಿಯಾ ತರನ್ನುಮ್ ಸೇರಿ ಹಲವರಿದ್ದರು.

ಮೂರು ವರ್ಷಗಳ ಸುದೀರ್ಘ ಬಿಡುವಿನ ನಂತರ, ಈ ಬಾರಿ 'ಭಾರತದ ಸಂವಿಧಾನ' ವಿಷಯಾಧಾರಿತವಾಗಿ ಫಲಪುಷ್ಪ ಪ್ರದರ್ಶನ ಏರ್ಪಡಿಸಲಾಗಿದೆ. ಸ್ವಾತಂತ್ರ್ಯ ಹೋರಾಟಗಾರರು, ಜಿಲ್ಲೆಯ ಐತಿಹಾಸಿಕ ಪ್ರವಾಸಿ ತಾಣಗಳು ಕಲಾವಿದರ ಕೈಚಳಕದಲ್ಲಿ ಮೂಡಿಬಂದಿವೆ. ಇಂತಹ ಸೃಜನಶೀಲ ಪ್ರದರ್ಶನಗಳನ್ನು ಯುವ ಪೀಳಿಗೆ ಮತ್ತು ವಿದ್ಯಾರ್ಥಿಗಳು ತಪ್ಪದೇ ವೀಕ್ಷಿಸಬೇಕು.
- ಫೌಜಿಯಾ ತರನ್ನುಮ್, ಜಿಲ್ಲಾಧಿಕಾರಿ ಕಲಬುರಗಿ.

ಬೆಂಗಳೂರು, ಮೈಸೂರಿನಲ್ಲಿ ನಡೆಯುತ್ತಿದ್ದ ಇಂತಹ ಪ್ರದರ್ಶನಗಳು ಈಗ ಕಲಬುರಗಿಯಲ್ಲೂ ನಡೆಯುತ್ತಿರುವುದು ಸಂತಸದ ವಿಷಯ. ಇದು ರೈತರಿಗೆ ಹೊಸ ತಳಿಗಳ ಪರಿಚಯ ಮಾಡಿಕೊಡುವ ವೇದಿಕೆಯಾಗಿದೆ.
- ಜಗದೇವ್ ಗುತ್ತೇದಾರ್, ವಿಧಾನ ಪರಿಷತ್ ಸದಸ್ಯ

ನಗರದ ನಿವಾಸಿಗಳಿಗೆ ಮತ್ತು ವಿಶೇಷವಾಗಿ ಶಾಲಾ ಮಕ್ಕಳಿಗೆ ಇದೊಂದು ಉತ್ತಮ ಜ್ಞಾನಾರ್ಜನೆಯ ವೇದಿಕೆ. ಎರಡು ದಿನಗಳ ಕಾಲ ನಡೆಯುವ ಈ ಫಲಪುಷ್ಪ ಪ್ರದರ್ಶನಕ್ಕೆ ಪ್ರವೇಶ ಉಚಿತವಾಗಿದ್ದು, ಹಣ್ಣು ಮತ್ತು ತರಕಾರಿಗಳಲ್ಲಿ ಅರಳಿರುವ ಅದ್ಭುತ ಕಲಾಕೃತಿಗಳನ್ನು ಕಣ್ತುಂಬಿಕೊಳ್ಳಲು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಬೇಕು.
- ಜಹೀರಾ ನಸೀಮ್, ಪ್ರಾದೇಶಿಕ ಆಯುಕ್ತೆ, ಕಲಬುರಗಿ.

## ಚಿತ್ತವಿಹಾರ

# ಉರುಳಿಹೋದ ವರುಷಗಳ ಪಾಠ

● ಅರವಿಂದ ಜಿ. ಜೋಷಿ, ಮೈಸೂರು

ಮರಳಿಬಾರದ ಉರುಳಿಹೋದ
ವರುಷಗಳೇನೂ ಹಾಗೇ ಹೋಗಿಲ್ಲ
ಮರೆತ ನೆನಪುಗಳನು ಮತ್ತೆ ಮತ್ತೆ
ಮರುಕಳಿಸುವಂತೆ ಮಾಡಿ ಹೋದವಲ್ಲ...

ಅರಿತೋ-ಅರಿಯದೆಯೋ ನಾನು
ಎಸಗಿದ ಅಗಣಿತ ತಪ್ಪುಗಳನು
ಎತ್ತೆತ್ತಿ ತೋರಿಸಿ, ಅವುಗಳನು ಮತ್ತೆ ಮತ್ತೆ
ಮಾಡದಿರು ಎಂದು ಎಚ್ಚರಿಕೆ ನೀಡಿದವಲ್ಲ...

ಗಳಿಸಿದ ಅನುಭವದ ಹಿನ್ನೆಲೆಯಲಿ
ಈ ಜಗದಿ ಯಾರು ಹಿತವರು, ಯಾರು
ಅಹಿತರು ಎನ್ನುವುದ ಆಯ್ಕೆ ಮಾಡಿ
ಹೆಜ್ಜೆ ಇಡು ಎಂದು ಸೂಚನೆ ನೀಡಿದವಲ್ಲ...

ಹೊಗಳುವವರನು ಬಹುದೂರ ಇರಿಸಿ
ತಿದ್ದಿ ತೀಡುವವರನು ಜತೆಯಲ್ಲಿರಿಸಿ
ನನ್ನ ಮನವನು ಅರಿತು ಬಾಳುವವರ
ಸಂಗ ತೊರೆಯದಿರು ಎಂದು ಹೇಳಿದವಲ್ಲ...

ಇನ್ನಾದರೂ, ಸದಾ ನಾನು-ನನ್ನದೇ
ಎನುವುದ ಬಿಟ್ಟು, ಅನ್ಯರೊಡನೆ ಒಂದಾಗಿ
ಸುಖ-ದುಃಖ, ನೋವು-ನಲಿವುಗಳನು
ಹಂಚಿಕೊಂಡು ಬಾಳು ಎಂದು ಹೇಳಿದವಲ್ಲ...

ಹಿತನುಡಿಗಳನ್ನು ಬೋಧಿಸುತ
ಸರಿದಾರಿಗೆ ತಂದು ಮತ್ತೆ ಸದ್ದಿಲ್ಲದೇ
ಉರುಳಿಹೋದ ವರುಷಗಳಿಗೆ
ಎಷ್ಟು ಧನ್ಯವಾದ ಹೇಳಿದರೂ ಸಾಲದಲ್ಲ...

## ಹಾಸ್ಯ-ಲಾಸ್ಯ

# ಎಲಾ ಚೆಲ್ಟಾರಿ!

ಹುಟ್ಟಿದ ಮಗು ಜೋರಾಗಿ ಅಳುವುದು ವಾಡಿಕೆ. ಆದರೆ ಆಸ್ಪತ್ರೆಯಲ್ಲಿ ಆಗ ತಾನೇ ಜನಿಸಿದ್ದ ಶಿಶುವೊಂದು ಅಳಲೇ ಇಲ್ಲ. ಹೆರಿಗೆ ಮಾಡಿಸಿದ್ದ ವೈದ್ಯೆ ಮತ್ತು ದಾದಿಯರು ಶಿಶುವನ್ನೇ ನೋಡುತ್ತಿದ್ದರು.

ಕೆಲ ಕ್ಷಣಗಳಲ್ಲಿ ಆ ಶಿಶುವು ವೈದ್ಯೆಯ ಕಡೆಗೆ ನೋಡಿ, 'ಹಾಯ್ ಡಾಕ್ಟರ್' ಎಂದು ವಿಶ್ ಮಾಡಿತು. ಆಗಷ್ಟೇ ಹುಟ್ಟಿದ ಮಗು ಹೀಗೆ ಮಾತಾಡಿದ್ದನ್ನು ಕಂಡು ಪ್ರಸೂತಿ ತಜ್ಞೆಗೆ ಅಚ್ಚರಿಯುಂಟುಮಾಡಿತು. ಆ ಬೆರಗಿನಲ್ಲೇ ಅವರು, 'ಹಾಯ್ ಚಿನ್ನೀ? ಹೇಗಿದ್ದೀಯಾ?' ಎಂದು ಕೇಳಿದರು.

ಆಗ ಆ ಶಿಶುವು, 'ಡಾಕ್ಟ್ರೇ, ಸ್ವಲ್ಪ ನಿಮ್ಮ ಸ್ಮಾರ್ಟ್ ಫೋನ್ ಕೊಡ್ತೀರಾ?' ಎಂದು ಕೇಳಿಬಿಟ್ಟಿತು. ಮತ್ತಷ್ಟು ಅಚ್ಚರಿಗೊಂಡ ವೈದ್ಯೆ, 'ನಿಂಗ್ಯಾಕೋ ಪುಟ್ಟಾ ಅದೂ? ಈಗಷ್ಟೇ ಹುಟ್ಟಿದ್ದೀಯ, ಅಲ್ವಾ?' ಎಂದು ಕೇಳಿದರು.

ಈ ಮಾತಿಗೆ ಖಳನಟ ವಜ್ರಮುನಿಯವರಂತೆ ಗಹಗಹಿಸಿ ನಕ್ಕ ಆ ಶಿಶು, 'ಅಯ್ಯೋ, ಏನಿಲ್ಲ ಡಾಕ್ಟ್ರೇ... ಈ ಭೂಮಿಯಲ್ಲಿ ನಾನು ಸೇಫಾಗಿ ಲ್ಯಾಂಡ್ ಆಗಿದ್ದೀನಿ ಅಂತ ವಾಟ್ಸಾಪ್‌ನಲ್ಲಿ ಅರ್ಜೆಂಟಾಗಿ ಸ್ಟೇಟಸ್ ಅಪ್‌ಡೇಟ್ ಮಾಡಬೇಕಿದೆ. ಅಷ್ಟೇ..' ಎಂದಿತು.

ಈ ಮಾತು ಕೇಳುತ್ತಿದ್ದಂತೆ, ಹೆರಿಗೆ ಮಾಡಿಸಿದ ವೈದ್ಯೆ ಪ್ರಜ್ಞಾಶೂನ್ಯರಾಗಿ ಬಿದ್ದರು...!!

# ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

# ಹೆಣ್ಣಿನ ಆರೋಗ್ಯಕ್ಕೆ ಮುಟ್ಟಿನ ರಜೆ

● ಭಾರತಿ ಎ., ಕೊಪ್ಪ

ಪ್ರಾಥಮಿಕ ಶಾಲಾ ಹಂತದಲ್ಲಿ ಓದುತ್ತಿರುವ ಬಾಲಕಿಯೊಬ್ಬಳು ಇದ್ದಕ್ಕಿದ್ದಂತೆ ಶಾಲೆಗೆ ಗೈರುಹಾಜರಾಗಿದ್ದಳು. ಶಿಕ್ಷಕರು ಪೋಷಕರಿಗೆ ಕರೆ ಮಾಡಿ ವಿಚಾರಿಸಿದಾಗ, ಮೊದಲ ಬಾರಿ ಆಕೆ ಋತುಮತಿಯಾಗಿದ್ದಾಳೆಂದು ತಿಳಿಸಿದರು. ಮರುದಿನ ಶಾಲೆಗೆ ಬಂದಾಗ ಆಕೆಯನ್ನು ಶಿಕ್ಷಕಿಯು ಆರೋಗ್ಯದ ಬಗ್ಗೆ ವಿಚಾರಿಸಿದಾಗ, 'ದೇಹಕ್ಕೆ ಬಹಳ ಆಯಾಸದ ಅನುಭವವಾಗುತ್ತಿದ್ದುದರಿಂದ ಇಡೀ ದಿನ ಮಲಗಿದ್ದೆ' ಎಂಬ ಉತ್ತರ ಬಂತು. ಇದೊಂದು ಉದಾಹರಣೆ ಮಾತ್ರ. ಇತ್ತೀಚಿನ ದಿನಗಳಲ್ಲಿ ಅನೇಕ ಬಾಲಕಿಯರು ಕಿರಿಯ ಪ್ರಾಥಮಿಕ ಶಾಲಾ ಹಂತದಲ್ಲಿಯೇ ಋತುಮತಿಯಾಗುತ್ತಿದ್ದಾರೆ. ಮುಟ್ಟಿನ ದಿನಗಳ ನೋವು, ಆಯಾಸ ಒಬ್ಬರಿಂದ ಇನ್ನೊಬ್ಬರಿಗೆ ಭಿನ್ನವಾಗಿರುತ್ತದೆ. ಹದಿಹರೆಯದ ಬಾಲಕಿಯರು, ಮಹಿಳೆಯರು ಮತ್ತು ಋತುಚಕ್ರ ನಿಲ್ಲುವ ಹಂತದಲ್ಲಿರುವ ಮಹಿಳೆಯರು ಇವರೆಲ್ಲರ ಅನುಭವ ಬೇರೆ ಬೇರೆ ಆಗಿರುತ್ತದೆ.

ಸುಮಾರು 2-3 ದಶಕಗಳ ಹಿಂದೆ ಭಾರತೀಯ ಸಾಂಪ್ರದಾಯಿಕ ಕುಟುಂಬ ವ್ಯವಸ್ಥೆಯಲ್ಲಿ 'ಮುಟ್ಟು' ಎನ್ನುವುದು ಅತ್ಯಂತ ದೂರ ಇಡುವ ವಿಚಾರವಾಗಿತ್ತು. ಮುಟ್ಟಾದ ಮಹಿಳೆಯರು ಮನೆಯಲ್ಲಿನ ನಿರ್ದಿಷ್ಟ ಸ್ಥಳದಲ್ಲಿ ಮಾತ್ರ ಮೂರು ದಿನಗಳು ಕಾಲ ಕಳೆಯಬೇಕಿತ್ತು. ಮನೆಯ ಸದಸ್ಯರನ್ನು ಪರಸ್ಪರ ಮುಟ್ಟಿಸಿಕೊಳ್ಳದ, ಅಡುಗೆ, ಪೂಜೆ ಇನ್ನಿತರ ಕೆಲಸಗಳಲ್ಲಿ ಭಾಗಿಯಾಗದ ಸಂಪ್ರದಾಯ ಅನೇಕ ಕುಟುಂಬಗಳಲ್ಲಿ ಇತ್ತು. ಇದು ಗೃಹಿಣಿಯರಿಗೆ ದೈನಂದಿನ ಕೆಲಸದಿಂದ ಒಂದಿಷ್ಟು ವಿರಾಮ ನೀಡುತ್ತಿತ್ತು ಎಂತಾದರೂ, ತನ್ನ ಮುಟ್ಟಿನ ಪ್ರಕ್ರಿಯೆಯನ್ನು ಕುಟುಂಬದ ಸದಸ್ಯರು ಮತ್ತು ಮನೆಗೆ ಆಗಮಿಸುವ ಅತಿಥಿಗಳ ಜತೆ ಹೇಳಿಕೊಳ್ಳಲಾಗದ ಮುಜುಗರಕ್ಕೆ ಒಳಗಾಗುವ ಪರಿಸ್ಥಿತಿ ಇತ್ತು. ಸಾಮಾನ್ಯವಾಗಿ ಅವಿಭಕ್ತ ಕುಟುಂಬಗಳಲ್ಲಿ ಮಹಿಳೆಯರೇ ಮುಟ್ಟನ್ನು ಗುಟ್ಟಾಗಿ ನಿಭಾಯಿಸುತ್ತಿದ್ದರು. ಮನೆಯ ಗಂಡಸರ ಮುಂದೆಯೂ ಹೇಳಿಕೊಳ್ಳಲು ಮುಜುಗರ ಪಡುವ ಕಾಲ ಅದಾಗಿತ್ತು. ಪ್ರಸ್ತುತ ಕಾಲ ಬದಲಾಗಿದೆ. ಮುಟ್ಟು ಈಗ ಗುಟ್ಟಿನ ವಿಷಯವಾಗಿ ಉಳಿದಿಲ್ಲ. ಇಂದು ಮನೆಯ ಗಂಡಸರೇ ಮನೆಯ ಮಹಿಳೆಯರಿಗೆ ಸ್ಯಾನಿಟರಿ ಪ್ಯಾಡ್, menstrual cups ತಂದುಕೊಡುವ ಮಟ್ಟಿಗೆ ಮುಟ್ಟಿನ ಅರಿವು ವ್ಯಾಪಿಸಿದೆ. ಆದರೆ ಮುಟ್ಟಿನ ದಿನಗಳಲ್ಲಿ ಕೆಲವು ಮಹಿಳೆಯರು ಅನುಭವಿಸುತ್ತಿರುವ ನೋವು, ಯಾತನೆಗಳು ಹೇಳತೀರದು. ಇದನ್ನರಿತು ಕೆಲವು ರಾಜ್ಯಗಳು ಉದ್ಯೋಗಸ್ಥ ಮಹಿಳೆಯರಿಗೆ ಮುಟ್ಟಿನ ರಜೆಯನ್ನು ನೀಡಲು ಮುಂದಾಗಿವೆ. ಕರ್ನಾಟಕದಲ್ಲಿ ಇದೀಗ ಉದ್ಯೋಗಸ್ಥ ಮಹಿಳೆಯರಿಗೆ ವರ್ಷದಲ್ಲಿ 12 ದಿನ ಮುಟ್ಟಿನ ರಜೆ ನೀಡಿರುವುದನ್ನು ಬಹಳಷ್ಟು ಮಂದಿ ಸ್ವಾಗತಿಸಿದ್ದಾರೆ.

ಸರಕಾರಗಳು ಯಾವುದೇ ರೀತಿಯ ನೀತಿ-ನಿಯಮಗಳನ್ನು ಜಾರಿಗೆ ತಂದರೂ ಅದನ್ನು ಸದುಪಯೋಗಪಡಿಸಿಕೊಳ್ಳುವ ಜವಾಬ್ದಾರಿ ನಾಗರಿಕರದಾಗಿರುತ್ತದೆ. ಮುಟ್ಟಿನ ರಜೆಯನ್ನು ಕೂಡ, ಮಹಿಳಾ ಸಿಬ್ಬಂದಿಗಳೇ ಅಧಿಕ ಸಂಖ್ಯೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಬಹಳಷ್ಟು ಸಂಸ್ಥೆಗಳಲ್ಲಿ ಸ್ವಯಂ ಹೊಂದಾಣಿಕೆಯಿಂದ ಸಿಬ್ಬಂದಿಗಳು ತಮ್ಮ ಸಂಸ್ಥೆಯ ಕೆಲಸ ಕಾರ್ಯಗಳಿಗೆ ತೊಂದರೆಯಾಗದಂತೆ, ತಮ್ಮ ಆರೋಗ್ಯ ಸ್ಥಿತಿ ಗಮನದಲ್ಲಿಟ್ಟುಕೊಂಡು ಬಳಕೆ ಮಾಡಿಕೊಳ್ಳಬೇಕಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಸರಕಾರವು ತಜ್ಞರ ಬಳಿ ಚರ್ಚಿಸಿ ಸೂಕ್ತ ನಿಯಮಾವಳಿ ರೂಪಿಸುವುದಾಗಿ ತಿಳಿಸಿದೆ. ಇತಿಹಾಸದ ಪುಟಗಳನ್ನು ತಿರುವಿದರೆ ಮೊದಲನೇ ಮಹಾಯುದ್ಧದ ಸಂದರ್ಭದಲ್ಲೇ ರಷ್ಯಾದಲ್ಲಿ ಕೂಲಿ ಕಾರ್ಮಿಕ ಮಹಿಳೆಯರಿಗೆ ಮುಟ್ಟಿನ ದಿನ ಕೆಲಸಕ್ಕೆ ವಿನಾಯ್ತಿ ನೀಡಲಾಗುತ್ತಿತ್ತು. ಅಂತೆಯೇ 2ನೇ ಮಹಾಯುದ್ಧದ ಸಂದರ್ಭದಲ್ಲಿ ಜಪಾನ್ ಕೂಡಾ ಇದನ್ನೇ ಅನುಸರಿಸಿತ್ತು ಎಂಬುದನ್ನು ಉಲ್ಲೇಖಗಳು ಹೇಳುತ್ತವೆ.

ಚಂಡೀಗಢದ ಪಂಜಾಬ್ ವಿಶ್ವವಿದ್ಯಾಲಯವು ವಿದ್ಯಾರ್ಥಿನಿಯರಿಗೆ ಋತುಚಕ್ರದ ಸಮಯದಲ್ಲಿ ಒಂದು ದಿನದ ರಜೆ ನೀಡಲು ಹೊಸ ನೀತಿಯನ್ನು ಜಾರಿಗೆ ತಂದಿದೆ. ಮುಟ್ಟಿನ ರಜೆಯ ಕಲ್ಪನೆಯು ಕೇರಳ ರಾಜ್ಯಕ್ಕೆ ಹೊಸದೇನಲ್ಲ. 1912ರಲ್ಲಿ, ಕೊಚ್ಚಿನ್ (ಇಂದಿನ ಎರ್ನಾಕುಲಂ ಜಿಲ್ಲೆ) ನಲ್ಲಿರುವ ತ್ರಿಪುನಿತುರದಲ್ಲಿರುವ ಸರಕಾರಿ ಬಾಲಕಿಯರ ಶಾಲೆಯು ವಿದ್ಯಾರ್ಥಿನಿಯರು ತಮ್ಮ ವಾರ್ಷಿಕ ಪರೀಕ್ಷೆಯ ಸಮಯದಲ್ಲಿ 'ಋತು ರಜೆ' ತೆಗೆದುಕೊಳ್ಳಲು ಮತ್ತು ನಂತರ ಅದನ್ನು ಬರೆಯಲು ಅವಕಾಶ ನೀಡಿತ್ತು ಎಂದು ಇತಿಹಾಸಕಾರ ಪಿ. ಭಾಸ್ಕರನುನ್ನಿ ಬರೆದ Kerala in the 19th Century ಪುಸ್ತಕದಲ್ಲಿ ಉಲ್ಲೇಖಿಸಲಾಗಿದೆ ಎಂದು ತಿಳಿದುಬರುತ್ತದೆ. 2024ರಲ್ಲಿ ಕೇರಳ ಸರಕಾರವು ಕೊಚ್ಚಿನ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯವು ತನ್ನ ವಿದ್ಯಾರ್ಥಿಗಳಿಗೆ ಮುಟ್ಟಿನ ರಜೆ ನೀಡುವ ಕ್ರಮವನ್ನು ಅನುಸರಿಸಿ, ಇಲಾಖೆಯ ವ್ಯಾಪ್ತಿಗೆ ಬರುವ ಎಲ್ಲಾ ರಾಜ್ಯ ವಿಶ್ವವಿದ್ಯಾಲಯಗಳಲ್ಲಿ ಒಂದೇ ನೀತಿಯನ್ನು ಜಾರಿಗೆ ತರಲು ನಿರ್ಧರಿಸಿತು. ಮಹಿಳಾ ಉದ್ಯೋಗಿಗಳಿಗೂ ಮುಟ್ಟಿನ ರಜೆಯನ್ನು ಘೋಷಿಸಿತು. 2024ರಲ್ಲಿ ಒಡಿಶಾದಲ್ಲಿ ಎಲ್ಲಾ ವೃತ್ತಿಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಒಂದು ದಿನದ ಮುಟ್ಟಿನ ರಜೆ ನೀತಿಯನ್ನು ಪರಿಚಯಿಸಿದ್ದಾರೆ. ಬಿಹಾರದಲ್ಲಿ ಮಹಿಳೆಯರಿಗೆ ತಿಂಗಳಿಗೆ ಎರಡು ದಿನಗಳ ವೇತನ ಸಹಿತ ಮುಟ್ಟಿನ ರಜೆ ಸಿಗುತ್ತದೆ.

ಕರ್ನಾಟಕ ಸರಕಾರವು ಮಹಿಳಾ ಉದ್ಯೋಗಿಗಳಿಗೆ ಪ್ರತಿ ತಿಂಗಳು ಒಂದು ದಿನದ ವೇತನ ಸಹಿತ ಮುಟ್ಟಿನ ರಜೆ ಘೋಷಿಸಿದೆ. ಈ ನಿರ್ಧಾರವು ನೋವಿನಿಂದ ಬಳಲುವ ಮಹಿಳೆಯರಿಗೆ ವರದಾನವಾಗಿದೆ. ಆದರೆ ಈ ಮುಟ್ಟಿನ ಬಗ್ಗೆ ಇಂದಿಗೂ ಬಹಿರಂಗವಾಗಿ ಹೇಳಿಕೊಳ್ಳಲು ನಾಚಿಕೊಳ್ಳುವ ಮಹಿಳೆಯರು ಇದ್ದಾರೆ. ಮುಟ್ಟಿನ ಸಂದರ್ಭದಲ್ಲಿ ಅಸಹನೀಯ ಹೊಟ್ಟೆ ನೋವು ತಾಳದೇ ಒದ್ದಾಡುವ, ಪ್ರತಿ ತಿಂಗಳೂ ಹೊಟ್ಟೆ ನೋವಿಗೆ ಮಾತ್ರೆಗಳನ್ನು ಸೇವಿಸಿ ಹಲವಾರು ಸಮಸ್ಯೆಗಳನ್ನು ತಂದುಕೊಳ್ಳುತ್ತಿರುವ ಅನೇಕ ಮಹಿಳೆಯರಿದ್ದಾರೆ. ನಾಚಿಕೆ ಸ್ವಭಾವದವರಿಗೆ ರಜೆಯನ್ನು ತಮ್ಮ ಮೇಲಧಿಕಾರಿಗಳ ಬಳಿ ಕೇಳುವುದು ಸ್ವಲ್ಪ ಮುಜುಗರ ಎನಿಸಬಹುದು. ಬಹಳಷ್ಟು ಮಹಿಳೆಯರಿಗೆ ಒಂದು ಹಂತ ದಾಟಿದಾಗ ಮುಟ್ಟಿನ ಸಮಯದಲ್ಲಿ ಆಗುವ ಮೈಗ್ರೇನ್, ತಡೆದುಕೊಳ್ಳಲು ಅಸಾಧ್ಯ ಎನ್ನಿಸುವ ತಲೆನೋವು, ಆಯಾಸ ಇವುಗಳಿಗೆ ಅನಿವಾರ್ಯವಾಗಿ ರಜೆ ಬೇಕೇ ಬೇಕಾಗುತ್ತದೆ. ಎಲ್ಲಾ ಹೆಣ್ಣುಮಕ್ಕಳು/ಮಹಿಳೆಯರಿಗೆ ಮಾಸಿಕ ಋತುಸ್ರಾವದ ಸಮಯದಲ್ಲಿ ನೋವು ಆಗಲೇಬೇಕೆಂದೇನೂ ಇಲ್ಲ. ಕೆಲವರಿಗೆ ಏನೂ ಸಮಸ್ಯೆ ಆಗುವುದೇ ಇಲ್ಲ. ಆದರೆ ಅಗತ್ಯ ಇಲ್ಲದವರು ಕೂಡ ರಜೆ ಪಡೆದು ಕೊಳ್ಳುವ ಸಾಧ್ಯತೆ ಇದೆ ಎಂಬುದು ಕೆಲವರ ವಿರೋಧವಾಗಿದೆ.

ಮುಟ್ಟು, ತಾಯ್ತನ ಅನ್ನುವುದು ಹೆಣ್ಣಿನ ಜೈವಿಕ ಹಕ್ಕು. ಪ್ರಕೃತಿದತ್ತವಾಗಿ ಬಂದಿರುವ ಈ ಹಕ್ಕಿಗೆ ಧಕ್ಕೆ ಬಾರದಂತೆ ನಿಯಮಗಳು ರೂಪುಗೊಳ್ಳಬೇಕಿದೆ. ಆರೋಗ್ಯದ ದೃಷ್ಟಿಯಿಂದ ಅಗತ್ಯವಿದ್ದವರು ಮುಟ್ಟಿನ ರಜೆಯನ್ನು ಯಾವುದೇ ಮುಜುಗರ ವಿಲ್ಲದೇ ತೆಗೆದುಕೊಳ್ಳುವಂಥ ವಾತಾವರಣ ನಿರ್ಮಾಣವಾಗಬೇಕಿದೆ. ಅದಲ್ಲದೆ ಬೇರೆ ಕೆಲವು ರಾಜ್ಯಗಳಲ್ಲಿ ಕಾಲೇಜು ವಿದ್ಯಾರ್ಥಿನಿಯರಿಗೆ ಋತುಸ್ರಾವದ ರಜೆ ನೀಡಿ, ವಾರ್ಷಿಕ ಹಾಜರಾತಿಯಲ್ಲಿ ಸಮತೋಲನ ಕಾಯ್ದುಕೊಳ್ಳುವ ನೀತಿಯನ್ನು ನಿರೂಪಿಸಿದಂತೆ ಕರ್ನಾಟಕದಲ್ಲೂ ವಿದ್ಯಾರ್ಥಿನಿಯರಿಗೆ ಮುಂದಿನ ದಿನಗಳಲ್ಲಿ ಈ ರಜೆಗೆ ಅವಕಾಶ ಸಿಗುವುದೇ ಕಾದುನೋಡಬೇಕಿದೆ.

# ದುಃಖದ ಚಕ್ರದಿಂದ ಮುಕ್ತಿ

● ಸತ್ ಶ್ರೀ ಸುಬ್ರಹ್ಮಣ್ಯ ಶಿವಬಾಲನ್

ನಾವು ಎಷ್ಟೇ ಪ್ರಯತ್ನಿಸಿದರೂ ದುಃಖ ಏಕೆ ನಮ್ಮ ಜೀವನದಲ್ಲಿ ಹಿಂಬಾಲಿಸುತ್ತದೆ ಎಂಬುದನ್ನು ಎಂದಾದರೂ ಯೋಚಿಸಿದ್ದೇವಾ? ಇದರ ಉತ್ತರವು ಕರ್ಮಫಲವನ್ನು ಅರ್ಥಮಾಡಿಕೊಳ್ಳುವುದರಲ್ಲಿದೆ. ಕರ್ಮಫಲ ಅಂದರೆ ನಮ್ಮ ಕ್ರಿಯೆಗಳ ಫಲಗಳು. ಅವು

ನಮ್ಮ ಮನಸ್ಸಿನಲ್ಲಿ ಮುದ್ರಣಗಳಾಗಿ ಉಳಿಯುತ್ತವೆ.

ಕರ್ಮಫಲ ಅಂದರೆ ಏನು? ನಾವು ಯಾವುದೇ ಕರ್ಮ ಮಾಡಿದಾಗ ಮನಸ್ಸು ಅದರ ಫಲದ ಬಗ್ಗೆ ಚಿಂತೆ ಮಾಡುತ್ತಲೇ ಇರುತ್ತದೆ. ಯಶಸ್ಸಿನ ಆಸೆ ಇಲ್ಲವೇ ವಿಫಲತೆಯ ಭಯವನ್ನು ಅದು ಉಂಟುಮಾಡುತ್ತದೆ. ಹಿಂದೆ ಮಾಡಿದ ಕೆಲಸಗಳಿಗೆ ಮನಸ್ಸು ದುಃಖಿಸುತ್ತದೆ. ಈ ರೀತಿಯಲ್ಲಿ ಮನಸ್ಸನ್ನು ಯಾವಾಗಲೂ ಭಾರವಾಗಿ ಇರಿಸುವ ಆಲೋಚನೆಗಳೇ ಕರ್ಮಫಲಗಳು.

ಈ ಕರ್ಮಫಲವು ಮೂರು ವಿಧವಾಗಿರುತ್ತವೆ. ಇದು ಯಾವಾಗ ಉಂಟಾಯಿತು ಎಂಬುದರ ಮೇಲೆ ಅವಲಂಬಿತವಾಗಿದೆ.

- **ಸಂಚಿತ: ಹಿಂದಿನ ಜನ್ಮಗಳಲ್ಲಿ ಸೃಷ್ಟಿಯಾದ ಕರ್ಮಫಲ. ಇದೇ ಈ ಜನ್ಮಕ್ಕೆ ಮುಖ್ಯ ಕಾರಣ.**
- **ಪ್ರಾರಬ್ಧ: ಈ ಜನ್ಮದಲ್ಲಿನ ಅತಿಯಾದ ಆಲೋಚನೆ ಮತ್ತು ಚಿಂತೆಯಿಂದ ಸೃಷ್ಟಿಯಾಗುವ ಕರ್ಮಫಲಗಳು.**
- **ಆಗಾಮಿ: ಈ ಜನ್ಮದಲ್ಲಿ ಅನುಭವಿಸಿದ ನಂತರ ಉಳಿದುಕೊಳ್ಳುವ ಕರ್ಮಫಲಗಳು. ಇದು ಮುಂದಿನ ಜನ್ಮಕ್ಕೆ ಸೇರುತ್ತದೆ. ಇದು ಸಂಚಿತ ಮತ್ತು ಪ್ರಾರಬ್ಧ ಎರಡರ ಮಿಶ್ರಣವಾಗಿರುತ್ತದೆ.**

ನಮ್ಮ ಈ ಜೀವನದ ಗುರಿ- ಸಂಚಿತ ಕರ್ಮಫಲವನ್ನು ಸ್ವೀಕರಿಸುವುದಲ್ಲದೆ ಸಹನೆಯಿಂದ ಅನುಭವಿಸಿ, ಸಂಪೂರ್ಣವಾಗಿ ಖಾಲಿ ಮಾಡಬೇಕಾಗುತ್ತದೆ. ಈ ಜೀವನದಲ್ಲಿ ಮಾಡುವ ಕೆಲಸಗಳಿಂದ ಮಾನಸಿಕವಾಗಿ ದೂರವಿದ್ದು ಪ್ರಾರಬ್ಧ ಕರ್ಮಫಲ ಸೃಷ್ಟಿಯಾಗದಂತೆ ನೋಡಿಕೊಳ್ಳಬೇಕು.

ಚಿವಾಲಿಟಿ ಪದ್ಧತಿಯು ಮೌನದ ಮೂಲಕ ಕರ್ಮಫಲವನ್ನು ಕಡಿಮೆ ಮಾಡುವುದರ ಮೇಲೆ ಗಮನ ನೀಡುತ್ತದೆ. ಕರ್ಮಫಲ ಕರಗಿದಂತೆ ಮಾನಸಿಕ ಕಳವಳಗಳು ಮಾಯವಾಗಿ ಗಾಢವಾದ, ಶಾಶ್ವತ ಶಾಂತಿ ಬರುತ್ತದೆ. ಸಂತೋಷ ಮತ್ತು ದುಃಖ ಎರಡಕ್ಕೂ ಕರ್ಮಫಲವೇ ಮೂಲಕಾರಣ. ಕರ್ಮಫಲದಿಂದ ಮುಕ್ತಿ ಸಿಕ್ಕಾಗ ಹೊಗಳಿಕೆ, ನಿಂದನೆ, ಲಾಭ, ನಷ್ಟ ಏನು ಬಂದರೂ ವ್ಯಕ್ತಿ ವಿಚಲಿತನಾಗುವುದಿಲ್ಲ. ಕರ್ಮಫಲದ ಸಂಗ್ರಹವೇ ನಮ್ಮ ಈ ಜನ್ಮಕ್ಕೆ ಮುಖ್ಯ ಕಾರಣ. ಮುಕ್ತಿ ಪಡೆಯಲು ಕರ್ಮಫಲದಿಂದ ಸಂಪೂರ್ಣವಾಗಿ ಬಿಡುಗಡೆಯಾಗಬೇಕು.

- **ಕರ್ಮಫಲ ಹೇಗೆ ಸೃಷ್ಟಿಯಾಗುತ್ತದೆ?**

ನಮಗೆ ಇಷ್ಟವಾಗದ ಕೆಲಸಗಳನ್ನು ಮಾಡುವಾಗ ಅಥವಾ ಬಲವಂತದಿಂದ ಮಾಡುವಾಗ ಮುಖ್ಯವಾಗಿ ಕರ್ಮಫಲ ಉಂಟಾಗುತ್ತದೆ. ಅಲ್ಲದೆ ಅಪೂರ್ಣ ಕೆಲಸಗಳಿಗೆ ಪಶ್ಚಾತ್ತಾಪ ಪಟ್ಟು ಯಾವಾಗಲೂ ಅದರ ಬಗ್ಗೆ ಯೋಚಿಸಿಕೊಂಡಿರುವುದರಿಂದಲೂ ಕರ್ಮಫಲ ಸೃಷ್ಟಿಯಾಗುತ್ತದೆ.

ಇದಕ್ಕಿರುವ ಪರಿಹಾರ ಬಹಳ ಸರಳ. ಏನಾದರೂ ಮಾಡಲು ಇಚ್ಛಿಸಿದರೆ ಪೂರ್ಣ ಗಮನದಿಂದ ಮಾಡಿ. ಮಾಡಲಾಗದಿದ್ದರೆ ಚಿಂತೆ ಮಾಡದೆ ಬಿಡಿ. ಅದೇ ರೀತಿ ಏನಾದರೂ ಮಾಡಲು ಇಷ್ಟವಿಲ್ಲದಿದ್ದರೆ ಯೋಚನೆ ಮಾಡದೆ ಸರಳವಾಗಿ ಬಿಟ್ಟುಬಿಡಿ. ಇದು ಜವಾಬ್ದಾರಿ ಇಲ್ಲದೆ ಇರುವುದಲ್ಲ, ಒತ್ತಡವಿಲ್ಲದೆ ಸ್ಪಷ್ಟತೆಯಿಂದ ವರ್ತಿಸುವುದು ಎಂಬರ್ಥ.

ಕರ್ಮಫಲ ಕಡಿಮೆಯಾದಂತೆ ನಮ್ಮ ದೃಷ್ಟಿಕೋನ ಸಕಾರಾತ್ಮಕವಾಗಿ ಬದಲಾಗತೊಡಗುತ್ತದೆ. ಪರಿಸ್ಥಿತಿಗಳನ್ನು ವಿಭಿನ್ನವಾಗಿ ನೋಡಲು ಪ್ರಾರಂಭಿಸುತ್ತೇವೆ. ಹೆಚ್ಚು ವಿವೇಕದಿಂದ ಮತ್ತು ಕಡಿಮೆ ಪ್ರತಿಕ್ರಿಯೆಯಿಂದ ಉತ್ತರಿಸುತ್ತೇವೆ. ನಮ್ಮಲ್ಲಿ ಉಂಟಾಗುವ ಸಕಾರಾತ್ಮಕ ಚಿಂತನೆಯೇ ನಮಗೆ ಕರ್ಮಫಲ ಕಡಿಮೆಯಾಗುತ್ತಿರುವುದನ್ನು ಖಚಿತಪಡಿಸುತ್ತದೆ.

ಕರ್ಮಫಲ ಸಂಪೂರ್ಣವಾಗಿ ನಾಶವಾದಾಗ ನೋವಿನ ಘಟನೆಗಳ ನೆನಪುಗಳು ಸಹಜವಾಗಿ ಮಾಸುತ್ತಾ ಹೋಗುತ್ತವೆ. ಮರಣದ ಸಮಯದಲ್ಲಿ ಎಲ್ಲಾ ಕರ್ಮಫಲಗಳು ಇಲ್ಲವಾದರೆ ಮುಕ್ತಿ ಲಭಿಸುತ್ತದೆ. ಅದಕ್ಕಾಗಿ ಚಿವಾಲಿಟಿ ಪದ್ಧತಿಯು ಜೀವಂತವಾಗಿಯೇ ಈ ಕರ್ಮಫಲಗಳನ್ನು ಖಾಲಿ ಮಾಡುವುದರ ಮೇಲೆ ಹೆಚ್ಚು ಗಮನ ಕೊಡುತ್ತದೆ. ಜೀವನದಲ್ಲಿ ಕಷ್ಟಗಳು ಯಾವಾಗಲೂ ಇರುತ್ತವೆ. ಕೆಲಸ ಸರಿಯಾಗಿ ಆಗದಿದ್ದಾಗ ಅಥವಾ ಪರಿಸ್ಥಿತಿಗಳು ನಮ್ಮ ನಿರೀಕ್ಷೆಗೆ ತಕ್ಕಂತೆ ಇಲ್ಲದಿದ್ದಾಗ ಸಮಸ್ಯೆಗಳು ಉದ್ಭವಿಸುತ್ತವೆ. ಕಷ್ಟಗಳು ಬರುವುದು ಖಚಿತ, ಆದರೆ ದುಃಖಪಡುವುದು ನಮ್ಮ ಆಯ್ಕೆ. ಕಷ್ಟಗಳು ಬಾಹ್ಯ ಸಂದರ್ಭಗಳಿಂದ ಬರುತ್ತವೆ, ಆದರೆ ದುಃಖವು ನಮ್ಮ ಮನಸ್ಸಿನ ಪ್ರತಿಕ್ರಿಯೆಯಿಂದ ಬರುತ್ತದೆ.

ಮುಖ್ಯ ವಿಷಯ ಏನೆಂದರೆ, ಕಷ್ಟಗಳು ಬಂದಾಗ ಅವುಗಳ ಬಗ್ಗೆ ಅತಿಯಾಗಿ ಯೋಚಿಸಬಾರದು. ಮಾನಸಿಕವಾಗಿ ಹೆಚ್ಚು ಗಮನ ನೀಡದಿದ್ದರೆ ಕರ್ಮಫಲ ಸೃಷ್ಟಿಯಾಗುವುದಿಲ್ಲ. ಬೆಂಕಿಗೆ ಇಂಧನ ಇಲ್ಲದಿದ್ದರೆ ಅದು ಸಹಜವಾಗಿ ಆರಿಹೋಗುತ್ತದೆ. ನಿಜವಾದ ಕಷ್ಟದ ಸಮಯದಲ್ಲಿ ಬಾಹ್ಯ ಕಾರಣಗಳನ್ನು ಅಥವಾ ಜನರನ್ನು ದೂಷಿಸುವುದನ್ನು ತಪ್ಪಿಸುವುದು ಒಳ್ಳೆಯದು. ಈ ಸಂಯಮವು ಹೊಸ ಕರ್ಮಫಲ ಸೇರಿಸುವುದಕ್ಕಿಂತ ಅಸ್ತಿತ್ವದಲ್ಲಿರುವ ಕರ್ಮಫಲವನ್ನು ಕಡಿಮೆಮಾಡಲು ಸಹಾಯ ಮಾಡುತ್ತದೆ. ಏಕೆ ಇಂಥದ್ದು ಆಯಿತು ಎಂಬ ಅಂತ್ಯವಿಲ್ಲದ ವಿಶ್ಲೇಷಣೆಯಲ್ಲಿ ಮುಳುಗುವುದಕ್ಕಿಂತ ಸಹನೆಯನ್ನು ಅಭ್ಯಾಸ ಮಾಡಿ. ಆಕಾಶದಲ್ಲಿ ಮೋಡಗಳು ಹಾದುಹೋಗುವಂತೆ ಕಷ್ಟಗಳು ನಿಮ್ಮ ಜೀವನದಲ್ಲಿ ಹಾದುಹೋಗಲಿ. ಅವನ್ನು ಗುರುತಿಸಿ, ಆದರೆ ಅವು ನಿಮ್ಮ ಮನಸ್ಸಿನಲ್ಲಿ ಮುದ್ರಣವಾಗದಿರಲಿ.

'ಚಿವಂ ಊರ್ಜ' ನಿಮಗೆ ಲಭ್ಯವಾದಾಗ ದುಃಖ ಕ್ರಮೇಣ ಮಾಯವಾಗುತ್ತದೆ. 'ಶಿವ ಶಿವ ಎಂದರೆ ದುಃಖವಿಲ್ಲ' ಎಂಬ ಮಾತಿನಂತೆ ಚಿವಂನೊಂದಿಗೆ ಸಂಪರ್ಕವಾದಾಗ ಆ ಸ್ಥಿತಿಯಲ್ಲಿ ದುಃಖದ ಅಸ್ತಿತ್ವ ಇರಲು ಸಾಧ್ಯವಿಲ್ಲ.

(ಲೇಖಕರು ಆಧ್ಯಾತ್ಮಿಕ ಗುರುಗಳು)

# ಸಂಕಷ್ಟದ ಸಂದುಗಳಲ್ಲೂ ಸಾರ್ಥಕ ಸಾಧನೆ..!

● ಹೊಸ್ಮನೆ ಮುತ್ತು, ಬೆಂಗಳೂರು

ಜೀವನವು ಹೂವಿನ ಹಾಸಿಗೆಯಲ್ಲ, ಅದು ಕಲ್ಲು-ಮುಳ್ಳುಗಳ ಹಾದಿ ಎಂಬ ಮಾತನ್ನು ನಾವು ಕೇಳುತ್ತಲೇ ಇರುತ್ತೇವೆ. ಆದರೆ, ಆ ಕಲ್ಲು-ಮುಳ್ಳುಗಳ ನಡುವೆಯೇ ಹಾದಿ ಮಾಡಿಕೊಂಡು ಹೂವನ್ನು ಅರಳಿಸುವುದಿದೆಯಲ್ಲ, ಅದು ನಿಜವಾದ 'ಜೀವನ ಪ್ರೀತಿ'.

ಒಮ್ಮೆ ಈ ಚಿತ್ರವನ್ನು ಗಮನಿಸಿ. ಸಾಮಾನ್ಯವಾಗಿ ಒಂದು ಗಿಡ ಬೆಳೆಯಲು ವಿಶಾಲವಾದ ಜಾಗ, ಫಲವತ್ತಾದ ಮಣ್ಣು ಮತ್ತು ಸರಿಯಾದ ಪೋಷಣೆ ಬೇಕೆಂಬುದು ಸಾಮಾನ್ಯ ನಂಬಿಕೆ. ಆದರೆ ಈ ಸಸ್ಯವು ಕುಂಡದ ಮೇಲ್ಭಾಗದ ವಿಶಾಲ ಹಾದಿಯನ್ನು ಬಿಟ್ಟು, ಕೆಳಗಿನ ಒಂದು ಸಣ್ಣ ರಂಧ್ರದ ಮೂಲಕ ಹೊರಬಂದು ಹೂವನ್ನು ಅರಳಿಸಿದೆ. ಇದು ಕೇವಲ ಸಸ್ಯದ ಬೆಳವಣಿಗೆಯಲ್ಲ, ಬದಲಿಗೆ ಪರಿಸ್ಥಿತಿಯನ್ನು ಮೀರಿ ನಿಲ್ಲುವ ಅಪ್ರತಿಮ ಛಲದ ಸಂಕೇತ. ಏಕೆಂದರೆ, 'Strength isn't just about growing; it's about finding a way out when there is no way' ಎಂಬ ಮಾತು ಈ ಗಿಡದ ಅಸ್ತಿತ್ವಕ್ಕೆ ಅನ್ವಯವಾಗುತ್ತದೆ.

- **ದಾರಿಯನ್ನು ಸೃಷ್ಟಿಸಿಕೊಳ್ಳಬೇಕು:**

ಜೀವನದಲ್ಲಿ ನಮಗೆ ಬೇಕಾದ ಸೌಲಭ್ಯಗಳು ಸಿಗದಿದ್ದಾಗ ನಾವು ಬೇಗನೆ ಧೃತಿಗೆಡುತ್ತೇವೆ. 'ನನ್ನ ಹತ್ತಿರ ಹಣವಿಲ್ಲ, ಬೆಂಬಲವಿಲ್ಲ, ಅದೃಷ್ಟವಿಲ್ಲ' ಎಂದು ದೂರುತ್ತಾ ಕುಳಿತುಬಿಡುತ್ತೇವೆ. ಆದರೆ ಈ ಗಿಡಕ್ಕೆ ಕುಂಡದ ಒಳಗೆ ಜಾಗ ಸಾಲದಿದ್ದಾಗ, ಅದು ಅಳುತ್ತಾ ಕೂರಲಿಲ್ಲ; ಲಭ್ಯವಿದ್ದ ಅತ್ಯಂತ ಕಿರಿದಾದ ರಂಧ್ರವನ್ನೇ ತನ್ನ ಬೆಳವಣಿಗೆಯ ದಾರಿಯನ್ನಾಗಿಸಿಕೊಂಡಿತು. ಸಂಕಷ್ಟದ ನಡುವೆಯೇ ಹೊಸ ಹಾದಿಯನ್ನು ಸೃಷ್ಟಿಸಿಕೊಳ್ಳುವುದು ಜಾಣತನ. ಅವಕಾಶಗಳು ಮುಚ್ಚಿದಾಗ ಅಳುತ್ತಾ ಕೂರುವ ಬದಲು, ಕಿರುಹಾದಿಯನ್ನೇ ಹೆದ್ದಾರಿಯಾಗಿಸಿಕೊಂಡು ನಗು ಚೆಲ್ಲುವುದೇ ಜೀವನ.

- **ಅರಳುವ ಹಂಬಲವಿರಲಿ**

ಗಿಡವು ಕೇವಲ ಆ ರಂಧ್ರದಿಂದ ಹೊರಬಂದು ಸುಮ್ಮನಾಗಲಿಲ್ಲ. ಅದು ತನ್ನ ಅಸ್ತಿತ್ವವನ್ನು ಸಾಬೀತುಪಡಿಸಲು ಒಂದು ಸುಂದರವಾದ ಹೂವನ್ನು ಅರಳಿಸಿದೆ. ಇದರರ್ಥ, ನಾವು ಎಂಥ ಕಠಿಣ ಪರಿಸ್ಥಿತಿಯಲ್ಲಿದ್ದರೂ ನಮ್ಮ ಒಳಗಿನ ಪ್ರತಿಭೆ ಅಥವಾ ಸೌಂದರ್ಯವನ್ನು ಜಗತ್ತಿಗೆ ತೋರಿಸಲು ಹಿಂಜರಿಯಬಾರದು. ನಾವು ಬೆಳೆದ ಪರಿಸರಕ್ಕಿಂತ, ಆ ಪರಿಸರವನ್ನು ಮೀರಿ ನಾವು ತೋರುವ ಸಾಧನೆ ಇಲ್ಲಿ ಮುಖ್ಯವಾಗುತ್ತದೆ.

- **ಪರಿಸ್ಥಿತಿಯು ನಿರ್ಧರಿಸಬಾರದು**

ಅನೇಕ ಬಾರಿ ನಮ್ಮ ಸೋಲಿಗೆ ನಾವು ನಮ್ಮ ಪರಿಸರ ಅಥವಾ ಸಂದರ್ಭಗಳನ್ನು ಹೊಣೆ ಮಾಡುತ್ತೇವೆ. ಆದರೆ ಈ ಚಿತ್ರವು ಹೇಳುವ ಸತ್ಯವೇನೆಂದರೆ, ಪರಿಸ್ಥಿತಿ ನಿಮ್ಮನ್ನು ರೂಪಿಸಬಾರದು, ಬದಲಿಗೆ ನೀವು

ಪರಿಸ್ಥಿತಿಯನ್ನು ಮೀರಿ ಬೆಳೆಯಬೇಕು. ಒಂದು ಸಣ್ಣ ಸಂದು ಕೂಡ ಗಿಡಕ್ಕೆ ವಿಶಾಲ ಆಕಾಶವನ್ನು ತೋರಿಸಬಲ್ಲದು ಎನ್ನುವುದಾದರೆ, ಮನುಷ್ಯನ ಮನಸ್ಸಿನ ಸಂಕಲ್ಪಕ್ಕೆ ಅಸಾಧ್ಯವಾದುದು ಯಾವುದಿದೆ!? ನಮ್ಮ ಜೀವನದ ಪರಿಸ್ಥಿತಿಗಳು ಎಷ್ಟೇ ಕಠಿಣವಾಗಿದ್ದರೂ ಹೊರಬರಲು ಒಂದು ದಾರಿ ಇದ್ದೇ ಇರುತ್ತದೆ.

ಜೀವನವು ನಿಮ್ಮನ್ನು ಗೋಡೆಗಳ ಮಧ್ಯೆ ಬಂಧಿಸಿದರೆ, ಒಂದು ಕಿಂಡಿಯನ್ನು ಹುಡುಕಿಯಾದರೂ ಹೊರಬನ್ನಿ ಮತ್ತು ಅಲ್ಲಿ ನಗುವಿನ ಹೂವನ್ನು ಅರಳಿಸಿ. ಅವಕಾಶಗಳ ಕೊರತೆಯ ಬಗ್ಗೆ ಚಿಂತಿಸುವುದನ್ನು ಬಿಟ್ಟು, ಇರುವ ಅಲ್ಪ ಅವಕಾಶದಲ್ಲೇ ದೊಡ್ಡ ಸಾಧನೆ ಮಾಡುವುದೇ ಜೀವನದ ನಿಜವಾದ ಯಶಸ್ಸು. ಸೌಕರ್ಯಗಳ ನಡುವೆ ಅರಳುವುದಕ್ಕಿಂತ, ಸಂಕಷ್ಟಗಳ ಸಂದುಗಳಲ್ಲಿ ನಗು ಬೀರುವುದೇ ನಿಜವಾದ ಗೆಲುವು. ನಮ್ಮ ಛಲ ಗಟ್ಟಿಯಾಗಿದ್ದರೆ ಮುಚ್ಚಿದ ದಾರಿಗಳು ತಾನಾಗಿಯೇ ತೆರೆದುಕೊಳ್ಳುತ್ತವೆ...

## ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



### ಎಡದಿಂದ ಬಲಕ್ಕೆ

1. ಗೆಲುವಿನೊಂದಿಗೆ ಬಂದಿರುವ ದಶರಥಪುತ್ರ (4)
3. ಸಂಬಳ ಇತ್ಯಾದಿ ಹಂಚುವಿಕೆ (4)
4. ನಿಯತ್ತಾಗಿದ್ದರೂ ನಿಶ್ಚಿತವಾದುದಲ್ಲ (4)
5. ಸಹಜವಾದುದು ಅಥವಾ ನಿಜವಾದುದು ಎಂದರ್ಥ (4)
7. ಜನಸಂಖ್ಯೆ ಮತ್ತು ವಿಸ್ತಾರದಿಂದ ಬೃಹತ್ತಾಗಿರುವ ಪಟ್ಟಣ (3)
9. ಮನೆಯ ಹೊರಗಿನ ಮೊಗಸಾಲೆ (3)
10. ಹೊರಳುವಾಗ ಉಳುಕಿತು ಕುತ್ತಿಗೆ (3)
11. ನೀರು ಇತ್ಯಾದಿ ಚಿಮುಕಿಸು (3)
13. ಊರಿನ ಕಾವಲುಗಾರ (4)
14. ಶೋಚನೀಯ ಸ್ಥಿತಿಯನ್ನು ಹೇಳುವಾಗ ನಿಷ್ಠೆಗೆ ಹೆಸರಾದ ಪ್ರಾಣಿಯೂ ಬಂದಿದೆ (4)
15. ಆಹಾ, ವಾಲುವಾಗ ಸಲ್ಲಿಸಿದ್ದು ಮನವಿ (4)
16. ತಿರುಗಿ ಬಂದಿರುವ ತಿರುವು (4)

### ಮೇಲಿಂದ ಕೆಳಕ್ಕೆ

2. ಕೊನೆತನಕ ಉಳಿಯುವ ಕುಲ (4)
3. ಕ್ಷಾಮದ ನಡುವೆ ಸಿಲುಕಿರುವ ಒಣಜಂಭ (4)
4. ಹೊಸದು ಮತ್ತು ಮದುವೆಯ ಗಂಡಿನೊಂದಿಗೆ ಬಂದಿರುವುದು ಒಟ್ಟಾರೆಯಾಗಿ ನಿರಂತರ ಎಂದರ್ಥ (5)
6. ಬಹಳವಾಗಿ ಸಂಕಟಪಡುವುದನ್ನು ಧ್ವನಿಸುವ ನುಡಿಗಟ್ಟು (5)
8. ಕೊಳಚೆ ನೀರು ಹರಿಯುವ ಚರಂಡಿ (3)
11. ಬೇರೆಯವರಿಂದ ಪಡೆದ ಸಾಲ (4)
12. ನಮ್ಮ ಪ್ರತಿನಿಧಿಗಳನ್ನು ಆರಿಸಲು ನಡೆಸುವ ಅಭಿಪ್ರಾಯ ಸಂಗ್ರಹಣೆಯ ವಿಧಾನವಿದು (4)

### ಸರಿಯುತ್ತರಗಳು

# ಕರ್ದಮ ಮತ್ತು ದೇವಹೂತಿಯರ ತ್ಯಾಗ ಮತ್ತು ಭಕ್ತಿಯ ಮಹಾನ್ ಪಯಣ

ಸರಸ್ವತಿ ನದಿಯ ತೀರದಲ್ಲಿ ಕರ್ದಮ ಎಂಬ ಮಹಾನ್ ತಪಸ್ವಿ ಇದ್ದರು. ಬ್ರಹ್ಮನ ಮಾನಸ ಪುತ್ರರಾಗಿದ್ದರೂ, ಸಂಸಾರಕ್ಕಿಂತ ಆಧ್ಯಾತ್ಮಿಕ ಶಕ್ತಿಯಲ್ಲೇ ಅವರಿಗೆ ಆಸಕ್ತಿ ಹೆಚ್ಚು. ಸೃಷ್ಟಿಕಾರ್ಯಕ್ಕಾಗಿ ದಂಪತಿಗಳ ಅಗತ್ಯವಿದ್ದ ಕಾರಣ, ಕರ್ದಮರು ಮಹಾವಿಷ್ಣುವನ್ನು ಕುರಿತು ಸಾವಿರ ವರ್ಷಗಳ ಕಾಲ ಕಠಿಣ ತಪಸ್ಸು ಮಾಡಿದರು. ಅವರ ತಪಸ್ಸಿಗೆ ಮೆಚ್ಚಿದ ಶ್ರೀಹರಿ ಪ್ರತ್ಯಕ್ಷನಾಗಿ, 'ನಿನಗೆ ಗುಣವಂತಳಾದ ಪತ್ನಿ ಮತ್ತು ಒಂಬತ್ತು ಹೆಣ್ಣುಮಕ್ಕಳು ಜನಿಸುತ್ತಾರೆ. ಅಂತಿಮವಾಗಿ ನಾನೇ ನಿನಗೆ ಮಗನಾಗಿ ಹುಟ್ಟಿ ಬರುತ್ತೇನೆ' ಎಂದು ವರವಿತ್ತನು.

ಅದೇ ಸಮಯದಲ್ಲಿ, ಮನುವಿನ ಮಗಳಾದ ದೇವಹೂತಿ, ಸಕಲ ರಾಜವೈಭೋಗಗಳ ನಡುವೆ ಬೆಳೆದಿದ್ದರೂ, ಆಕೆಯ ಮನಸ್ಸು ಮಾತ್ರ ಭಕ್ತಿ ಮತ್ತು ಜ್ಞಾನದ ಕಡೆಗೆ ಇತ್ತು. ನಾರದರ ಮೂಲಕ ಕರ್ದಮರ ಮಹಿಮೆಯನ್ನು ಕೇಳಿದ್ದ ಅವಳು, ಮನಸ್ಸಿನಲ್ಲೇ ಅವರನ್ನು ವರಿಸಲು ನಿರ್ಧರಿಸಿದ್ದಳು. ಮನು ಮತ್ತು ಶತರೂಪ ತಮ್ಮ ಮಗಳನ್ನು ಕರ್ದಮರ ಆಶ್ರಮಕ್ಕೆ ಕರೆತಂದಾಗ, ಆ ಮಹಾನ್ ತಪಸ್ವಿಯ ತೇಜಸ್ಸನ್ನು ಕಂಡು ದೇವಹೂತಿ ಮಂತ್ರಮುಗ್ಧಳಾದಳು. ಕರ್ದಮರು ಮದುವೆಗೆ ಒಂದು ಕಠಿಣವಾದ ಆದರೆ ಆಧ್ಯಾತ್ಮಿಕವಾದ ಷರತ್ತನ್ನು ವಿಧಿಸಿದರು: 'ನಾವು ಮದುವೆಯಾಗೋಣ, ಆದರೆ ನಮಗೆ ಒಬ್ಬ ಮಗ

ಒಂದೊಳ್ಳೆ ಮಾತು
ರೂಪಾ ಗುರುರಾಜ್

Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

ಹುಟ್ಟಿದ ತಕ್ಷಣ ನಾನು ಸನ್ಯಾಸ ಸ್ವೀಕರಿಸಿ ಹೊರಟು ಹೋಗುತ್ತೇನೆ'.

ಅರಮನೆಯ ಸುಖವನ್ನು ನೋಡಿದ್ದ ದೇವಹೂತಿ, ತನ್ನ ಪತಿಯ ಸನ್ನಿಧಿಗಾಗಿ ಆ ಷರತ್ತಿಗೆ ಒಪ್ಪಿಕೊಂಡಳು. ರಾಜಕುಮಾರಿಯಾಗಿದ್ದ ದೇವಹೂತಿ, ಕರ್ದಮರ ಆಶ್ರಮದ ಜೀವನಕ್ಕೆ ಹೊಂದಿಕೊಂಡು ಕಠಿಣ ತಪಸ್ವಿ ಜೀವನವನ್ನು ನಡೆಸಿದಳು. ತನ್ನ ಸೌಂದರ್ಯ, ಹಸಿವು, ನಿದ್ದೆ ಎಲ್ಲವನ್ನೂ ಮರೆತು ಪತಿಯ ಸೇವೆ ಮಾಡಿದಳು. ಆಕೆಯ ನಿಷ್ಠೆಗೆ ಒಲಿದ ಕರ್ದಮರು ತಮ್ಮ ಯೋಗಶಕ್ತಿಯಿಂದ ಆಕೆಗೆ ಅಪಾರ ಸುಖವನ್ನು ನೀಡಿದರು. ಕಾಲಾನಂತರದಲ್ಲಿ ಅವರಿಗೆ ಒಂಬತ್ತು ಪುತ್ರಿಯರು ಜನಿಸಿದರು. ಈ ಒಂಬತ್ತು ಹೆಣ್ಣುಮಕ್ಕಳನ್ನು ಒಂಬತ್ತು ಪ್ರಜಾಪತಿಗಳಿಗೆ ಮದುವೆ ಮಾಡಿಕೊಡಲಾಯಿತು.

ಅಂತಿಮವಾಗಿ ಮಹಾವಿಷ್ಣುವೇ ಅವರ ಮಗನಾಗಿ 'ಕಪಿಲ' ರೂಪದಲ್ಲಿ ಜನ್ಮತಾಳಿದನು. ಕಪಿಲನು ಜನಿಸಿದಾಗ ದೇವತೆಗಳೇ ಹೂಮಳೆ ಸುರಿಸಿದರು. ನಂತರ ಕರ್ದಮರು ಷರತ್ತು ಹಾಕಿದಂತೆ ಕಾಡಿಗೆ ಹೋಗುವ ಸಮಯ ಬಂದಿತ್ತು. ತನ್ನ ಪ್ರೀತಿಯ ಪತಿಯನ್ನು ಅಗಲುವ ನೋವು ದೇವಹೂತಿಯ ಕಣ್ಣಲ್ಲಿತ್ತು. ಆದರೆ ಕರ್ದಮರು ತಮ್ಮ ಮಗನಾದ ಕಪಿಲನಿಗೆ ಪ್ರದಕ್ಷಿಣೆ ಹಾಕಿ, ಸಂಸಾರದ ಬಂಧನದಿಂದ ಮುಕ್ತಿ ಪಡೆಯಲು ಕಾಡಿಗೆ ತೆರಳಿದರು. ಇದು ದೇವಹೂತಿಗೆ ಅತ್ಯಂತ ಕಠಿಣ ಸಮಯವಾಗಿತ್ತು. ತನ್ನ ಪತಿ ಹೋದ ನಂತರ ಅವಳು ದುಃಖಿತಳಾಗಲಿಲ್ಲ, ಬದಲಾಗಿ ತನ್ನ ಮಗನಾದ ಕಪಿಲನ ಬಳಿ ಸಾಗಿ, 'ನನಗೆ ಜನನ-ಮರಣಗಳ ಚಕ್ರದಿಂದ ಮುಕ್ತಿ

ಪಡೆಯುವ ಹಾದಿಯನ್ನು ತೋರಿಸು' ಎಂದು ಕೇಳಿಕೊಂಡಳು.

ಕಪಿಲಮುನಿಯು ತನ್ನ ತಾಯಿಗೆ 'ಸಾಂಖ್ಯ ಶಾಸ್ತ್ರ' ಮತ್ತು ಭಕ್ತಿಯ ರಹಸ್ಯವನ್ನು ಬೋಧಿಸಿದನು. ಮಗನ ಬೋಧನೆಯಿಂದ ದೇವಹೂತಿಯು ಪರಮ ಜ್ಞಾನವನ್ನು ಪಡೆದು ಸಿದ್ಧಿಯನ್ನು ಹೊಂದಿದಳು. ಈ ಕಥೆಯು ಕೇವಲ ದಂಪತಿಗಳ ಪ್ರೇಮವನ್ನಷ್ಟೇ ಅಲ್ಲದೆ, ಭಕ್ತಿ, ತ್ಯಾಗ ಮತ್ತು ಪರಮಾತ್ಮನ ಸಾಕ್ಷಾತ್ಕಾರದ ಹಾದಿಯನ್ನು ನಮಗೆ ತೋರಿಸಿಕೊಡುತ್ತದೆ. ಬದುಕಿನಲ್ಲಿ ಕೆಲವೊಮ್ಮೆ ನಾವಂದುಕೊಂಡಂತೆ ಎಲ್ಲವೂ ನಡೆಯುವುದಿಲ್ಲ. ಕೆಲವು ಸಂತೋಷಗಳಂತೂ ಷರತ್ತಿನೊಡನೆ ಬರುತ್ತವೆ. ಆಗ ಎಲ್ಲವನ್ನೂ ಸಮಾನವಾಗಿ ಸ್ವೀಕರಿಸುವ ಸಮಚಿತ್ತವನ್ನು ಬೆಳೆಸಿಕೊಳ್ಳಬೇಕು. ದಾಂಪತ್ಯದಲ್ಲಿ ಗಂಡ-ಹೆಂಡತಿಯ ಮಧ್ಯೆ ಅನ್ಯೋನ್ಯತೆ ಇದ್ದಾಗ ಎಂಥದ್ದೇ ಪರಿಸ್ಥಿತಿಯನ್ನು ನಿಭಾಯಿಸುವ ಶಕ್ತಿ ಮೂಡುತ್ತದೆ. ಒಬ್ಬರ ನಿರ್ಧಾರಗಳನ್ನು ಮತ್ತೊಬ್ಬರು ಗೌರವಿಸಿ ಪರಿಸ್ಥಿತಿಗೆ ತಕ್ಕಂತೆ ನಡೆದುಕೊಂಡಾಗ ದಾಂಪತ್ಯದಲ್ಲಿ ಸೌಹಾರ್ದವು ಇರುತ್ತದೆ. ಒಳ್ಳೆಯ ಸಂಸ್ಕಾರವಂತ, ಯೋಗ್ಯ ಮಕ್ಕಳನ್ನು ಬೆಳೆಸಿದಾಗ ನಾಳೆ ಅವರು ಕೂಡ ನಮಗೆ ಬೆಳಕಾಗಿ ಮುಂದೆ ದಾರಿ ತೋರುತ್ತಾರೆ. ಆದ್ದರಿಂದಲೇ ಇಂದಿನ ನಮ್ಮ ಜವಾಬ್ದಾರಿಗಳನ್ನ ಪ್ರಾಮಾಣಿಕವಾಗಿ ಮಾಡಿದಾಗ ಮಾತ್ರ ನಾಳಿನ ಬದುಕು ಬೆಳಕಾಗುವುದು ಎಂಬುದನ್ನು ಮರೆಯದಿರೋಣ...

## ಒಂದ್ ಕಪ್ ಮಾತು

### ಸಂಜು ಸ್ಯಾಮ್ಸನ್‌ಗೆ ಮತ್ತೆ ಅವಕಾಶ?

**ಅಹಮದಾಬಾದ್:** ಮುಂದಿನ ಸೂಪರ್-8 ಪಂದ್ಯದಲ್ಲಿ ಸಂಜು ಸ್ಯಾಮ್ಸನ್ ಒಂದು ವೇಳೆ ತಂಡಕ್ಕೆ ಮರಳುವ ಸಾಧ್ಯತೆ ಇದೆ ಎಂದು ಟೀಮ್ ಇಂಡಿಯಾ ಸಹಾಯಕ ಕೋಚ್ ರಯಾನ್ ಟೆನ್ ಸುಳಿವು ನೀಡಿದ್ದಾರೆ. 'ಪ್ರಸ್ತುತ ಭಾರತೀಯ ತಂಡದಲ್ಲಿ ಉತ್ತಮ ಆಟಗಾರರಿದ್ದಾರೆ, ಆದರೆ ಅವರಿಗೆ ಹೆಚ್ಚಿನ ಅನುಭವವಿಲ್ಲ. ಸಂಜು ಸ್ಯಾಮ್ಸನ್ ಒಬ್ಬ ಅದ್ಭುತ ಆಟಗಾರ. ಅವರು ಅಗ್ರ ಕ್ರಮಾಂಕದಲ್ಲಿ ಉತ್ತಮ ಪ್ರದರ್ಶನ ನೀಡುತ್ತಾರೆ. ಕಳೆದ ಕೆಲವು ಪಂದ್ಯಗಳಲ್ಲಿ ಅವರು ಹಿನ್ನಡೆ ಅನುಭವಿಸಿರಬಹುದು. ಮುಂದಿನ ನಿರ್ಣಾಯಕ ಪಂದ್ಯಗಳ ಸಂದರ್ಭದಲ್ಲಿ ಸಹ ಅದು ಚರ್ಚೆಯ ವಿಷಯವಾಗಲಿದೆ ಎಂದು ನಾನು ಭಾವಿಸುತ್ತೇನೆ' ಎಂದು ರಯಾನ್ ಟೆನ್ ಹೇಳಿದ್ದಾರೆ. ಈ ಹೇಳಿಕೆಯ ಮೂಲಕ ಮುಂಬರುವ ಪಂದ್ಯಗಳಲ್ಲಿ ಸಂಜು ಸ್ಯಾಮ್ಸನ್ ಅಂತಿಮ ತಂಡದಲ್ಲಿ ಸ್ಥಾನ ಪಡೆಯಬಹುದು ಎಂದು ಅವರು ಸೂಚನೆ ನೀಡಿದಂತಾಗಿದೆ. 'ನಾವು ಕೆಲವು ದಿನಗಳಿಂದ ಹನ್ನೊಂದರ ಅಂತಿಮ ಬಳಗದ ಬಗ್ಗೆ ಚರ್ಚಿಸುತ್ತಿದ್ದೇವೆ. ತಂಡದ ಸಂಯೋಜನೆಗಾಗಿ ದ.ಆಫ್ರಿಕಾ ವಿರುದ್ಧದ ಪಂದ್ಯಕ್ಕಾಗಿ ವಾಷಿಂಗ್ಟನ್ ಸುಂದರ್ ಅವರನ್ನು ತಂಡಕ್ಕೆ ಸೇರಿಸಿಕೊಳ್ಳಲಾಯಿತು. ಬ್ಯಾಟಿಂಗ್ ಡೆಪ್ತ್‌ಗಾಗಿ ರಿಂಕು ಸಿಂಗ್ ಅವರನ್ನೂ ತಂಡದಲ್ಲಿರಿಸಿದೆವು, ಇದರರ್ಥ ಅಕ್ಷರ್ ಪಟೇಲ್ ಅವರ ಕಡೆಗಣಿಸಲಾಗಿದೆ ಎಂದಲ್ಲ, ಅವರೂ ಸಹ ತಂಡದಲ್ಲಿ ಪ್ರಮುಖ ಆಟಗಾರ ಆಗಿದ್ದಾರೆ ಎಂದು ರಯಾನ್ ಟೆನ್ ಹೇಳಿದರು.

### ಇಂದಿನ ಪಂದ್ಯ

ಇಂಗ್ಲೆಂಡ್ vs ಪಾಕಿಸ್ತಾನ
ಸೂಪರ್-8
ಸ್ಥಳ ▶▶ ಪಲ್ಲೆಕೆಲೆ
ಪಂದ್ಯಾರಂಭ : ರಾ.7

ನೆಟ್ ರನ್‌ರೇಟ್‌ನಲ್ಲಿ ಸದ್ಯ ಭಾರತಕ್ಕೆ ಭಾರೀ ಹಿನ್ನಡೆ | ಸೂರ್ಯ ಪಡೆಯ ಸೆಮಿಫೈನಲ್ ಅರ್ಹತೆ ಇನ್ನೂ ಜೀವಂತ

# ಭಾರತಕ್ಕೆ ಇನ್ನೂ ಇದೆ ಸೆಮೀಸ್ ಅವಕಾಶ

**ದೆಹಲಿ:** ಈ ಸಲದ ಟಿ20 ವಿಶ್ವಕಪ್ ಗೆಲ್ಲುವ ಫೇವರೀಟ್ ತಂಡವಾಗಿ ಕಣಕ್ಕಿಳಿದಿದ್ದ ಟೀಮ್ ಇಂಡಿಯಾ ಗುಂಪು ಹಂತದಲ್ಲಿ ಉತ್ತಮ ಪ್ರದರ್ಶನ ನೀಡಿ ಅಜೇಯ ತಂಡವಾಗಿ ಸೂಪರ್ 8ಕ್ಕೆ ತಲುಪಿತ್ತು. ಆದರೆ ಈ ಹಂತದಲ್ಲಿ ಭಾನುವಾರದಂದು ದಕ್ಷಿಣ ಆಫ್ರಿಕಾ ವಿರುದ್ಧ ನಡೆದಿದ್ದ ಸೂಪರ್-8ನ ಮೊದಲ ಪಂದ್ಯದಲ್ಲೇ ರನ್‌ಗಳ ಹೀನಾಯ ಸೋಲನುಭವಿಸಿತ್ತು. ಈ ಸೋಲಿನೊಂದಿಗೆ ಭಾರತದ ಸೆಮಿಫೈನಲ್ ಹಾದಿ ದುರ್ಬಲವಾಗಿದೆ. ಪಂದ್ಯವನ್ನು ಬಹುದೊಡ್ಡ ಅಂತರದಲ್ಲಿ ಸೋತಿದ್ದ ಕಾರಣಕ್ಕಾಗಿ ನೆಟ್ ರನ್‌ರೇಟ್‌ನಲ್ಲೂ ಭಾರೀ ಹಿನ್ನಡೆಯಾಗಿದೆ. ಭಾರತ ಸೆಮೀಸ್ ತಲುಪಲು ಇನ್ನೂ ದಾರಿ ಇದ್ದೇ ಇದೆ. ಗ್ರೂಪ್-1ರಲ್ಲಿರುವ ಭಾರತ, ಫೆಬ್ರವರಿ 26ರಂದು ಚೆನ್ನೈನಲ್ಲಿ ನಡೆಯುವ ಸೂಪರ್-8 ಪಂದ್ಯದಲ್ಲಿ ಜಿಂಬಾಬ್ವೆಯನ್ನು ಎದುರಿಸಲಿದೆ. ಮಾರ್ಚ್ 1ರಂದು ಕೋಲ್ಕತ್ತಾದ ಈಡನ್ ಗಾರ್ಡನ್‌ನಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಕೊನೆಯ ಸೂಪರ್-8 ಪಂದ್ಯವನ್ನು ಆಡಲಿದೆ. ಸೆಮಿಫೈನಲ್‌ನಲ್ಲಿ ಸ್ಥಾನ ಪಡೆಯಲು, ಭಾರತ ಯಾವುದೇ ಬೆಲೆ ತೆತ್ತಾದರೂ ಈ ಎರಡೂ ಪಂದ್ಯಗಳನ್ನು ಗೆಲ್ಲಬೇಕು.

ಆದರೆ ಸೆಮಿಫೈನಲ್ ತಲುಪಲು ಈ ಎರಡು ಗೆಲುವುಗಳು ಸಾಕಾಗುತ್ತವೆಯೇ ಎಂದು ಖಚಿತವಾಗಿ ಹೇಳಲು ಸಾಧ್ಯವೂ ಇಲ್ಲ. ವೆಸ್ಟ್ ಇಂಡೀಸ್ ಮತ್ತು ಜಿಂಬಾಬ್ವೆ ಮತ್ತು ವೆಸ್ಟ್ ಇಂಡೀಸ್ ತಂಡಗಳನ್ನು ಸೋಲಿಸಿದರೂ, ಭಾರತ ಕೇವಲ ನಾಲ್ಕು ಅಂಕಗಳನ್ನು ಮಾತ್ರ ಪಡೆದುಕೊಳ್ಳಲಿದೆ. ಈ ಮಧ್ಯೆ, ಇನ್ನೂ ಒಂದು ಪಂದ್ಯವನ್ನು ಗೆದ್ದರೆ ದಕ್ಷಿಣ ಆಫ್ರಿಕಾದ ಖಾತೆಗೆ ನಾಲ್ಕು ಅಂಕಗಳು ಸೇರ್ಪಡೆಯಾಗುತ್ತವೆ, ಇದರೊಂದಿಗೆ ಆ ತಂಡ ಸೆಮಿಫೈನಲ್‌ಗೆ ಮತ್ತಷ್ಟು ಹತ್ತಿರವಾಗಲಿದೆ.

ಈ ಪರಿಸ್ಥಿತಿಯಲ್ಲಿ ದಕ್ಷಿಣ ಆಫ್ರಿಕಾ ತನ್ನ ಉಳಿದ ಎರಡೂ ಪಂದ್ಯಗಳನ್ನು (ದಕ್ಷಿಣ ಆಫ್ರಿಕಾ, ಜಿಂಬಾಬ್ವೆ) ಗೆಲ್ಲುವುದು ಭಾರತದ ಪಾಲಿಗೆ ಉತ್ತಮ, ಜತೆಗೆ ವೆಸ್ಟ್ ಇಂಡೀಸ್ ಮತ್ತು ಜಿಂಬಾಬ್ವೆ ಒಂದಕ್ಕಿಂತ ಹೆಚ್ಚು ಪಂದ್ಯಗಳನ್ನು ಗೆಲ್ಲಬಾರದು. ಆ ರೀತಿ ಆದಲ್ಲಿ ಭಾರತ ಮತ್ತು ದಕ್ಷಿಣ ಆಫ್ರಿಕಾ ಸೆಮಿಫೈನಲ್ ತಲುಪಲಿವೆ.

## ಇನ್ನೊಂದು ಸಮೀಕರಣ

ಭಾರತವು ಸೂಪರ್-8ರ ಉಳಿದ ಎರಡೂ ಪಂದ್ಯಗಳನ್ನು ದೊಡ್ಡ ಅಂತರದಿಂದ ಗೆಲ್ಲಬೇಕಾಗುತ್ತದೆ. ಒಂದು ವೇಳೆ ಅಂಕಗಳು ಸಮನಾದಾಗ ಉತ್ತಮ ರನ್ ರೇಟ್ ಹೊಂದಿರುವ ತಂಡಕ್ಕೆ ಸೆಮೀಸ್‌ಗೆ ಹೋಗುವ ಅವಕಾಶ ಸಿಗುತ್ತದೆ. ಹಾಗಾಗಿ ಭಾರತಕ್ಕೆ ಎರಡು ಪಂದ್ಯಗಳ ಗೆಲುವಿನ ಜತೆಗೆ ಹೇಗಾದರೂ ಮಾಡಿ ರನ್‌ರೇಟ್ ಸಹ ಸುಧಾರಿಸಿಕೊಳ್ಳಬೇಕಾಗುತ್ತದೆ. ಆದರೆ ಅದು ಬಹಳ ಸುಲಭವಲ್ಲ. ಜಿಂಬಾಬ್ವೆ ಮತ್ತು ವೆಸ್ಟ್ ಇಂಡೀಸ್ ವಿರುದ್ಧ ಭಾರತ ದೊಡ್ಡ ಅಂತರದ ಗೆಲುವು ಸಾಧಿಸಬೇಕಾಗಿದೆ. ಅದೇ ವೇಳೆ ವೆಸ್ಟ್ ಇಂಡೀಸ್ ಮತ್ತು ಜಿಂಬಾಬ್ವೆ 2 ಅಂಕಗಳಿಗಿಂತ ಹೆಚ್ಚಿನ ಅಂಕ ಪಡೆಯಬಾರದು. ಒಂದು ವೇಳೆ ಪಡೆದರೂ ಅದರ ನೆಟ್ ರನ್‌ರೇಟ್ ಭಾರತಕ್ಕಿಂತ ಉತ್ತಮವಾಗಿರಬಾರದು. ಈ ಪರಿಸ್ಥಿತಿಯಲ್ಲಿ ಮಾತ್ರ ಟೀಮ್ ಇಂಡಿಯಾ ಈ ಟಿ20 ವಿಶ್ವಕಪ್‌ನ ಸೆಮಿಫೈನಲ್ ಯಾವುದೇ ಆತಂಕವಿಲ್ಲದೆ ತಲುಪಬಹುದಾಗಿದೆ

## ಗಂಭೀರ್ ವಿರುದ್ಧ ಕೈಫ್ ಕಿಡಿ



**ಅಹಮದಾಬಾದ್:** ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದಿದ್ದ ಸೂಪರ್-8 ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಭಾರತ ತಂಡದ 76 ರನ್‌ಗಳ ಸೋಲಿನ ಆಘಾತ ವ್ಯಾಪಕ ಟೀಕೆಗೆ ಕಾರಣವಾಗಿದೆ. ಈ ಫಲಿತಾಂಶದ ಬಳಿಕ ಭಾರತದ ಮಾಜಿ ಬ್ಯಾಟರ್ ಮೊಹಮ್ಮದ್ ಕೈಫ್ ಅವರು ಗೌತಮ್ ಗಂಭೀರ್ ಮಾರ್ಗದರ್ಶನದ ಟೀಮ್ ಮ್ಯಾನೇಜ್‌ಮೆಂಟ್ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ. ದಕ್ಷಿಣ ಆಫ್ರಿಕಾ ಮೊದಲ ಆರು ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು ಕೇವಲ 41 ರನ್ ಗಳಿಸಿತ್ತು, ಆದರೆ 7ರಿಂದ 16ನೇ ಓವರ್‌ಗಳ ನಡುವೆ ಕೇವಲ ಎರಡು ವಿಕೆಟ್ ಕಳೆದುಕೊಂಡು 111 ರನ್‌ಗಳನ್ನು ಸಿಡಿಸಿತ್ತು. ಮಧ್ಯಮ ಓವರ್‌ಗಳ ಆಕ್ರಮಣಕಾರಿ ಆಟ ಪಂದ್ಯದ ದಿಕ್ಕನ್ನು ಬದಲಿಸಿತು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. 'ಇದು ನಮ್ಮ ವಿಶ್ವಕಪ್ ಟೂರ್ನಿಯ ಮೊದಲ ಸೋಲು, ನಾನು ಹೇಳುವುದೇನೆಂದರೆ ಈ ಹಿಂದಿನ ವಿಶ್ವಕಪ್ ಗೆದ್ದ ದಾಖಲೆ ಬರೆದಾಗ ಬೇರೆ ಟೀಮ್ ಮ್ಯಾನೇಜ್‌ಮೆಂಟ್ ಇತ್ತು. ಅಲ್ಲಿ ರಾಹುಲ್ ದ್ರಾವಿಡ್ ಮತ್ತು ರೋಹಿತ್ ಶರ್ಮಾ ಇದ್ದರು. ಸೂರ್ಯಕುಮಾರ್ ಯಾದವ್ ಅವರಿಗೆ ಆ ವಿಶ್ವಕಪ್ ಟೂರ್ನಿಯಲ್ಲಿ ಯಾವುದೇ ಪಾತ್ರ ಇರಲಿಲ್ಲ' ಎಂದು ಹೇಳಿದ್ದಾರೆ.

## ಅಭಿಷೇಕ್ ಸ್ಲಾಗರ್ ಬಗ್ಗೆ ಆಮಿರ್ ಸ್ಪಷ್ಟನೆ

**ಕೊಲಂಬೊ:** ಸತತ ಬ್ಯಾಟಿಂಗ್ ವೈಫಲ್ಯ ಅನುಭವಿಸುತ್ತಿರುವ ಭಾರತ ತಂಡದ ಆರಂಭಿಕ ಬ್ಯಾಟ್ಸ್‌ಮನ್ ಅಭಿಷೇಕ್ ಶರ್ಮಾ ಅವರನ್ನು ಸ್ಲಾಗರ್ ಎಂದು ಕರೆಯುವ ತಮ್ಮ ಹೇಳಿಕೆಗೆ ಪಾಕಿಸ್ತಾನ ಮಾಜಿ ವೇಗಿ ಮೊಹಮ್ಮದ್ ಆಮಿರ್ ಸ್ಪಷ್ಟನೆ ನೀಡಿದ್ದಾರೆ. ಈ ಪದ ಪ್ರಯೋಗದಿಂದ ಹಲವರು ಅಸಮಾಧಾನಗೊಂಡಿದ್ದಾರೆಂಬುದನ್ನು ಅವರು ಒಪ್ಪಿಕೊಂಡಿದ್ದಾರೆ. ಈ ಕುರಿತು ಮಾತನಾಡಿದ ಆಮಿರ್, ಅಭಿಷೇಕ್ ಅವರನ್ನು ಅತ್ಯುತ್ತಮ ಯುವ ಪ್ರತಿಭೆಗಳಲ್ಲಿ ಒಬ್ಬರೆಂದು ತಾನು ಮೌಲ್ಯಮಾಪನ ಮಾಡುತ್ತೇನೆ ಎಂದು ಹೇಳಿದರು. ಅಭಿಷೇಕ್ ಶರ್ಮಾ ಅವರನ್ನು ಸ್ಲಾಗರ್ ಎಂದು ಕರೆಯುವ ಮೂಲಕ ಮೊಹಮ್ಮದ್ ಆಮಿರ್ ವಿವಾದಕ್ಕೆ ಕಾರಣರಾಗಿದ್ದರು. ಅತ್ಯಂತ ಮೆಚ್ಚುಗೆ ಪಡೆದ ಈ ಆರಂಭಿಕ ಬ್ಯಾಟರ್‌ಗೆ ಸವಾಲಿನ ಪರಿಸ್ಥಿತಿಗಳಲ್ಲಿ ಗುಣಮಟ್ಟದ ಬೌಲರ್‌ಗಳನ್ನು ಎದುರಿಸಲು ಅಗತ್ಯವಾದ ರಕ್ಷಣಾತ್ಮಕ ತಂತ್ರದ ಕೊರತೆಯಿದೆ ಎಂದು ಅವರು ಹೇಳಿದ್ದರು.

ಪಂದ್ಯ ಗೆದ್ದರಷ್ಟೇ ಪಾಕ್‌ಗೆ ಸೆಮೀಸ್ ಸಲೀಸು | ಮತ್ತೊಂದು ರೋಚಕ ಪಂದ್ಯ ನಿರೀಕ್ಷೆ

# ಇಂಗ್ಲೆಂಡ್-ಪಾಕಿಸ್ತಾನ ಇಂದು ಮುಖಾಮುಖಿ

**ಪಲ್ಲೆಕೆಲೆ:** ಟಿ20 ವಿಶ್ವಕಪ್ ಕ್ರಿಕೆಟ್‌ನಲ್ಲಿ ಇಂದು ಇಲ್ಲಿ ನಡೆಯಲಿರುವ ಸೂಪರ್-8 ಪಂದ್ಯದಲ್ಲಿ ಇಂಗ್ಲೆಂಡ್ ತಂಡವು ಪಾಕಿಸ್ತಾನವನ್ನು ಎದುರಿಸಲಿದೆ.

ಕಳೆದ ಶನಿವಾರ ಕೊಲಂಬೊದಲ್ಲಿ ಸುರಿದ ಮಳೆಯಿಂದಾಗಿ ನ್ಯೂಜಿಲೆಂಡ್-ಪಾಕಿಸ್ತಾನ ಪಂದ್ಯ ರದ್ದಾಗಿತ್ತು. ಹಾಗಾಗಿ ನ್ಯೂಜಿಲೆಂಡ್ ಮತ್ತು ಪಾಕಿಸ್ತಾನವು ತಲಾ ಒಂದು ಅಂಕವನ್ನು ಹಂಚಿಕೊಂಡಿತ್ತು.

ರವಿವಾರ ನಡೆದ ಪಂದ್ಯದಲ್ಲಿ ಇಂಗ್ಲೆಂಡ್ ತಂಡವು ಅತಿಥೇಯ ಶ್ರೀಲಂಕಾವನ್ನು 51 ಅಂತರದಲ್ಲಿ ಗೆದ್ದುಕೊಂಡಿತ್ತು. ಮೊದಲು ಬ್ಯಾಟ್ ಮಾಡಿದ್ದ ಇಂಗ್ಲೆಂಡ್ ತಂಡವು ಫಿಲ್ ಸಾಲ್ಟ್ ಅವರ ಅಮೋಘ ಪ್ರದರ್ಶನದಿಂದಾಗಿ 9 ವಿಕೆಟ್‌ಗೆ 146 ರನ್ ಗಳಿಸಿತ್ತು. ಆ ಬಳಿಕ ಬ್ಯಾಟಿಂಗ್ ನಡೆಸಿದ ಅತಿಥೇಯ ಲಂಕಾ ತಂಡವು ಆಂಗ್ಲರ ಸಂಘಟಿತ ದಾಳಿಯನ್ನು ಎದುರಿಸಲಾರದೆ 16.4 ಓವರ್‌ಗಳಲ್ಲಿ ಕೇವಲ 95 ರನ್‌ಗಳಿಗೆ ಆಲೌಟ್ ಆಯಿತು. ಆ ಪಂದ್ಯದಲ್ಲಿ ಇಂಗ್ಲೆಂಡ್ ಪರ ವಿಲ್ ಜಾಕ್ಸ್ 3 ವಿಕೆಟ್ ಪಡೆದರೆ, ಜೋಫ್ರಾ ಆರ್ಚರ್, ಲಿಯಾಮ್ ಡಾಸನ್ ಮತ್ತು ಆದಿಲ್ ರಶೀದ್ ತಲಾ ಒಂದು ವಿಕೆಟ್ ಪಡೆದರು. ಆ ಗೆಲುವಿನಿಂದಾಗಿ ಆಂಗ್ಲರ ಪಡೆಯು 2 ಅಂಕಗಳನ್ನು ಸಂಪಾದಿಸಿ ಇದೀಗ ಸೂಪರ್-8 ಹಂತದಲ್ಲಿ ಪಾಕಿಸ್ತಾನಕ್ಕಿಂತ ಮೇಲುಗೈ ಹೊಂದಿದೆ. ಸೆಮಿಫೈನಲ್ ಪ್ರವೇಶಿಸಲು ಸೂಪರ್-8 ಹಂತದ 3 ಪಂದ್ಯಗಳ ಪೈಕಿ ಕನಿಷ್ಠ 2 ಪಂದ್ಯಗಳನ್ನು ತಂಡವೊಂದು ಗೆಲ್ಲಬೇಕಿದೆ.

ಹ್ಯಾರಿ ಬ್ರೂಕ್ ನಾಯಕತ್ವದ ಇಂಗ್ಲೆಂಡ್ ತಂಡದ ಫಿಲ್ ಸಾಲ್ಟ್, ಜೋಸ್ ಬಟ್ಲರ್, ಸ್ಯಾಮ್ ಕರನ್ ಸೇರಿದಂತೆ ಹಲವು ಬ್ಯಾಟ್ಸ್‌ಮ್ಯಾನ್‌ಗಳು ಉತ್ತಮ ಫಾರ್ಮ್‌ನಲ್ಲಿದ್ದಾರೆ. ಹಾಗೆಯೇ ಬೌಲರ್‌ಗಳಾದ ಜೋಫ್ರಾ ಆರ್ಚರ್, ವಿಲ್ ಜಾಕ್ಸ್ ಈಗಾಗಲೇ ಲೀಗ್ ಮಾತ್ರವಲ್ಲ ಸೂಪರ್-8 ಪಂದ್ಯದಲ್ಲೂ ಮಿಂಚಿದ್ದಾರೆ.

ಪಾಕಿಸ್ತಾನ ತಂಡವು ಲೀಗ್ ಹಂತದಲ್ಲಿ ಭಾರತದ ವಿರುದ್ಧ ಸೋತರೂ ಉಳಿದ ಪಂದ್ಯಗಳಲ್ಲಿ ಉತ್ತಮ ನಿರ್ವಹಣೆ ತೋರಿದೆ. ಸಲ್ಮಾನ್ ಆಲಿ ಆಘಾ ನಾಯಕತ್ವದ ತಂಡದ ಬ್ಯಾಟ್ಸ್‌ಮ್ಯಾನ್‌ಗಳಾದ ಸಾಹಿಬ್‌ಜಾದಾ ಫರ್ಹಾನ್, ಫಹೀಮ್ ಅಶ್ರಫ್, ಶಾದಾಬ್ ಖಾನ್ ಸೇರಿದಂತೆ ಮೂರ‍್ನಾಲ್ಕು ಬ್ಯಾಟ್ಸ್‌ಮ್ಯಾನ್‌ಗಳು ಉತ್ತಮ ಫಾರ್ಮ್‌ನಲ್ಲಿದ್ದಾರೆ. ಬೌಲರ್‌ಗಳಾದ ಉಸ್ಮಾನ್ ಖಾನ್, ಸೈಮ್ ಅಯೂಬ್ ಮತ್ತು ಉಸ್ಮಾನ್ ತಾರೀಕ್ ಉತ್ತಮ ನಿರ್ವಹಣೆ ತೋರಿದ್ದಾರೆ. ಈ ಪಂದ್ಯದಲ್ಲಿ ಇಂಗ್ಲೆಂಡ್ ಗೆದ್ದರೆ ಅದು ಒಟ್ಟು 4 ಅಂಕಗಳೊಂದಿಗೆ ಸೆಮಿಫೈನಲ್ ಅರ್ಹತೆಯನ್ನು ಖಚಿತಪಡಿಸಿದಂತಾಗುತ್ತದೆ, ಆದರೆ ಪಾಕಿಸ್ತಾನ ಗೆದ್ದರೆ ಅದು ಮೂರು ಅಂಕಗಳೊಂದಿಗೆ ತನ್ನ ಮುಂದಿನ ಮತ್ತೊಂದು ಸೂಪರ್-8 ಪಂದ್ಯವನ್ನೂ ಗೆಲ್ಲಬೇಕಾದ ಅನಿವಾರ್ಯತೆಯಲ್ಲಿರುತ್ತದೆ. ಹೀಗಾಗಿ ಎರಡೂ ತಂಡಗಳ ಮಧ್ಯೆ ಮಂಗಳವಾರ ನಡೆಯಲಿರುವ ಹಣಾಹಣಿ ಖಂಡಿತವಾಗಿಯೂ ರೋಚಕತೆಯಿಂದ ಕೂಡಿರಲಿದೆ ಎಂಬುದು ಕ್ರಿಕೆಟ್‌ಪ್ರೇಮಿಗಳ ನಿರೀಕ್ಷೆಯಾಗಿದೆ.

### ಟಿ20 ಮುಖಾಮುಖಿ

| | |
|---|---|
| ಒಟ್ಟು ಪಂದ್ಯಗಳು | 31 |
| ಇಂಗ್ಲೆಂಡ್‌ಗೆ ಜಯ | 21 |
| ಪಾಕಿಸ್ತಾನಕ್ಕೆ ಗೆಲುವು | 9 |
| ಫಲಿತಾಂಶ ರಹಿತ ಪಂದ್ಯ | 1 |

### ಅಭಿಷೇಕ್ ಫಾರ್ಮ್ ಕುರಿತು ಸಮರ್ಥನೆ



**ಅಹಮದಾಬಾದ್:** ಭಾರತದ ಆರಂಭಿಕ ಆಟಗಾರ ಅಭಿಷೇಕ್ ಶರ್ಮಾ ಅವರ ಭಾನುವಾರದ ಆಟದ ಕಳಪೆ ಫಾರ್ಮ್ ಕುರಿತು ಭಾರತದ ಮಾಜಿ ಕ್ರಿಕೆಟರ್ ಸುನಿಲ್ ಗವಾಸ್ಕರ್ ಮಾತನಾಡಿದ್ದಾರೆ. ಪಂದ್ಯದಲ್ಲಿ ದಕ್ಷಿಣ ಆಫ್ರಿಕಾದ ಬೌಲರ್‌ಗಳು ಜಾಣತನದಿಂದ ಬೌಲಿಂಗ್ ಮಾಡಿದ ಕಾರಣ ಅಭಿಷೇಕ್ ಅವರನ್ನು ಕಡಿಮೆ ಮೊತ್ತಕ್ಕೆ ಕಟ್ಟಿಹಾಕುವಲ್ಲಿ ಯಶಸ್ವಿ ಆಗಿದ್ದಾರೆ ಎಂದಿದ್ದಾರೆ. ನೆಟ್ಸ್‌ನಲ್ಲಿ ಬ್ಯಾಟಿಂಗ್ ಮಾಡುವಾಗ ಮೊದಲ ಎಸೆತದಲ್ಲಿ ಔಟಾದರೂ ಮುಂದಿನ ಚೆಂಡನ್ನು ಎದುರಿಸಲು ಅವಕಾಶವಿರುತ್ತದೆ. ಆದರೆ ಪಂದ್ಯದಲ್ಲಿ ಪರಿಸ್ಥಿತಿ ವಿಭಿನ್ನವಾಗಿರುತ್ತದೆ. ಒತ್ತಡವು ತಂಡವನ್ನು ಕುಗ್ಗಿಸುತ್ತದೆ. ಆದ್ದರಿಂದ ದೊಡ್ಡ ಹೊಡೆತಗಳನ್ನು ಆಡಲು ಸಾಧ್ಯವಾಗದು. ಭಾನುವಾರದ ಪಂದ್ಯದಲ್ಲೂ ಅದೇ ಆಗಿದ್ದು, ಅಭಿಷೇಕ್ ಶರ್ಮಾ ಒತ್ತಡದಿಂದಾಗಿ ಮುಕ್ತವಾಗಿ ಆಡಲು ಸಾಧ್ಯವಾಗಲಿಲ್ಲ ಎಂದಿದ್ದಾರೆ.

### ಧೋನಿ ಸಿಎಸ್‌ಕೆ ಪರ ಆಡಲು ಲಭ್ಯ

**ಚೆನ್ನೈ:** ಮುಂಬರುವ ಏಪ್ರಿಲ್-ಮೇ ತಿಂಗಳಿನಲ್ಲಿ ನಡೆಯಲಿರುವ ಐಪಿಎಲ್ ಟೂರ್ನಿಯಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಪರವಾಗಿ ಆಡಲು ತಾನು ಲಭ್ಯವಿರುವುದಾಗಿ ಭಾರತದ ಮಾಜಿ ಕ್ರಿಕೆಟಿಗ ಎಂ.ಎಸ್ ಧೋನಿ ತಿಳಿಸಿದ್ದಾರೆ, ಆದರೆ ಅವರು ಸಿಎಸ್‌ಕೆ ಪರ ಎಲ್ಲಾ ಪಂದ್ಯಗಳಲ್ಲಿ ಹಣಕ್ಕಿಳಿಯುವರೇ ಎಂಬುವುದು ಇನ್ನೂ ಖಚಿತವಾಗಿಲ್ಲ. ಇತ್ತೀಚೆಗಷ್ಟೇ ತಂಡಕ್ಕೆ ಸೇರ್ಪಡೆಯಾಗಿರುವ ಸಂಜು ಸ್ಯಾಮ್ಸನ್ ಅವರು ಸಿಎಸ್‌ಕೆ ತಂಡವನ್ನು ಮುನ್ನಡೆಸುವುದು ಬಹುತೇಕ ಖಚಿತವಾಗಿದೆ. ಹೀಗಾಗಿ ಧೋನಿ ಅವರು ಈ ಬಾರಿ ನಾಯಕತ್ವ ವಹಿಸಿಕೊಳ್ಳುವುದು ಅನುಮಾನ ಎನ್ನಲಾಗಿದೆ. ಧೋನಿ ಅವರು ಸದ್ಯದಲ್ಲೇ ಚೆನ್ನೈಗೆ ಆಗಮಿಸಲಿದ್ದಾರೆ. ಎಂಎಸ್ ಧೋನಿ ಅವರು ಸಿಎಸ್‌ಕೆ ತಂಡದ ತವರಿನಂಗಳವಾದ ಚೆನ್ನೈನ ಚೆಪಾಕ್ ಕ್ರೀಡಾಂಗಣದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಪರ ಇರುವ ಎಲ್ಲಾ ಪಂದ್ಯಗಳಲ್ಲೂ ಕಣಕ್ಕಿಳಿಯುವ ಸಾಧ್ಯತೆ ಇದೆ ಎಂದೂ ಹೇಳಲಾಗುತ್ತದೆ.

ಟಿ20 ವಿಶ್ವಕಪ್‌ನಲ್ಲಿ ಭಾರತದ ಪರ ಹೆಚ್ಚು ವಿಕೆಟ್

# ಬುಮ್ರಾ ಹೊಸ ದಾಖಲೆ

**ದೆಹಲಿ:** ಭಾರತದ ವೇಗದ ಬೌಲರ್ ಜಸ್ಪ್ರೀತ್ ಬುಮ್ರಾ ಟಿ-20 ವಿಶ್ವಕಪ್‌ನಲ್ಲಿ ಭಾರತದ ಅತ್ಯಂತ ಯಶಸ್ವಿ ಬೌಲರ್ ಎನಿಸಿಕೊಂಡಿದ್ದಾರೆ. ಭಾನುವಾರ ದಕ್ಷಿಣ ಆಫ್ರಿಕಾ ವಿರುದ್ಧ ನಡೆದಿದ್ದ ಸೂಪರ್-8 ಪಂದ್ಯದಲ್ಲಿ ಅವರು ಅದ್ಭುತ ಬೌಲಿಂಗ್ ಮಾಡಿ, ಮೂರು ವಿಕೆಟ್‌ಗಳನ್ನು ಪಡೆದುಕೊಂಡರು. ಅದರೊಂದಿಗೆ ಅವರು ಆರ್.ಅಶ್ವಿನ್ ಅವರ ದಾಖಲೆಯನ್ನು ಮುರಿದಿದ್ದು, ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತದ ಪರ ಅತೀ ಹೆಚ್ಚು ವಿಕೆಟ್ ಪಡೆದ ಬೌಲರ್ ಎಂಬ ದಾಖಲೆ ಬರೆದಿದ್ದಾರೆ.

ಭಾರತ ಪರ 24 ಟಿ20 ವಿಶ್ವಕಪ್ ಪಂದ್ಯಗಳಲ್ಲಿ ಅಶ್ವಿನ್ 32 ವಿಕೆಟ್ ಗಳಿಸಿದ್ದು, ಇದೀಗ ಬುಮ್ರಾ ಆ ದಾಖಲೆಯನ್ನು ಮುರಿದಿದ್ದಾರೆ. ಬುಮ್ರಾ ಈಗ 22 ಟಿ20 ವಿಶ್ವಕಪ್ ಪಂದ್ಯಗಳಲ್ಲಿ 33 ವಿಕೆಟ್‌ಗಳನ್ನು ಪಡೆದುಕೊಂಡಿದ್ದಾರೆ. ಈ ಪಟ್ಟಿಯ ಮೂರನೇ ಸ್ಥಾನದಲ್ಲಿ ಭಾರತದ ಪರ ಅತೀ ಹೆಚ್ಚು ವಿಕೆಟ್ ಪಡೆದ ಬೌಲರ್ ಅರ್ಶ್‌ದೀಪ್ ಸಿಂಗ್ ಇದ್ದಾರೆ. ಅವರು 18 ಪಂದ್ಯಗಳಲ್ಲಿ 32 ವಿಕೆಟ್‌ಗಳನ್ನು ಗಳಿಸಿದ್ದಾರೆ.

ಬಾಂಗ್ಲಾದೇಶದ ಶಕೀಬ್ ಅಲ್ ಹಸನ್ ಐಸಿಸಿ ಪುರುಷರ ಟಿ20 ವಿಶ್ವಕಪ್ ಇತಿಹಾಸದಲ್ಲಿ ಅತೀ ಹೆಚ್ಚು ವಿಕೆಟ್ ಪಡೆದ ಬೌಲರ್ ಆಗಿದ್ದಾರೆ. ಅವರು 2007ರಿಂದ 2024ರ ವರೆಗೆ ಬಾಂಗ್ಲಾದೇಶ ಪರ 43 ಪಂದ್ಯಗಳನ್ನು ಆಡಿ, 50 ವಿಕೆಟ್‌ಗಳನ್ನು ಪಡೆದಿದ್ದಾರೆ. ಪಟ್ಟಿಯಲ್ಲಿ ಶಕೀಬ್ ನಂತರ ಆ್ಯಡಮ್ ಜಂಪಾ, ರಶೀದ್ ಖಾನ್, ವನಿಂದು ಹಸರಂಗ ಮತ್ತು ಶಾಹಿದ್ ಅಫ್ರಿದಿ ಇದ್ದಾರೆ. ಟಾಪ್ 10ರಲ್ಲಿ ಸದ್ಯ ಭಾರತೀಯ ಬೌಲರ್‌ಗಳಿಲ್ಲ. ಆದರೆ ಬುಮ್ರಾ ಮತ್ತು ಅರ್ಶ್‌ದೀಪ್ ಸಿಂಗ್ ಅವರು ಜಿಂಬಾಬ್ವೆ ಮತ್ತು ವೆಸ್ಟ್ ಇಂಡೀಸ್ ವಿರುದ್ಧದ ಮುಂಬರುವ ಸೂಪರ್ 8 ಪಂದ್ಯಗಳಲ್ಲಿ ಟಾಪ್ 10ರಲ್ಲಿ ಸ್ಥಾನ ಪಡೆಯುವ ಅವಕಾಶವನ್ನು ಹೊಂದಿದ್ದಾರೆ.

ವಿಂಡೀಸ್ ಪರ ಹೆಟ್ಮೆಯರ್ ಸ್ಫೋಟಕ ಬ್ಯಾಟಿಂಗ್ | ಪೊವೆಲ್ ಅರ್ಧ ಶತಕ

# ಜಿಂಬಾಬ್ವೆಗೆ 255 ರನ್‌ಗಳ ಬೃಹತ್ ಗುರಿ

ಹೆಟ್ಮಾಯೆರ್

ಪೊವೆಲ್

**ಮುಂಬೈ:** ಇಲ್ಲಿನ ವಾಂಖೆಡೆ ಸ್ಟೇಡಿಯಂನಲ್ಲಿ ಸೋಮವಾರ ನಡೆದ ಟಿ20 ವಿಶ್ವಕಪ್ ಕ್ರಿಕೆಟ್‌ನಲ್ಲಿ ಶಿಮ್ರಾನ್ ಹೆಟ್ಮಾಯೆರ್ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ವೆಸ್ಟ್ ಇಂಡೀಸ್ ತಂಡವು ನಿಗದಿತ 20 ಓವರ್‌ನಲ್ಲಿ 6 ವಿಕೆಟ್ ನಷ್ಟಕ್ಕೆ 254 ರನ್ ಗಳಿಸಿದ್ದು, ಜಿಂಬಾಬ್ವೆಗೆ 255 ರನ್‌ಗಳ ಬೃಹತ್ ಗುರಿ ನೀಡಿದೆ.

ಟಾಸ್ ಗೆದ್ದ ಜಿಂಬಾಬ್ವೆ ತಂಡವು ಮೊದಲು ಫೀಲ್ಡಿಂಗ್ ಆರಿಸಿತು. ಬ್ಯಾಟಿಂಗ್ ಆರಂಭಿಸಿದ ವೆಸ್ಟ್ ಇಂಡೀಸ್ ಕೇವಲ 17 ಆದಾಗ 9 ರನ್ ಗಳಿಸಿದ್ದ ಬ್ರಾಂಡನ್ ಕಿಂಗ್ ಅವರ ವಿಕೆಟ್ ಕಳೆದುಕೊಂಡಿತು. ಆ ಬಳಿಕ ಶಾಯ್ ಹೋಪ್-ಶಿಮ್ರಾನ್ ಹೆಟ್ಮಾಯೆರ್ ಅವರ ಜತೆಯಾಟ ಸಾಗಿತು. ತಂಡದ ಮೊತ್ತ 54 ಆಗಿದ್ದಾಗ 14 ರನ್ ಗಳಿಸಿದ್ದ ಶಾಯ್ ಹೋಪ್ ಅವರು ಬ್ರಾಡ್ ಇವಾನ್ಸ್ ಅವರ ಬೌಲಿಂಗ್‌ನಲ್ಲಿ ಬ್ರಾಯನ್ ಬೆನೆಟ್ ಅವರಿಗೆ ಕ್ಯಾಚ್ ನೀಡಿ ಪೆವಿಲಿಯನ್ ಸೇರಿದರು.

ಆ ನಂತರ ವೆಸ್ಟ್ ಇಂಡೀಸ್ ಪರವಾಗಿ 122 ರನ್‌ಗಳ ಭಾರೀ ಜತೆಯಾಟ ಮೂಡಿಬಂತು. ತಂಡದ ಮೊತ್ತ 176 ರನ್ ಆಗಿದ್ದಾಗ 34 ಬಾಲ್‌ಗಳಲ್ಲಿ 85 ರನ್ ಗಳಿಸಿದ್ದ ಹೆಟ್ಮೆಯರ್ ತಮ್ಮ ವಿಕೆಟ್ ಕಳೆದುಕೊಂಡರು. ಅವರ ಸ್ಫೋಟಕ ಬ್ಯಾಟಿಂಗ್‌ನಲ್ಲಿ 7 ಸಿಕ್ಸರ್ ಮತ್ತು 7 ಬೌಂಡರಿಗಳಿದ್ದವು. ಆ ಬಳಿಕ ರೋವ್ಮನ್ ಪೊವೆಲ್ ಮತ್ತು ಶೆರ್ಫೇನ್ ರುದರ್‌ಫೋರ್ಡ್ ಮಧ್ಯೆ ಸ್ವಲ್ಪ ಹೊತ್ತು ಜತೆಯಾಟ ಮೂಡಿಬಂತು. 35 ಬಾಲ್‌ಗಳಲ್ಲಿ 59 ರನ್ ಗಳಿಸಿದ್ದ ಪೊವೆಲ್ ಅವರು ಮುಜರಬಾನಿ ಬೌಲಿಂಗ್‌ನಲ್ಲಿ ಔಟ್ ಆದರು. ಅವರ ಇನ್ನಿಂಗ್ಸ್‌ನಲ್ಲಿ 4 ಸಿಕ್ಸರ್ ಮತ್ತು 4 ಬೌಂಡರಿ ಇದ್ದವು. ರೊಮಾರಿಯೋ ಶೆಫರ್ಡ್-ರುದರ್‌ಫೋರ್ಡ್ ಆಟ ಆ ನಂತರ ಮುಂದುವರಿಯಿತು. ತಂಡದ ಮೊತ್ತ 229 ರನ್ ಆಗಿದ್ದಾಗ 10 ಬಾಲ್‌ಗಳಲ್ಲಿ 21 ರನ್ ಗಳಿಸಿದ್ದ ರೊಮಾರಿಯೋ ಶೆಫರ್ಡ್ ರಿಚರ್ಡ್ ಅವರ ಬೌಲಿಂಗ್‌ನಲ್ಲಿ ರಯಾನ್ ಬರ್ಲ್ ಅವರಿಗೆ ಕ್ಯಾಚ್ ನೀಡಿ ಪೆವಿಲಿಯನ್ ಸೇರಿದರು.

ಆ ನಂತರ ಕ್ರೀಸ್‌ಗೆ ಬಂದ ಜೇಸನ್ ಹೋಲ್ಡರ್ 4 ಬಾಲ್‌ಗಳನ್ನು ಎದುರಿಸಿ 13 ರನ್ ಗಳಿಸಿ ಮುಜರಬಾನಿ ಬೌಲಿಂಗ್‌ನಲ್ಲಿ ತಮ್ಮ ವಿಕೆಟ್ ಕಳೆದುಕೊಂಡರು. ಕೊನೆಯಲ್ಲಿ 13 ಬಾಲ್‌ಗಳಲ್ಲಿ 31 ರನ್ ಗಳಿಸಿದ್ದ ಶೆರ್ಫೇನ್ ರುದರ್‌ಫೋರ್ಡ್ ಮತ್ತು ಮ್ಯಾಥ್ಯೂ ಫೋರ್ಡ್ ತಲಾ 1 ರನ್ ಗಳಿಸಿದರು. ಜಿಂಬಾಬ್ವೆ ತಂಡದ ಪರವಾಗಿ ಮುಜರಬಾನಿ 42 ರನ್ ನೀಡಿ 2 ವಿಕೆಟ್, ರಿಚರ್ಡ್ ನಾಗರವ 47 ರನ್ ನೀಡಿ 3 ವಿಕೆಟ್ ಪಡೆದರು. ಗ್ರೇಮ್ ಕ್ರೆಮರ್ ಮತ್ತು ಬ್ರಾಡ್ ಇವಾನ್ಸ್ ತಲಾ ಒಂದು ವಿಕೆಟ್ ಪಡೆದರು.

### ಟಿ20: ಹೆಟ್ಮಾಯೆರ್ 1500 ರನ್

ಜಿಂಬಾಬ್ವೆ ವಿರುದ್ಧ ಸೋಮವಾರದ ಸ್ಫೋಟಕ ಇನ್ನಿಂಗ್ಸ್ ಮೂಲಕ ಶಿಮ್ರಾನ್ ಹೆಟ್ಮಾಯೆರ್ ತಮ್ಮ ಟಿ20 ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ 1500 ರನ್‌ಗಳನ್ನು ಪೂರ್ಣಗೊಳಿಸಿದರು. ಆ ಮೂಲಕ ತಮ್ಮ ಟಿ20 ವೃತ್ತಿಜೀವನದಲ್ಲಿ ಎಡಗೈ ಬ್ಯಾಟ್ಸ್‌ಮನ್ ಮತ್ತೊಂದು ಮೈಲುಗಲ್ಲನ್ನು ತಲುಪಿದರು.

11 ವರ್ಷಗಳ ಬಳಿಕ ಫೈನಲ್ ಪ್ರವೇಶಿಸಿದ ರಾಜ್ಯ ತಂಡ | ಮೊದಲ ಬಾರಿ ಪ್ರಶಸ್ತಿ ಸುತ್ತಿನ ಕಣದಲ್ಲಿರುವ ಜಮ್ಮು ಕಾಶ್ಮೀರ

# ಇಂದಿನಿಂದ ಹುಬ್ಬಳ್ಳಿಯಲ್ಲಿ ರಣಜಿ ಫೈನಲ್: ಕರ್ನಾಟಕಕ್ಕೆ ಟ್ರೋಫಿ ಗೆಲ್ಲುವ ತವಕ

**ಹುಬ್ಬಳ್ಳಿ:** ಈ ಸಾಲಿನ ರಣಜಿ ಕ್ರಿಕೆಟ್ ಪ್ರಶಸ್ತಿಗಾಗಿ ಕರ್ನಾಟಕ-ಜಮ್ಮು ಮತ್ತು ಕಾಶ್ಮೀರ ತಂಡಗಳು ಇಂದಿನಿಂದ ಇಲ್ಲಿ ನಡೆಯುವ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಇಲ್ಲಿನ ಕೆಎಸ್‌ಸಿಎ ಕ್ರಿಕೆಟ್ ಮೈದಾನದಲ್ಲಿ ಪ್ರತಿಷ್ಠಿತ ಫೈನಲ್ ಪಂದ್ಯ ನಡೆಯಲಿದೆ. ಎರಡೂ ತಂಡಗಳು ಶನಿವಾರದಿಂದ ಇಲ್ಲಿನ ಕ್ರೀಡಾಂಗಣದಲ್ಲಿ ಅಭ್ಯಾಸ ನಿರತವಾಗಿದೆ. ತನ್ನ ತವರಿನಲ್ಲೇ ಟ್ರೋಫಿ ಗೆಲ್ಲಬೇಕೆಂಬ ತವಕ ರಾಜ್ಯ ತಂಡಕ್ಕಿದ್ದರೆ, ಚೊಚ್ಚಲ ಬಾರಿಗೆ ರಣಜಿ ಕಪ್ ಗೆಲ್ಲಬೇಕೆಂಬ ಉಮೇದು ರಾಜ್ಯ ತಂಡಕ್ಕಿದೆ.

ಕಳೆದೊಂದು ದಶಕದಿಂದ ಕರ್ನಾಟಕ ತಂಡವು ರಣಜಿ ಟ್ರೋಫಿ ಫೈನಲ್‌ಗೇರಲು ಪದೇ ಪದೇ ವಿಫಲವಾಗುತ್ತಾ ಬಂದಿತ್ತು. 2015ರಲ್ಲಿ ಕೊನೆಯ ಬಾರಿಗೆ ಫೈನಲ್ ಪ್ರವೇಶಿಸಿ ಚಾಂಪಿಯನ್ ಪಟ್ಟ ಅಲಂಕರಿಸಿದ್ದ ರಾಜ್ಯ ತಂಡವು, ಅದರ ಬಳಿಕ ಒಮ್ಮೆಯೂ ರಣಜಿ ಟ್ರೋಫಿ ಫೈನಲ್ ಪ್ರವೇಶಿಸಿರಲಿಲ್ಲ. ಇದೀಗ ಈ ಋತುವಿನ ಟೂರ್ನಿಯುದ್ದಕ್ಕೂ ಅತ್ಯದ್ಭುತ ಹಾಗೂ ಅವಿಸ್ಮರಣೀಯ ಪ್ರದರ್ಶನ ತೋರುವ ಮೂಲಕ 11 ವರ್ಷಗಳ ಬಳಿಕ ರಣಜಿ ಟ್ರೋಫಿ ಫೈನಲ್‌ಗೆ ಕರ್ನಾಟಕ ತಂಡವು ಲಗ್ಗೆಯಿಟ್ಟಿದೆ.

**ಕಪ್ ಗೆಲ್ಲುವ ನಿರೀಕ್ಷೆ:** ಇಲ್ಲಿ ಸುದ್ದಿಗಾರರ ಜತೆ ಮಾತನಾಡಿರುವ ಕರ್ನಾಟಕ ತಂಡದ ನಾಯಕ ದೇವದತ್ ಪಡಿಕ್ಕಲ್, 'ನಾವು ಕಪ್ ಗೆಲ್ಲಲು ಸರ್ವಪ್ರಯತ್ನ ಮಾಡುತ್ತೇವೆ' ಎಂದು ಆತ್ಮವಿಶ್ವಾಸದಿಂದ ಹೇಳಿದ್ದಾರೆ. 'ಇದೇ ಋತುವಿನಲ್ಲಿ ಕಳೆದ ಎರಡು ಬಾರಿ ಈ ಮೈದಾನದಲ್ಲಿ ಆಡಿದಾಗ ಪ್ರೇಕ್ಷಕರು ಹಾಗೂ ಕ್ರೀಡಾಭಿಮಾನಿಗಳಿಂದ ಉತ್ತಮ ಬೆಂಬಲ ಸಿಕ್ಕಿದೆ, ಹುಬ್ಬಳ್ಳಿಯಲ್ಲಿ ಫೈನಲ್ ಪಂದ್ಯ ಆಡುತ್ತಿರುವುದರ ಬಗ್ಗೆ ಖುಷಿಯಿದೆ' ಎಂದು ರಾಜ್ಯ ತಂಡದ ನಾಯಕ ಪಡಿಕ್ಕಲ್ ಹೇಳಿದ್ದಾರೆ.

'ಫೈನಲ್ ಪಂದ್ಯ ಎಂದಾಗ ಸಹಜವಾಗಿಯೇ ಒತ್ತಡವಿರುತ್ತದೆ. ಸೆಮಿಫೈನಲ್ ಪಂದ್ಯದಲ್ಲಿ ನಾವು ಸಾವಿರ ರನ್ ಗಳಿಸಿದ ಕುರಿತು ಆತ್ಮವಿಶ್ವಾಸ ಇದೆ. ನಮ್ಮ ರಾಜ್ಯದಲ್ಲೇ ಫೈನಲ್ ಪಂದ್ಯವನ್ನಾಡುತ್ತಿರುವುದರ ಬಗ್ಗೆ ಖುಷಿಯಿದೆ. ನಾವೆಲ್ಲರೂ ಫೈನಲ್ ಪಂದ್ಯವನ್ನಾಡಲು ಸಿದ್ಧವಾಗಿದ್ದು, ಟ್ರೋಫಿ ಗೆಲ್ಲುವ ಬಗ್ಗೆ ನಿರೀಕ್ಷೆ ಹೆಚ್ಚಿದೆ' ಎಂದು ದೇವದತ್ ಪಡಿಕ್ಕಲ್ ಹೇಳಿದ್ದಾರೆ.

**ರಾಜ್ಯ ತಂಡಕ್ಕೆ ತಾರಾ ಆಟಗಾರರ ಬಲ:** ಈ ಬಾರಿಯ ರಣಜಿ ಟ್ರೋಫಿ ಫೈನಲ್‌ನಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿರುವ ಐವರು ಆಟಗಾರರು ಕರ್ನಾಟಕ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಭಾರತ ತಂಡದ ಆಟಗಾರರಾದ ಕೆಎಲ್ ರಾಹುಲ್, ಮಾಯಾಂಕ್ ಅಗರ್ವಾಲ್, ಕರುಣ್ ನಾಯರ್, ಪ್ರಸಿದ್ಧ್ ಕೃಷ್ಣ ಹಾಗೂ ದೇವದತ್ ಪಡಿಕ್ಕಲ್ ರಾಜ್ಯ ತಂಡದಲ್ಲಿದ್ದಾರೆ.

**ಜಮ್ಮು ಕಾಶ್ಮೀರ ತಂಡಕ್ಕೂ ಆತ್ಮವಿಶ್ವಾಸ:** ಇದೇ ಮೊದಲ ಬಾರಿಗೆ ರಣಜಿ ಟ್ರೋಫಿ ಫೈನಲ್ ಪ್ರವೇಶಿಸಿ ಇತಿಹಾಸ ನಿರ್ಮಿಸಿರುವ ಜಮ್ಮು ಕಾಶ್ಮೀರ ತಂಡವು ಚೊಚ್ಚಲ ಪ್ರಯತ್ನದಲ್ಲೇ ರಣಜಿ ಕಪ್ ಗೆಲ್ಲುವ ವಿಶ್ವಾಸದಲ್ಲಿದೆ. ನಾವೆಲ್ಲರೂ ಈ ಋತುವಿನ ಆಟವನ್ನು ಖುಷಿಪಟ್ಟಿದ್ದೇವೆ, ಎಲ್ಲರೂ ರಿಲ್ಯಾಕ್ಸ್ ಆಗಿದ್ದೇವೆ. ಫೈನಲ್‌ನಲ್ಲೂ ನಮ್ಮ ಕ್ರಿಕೆಟ್ ಅನ್ನು ನಾವು ಆಡುತ್ತೇವೆ. ನಮ್ಮ ಆಟಗಾರರು ಬಹಳ ಆತ್ಮವಿಶ್ವಾಸದಲ್ಲಿದ್ದಾರೆ. ಮುಂಬೈ ವಿರುದ್ಧ ಉತ್ತಮ ಆಟವಾಡಿ ಗೆದ್ದಿದ್ದೇವೆ, ಹಾಗಾಗಿ ಇಲ್ಲಿಯೂ ಒಳ್ಳೆಯ ಫಲಿತಾಂಶದ ನಿರೀಕ್ಷೆಯಲ್ಲಿದ್ದೇವೆ ಎಂದು ಜಮ್ಮು ಕಾಶ್ಮಿರ ತಂಡದ ನಾಯಕ ಪಾರಸ್ ಡೋಗ್ರಾ ಹೇಳಿದ್ದಾರೆ.

**ಕರ್ನಾಟಕ**

ದೇವದತ್ ಪಡಿಕ್ಕಲ್(ನಾಯಕ), ಮಾಯಾಂಕ್ ಅಗರ್ವಾಲ್, ಕೆ.ಎಲ್ ರಾಹುಲ್, ಅನೀಶ್ ಕೆ.ವಿ, ಕರುಣ್ ನಾಯರ್, ಆರ್ ಸ್ಮರಣ್, ಶ್ರೇಯಸ್ ಗೋಪಾಲ್, ಕೃತಿಕ್ ಕೃಷ್ಣ, ವಿದ್ವತ್ ಕಾವೇರಪ್ಪ, ವಿದ್ಯಾಧರ್ ಪಾಟೀಲ್, ಪ್ರಸಿದ್ಧ್ ಕೃಷ್ಣ, ಮೊಹ್ಸಿನ್ ಖಾನ್, ಶಿಖರ್ ಶೆಟ್ಟಿ, ಶ್ರೀಜಿತ್ ಕೆ.ಎಲ್, ವೈಶಾಖ್ ವಿಜಯ್‌ಕುಮಾರ್.

**ಜಮ್ಮು ಮತ್ತು ಕಾಶ್ಮೀರ**

ಡೋಗ್ರಾ (ನಾಯಕ), ಶುಭಂ ಖಜೂರಿಯಾ, ಕಮ್ರಾನ್ ಇಕ್ಬಾಲ್, ಮುಸೈಫ್ ಅಜಾಝ್, ಅಬ್ದುಲ್ ಸಮದ್, ಅಬೀದ್ ಮುಸ್ತಾಕ್, ಯುದ್ವೀರ್ ಸಿಂಗ್, ಉಮ್ರಾನ್ ಮಲಿಕ್, ವಿವ್ರಾಂತ್ ಶರ್ಮಾ, ಸುನಿಲ್ ಕುಮಾರ್, ಸುನಿಲ್ ಲೋತ್ರಾ, ಯಾವೆರ್ ಹುಸೈನ್ ಖಾನ್, ಸಲೀಲ್ ಲೋತ್ರಾ, ಅಬಿದ್ ಮುಸ್ತಾಕ್, ಶುಭಂ ಪುಂಡಿರ್

## ಪೆವಿಲಿಯನ್ ಬ್ಲಾಕ್‌ಗೆ ಸುನಿಲ್‌ಜೋಶಿ ಹೆಸರು

ಮಂಗಳವಾರ ಆರಂಭವಾಗುವ ರಣಜಿ ಫೈನಲ್ ಪಂದ್ಯದ ಆರಂಭಕ್ಕೂ ಮುನ್ನ ಭಾರತ ತಂಡದ ಖ್ಯಾತ ಸ್ಪಿನ್ನರ್ ಆಗಿದ್ದ ಕನ್ನಡಿಗ ಸುನಿಲ್‌ಜೋಶಿ ಅವರ ಹೆಸರನ್ನು ಹುಬ್ಬಳ್ಳಿಯ ರಾಜನಗರದಲ್ಲಿರುವ ಕೆಎಸ್‌ಸಿಎ ಪೆವಿಲಿಯನ್ ಬ್ಲಾಕ್‌ಗೆ ಇಡಲು ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಶನ್ (ಕೆಎಸ್‌ಸಿಎ) ತೀರ್ಮಾನಿಸಿದೆ. ಮೂಲತ: ಗದಗ ಜಿಲ್ಲೆಯವ ರಾದ ಸುನಿಲ್‌ಜೋಶಿ, ಭಾರತ ಕ್ರಿಕೆಟ್‌ಗೆ ಮತ್ತು ಕರ್ನಾಟಕ ರಾಜ್ಯ ತಂಡಕ್ಕೆ ನೀಡಿದ ಕೊಡುಗೆಗಾಗಿ ಕೆಎಸ್‌ಸಿಎ ಈ ನಿರ್ಧಾರ ಕೈಗೊಂಡಿದೆ. ಕರ್ನಾಟಕದ ಅತ್ಯಂತ ವಿಶಿಷ್ಟ ಕ್ರಿಕೆಟ್ ರಾಯಭಾರಿಗಳಲ್ಲಿ ಒಬ್ಬರಿಗೆ ಸೂಕ್ತವಾದ ಮತ್ತು ಶಾಶ್ವತವಾದ ಗೌರವ ಇದಾಗಿದೆ ಎಂದು ಕೆಎಸ್‌ಸಿಎ ಹೇಳಿಕೊಂಡಿದೆ. ಭಾರತ ತಂಡದ ಪರ 15 ಟೆಸ್ಟ್, 69 ಏಕದಿನ ಪಂದ್ಯಗಳನ್ನಾಡಿರುವ ಸುನಿಲ್ ಜೋಶಿ ಅವರು 160 ಪ್ರಥಮ ದರ್ಜೆ ಪಂದ್ಯಗಳನ್ನೂ ಆಡಿದ್ದಾರೆ.